ಪ್ರಬುದ್ಧ ಕರ್ಣಾಟಕ

ಸಂಪುಟ ೪೫—ಸಂಚಿಕೆ ೩

೧೭೭

ಶೋಭಕೃತು ಸಂವತ್ಸರ

ಆಶ್ವಯುಜ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೬೩

ಪ್ರಬುದ್ಧ ಕರ್ಣಾಟಕ

ಶೋಭಕೃತು ಸಂವತ್ಸರ ೧೭೭ ಆಶ್ವಯುಜ ಸಂಚಿಕೆ

ಕಡೆಯೆ ಇಲ್ಲ

ಮತ್ತೆ ಮತ್ತೆ ಗೆಲ್ಲಬೇಕು ;
ನಿತ್ಯ ಗೆಲ್ಲುತಿರಲೆ ಬೇಕು.
ಗೆಲ್ಲುತಿಹುದೆ ಗೆಲ್ಲ !

ನಿನ್ನ ಗೆದ್ದು ಪೂರೈಸಿದೆ
ಎಂಬ ಮಾತೆ ಇಲ್ಲ !

ಪಡೆದು, ಪಡೆದು, ಪಡೆದು ನಿನ್ನ........
ಕಡೆಗೆ ?—ಕಡೆಯೆ ಇಲ್ಲ !

—ಕುವೆಂಪು

Prabuddha Karnataka Vol-45, Sl-3

ದಿವಂಗತ ಕವಿಗೆ ಜಯಶ್ರೀಸ್ಮಾರಕ

“ ಅವರೇನು ಬರೆದಿಹರು ಅಂತಹ ಮಹತ್‌ಕಾವ್ಯ ? ”
“ ಅವರು ಬರೆದುದು ಮಹತ್‌ಕವಿತೆ ಇರದಿರಬಹುದು ;
ಅವರು ಬದುಕಿದುದೆಲ್ಲ ಮಹತ್‌ಕವನಗಳೆ ಅಹುದು :
ಅವರೆ ತಾವೊಂದು ಗೊಮ್ಮಟಸಮ ಮಹಾಕಾವ್ಯ ! ”

‘ ಸಂತನಾಗಲು ಬಲ್ಲ ಅವನೂ ಸುಧೀರಮತಿ
ಕವಿಯಾಗಲೊಲ್ಲ ! ’—ಪಡುವಣದ ಈ ಕವಿ ಉಕ್ತಿ
ಪಡೆದಿಹುದು ಉಪನಿಷತ್ತಿನ ಮಂತ್ರ ಋತಶಕ್ತಿ :
ಬದುಕಿಗಿಲ್ಲದ ಬೆಲೆಯ ಬೀಡೆ ಸಾಹಿತ್ಯಕೃತಿ ?

ಬದುಕಿನಿಂದಲೆ, ಬದುಕಿಗಾಗಿಯೆ ಕಣಾ ಕಲೆಯ ಬೆಳೆ :
ಕವಿಯ ಬಾಳ್ವೆಯೆ ದಿಟದ ಕಾವ್ಯಬೆಲೆ, ರಸದ ನೆಲೆ !
ಕವಿಯ ಬದುಕಿಂದೈಸೆ ಅವನ ಕೃತಿಯಕ್ಕು—‘ ಕಲೆ ’ ?

ಕಲೆಯ ಬಾಳ್ವಿಗೆ ಮಿಗಿಲ್ ಬಾಳ್ವೆಯ ಕಲೋಲ್ಲಾಸ :
ಕಲೆ ಸಂಸ್ಕೃತಿವಿಲಾಸ; ಬಾಳ್ ಸೃಷ್ಟಿಗೆ ವಿಕಾಸ !

ನೂರು ಕಾವ್ಯಕೆ ಸಾರವೊಂದು ಸಾಕ್ಷಾತ್ಕಾರ :
ಕವಿಯ ದರ್ಶನ ಅಗ್ನಿದರ್ಪಣ ತಪಃಸಂಸಾರ !

ನಿನ್ನ ಮಂಜೇಶ್ವರದ ಬೀಡು, ಕಾಸರಗೋಡು,
ಮುನ್ನಿನಂತೆಯೆ ಮತ್ತೆ ತಾನಾಗೆ ಕನ್ನಡ ನಾಡು,
ತನ್ನ ಸತ್ವಕೆ ಸಾಕ್ಷಿ ತ್ಯಾಗನದುವೆ ಕನ್ನಡ ಜನತೆ
ಕವಿಗೆ ಕಡೆಯುವ ಜಯಶ್ರೀಸ್ಮಾರಕಂ ತಾನಲ್ತೆ !

—ಕುವೆಂಪು

೨೪–೯–೧೯೬೩

ಕೌಸಲ್ಯಾ ವಿವಾಹ

(ವರದವಿಟ್ಠಲ ರಾಮಾಯಣ)

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಸಂಧಿ ೨

ಸೂಚನೆ : ದಶಶಿರನು ಪುಷ್ಪಕದಿ ಬರಲಾ
ವಸುಮತೀಶಂಗಿತ್ತು ಸುತೆಯನು
ಕುಶಲಭೂಪತಿ ಸಹಿತಯೋ[1]ಧ್ಯಕ್ಕೈದೆ[1] ಸಂಭ್ರಮದಿ

ಕರಿಯ ವೈರಿಯ ಮಡುಹಿ ಮತ್ತಾ
ಕರಿಗೆ ಮೋಕ್ಷವನಿತ್ತ ದೇವನ
ಕರಿಯ ಚರ್ಮಾಂಬರವ ಪೊ[2]ದ್ದ[2]ನ ಕರಿಮುಖನ ಪಿತನ
ಕರಿಯ ವೈರಿಯ ರೂಪ ತಾಳ್ದನ
ಗಿರಿಯ ಸುತೆಗರ್ಧಾಂಗವಿ[3]ತ್ತಿ ಹ[3]
ಶರಣು ಮಧುಕೇಶ್ವರನೆ ರಕ್ಷಿಸು [4]ನಮ್ಮನನವರತ[4] ೧

ಸೂತಮುನಿ ಪೇಳಿ[5]ವ[5]ಗೆ ದಶರಥ
ಭೂತಳೇಶ್ವರನೇನಮಾಡಿದ
ನಾ ತಳೋದರಿಸಹಿತಲಂಬುಧಿ ಮಧ್ಯದೊಳಗೆನಲು
ಪ್ರೀತಿ [6]ಮಿಗಿ[6]ಲಾ ಶೌನಕಾದ್ಯರಿ
ಗೋತು ಪೇಳಿದ ಕಥೆಯನದನಾ
ಭೂತನಾಥನು ಪೇಳ್ದನಾ ಗಿರಿಜಾತೆ [7] ಕೇ[7]ಳೆಂದ ೨

ಇತ್ತಲಾ ರಾವಣನ ಸಭೆಯಲಿ
ಮುತ್ತಯನು ನೆಱೆ ನುಡಿ[8]ದನಾಗ[8] ಮು
ಹೂರ್ತವೇಳ್ಯದಿ ಸಾವಧಾನ ಸುಲಗ್ನವೆಂದೆನುತ
ಚಿತ್ತಜನ ಹಿರಿಯಣ್ಣ ನುಡಿದನು
ಉತ್ತರೋತ್ತರವೆಂ[9]ದು[9] ಮೂಜೀ
ವುತ್ತರವ ಕೇ[10]ಳಿದನು[10] ರಾವಣನೇನಿದೇನೆಂದ ೩

---

[1] ಧ್ಯಾ ಪುರಕೆ (ಕ) [2] ತ್ತ (ಕ) [3] ತ್ತನ (ಕ) [4] ವರದವಿಟ್ಠಲನೆ (ಕ) [5] ನ (ಕ) [6] ಮೊದ (ಕ) [7] ಪೇ (ಕ) [8] ದುದಾಗ (ಕ) [9] ದೆ (ಕ) [10] ಳುತ್ತ (ಗ).

ದೈತ್ಯರಾಯನೆ[1]ಹೇಳು ಅ[1]ಭಿಜಿ
ನ್ಮೂರ್ತಸಮಯವೊ ಕೇಳು ರಘುವಿನ
ಪೌತ್ರ ದಶರಥ ಕೋಸಲೇಶನ ಪುತ್ರಿ ಕಂಸಲೆಗೆ
ಪ್ರೀತಿ ಮಿಗಿಲಾಯ್ತೆನಲು ನಗುತ ವಿ
[2]ಧಾ[2]ತ ನೀನಿಂತಾಡಬಹುದೇ
ಪಾತಕದ ನುಡಿಯೆಂತು ಬಂದುದು ಸತ್ಯವಂತನಲಿ ೪

ಸತ್ಯ ಲೋಕಕ್ಕರಸು ನಿನ್ನೊ[3]ಳ[3]
ಸತ್ಯವಾಕ್ಯವ ಕೇ[4]ಳ್ದ[4] ಮನಸಿಗೆ
ಪತ್ಯವಾ[5]ಯಿತುಯೆಂದು[5] ಗಹಗಹಿಸಿದ[6]ನು[6] ಸಭೆಯೊಳಗೆ
ಅರ್ಥವಾಯ್ತಾಯ್ತೇನನೆಂಬೆನೆ
ನುತ್ತ ದಶಶಿರ ಹಾಸ್ಯವಚನದಿ
ಹತ್ತು ಬಾಯೊಳು ಸೂಸೆ ತಂಬುಲ ನಗೆತರಂಗದಲಿ ೫

ಪುಂಡರೀಕಾಸನನು ಕೇಳೆಲೊ
ತೊಂಡ ರಾವಣನೆನುತ ಕಣ್ಣೊಳು
ಕೆಂಡ ಸೂ[7]ಸಲು[7] ನಾಲ್ಕು ಮುಖದಲಿ ಜಡಿದು ಗರ್ಜಿಸುತ
ಕಂಡೆ[8]ಯೇನ[8]ನಸತ್ಯವೆನ್ನೊಳು
ಹಿಂಡು ದನುಜರ ಮುಂಡೆ ನೀ ಕೈ
ಕೊಂಡೆ ಹಾಸ್ಯವ ಸತ್ಯ[9]ಮಿಥ್ಯೆಗಳಾ[9]ರದೆಂಬುದನು ೬

ಪಾನಿಗಳು [10]ತಾವ್[10] ಬಲ್ಲರೇ ಮಾ
ಹಾನುಭಾವರ ಗುಣವನೆಲವೋ
[11]ಶ್ವಾನ ಬಗುಳಲು[11] ಸ್ವರ್ಗ ಕೆಡುವುದೆ ಜಂಬುಕನು [12]ಮದದಿ[12]
ಆನೆಯನು ಕೆಣಕುತ್ತಲಣಕಿಸಿ
ತಾನು ಮದಗಜವಾಗಬಲ್ಲು ದೆ
ನೀನು ಬಗುಳಿದೊಡಾಯ್ತೆ ಯೆನ್ನ[13]ದ[13]ಸತ್ಯವಿಂದಿನಲಿ ೭

---

1 ಕೇಳು ನ (ಕ) ಹೇಳೆನು (ಗ) 2 ದೂ (ಕ) 3 ಳು (ಕ) 4 ಳಿ (ಗ) 5 ದುದು (ಕ) 6 ನುನಾಗ (ಕ) 7 ಸುತ (ಗ) 8 ವೆನ್ನ (ಕ) 9 ಗಿತ್ಯವನೂ (ಕ) 10 ತಾಂ (ಕ) 11 ನೀನು ಬಗುಳಿದ (ಕ) 12 ಮು(ಕ) 13 ದು (ಕ).

ಕೋಪದಿಂ ಕುಡಿಮಿಾಸೆ ಕುಣಿವು
ತ್ತಾ ಪುರಂದರವೈರಿಯೊಡನೆಯು
ಪಾಪ[1]ವೆನ್ನ ದ[1]ಸತ್ಯವಾದರೆ ಬಿಟ್ಟೆವಿಂದಿನಲಿ
ಭೂಪತನವನು ಸತ್ಯಲೋಕದ
ತ್ರೈಪುರಾರಿಯ ಪಾದದಾಣೆಯು
ನೀ ಪರೀಕ್ಷಿಸೆನಲ್ಕೆ ಕರೆಸಿದನಾಗ ವರುಣನನು ೮

ಇತ್ತಲಾ ದಶರಥನು ತನ್ನಯ
ಮತ್ತಕಾಶಿನಿಯೊಡನೆ ಮೆ[2]ಲ್ದು ಸು[2]
ವಸ್ತು ವ[3]ನು ಜಲವೀಂಟ[3] ಕುಳ್ಳಿರಲಾಗ ಪೆಟ್ಟಿಗೆಯ
[4]ಒ[4]ತ್ತಲಾಕ್ಷಣ ಬೀಗ[5]ವಿಕ್ಕಲು[5]
ಮೃತ್ಯು ಪರಿಹಾರಾರ್ಥವಾಗಿಯೆ
ಚಿತ್ತದೊಳು ಶ್ರೀ ಹರಿಯ [6]ನೆನೆಯುತ್ತಿರಲಿಕಾ[6]ಕ್ಷಣಕೆ ೯

ದುಷ್ಟರಾವಣ ಕರೆದು ಕ್ಷಿಪ್ರದಿ
ಪೆಟ್ಟಿಗೆಯ [7]ತರಹೇಳೆ[7] ವರುಣನು
ಬೆಟ್ಟದೊಳಗಿಹ ಸಂದುಕವ ತಂದಿಟ್ಟನಿದಿರಿನಲಿ
[8]ದಿ[8]ಟ್ಟನಾ ಬೀಗವನು ಕಳಚಲು
[9]ಥಟ್ಟನಿರ್ವರ[9] ಕಂಡು ಮೂಗಿನೊ
ಳಿಟ್ಟು ಬೆರಳನು ಜಗವ [10]ಪೆ[10]ತ್ತನ ಮೊಗವನೀಕ್ಷಿಸಿದ ೧೦

[11]ತಱಿ[11]ದು ಬಿಸುಡುವೆನಿವ[12]ರನೆನುತಲಿ[12]
ಕರದ ಖಡ್ಗವ ಜಡಿಯಲಾಕ್ಷಣ
ಸರಸಿಜಾನನೆ ಬಂದು ಹಿಡಿದಳು ರಾವಣನ ರಾಣಿ
ಕರವ ಪಿಡಿ[13]ದೆನ್ನ [13]ರಸ ನಿನಗೀ
ಮರುಳು ಬುದ್ಧಿಯ[14]ದೇ[14]ಕೆ ಪೇಳಿನ
ಉರ[15]ಸಿ[15] ಕೇಳಿವರಿಂದವುದಿಸುವ ಮೃತ್ಯು ತನಗೆಂದ ೧೧

1 ವೆನ್ನದು (ಕ) ತನ್ನದ (ಗ) 2 ಲ್ಪಶು (ಕ) 3 ನ ಜಲದಿಂಚಿ (ಕ) 4 ಹ (ಕ) ವ (ಗ) 5 ಕಲ್ಪಂ (ಕ) 6 ನೆನವುತ್ತಿರಲು ಆ (ಕ) 7 ತಾಯೆನಲು (ಕ) 8 ತ (ಗ) 9 ದಿಟ್ಟನಿಹರಂ (ಗ) 10 ಪೊ (ಕ) 11 ಅರಿ (ಕ) 12 ನನೆನುತಲೆ (ಗ) 13 ದೇನ (ಗ) 14 ನೇ (ಕ) 15 ಸ ಕೇಳ (ಕ).

ಆರು ನಿನ್ನನು ಕೊಲುವವರು ನೀ
ನಾರ ಕೊಲುವೆಯಿದೇನು ಹೇಳೈ
ವೀರತನವೇ ನಿನ್ನದಿದು ನಿನ[1]ಗೊಯ್ರ್ರಿ[1]ಯೇ ಯಿವರು
ಮಾರಿಯನು ಕರೆ[2]ದ[2]ದಕೆ ತನುವನು
ಮಾಱದಿರು ಕೇಳೆಲವೊ ಹರಿಯೊಳು
ಹೋರಿ ಬದುಕುವರಿಲ್ಲ ನೀ ಕೇಳ್ದರಿಯ ಪೂರ್ವದಲಿ ೧೨

ಭ್ಾಲಕನ ಕೊಲ[3]ಲೆಂದು ನೇಮಿಸೆ[3]
ಲೋಲ ಕಂಬದಲುದಿಸಿ ಕಶಿಪುವ
ಸೀಳಿ ಕರುಳನು ಮಾಲೆಯಿಕ್ಕನೆ ತನ್ನ ಕೊರ[4]ಳಿಂಗೆ[4]
ಕಾಲಗತಿಯನು ಕಂಡನಾವನು
ಸೀಳಿ ಬಿಸುಡುವ[5]ನೇನ ಮಾಡನು[5]
ಮಾಲತಾಂಗಿಯ ರಮಣನೊಳು ಹಗೆ ಬೇಡ ನಿನಗಿಂದು ೧೩

ಕಂದ ನಿನಗವ ವೈರಿಯಾದರೆ
ತಂದೆಯನು ಕೊಲಲೇಕೆ ಎತ್ತಿಗೆ
ಬಂದ ರೋಗಕೆ ಬರೆವರೇ ಹಿಡಿತಂದು ಕತ್ತೆಯನು
ಇಂದು ನೀನಿವರನ್ನು ಕೊಂದರೆ
ಕೊಂದನೀಕ್ಷಣ ನಿನ್ನ ಕೇಳೆಲೊ
ಮಂದಮತಿ ಬಿಡು ವಧುವರರ ನೀನೆನುತ ಖಂಡೆಯುವ

ಇರಿ[6]ಸು[6] ಕೇಳಿವರಿಂಗೆ ತರಿಸು[7]ಡು[7] ೧೪
ಗೋಱೆಯನಿತ್ತೂಟವನು ಮಾಡಿಸಿ
ತರಿಸಿ ಪುಷ್ಪಕದಿಂದಯೋಧ್ಯಾಪುರಕೆ ಕಳುಹುವುದು
ತರುಣಿಯುತ್ತರಗೇಳಿಯಿರಿಸಿಯೆ
ಕರದ ಖಂಡೆಯವನು ದಶಾನನ
ತರಿಸಿ ತಾನುಡುಗೋಱೆಯನುಡಿಸಿದನಾಗ ದಶರಥನ ೧೫

---

[1] ಗೆ ವೈರಿ (ಗ) [2] ವ (ಕ) [3] ಲಾಕ್ಷಣದಿ ಶ್ರೀ (ಕ) [4] ಳಿನಲಿ (ಕ) [5] ಯೇನ ಮಾಡುವ (ಗ) [6] ಸಿ (ಕ) [7] ವುದುಡು (ಕ)

ಪೊಡವಿಪಾಲನೆ ಕೇಳು ನಿನ್ನನು
ಬಿಡಲೊ ಕಡಿಯಲೊ ಪೇಳು ಯೆನಲವ
ನುಡಿದನೆಲವೋ ಕರ್ಬುರೇಶನೆ ನಿನ್ನ ಕೈಯಲ್ಲಿ
ಮಡಿ[1]ವೆ[1]ನೇ ತಾನೆಲವೊ ತನ್ನನು
ಕಡಿವವನೆ ನೀ[2]ನಿಂ[2]ದು ತ್ರೈಜಗ
ದೊಡೆಯನಾಜ್ಞಾವರ್ತಿಗ[3]ಳು[3] ಸ್ವಾತಂತ್ರ್ಯವಿಲ್ಲೆಂದ ೧೬

ಮೆಚ್ಚಿದನು ದಶಕಂಠನಾಕ್ಷಣ
[4]ಮೆ[4]ಚ್ಚಿನುಡುಗೊಱೆಯನ್ನು ತರಿಸಿದ
ಮಚ್ಚರವ ನೆಱೆ ಬಿಟ್ಟು ನುಡಿದನು ಭಲರೆ ಮನುಜರೊಳು
ನಿಚ್ಚಟತ್ವದ ಧೈರ್ಯ[5]ವೆನ್ನೊಳ
ಗ[5]ಚ್ಚರಿತ ನಿನ್ನಲ್ಲಿ ಕಂಡೆನು
ಹುಚ್ಚುಗೊಳ್ಳದೆ ನುಡಿದೆನೆನ್ನೊಳು ಚೋದ್ಯವೆಂದೆನುತ ೧೭

ವಧುವರರಿಗುಡುಗೊಱೆಯನಿತ್ತವ
ಮುದದಿ ಮನ್ನಿಸಿ ಸ್ನಾನಪಾನಾ
ದ್ಯುದಿತ ಸತ್ಕಾರವನು ಮಾಡಿಯೆ ರಾವಣನು ತನ್ನ
ಹೃದಯದಂತಸ್ತಾಪದಲಿ ನಾ
ರದನು ಪೇಳಿದ ವಾಕ್ಯಕಿನ್ನೇ
ನಿದಕೆ ಗತಿಯನು ಕಾಣೆ ಕೆಡಿಸಿದಳಿಂದುಮುಖಿ ತನ್ನ ೧೮

[6]ಅಪ್ಪು[6]ದಾಗಲಿಯಿದಕೆ ತಾನಿ
ನ್ನೊಪ್ಪದಿರ್ದರೆ ಕೆಡುಗು ಕಜ್ಜ[7]ವು[7]
[8]ತಪ್ಪ[8]ನೀ ಪತಿಯಾಣೆ ಬಂದುದನುಣದೆ ಕೇಳ್ ತನ್ನ
ಅಪ್ಪನುಂಬನೆಯೆಂಬ ನುಡಿಯಿದು
ತಪ್ಪುವುದೆಯೆಂದೆನುತ ರಾವಣ
ಪುಷ್ಪಕವ ತರಹೇಳಿ ನೇಮವನಿತ್ತು ಕಳುಹಿದನು ೧೯

---

1 ವ (ಗ) 2 ನೆಂ (ಗ) 3 ಳ (ಕ) 4 ಹೆ (ಗ) 5 ವಿಂದಿನೊಳ್ ಸ (ಕ) 6 ಆದು (ಗ)
7 ನು (ಕ) ಮ (ಗ) 8 ಕಲ್ಪ (ಕ)

ಕರೆಯಲಟ್ಟಿದ ಚಾರ ಬಂದನು
ತ್ವರಿತದಿಂ ಪುಷ್ಪಕವ ರಾವಣ
ತರಲಿಕಪ್ಪಣೆಯಿತ್ತು ಕಳುಹಿದನರಸ ದಶರಥಗೆ
ಪುರಕೆ ಪೋಪರೆ [1]ವರ[1]ವಿಮಾನವ
ಹಿರಿದು ಸಿಂಗ[2]ರವಾಗಲೆಂದು ಸು[2]
ದರುಶನವ ಪೇಳಿದ[3]ರೆ[3] ನೂತನವಾಗಿ ರಚಿಸಿದನು ೨೦

ಹತ್ತು ಸಾವಿರ ಘಂಟೆ ಜಂಗಟ
ವತ್ತು ಸಾವಿರ ಛತ್ರ ಚಮರೆಂ
ಬತ್ತು ಸಾವಿರ ಝುಲ್ಲಿ ಕುಂಚದ [4]ಹ[4]ಡಪವೇಳೆಂಟು
ಹತ್ತು ಸಾವಿರ ರತ್ನ ಖಚಿತದ
[5]ಲಿತ್ತ[5]ರದ ಮೇಲ್ಗಟ್ಟು ಮೆಱೆಯಲು
ಮುತ್ತು ಮಾಣಿಕದಿಂದ ಯೆಸೆಯಲು ಸುತ್ತುವಳಯದಲಿ ೨೧

ಅಂದವಾಗಿ[6]ಯೆ[6] ಪುಷ್ಪಕವು ಮೇ
ಲಿಂದುಮಂಡಲಕಡಱ ಬರುತಿರೆ
ಅಂದು ಕೇಳಿ[8]ಸಿತಾ[8]ಗ ಕಟ್ಟಿದ ಘಂಟೆ ತೂರ್ಯಗಳು
ಧಿಂ ಧಿಮಿಂ ಧಿಮಿ ತ[9]ತ್ತ ಧೋಂಧೋ
ದಿಂದಿ[9] ಗಿಡಗಿಡ ತ[10]ಕ್ಕ ಥೈ ಥೈ[10]
ಯೆಂದು ನರ್ತನವೆಸೆಯ [ಲಂದು] ಮೃದಂಗ ಗೀತದಲಿ ೨೨

ಘಣಿಲು ಘಣಿ ಘಣಿ ಘಣಿಲು ಘಣ ಘಣ
[11]ಗಣ ಘಣಘ್ಣಣ ಘಣಿಲು ಘಣಿಕೆಂ
ದಣವುತಿರ್ದವು ಘಂಟೆ ಘಣಿಘಣಿಕೆಂದು ಸಮ್ಮುಖ[11]ದಿ
ಮಣಿರಥವು ಬರಲದಕೆ ರಕ್ಕಸ
ಮಣಿದು ಶಿರವನು ಸೋಸಿ ಶೃಂಗರ
ಕೆಣೆಯ ಕಾಣೆನೆನುತ್ತ ಕರಸಿದನಾಗ ದಶರಥನ ೨೩

[1] ಪುಷ್ಪಕ ವರ (ಕ) [2] ರಿಸಿದನು ಸೂ (ಕ) [3] ರೆನುತ (ಕ) [4] ವ (ಕ) [5] ವಿಸ (ಕ) [6] ಹ (ಕ) [7] ದ್ರನಂತ (ಕ) [8] ತ್ತೌ (ಗ) [9] ಕ್ಕ ಥೊದೊಂದಿಂ (ಕ) [10] ಕ್ಕು ಕೈತಯಿ (ಕ) [11] ಘಣಿಲು ಘಣಿಲೆಂದಣಲುತಿರ್ದವು ಘಂಟೆ ತೂರ್ಯದಲಿ (ಕ)

ರಾವಣನು ಕರವಿಡಿದು ಮೇಲಕೆ
ಸಾವಧಾನದೊಳವರನೇಱಿಸೆ
ದೇವಸಂತತಿಯರಳ ಮಳೆಗಳ ಸುರಿದರರಸಂಗೆ
ಆ ವಿಮಾನದ ಮೇಲಕಡಱಿ
ಲ್ಯಾ ವಿಬುಧ ಪಥದಿಂದ ಬರುತಿರೆ
ಭೂವರಗೆ ತೋಱಿದನು ಕೋಸಲ ಭೂಪನರಮನೆಯ ೨೪

ಕಂಡು ಬಹೆನಾ ಕುಶಲಭೂಪಗೆ
ಪುಂಡರೀಕಾಕ್ಷಿಯನು ಕಾಣಿಸಿ
ಕೊಂಡಯೋಧ್ಯಕೆ ಪೋಗಬಹುದೆಂದರಸ[1]ನ[1]ವರೊಡನೆ
ಅಂಡಲೆಯಲದ ಕೇಳುತಲ್ಲಿಗೆ
ಗಂಡುಗಲಿ ದಶರಥನು ಸಹಿತು
ದ್ದಂಡ ಕೋಸಲಪುರಕೆ ನಡೆಯಲು ಕಂಡನಿದಿರಿನಲಿ ೨೫

ಕುರು[2]ಜು[2] ಮೇರುವೆ ತೋರಣಂಗಳು
ಥರಥರದ ಬೀದಿಗಳ ಸಾರಣೆ
ವಿರಚಿಸಿ[3]ದ ನೋಡರಸ ನಿನ್ನ[3]ಯ ಪರಿಣಯಕ್ಕೆಂದು
ಅರ[4]ಸ[4] ದಶರಥ ತೋಱಿಸುತ್ತಿರೆ
ಸರಸಿಜಾನ[5]ನೆ ನೋಡಲಂತ[5]
ಬ್ಬರಿಸು[6]ತಾಗ[6] ವಿಮಾನ ಬಂದುದು ಪುರದ ಸಮ್ಮುಖಕೆ ೨೬

ಏನಿದೇನು ವಿಮಾನದಲ್ಲಿ ದ
ಶಾನನನು ತಾ ಮರಳಿ ಬಂದಿ
ನ್ನೇನು ಗತಿ [7]ನ[7]ಮಗೆನುತ ಪುರಜನ ಬೆದಱುತಿರಲಾಗ
ಮಾನವೇಶ್ವರ ನುಡಿದ[8]ನಂ[8]ಜದಿ
ರಾನು ದಶರಥ ದ್ಯುಮಣಿವಂಶ[9]ಜ[9]
ಮಾನಿನಿಯ ಕರೆತಂದೆನಿದೆಯೆಂದಿಳಿದ ಪುಷ್ಪಕವ ೨೭

---

1 ರ (ಕ) 2 ಜ (ಕ) 3 ನಿನ್ನ (ಗ) 4 ಸು (ಗ) 5 ನನೆನೊಡೆಲ (ಕ) 6 ತ (ಕ) 7 ತ (ಕ) 8 ರಂ (ಗ) 9 ದ (ಕ).

ಪುರಜನರು ತಮ[1]ತಮ[1]ಗೆ ನೋಡಲು
ನೆಱದು[2]ದಾ[2]ರತಿಗಳ ನಿವಾಳಿ[3]ಯು[3]
ಹರುಷದಿಂ ಸುಳಿಸುಳಿದು ಬಿಸುಟರು ಸಾರನಾರಿಗಳು
ಚರರನಟ್ಟಿದನಾಗ [4]ಕುಶ[4]ಲನಿ
ಗಱುಹಲಾಕ್ಷಣ ನೆಱದ ಸಭೆ ಸಹ
ಚರ[5]ರಿ[5]ಗುಡುಗೊಱೆಯಿತ್ತು ತನ್ನಯ ಮನೆಯ ಹೊಱವಂಟ ೨೮

ಸುದತಿಯರನೊಡಗೊಂಡು ಬಂದ
ಪ್ಪಿದನು ತನ್ನಯ ಮಗಳನಳಿಯನ
ಮುದದಲರಮನೆಗೊಯ್ದು ಸತ್ಕರಿಸಿದನು ವಿನಯದಲಿ
ಸುದತಿ ನಿನಗಿವಳೆಂತು ಕೈಸೇ
ರಿದಳು ರಾಕ್ಷಸನಿತ್ತ ಪರಿಯೆಂ
ತದನು ತನ[6]ಗಿಂದ[6]ಱುಹಬೇಕೆಂದರಸ ಬೆಸಗೊಂಡ ೨೯

ಮೇದಿನೀಪತಿ ಕೇಳು ರಾವಣ
[7]ನೊ[7]ಯ್ದು ವರುಣನ ಕರದೊಳಿತ್ತಡೆ
[8]ಯಾದಸಾಂಪತಿಯಿ[8]ತ್ತನೊಂದು ತಿಮಿಂಗಿಲನ ಕರೆದು
ಕಾ[9]ದ[9] ಹೋಗುತ್ತಾಗ ಕು[10]ಹ[10]ರದ
ಲೊಯ್ದಿಡಲ್ಕಾಗೆನ್ನ[11]ಭೈತ್ರ್ರವ[11]
ಭೇದಿಸಲು ತಾನೈದಿದೆನು ಶ್ರೀಹರಿಯ ಬಲದಿಂದ ೩೦

ಇಂದುವದನೆಯ ಕಂಡೆನಿರ್ವರು
ಸಂದುಕದಿ ಕುಳ್ಳಿರಲು ರಾವಣ
[12]ಸಿಂಧುಪತಿಯಿಂ[12] ತರಿಸಿ ಮುದ್ರೆಯನೊಡದು ಮುಚ್ಚಳವ
ನಂದು ತೆಗೆಯಲು ಕಾಣುತಿರ್ವರ
ನಂದು ಖಡ್ಗದಿ ಪೊಡೆವ ಸಮಯ[13]ದೊ
ಳಂದು ಪಿ[13]ಡಿದಳು ಕರವನಂದಾ ಯಿಂದುಧರನಿತ್ತ ೩೧

---

[1] ನತನ (ಕ) [2] ಪಾ (ಗ) [3] ಸಿ (ಕ) [4] ಕೋಸ (ಕ) [5] ನಿ (ಗ) [6] ಗಿನ್ನ (ಕ) [7] ವೊ (ಕ) [8] ಆ ದಯಾನಿಧಿ ನಿ (ಕ) [9] ದು (ಕ) [10] ಧ (ಕ) [11] ಚಿತ್ರದ (ಕ) [12] ನಿಂದುಪರಿಯಂ (ಕ) [13] ದೊಳ್ ಬಂದು ಹಿ (ಗ).

ಮಾನಿನಿಯ ದೆಸೆಯಿಂದ[1]ಲೆನ್ನ[1]ನು
ದಾನವೇಶ್ವರ ಕರೆದು ತನ್ನ ವಿ
ಮಾನದಿಂ ಕಳುಹಿದ[2]ನ[2]ಯೋಧ್ಯಾನಗರಿಗೆಮ್ಮುವನು
ದಾನವಾಂತಕನೊಲುಮೆಯುಳ್ಳೊಡ
ದೇ[3]ನ[3]ಪಾಯವು ಹೊದ್ದದೆಂಬ ನಿ
ದಾನವನು ತಾಂ ಕಂಡೆನೆಂದನು ಕುಶಲಭೂ[4]ಪಂ[4]ಗೆ ೩೨

ಸಂದ ವೃತ್ತಾಂತವನು ಪೇಳ
ಲ್ಕಂದು ಕೋಸಲ ಕರೆಸಿ ವಿಪ್ರರ
ನಿಂದುವದನೆಯರೊಡನೆ [5]ಸುತೆ[5]ಯನು ಶೃಂಗರಿಸಲೆಂದು
ಸಂದುಕವ ತರಿಸಿದನು ರತ್ನಗ
ಳಿಂದ ರಚಿಸಿದ ಭೂಷಣವ[6]ನ[6]ರ
ವಿಂದಲೋಚನೆಗಿತ್ತು ಕಳುಹಿದನಂಬರವು ಸಹಿತ ೩೩

ಮಜ್ಜನ[7]ವ[7] ಮಾಡಿಸಿಯೆ [8]ಸಖಿ[8]ಯರು
ಸಜ್ಜೆಯರಮನೆಗೈದಿ ಪಟ್ಟೆಯ
ಸಜ್ಜೆ[9]ರುಡಿ[9]ಸಿದರಿಟ್ಟರೊಡ್ಯಾಣವನು ನಡು[10]ವಿಂಗೆ[10]
ಕಜ್ಜಳವ[11]ನೆಚ್ಚಿಸಲು ಕಣ್ಣಿಗೆ[11]
ಪ್ರಜ್ವಲಿಪ ಕಂಕಣವ ಕರದೊ[12]ಳು[12]
ತರ್ಜನಿಯು ಮೊದಲಾದ ಬೆರಳಿಂಗುಂಗುರವನಿಟ್ಟು ೩೪

ಪರಿಮಳವ ಸೂಸಿದರು ತುಱುಬಿ[13][ಗೆ][13]
ಮರುಗ ಮಲ್ಲಿಗೆ ಸರವ ಮುಡಿಸಿಯೆ
ಕೊರಳಿಗಿ[14]ಕ್ಕಲು[14] ಹಾರ ಪದಕವ ಕರ್ಣಪತ್ರಗಳ
ಇರದೆ ಮೂಗುತಿ ಕಾಲಲಂದುಗೆ
ಬೆರಳ ನೂಪುರ[15]ವು[15]ಲಿಯೆ ಜಣ[16]ರೆಂ[16]
ಬಱುತರದ ಹೊಂಗೆಜ್ಜೆ ಸರಪಣಿಯಿಂದಲೊಪ್ಪಿದಳು ೩೫

---

1 ನಮ್ಮ (ಕ) 2 ನು (ಕ) 3 ನು (ಕ) 4 ಪತಿ (ಕ) 5 ಪುತ್ರಿ (ಕ) 6 ಅ (ಕ) 7 ವು (ಕ) 8 ಪತಿ (ಕ) 9 ಸಲು (ಗ) 10 ವಿನಲಿ (ಕ) 11 ಹಚ್ಚಿದರು ಕಣ್ಣಿನೊಳ್ (ಕ) 12 ಳ್ (ಕ) 13 ನೊಳ್ (ಕ ಗ) 14 ಕ್ಕಿತು (ಕ) 15 ನು (ಕ) 16 ರೆಂ (ಗ).

ಶೃಂಗರಿಸಿ ನೀಱ[3]ಯರು ಮುದದಲಿ
ಮಂಗಳಾರತಿಯೆತ್ತಿ ಪಾಡುತ
ರಂಗಮಂಟಪದೆಡೆಗೆ [1]ನಡೆಯುತ್ತಿರೆ[1] ವಿಲಾಸದಲಿ
ಅಂಗನೆಯರೋಳಿ[2]ಯೊಳು ಬರುತ ಮ
ದಂಗಜವು[2] ಮೆಲ್ಲಡಿಯನಿ[3]ಟ್ಟವೊ
ಲಂ[3]ಗಜನ ಮಸದಲಗಿನಂತವಳ್ದೈದೆ ಮಂಟಪ[4]ಕೆ[4] ೩೬

ಹೊಳೆವ ಕಂಗಳ ಧಾಳದಿಂ ಥಳ
ಥಳಿಪ ವದನದ ದಂತಪಂಕ್ತಿಯ
ಬೆಳಗುತಿಹ ಭೂಷಣದ ನಳಿ[5]ತೋಳ್ವಳೆಯ[5] ಕಂಕಣದ
ತೊಳಪ ಮೂಕುತಿ ಕರ್ಣಪತ್ರದ
ನಳಿನಮುಖಿಯರು ಕಂಸಲೆಯ ಯೆಡ
ಬಲದೊಳೊಪ್ಪಿರೆ ವಿಪ್ರರಾಶೀರ್ವಾದ ಘೋಷದಲಿ ೩೭

ಐದೆಯರು ಶೋಭನವ ಪಾಡಲು
ಭೂದಿವಿಜರೋದಿದರು ಮಂತ್ರವ
ನಾದುದಾಕ್ಷಣ ಲಗ್ನ ದಶರಥಭೂಮಿಪಾಲಂಗೆ
ಐ[6]ದಲಾ[6]ಕ್ಷಣ ಪುಷ್ಪಕವು ತಾ
ನಾದರದಿ ಮನ್ನಿಸಿದ ದನುಜರ
ಮೇದಿನೀಪತಿ ಸಹಿತ [7]ಸ್ತ್ರೀಯರ್ವೆರಸಿ ಪುಷ್ಪಕವ[7] ೩೮

[8]ತುಂ[8]ಬಿದುದು ಚತುರಂಗಬಲ ಸಹ
ಯಿಂ[9]ಬನ್ಯೈ[9]ವರಿಗೀವುತಿರ್ದುದು
ಅಂಬರಾಗ್ರದಿ ಬರುತ ತೋಱದ[10]ರಾಗ ದೇಶಗಳ[10]
ಕುಂಭಿನೀಪತಿ ನೋಡಿದೈ ಕ
ಣ್ಮಂ[11]ಬಿ[11]ನಲಿ ಕಾಣುತ್ತಲಿದೆ ತ್ರಿ
ಯಂಬಕನ ರಜತಾದ್ರಿ ಕಾಂಚನಗಿರಿಯು ಕಮಲಜನ ೩೯

---

1 ಡೆವುತಿರೆ (ಕ) 2 ಗಳು ಬರುತಿರೆ ಪುರಜನವು (ಕ) 3 ಟ್ಟುದೊ ಅಂ (ಕ) 4 ದಿ (ಗ) 5 ದೊಳುಗಳ (ಕ) 6 ದುದಾ (ಕ) 7 ಸತಿವೆರಸಿ ಪುಷ್ಪಕದಿ (ಕ). 8 ತರು (ಕ) 9 ಬ ಐ (ಕ) 10 ರಖಿಳ ಸೇನೆಗಳ (ಕ) 11 ದಿ (ಕ)

ಆಗ ಕೋಸಲ ಕಂಡು ಸಭೆಯನು
ಮೂಗಿನಲಿ ಬೆರಳಿಟ್ಟು ಪೊಗಳುತ
ತೂಗಿ ತನ್ನಯ ಶಿರವನಹುದೋ ಭೋಗ ದೇವೇಂದ್ರ
ಭೋಗಿಭೂಷಣ ಸಭೆಯನೆಂದಾ
ನಾಗಶಯನನ ಬ್ರಹ್ಮದೇವ[1]ರ[1]
ಭೋಗಕಿಮ್ಮಡಿಯೆಂದು ಕೊಂಡಾಡಿದನು ದಶರಥನ ೪೮

ಹರಿದುದೋಲಗವಿತ್ತ ದಶರಥ
ಕರೆ[2]ದ[2]ನಾರೋಗಣೆಯ ಮಾಡಿದ
ನರಸ ಕೋಸಲಸಹಿತ ಸಂತೋಷದಲಿ ಕುಳ್ಳಿರುತ
ಪರಮಭಕ್ತರ ಬಂಧು ಮಧುಕೇ
ಶ್ವರನ ಸಖನೆನ್ನುವನು ಸಲಹಿದ
ವರದ ವಿಟ್ಠಲರಾಯ [ತಾ]ನೆಂದೆನುತ ಸುಖ[3]ವಿರ್ದ[3] ೪೯

ಇದನು ಹೇಳುವ ಕೇಳುವಾ ಸದು
ಹೃದಯ ಮಂದಿರದೊಳಗೆ ನೆಲಸುವ
ಪದುಮನಾಭನು ವರದವಿಟ್ಠಲರಾಯ ಕರುಣದಲಿ
ಮದುವೆಯಾಗಿ[4]ಯೆ[4] ದಶರಥನು ನಿಜ
ಸುದತಿ ಕಂಸಲೆಗೂಡಿ ಹರುಷದಿ
ಸದನಕೈದಿದ ಕಳುಹಿದನು ಮಾತುಳನನೆಂಬಲ್ಲಿ ೫೦

ಸಂದುದೆರಡನೆ ಸಂಧಿ ಕೋಸಲ
ಬಂದು ತನ್ನಯ ಪುರವ ಪೊಕ್ಕನು
ಯೆಂದು ಪೇಳ್ದವು ವಸುಋತುಗಳೆಂದೆಂಬ ಸಂಖ್ಯೆಯಲಿ
*ಇಂದುವದನೆಯು ಸಹಿತ ದಶರಥ
ನಂದಯೋಧ್ಯಾಪುರವನಾಳುತ
ಮಂದಿರದಿ ಸುಖವಿರ್ದ ನೆನೆಯುತ ವರದವಿಟ್ಠಲನ ೫೧

---

1 ನ(ಕ) 2 ದು (ಕ) 3 ದಿಂದ (ಕ) 4 ಹ (ಕ)

* (ಕ) ಪ್ರತಿಯಲ್ಲಿ ಇಲ್ಲಿಂದ ಮುಂದೆ ಗ್ರಂಥವಿಲ್ಲ. ಅಂತು ಸಂಧಿ ೨ ಕಂ ಪದ ೧೧೪ ಕಂ ಮಂಗಳ ಮಹಾಶ್ರೀ ಎಂದು ಇಲ್ಲಿಗೇ ಮುಗಿದಿದೆ.

ಮೈಸೂರು ಕನ್ನಡದ ಸಾಮಾಜಿಕ ಭಾಷಾ-ಪ್ರಭೇದಗಳು$

೦

ಭಾರತದ ಭಾಷೆಗಳೊಳಗಿನ ಭಾಷಾ-ಪ್ರಭೇದಗಳ ಅಂತರವನ್ನು ಪ್ರಪಂಚದ ಇನ್ನಿತರ ಭೌಗೋಳಿಕ ಭಾಷಾ-ಪ್ರಭೇದಗಳಂತಲ್ಲದೆ ಸಾಮಾಜಿಕ ದೃಷ್ಟಿಕೋನ ದಿಂದಲೂ ವೀಕ್ಷಿಸಬಹುದು. ಒಂದೇ ಸ್ಥಳದಲ್ಲಿ ಮಾತನಾಡಿದರೂ ಸಾಮಾಜಿಕ ಅಂತಸ್ತುಗಳಲ್ಲಿ ಪೋಣಿಸಬಹುದಾದ ಭಾಷಾ-ಪ್ರಭೇದಗಳಿಗೆ ಅನ್ಯತ್ರ ದುರ್ಲಭವಾದ ಸ್ಪಷ್ಟ ಉದಾಹರಣೆಗಳು ಭಾರತದ ಭಾಷೆಗಳಲ್ಲಿ ಕಾಣಬರುತ್ತವೆ. ಇವು ಉತ್ತರ ಭಾರತದ ಹಳ್ಳಿಯೊಂದನ್ನು ಕುರಿತು ಗುಂಪರ್ಜ್ ಅವರು ವಿವರಿಸಿದಂತಹ ಜಾತೀಯ ಭಾಷಾ-ಪ್ರಭೇದಗಳು.[1] ಅಂತಹ ಭಾಷಾ-ಪ್ರಭೇದಗಳ ಅಧ್ಯಯನದಲ್ಲಿ ಈ ಕೆಳಗಿನ ಪ್ರಶ್ನೆಗಳು ಸಹಜವಾಗಿ ಉದ್ಭವಿಸುತ್ತವೆ: ಒಂದು ಭಾಷಾ-ಪ್ರಭೇದದಲ್ಲಿ ಹುದು ಗಿರುವ ಭಾಷಾ ಭಿನ್ನತೆಗೂ ಮತ್ತು ಅದನ್ನು ಮಾತನಾಡುವ ಜನಗಳ ಸಾಮಾಜಿಕ ಗೌರವಕ್ಕೂ ಏನಾದರೂ ಸಂಬಂಧವಿದೆಯೇ? ಅಂದರೆ, ಯಾವ ಜಾತಿಯ ಭಾಷಾ-

---

$ Charles A. Furguson ಮತ್ತು John J. Gumperz ಅವರ ಸಂಪಾದ ಕತ್ವದಲ್ಲಿ International Journal of American Linguistics ಮತ್ತು Indiana University Research Centre in Anthropology, Folklore and Linguistics ಸಂಸ್ಥೆಗಳು ಒಂದಾಗಿ ಪ್ರಕಟಿಸಿದ Linguistic Diversity in South Asia: Studies in Regional, Social and Functional Variation ಎಂಬ ವಿಶೇಷ ಸಂಚಿಕೆಯಲ್ಲಿ ಪ್ರಕಟವಾದ ತಮ್ಮ ಈ ಲೇಖನವನ್ನು ಅನುವಾದಮಾಡಿ ಪ್ರಕಟಿಸಲು ಅನುಮತಿ ನೀಡಿದ ಡಾ॥ ವಿಲಿಯಂ ಬ್ರೈಟ್ ಅವರಿಗೂ ಮತ್ತು ಅನುವಾದ ಕೆಲಸದಲ್ಲಿ ಸೂಕ್ತ ಸಲಹೆ ಯನ್ನು ನೀಡಿ ಸಹಾಯಮಾಡಿದ ಡಾ॥ ಆರ್. ಸಿ. ಹಿರೇಮಠ ಅವರಿಗೂ ನಾನು ಋಣಿಯಾಗಿ ದ್ದೇನೆ–ಅನುವಾದಕ.

[1] John J. Gumperz, Dialect differences and social stratification in a north Indian Village, American Anthropologist 60. 668–82 (1958).

ಪ್ರಭೇದದಲ್ಲಿ ಪ್ರಾಚೀನತೆಯ ಹೆಚ್ಚು ಲಕ್ಷಣಗಳನ್ನು ಕಾಣಬಹುದು? ಈ ಪ್ರಶ್ನೆಯ ಪರಿಶೀಲನೆಗೆ ಭಾಷೆಯ ವಿವಿಧ ಅಂಗಗಳನ್ನು ಪ್ರತ್ಯೇಕವಾಗಿ ಗಮನಿಸುವುದು ಅಗತ್ಯ. ಏಕೆಂದರೆ ವರ್ಣಭೇದ, ವ್ಯಾಕರಣಭೇದ ಮತ್ತು ಅರ್ಥಭೇದಗಳು ಒಂದು ಗೊತ್ತಾದ ಭಾಷಾ-ಪ್ರಭೇದದಲ್ಲಿ ಒಂದೇ ಪ್ರಮಾಣದಲ್ಲಿ ಕೆಲಸಮಾಡುವುದಿಲ್ಲ.

ಈ ಲೇಖನವು ಮೇಲಿನ ಪ್ರಶ್ನೆಗೆ ಪೂರ್ಣ ಉತ್ತರವನ್ನು ಒದಗಿಸಲಾರದು. ಬೆಂಗಳೂರು ಜಿಲ್ಲೆಯ ಕನ್ನಡದ ಎರಡು ಭಾಷಾ-ಪ್ರಭೇದಗಳಿಂದ ಸಂಗ್ರಹಿಸಿದ ಸಾಮಗ್ರಿಯನ್ನು ಹೋಲಿಸುವುದರ ಮುಖಾಂತರ ಆ ದಿಶೆಯಲ್ಲಿ ಹಾದಿಯನ್ನು ಹದಗೊಳಿಸಲು ಮಾತ್ರ ಯತ್ನಿಸುತ್ತದೆ. ಒಂದು, ಬೆಂಗಳೂರು ನಗರದಲ್ಲಿ ಹುಟ್ಟಿ ಬೆಳೆದ ತರುಣಿಯೊಬ್ಬಳು ಮಾತನಾಡುವಂತಹ ಬ್ರಾಹ್ಮಣ ಭಾಷಾ-ಪ್ರಭೇದ. ಇನ್ನೊಂದು, ನಗರದಿಂದ ಸ್ವಲ್ಪ ದೂರದ ಹಳ್ಳಿಯೊಂದಕ್ಕೆ ಸೇರಿದ ತರುಣ ಒಕ್ಕಲಿಗನು ಮಾತನಾಡುವಂತಹ ಭಾಷಾ-ಪ್ರಭೇದ. ಇಬ್ಬರು ಭಾಷಾನಿವೇದಕರೂ (informant) ಕಾಲೇಜು ವ್ಯಾಸಂಗವನ್ನು ಪಡೆದವರು.[2] ಧ್ವನಿಲೇಖವು ಈ ಮುಂದಿನ ವರ್ಣಗಳನ್ನು ಒಳಗೊಂಡಂತಹುದು: /ಪ್ ತ್ ಟ್ ಚ್ ಕ್ ಬ್ ದ್ ಡ್ ಜ್ ಗ್ f š (ಶ್∼ಷ್) z ಮ್ ನ್ ಣ್ ಙ್ ವ್ ಲ್ ಳ್ ಯ್ ರ್ ಹ್ ಇ ಈ ಎ ಏ æ *i* ಅ ಆ ಉ ಊ ಒ ಓ ɔ̄/[3]. ಈ ಎರಡು ಭಾಷಾ-ಪ್ರಭೇದಗಳಲ್ಲಿರುವ ಎಲ್ಲಾ ಭೇದಗಳನ್ನು ವಿವರಿಸಲು ಇಲ್ಲಿ ಯತ್ನಿಸಿಲ್ಲ; ಆದರೆ ಇಲ್ಲಿ ವಿವರಿಸಿರುವ ಭೇದಗಳು ಸಂಗ್ರಹಿಸಿರುವ ಸಾಮಗ್ರಿಯಲ್ಲಿ ಉತ್ತಮ ನಿದರ್ಶನಗಳನ್ನುಳ್ಳಂತಹವು.

೧

ಎರಡು ಭಾಷಾ-ಪ್ರಭೇದಗಳ ವರ್ಣವಿನ್ಯಾಸವು ಈ ಮುಂದಿನ ಭೇದಗಳನ್ನು ತೋರಿಸುತ್ತದೆ:

೧) ಬ್ರಾಹ್ಮಣ ಭಾಷಾ-ಪ್ರಭೇದವು (ಇನ್ನು ಮುಂದೆ ಸಂಕ್ಷಿಪ್ತ ಲಿಪಿಯಲ್ಲಿ ಬ್ರಾ.) ಇಂಗ್ಲಿಷ್‌ನಿಂದ ಬಂದ ಶಬ್ದಗಳಲ್ಲಿ / f z ɔ̄ / ವರ್ಣಗಳನ್ನು ಹೊಂದಿದೆ;

---

[2] ಬೆಂಗಳೂರು ಬ್ರಾಹ್ಮಣ ಭಾಷಾ-ಪ್ರಭೇದದ ಆಳವಾದ ಅಧ್ಯಯನದಲ್ಲಿ ನನ್ನ ಭಾಷಾನಿವೇದಕಳ ವ್ಯಕ್ತಿ-ಪ್ರಭೇದವನ್ನು ಇಲ್ಲಿ ಬಳಸಿಕೊಂಡಿದ್ದೇನೆ. ಅದನ್ನು ಪ್ರಾತಿನಿಧಿಕವೆಂದು ಸ್ವೀಕರಿಸಬಹುದು. ಒಕ್ಕಲಿಗ ಭಾಷಾ-ಪ್ರಭೇದವು 'ಅಚ್ಚ' ಒಕ್ಕಲಿಗ ಮಾತಲ್ಲ; ಅಂದರೆ ಭಾಷಾ-ನಿವೇದಕನ ವ್ಯಕ್ತಿ ಪ್ರಭೇದವು ಬ್ರಾಹ್ಮಣ ಮಾತಿನ ಗೌರವದಿಂದ ಪ್ರಭಾವಿತವಾಗಿದೆ. ಆದರೂ ಒಕ್ಕಲಿಗ ಮಾತಿನ ವೈಶಿಷ್ಟ್ಯಗಳನ್ನು ಇಲ್ಲಿ ಸಂಗ್ರಹಿಸಿದ ಸಾಮಗ್ರಿಯು ಸಾಕಷ್ಟು ಸ್ಪಷ್ಟವಾಗಿಯೇ ತೋರಿಸುತ್ತದೆ.

[3] William Bright, An Outline of Colloquial Kannada, Poona 1958) ಕೃತಿಯಲ್ಲಿ ಕನ್ನಡ ವರ್ಣ ವಿನ್ಯಾಸವನ್ನು ವಿವರವಾಗಿ ವಿವೇಚಿಸಲಾಗಿದೆ.

ಒಕ್ಕಲಿಗ ಭಾಷಾ-ಪ್ರಭೇದದಲ್ಲಿ (ಒ.) ಅವುಗಳಿಗೆ ಬದಲಾಗಿ ಕ್ರಮವಾಗಿ / ಪ್ ಜ್ ಅ /ಗಳು ಇವೆ. ಉದಾ: ಬ್ರಾ. ಕ್ ɔ̄ f ಇ, ಒ. ಕಾಪಿ 'ಕಾಫಿ'; ಬ್ರಾ. ಡ z ಅನ್, ಒ. ಡಜನ್ 'ಡ ಜನ್'.

೨) ಬ್ರಾ. /ಚ್/ವು ಸ್ವರ ಮಧ್ಯ ಬಂದಾಗ ಕೆಲವು ವೇಳೆ ಒ. /ಸ್/ಕ್ಕೆ ಸಮಾನವಾಗಿರುತ್ತದೆ: ಬ್ರಾ. ಸಮಾಚಾರ, ಒ. ಸಮಾಸಾರ 'ಸಮಾಚಾರ', ಸಂಸ್ಕೃತದ 'ಸಮಾಚಾರ'ದಿಂದ ಬಂದುದು. ಸಂಗ್ರಹಿಸಿದ ಇನ್ನುಳಿದ ಉದಾಹರಣೆಗಳೂ ಅನ್ಯಭಾಷೀಯ ಶಬ್ದಗಳೇ. ಈ ಅಂಶವು ಒ. ದಲ್ಲಿ ಕನಿಷ್ಠ ಪಕ್ಷ ಪದ ಮಧ್ಯದಲ್ಲಾದರೂ /ಚ್/ ಮತ್ತು /ಸ್/ ಗಳು ಭೇದರಹಿತವಾಗಿರುವುದನ್ನು ಸೂಚಿಸುತ್ತದೆ. ಇದು ಸ್ಪೃಷ್ಟೋಷ್ಮ ಮತ್ತು ಊಷ್ಮಗಳು ಒಂದೇ ವರ್ಣದ ಅಂಗಗಳಾಗಿರುವ ತಮಿಳು ಭಾಷೆಯ ಸ್ಥಿತಿಯನ್ನು ಜ್ಞಾಪಕಕ್ಕೆ ತರುವಂತಹುದು;[4] ಪೂರ್ವ ದ್ರಾವಿಡದಲ್ಲೂ ಬಹುಶಃ ಅದೇ ಸ್ಥಿತಿ ಇದ್ದಿರಬೇಕು.[5]

೩) ಸಂಸ್ಕೃತದಿಂದ ಬಂದ ಶಬ್ದಗಳಲ್ಲಿ ಬ್ರಾ. / š / ವು ಒ. / ಸ್ / ಕ್ಕೆ ಸಮಾನವಾಗಿದೆ: ಬ್ರಾ. š ಆನ್ತಿ, ಒ. ಸಾನ್ತಿ 'ಶಾಂತಿ'; ಬ್ರಾ. ದೇšಅ, ಒ. ದೇಸ 'ದೇಶ'; ಬ್ರಾ. ಕšಟ, ಒ. ಕಸ್ಟ 'ಕಷ್ಟ'. (ಮೇಲಿನ ಪ್ರತಿ ಉದಾಹರಣೆಯಲ್ಲಿಯೂ ಬ್ರಾ. ರೂಪವು ಸಂಸ್ಕೃತದ ಧಾತುವಿನಂತೆಯೇ ಇದೆ.) /ಸ್/ ಮತ್ತು /š/ಗಳ ಭೇದರಾಹಿತ್ಯವೂ ತಮಿಳುವಿನ ಹಾಗೂ ಪೂರ್ವ ದ್ರಾವಿಡದ ವೈಶಿಷ್ಟ್ಯಗಳಲ್ಲೊಂದು.

(೪) ಬ್ರಾ. /ಹ್/ವು ಸಾಮಾನ್ಯವಾಗಿ ಒ. /ϕ/ (ಶೂನ್ಯ)ಕ್ಕೆ ಸಮಾನವಾಗಿದೆ: ಬ್ರಾ. ಹಾಕು, ಒ. ಆಕು 'ಹಾಕು.' ವಿರಾಮದ ನಂತರ ಬ್ರಾ. /ಹೆ ಹೇ ಹೊ ಹೋ/ಗಳು ಕ್ರಮವಾಗಿ ಒ. /ಯೆ ಯೇ ವೊ ವೋ/ಗಳಿಗೆ ಸಮಾನವಾಗಿವೆ. ಸಂಧಿ ನಿಯಮಕ್ಕನುಗುಣವಾಗಿ ವಿರಾಮದ ನಂತರ ಮಧ್ಯ ಸ್ವರಗಳಮೇಲೆ ಅರ್ಧಸ್ವರ

---

[4] Murray Fowler, The Segmental Phonemes of Sanskritized Tamil, Language 30, 360–67 (1954).

[5] T. Burrow, Dravidian Studies VI, Bulletin of the School of Oriental and African Studies (University of London) 12, 132–47 (1947).

(ಪೂರ್ವದ್ರಾವಿಡವನ್ನು ಇನ್ನು ಮುಂದೆ ಪೂ. ದ್ರಾ. ಎಂದು ಸಂಕ್ಷಿಪ್ತಲಿಪಿಯಲ್ಲಿ ಸೂಚಿಸಲಾಗಿದೆ; ಹಾಗೆಯೇ ಹಳೆಯ ಕನ್ನಡ (ಹಳೆಗನ್ನಡ), ಮಧ್ಯಕನ್ನಡ (ಮಧ್ಯಗನ್ನಡ), ಹೊಸ ಕನ್ನಡ (ಹೊಸಗನ್ನಡ)ಗಳನ್ನು ಕ್ರಮವಾಗಿ ಹ. ಕ., ಮ. ಕ., ಹೊ. ಕ. ಎಂದೂ ತಮಿಳು, ತೆಲುಗು, ಮಲೆಯಾಳಂ, ಕನ್ನಡ ಮತ್ತು ಸಂಸ್ಕೃತಗಳನ್ನು ಕ್ರಮವಾಗಿ ತ., ತೆ., ಮ., ಕ. ಮತ್ತು ಸಂ. ಎಂದೂ ಸೂಚಿಸಲಾಗಿದೆ.)

ಗಳು ಸೇರುತ್ತವೆ. ತರುವಾಯ /ವೊ/ಪುನಃ/ವ/ ಆಗಿ ಪರಿವರ್ತನಗೊಳ್ಳುತ್ತದೆ. ಉದಾ: ಬ್ರಾ. ಹೆಸ್ರು, ಒ. ಯೆಸ್ರು ' ಹೆಸರು '; ಬ್ರಾ. ಹೊಗೆ, ಒ. ವಗೆ ' ಹೊಗೆ '; ಬ್ರಾ. ಹೋಗು, ಒ. ವೋಗು ' ಹೋಗು '. . ಈ ಎಲ್ಲಾ ನಿದರ್ಶನಗಳಲ್ಲಿ ಬ್ರಾ. ರೂಪಗಳು ಆದಿ*ಪ್‌ವನ್ನುಳ್ಳ ಪೂ. ದ್ರಾ. ರೂಪಗಳನ್ನು ಪ್ರತಿಬಿಂಬಿಸಿ ವಿಕಾಸದ ಮೊದಲನೆಯ ಘಟ್ಟವನ್ನು ಪ್ರತಿನಿಧಿಸುತ್ತವೆ: ಸ.ರೂ., ಹ.ಕ. ಪೆಸರ್, ತ. ಪೆಯರ್, ತೆ. ಪೇರು ' ಹೆಸರು '; ಹ.ಕ. ಪೊಗೆ, ತ. ಪುಗೈ, ತೆ. ಪೊಗ ' ಹೊಗೆ '; ಹ.ಕ. ಪೋಗು, ತ. ಪೋಗು, ತೆ. ಪೋವು ' ಹೋಗು'.

(೫) ಬ್ರಾ. ಮಹಾಪ್ರಾಣ ಸ್ಪರ್ಶಗಳು ಒ. ಅಲ್ಪಪ್ರಾಣ ಸ್ಪರ್ಶಗಳಿಗೆ ಸಮಾನವಾಗಿವೆ. ಉದಾಹರಣೆಗಳು ಪ್ರಮುಖವಾಗಿ ಅನ್ಯಭಾಷೀಯಗಳು : ಬ್ರಾ. ಭೂಮಿ, ಒ. ಬೂಮಿ (ಸಂ. ಭೂಮಿ)

(೬) ಬ್ರಾ. ಅನ್ಯಭಾಷೀಯಗಳಲ್ಲಿ ಬರುವ ಪದಾದಿಯ ಸಂಯುಕ್ತ ಸ್ವರೀಯ ವ್ಯಂಜನಗಳು ಒ.ದಲ್ಲಿ ಅಪರೂಪ. ಆದ್ದರಿಂದ ಬ್ರಾ.ದಲ್ಲಿ ಊಷ್ಮದ ನಂತರ ಸ್ವರೀಯ ವ್ಯಂಜನಗಳನ್ನುಳ್ಳ ಸರಣಿಗಳು ಒ.ದ /ಸ್/ಕ್ಕೆ ಮಾತ್ರ ಸಮಾನವಾಗಿರುತ್ತವೆ : ಬ್ರಾ. ಸ್ವಾಮಿ, ಒ. ಸಾಮಿ 'ಸ್ವಾಮಿ' (ಸಂ. ಸ್ವಾಮಿನ್); ಬ್ರಾ. ಮನ್ಶ್ಯ, ಒ. ಮನ್ಸ ' ಮನುಷ್ಯ ' (ಸಂ. ಮನುಷ್ಯ). ಬ್ರಾ. /ಸ್/ ಮತ್ತು ಅನುನಾಸಿಕವು ಕೆಲವುವೇಳೆ ಒ./ಸಿ/ ಮತ್ತು ಅನುನಾಸಿಕಕ್ಕೆ ಸಮಾನವಾಗಿರುತ್ತದೆ : ಬ್ರಾ. ಸ್ನೇಯ್ತು, ಒ. ಸಿನೇಯ್ತು ' ಸ್ನೇಹಿತ ' (ಸಂ. ಸ್ನೇಹಿತ). ಬ್ರಾ./ಕ್ಷ್/ವು ಒ. /ಚ್/ಕ್ಕೆ ಸಮಾನವಾಗಿದೆ: ಬ್ರಾ. ಕ್ಷೆಮ್ಸು, ಒ. ಚೆಮ್ಸು (ಸಂ. $\sqrt{\text{ಕ್ಷಮ್}}$ ನಿಂದ)

(೭) ಮುಂದಿನ ಸ್ವರಸ್ಥಾನದಲ್ಲಿ ಮಧ್ಯ ಅಥವಾ ಅವನತ ಸ್ವರವು ಬಂದಾಗ ಬ್ರಾ. /ಏ/ಯು ಅನೇಕವೇಳೆ ಒ. /ಯಾ/ಕ್ಕೆ ಸಮಾನವಾಗುತ್ತದೆ : ಬ್ರಾ. ಪೇಟಿ, ಒ. ಪ್ಯಾಟಿ ' ಪೇಟೆ '. ಈ ಉದಾಹರಣೆಗಳಲ್ಲಿ /ಏ/ ಉಚ್ಚಾರಣೆಯು ಪ್ರಾಚೀನವಾದುದು : ಸ.ರೂ., ತ. ಪೇಟ್ಟೈ, ಮರಾಠಿ, ಪೇಠ್.

(೮) ಮುಂದಿನ ಉದಾಹರಣೆಯ ಎರಡನೆಯ ಪದದಲ್ಲಿಯಂತೆ ಬ್ರಾ. /ಒ/ ಅನೇಕ ವೇಳೆ ಒ. /ಅ/ಕ್ಕೆ ಸಮಾನವಾಗಿರುತ್ತದೆ : ಬ್ರಾ. ಮಲ್–ಕೊಳ್ಳ್–ಓನ, ಒ. ಮಲ್–ಕಳ್–ಅನಿ ' ಮಲಗಿಕೊಳ್ಳೋಣ '. ಕನ್ನಡದಲ್ಲಿ ಸ್ವೀಯಾರ್ಥ (**Reflex meaning**)ವುಳ್ಳ ಈ ರೂಪವು ತ. ಕೊಳ್ ' ಸ್ವೀಕರಿಸು ', ತೆ. ಕೊನು ' ತೆಗೆದುಕೊ 'ಗಳಿಗೆ ಸಮಾನವಾಗಿದೆ. ಸ.ರೂ., ಜೊತೆಗೆ ಬ್ರಾ. ಬರೊಕ್ಕೆ, ಒ. ಬರಕ್ಕೆ ' ಬರುವುದಕ್ಕೆ '; ಬ್ರಾ. ಆಗೊಲ್ಲ, ಒ. ಆಗಲ್ಲ ' ಆಗುವುದಿಲ್ಲ '. ಈ ಎರಡು ರೂಪಗಳೂ ಕ್ರಮವಾಗಿ ಸಮಾನ ಗ್ರಾಂಥಿಕ ರೂಪಗಳಾದ ಬರ್–ಉವ–ದ–ಕ್ಕೆ ಮತ್ತು ಆಗ್–ಉವ–ದ್–ಇಲ್ಲ–ಗಳಿಂದ ಸಂಕುಚಿತಗೊಂಡವು.

(೯) ಸಂಸ್ಕೃತದಿಂದ ಬಂದ ಅನ್ಯಭಾಷೀಯಗಳಲ್ಲಿ /ರ್$\dot{t}$/ ಸರಣಿಗಳಲ್ಲಿ ಬರುವ ಬ್ರಾ. /$\dot{t}$/ಯು ಒ. /ಉ/ಗೆ ಸಮಾನವಾಗಿದೆ : ಸ್ರ್ t ಙ್ಗಾರ (**Sríngāra**), ಒ. ಸುಙ್ಗಾರ ' ಶೃಂಗಾರ ' (ಸಂ. ಶೃಙ್ಗಾರ).

ಮೇಲಿನ ಸಮಾಲೋಚನೆಯನ್ನು ಈ ರೀತಿ ಕ್ರೋಢೀಕರಿಸಬಹುದು : ಅನ್ಯ ಭಾಷೀಯ ಶಬ್ದಗಳಿಂದ ಉಂಟಾದ ಹೊಸ ವರ್ಣೀಯ ಭೇದಗಳನ್ನು ಸ್ವೀಕರಿಸದಿರುವ ದೃಷ್ಟಿಯಲ್ಲಿ ಮಾತ್ರ ಒ. ಭಾಷಾ-ಪ್ರಭೇದವು ಹೆಚ್ಚು ಪ್ರಾಚೀನಾಂಶವನ್ನುಳ್ಳದ್ದಾಗಿದೆ. ಆದರೂ, ಮೊದಲಿನ /ಹ್/ವನ್ನು ಕಳೆದುಕೊಳ್ಳುವುದರಲ್ಲಿ ಮತ್ತು /ಏ/ಯಿಂದ /ಯಾ/ಗೆ ಹಾಗೂ /ಒ/ ಯಿಂದ /ಅ/ಕ್ಕೆ ಪರಿವರ್ತನಗೊಳ್ಳುವುದರಲ್ಲಿ ಒ. ಭಾಷಾ-ಪ್ರಭೇದವು ಹೊಸ ಹಾದಿಯನ್ನು ತುಳಿದಿದೆ.

೨

ಎರಡು ಭಾಷಾ-ಪ್ರಭೇದಗಳು. ಈ ಮುಂದಿನ ವ್ಯಾಕರಣ ಭೇದಗಳನ್ನು ಹೊಂದಿವೆ :

(೧) ಪರೋಕ್ಷ ವಸ್ತು ನಿರ್ದೇಶಕ ಪ್ರತ್ಯಯವು /ಅ/ ನಂತರ-ಕ್ಕೆ ಮತ್ತು ಬೇರೆಡೆಗಳಲ್ಲಿ-ಅಗೆ ಸಪದ (allomorph)ಗಳನ್ನು ಹೊಂದಿದೆ. (ಅವು ಸಂಧಿ ವರ್ಣವಾಗಿದ್ದು ಸಾಮಾನ್ಯವಾಗಿ ವ್ಯಂಜನಗಳ ನಂತರ ಬಂದಾಗ /ϕ/ (ಶೂನ್ಯ)ವಾಗಿ ಪರಿಣಮಿಸುತ್ತದೆ; ಹಾಗೂ ಸ್ವರದ ನಂತರ ಬಂದಾಗ ಹ್ರಸ್ವಸ್ವರವನ್ನು ಮಾರ್ಪಡಿಸದೆ ಲೋಪಕ್ಕೆ ಸಾಧಕವಾಗುತ್ತದೆ.) ಇದು ಎಲ್ಲಾ ವಿಧದ ನಾಮಪದಗಳ ನಂತರ ಬರುವ ಒ.-ಕೆ ಪ್ರತ್ಯಯಕ್ಕೆ ಸಮಾನವಾಗಿರುತ್ತದೆ: ಬ್ರಾ. ಊಟ-ಕ್ಕೆ, ಒ. ಊಟ-ಕೆ (ಲೋಪಗೊಂಡು) 'ಊಟಕ್ಕೆ'; ಬ್ರಾ. ಮದ್ವೆ-ಗೆ, ಒ. ಮದುವ್-ಕೆ 'ಮದುವೆಗೆ'; ಬ್ರಾ. ಮಾರ್ಕೆಟ್-ಗೆ, ಒ. ಮಾರ್ಕೆಟ್-ಕೆ 'ಮಾರ್ಕೆಟ್‌ಗೆ' ಒ.ವು-ಕ್ಯ ರೂಪಾಂತರವನ್ನು ಹೊಂದಿದೆ: ಬ್ರಾ. ಪೇಟೆ-ಗೆ, ಒ. ಪ್ಯಾಟ್-ಕ್ಯ 'ಪೇಟೆಗೆ'. ಚಾರಿತ್ರಿಕವಾಗಿ ಬ್ರಾ.-ಕ್ಕೆ ಮತ್ತು-ಅಗೆ ಗಳ ಮೂಲವನ್ನು ಕ್ರಮವಾಗಿ ಹ.ಕ.-ಕ್ಕೆ ಮತ್ತು-ಇಗೆಗಳಲ್ಲಿ ಕಾಣಬಹುದು. ಹ.ಕ.ವು-ಕೆ ರೂಪವನ್ನೂ ಪಡೆದಿದೆ.[6] ಅದು ಬ್ರಾ.ದಲ್ಲಿ ನಷ್ಟಹೊಂದಿ ಒ.ದಲ್ಲಿ ಇನ್ನಿತರ ರೂಪಾಂತರಗಳನ್ನು ನಷ್ಟಪಡಿಸುವಷ್ಟು ಸರ್ವಸಾಮಾನ್ಯವಾಗಿದೆ.

(೨) ಸ್ಥಳ ನಿರ್ದೇಶಕ ಪ್ರತ್ಯಯದ ರೂಪಾಂಶವಾದ ಬ್ರಾ.-ಅಲ್ಲಿ ಯು ಒ. -ಆಗಿಗೆ ಸಮಾನವಾಗಿದೆ: ಬ್ರಾ. ಬಣ್ಡ್ಯ-ಅಲ್ಲಿ (ಬಣ್ಡೀಲಿ ಎಂದೂ ಸಂಕುಚಿತವಾಗಿದೆ), ಒ. ಬಣ್ಡ್ಯ-ಆಗಿ 'ಬಂಡಿಯಲ್ಲಿ'; 'ಆಗು'ವಿನಿಂದ ಉಂಟಾದ 'ಆಗಿ' ಯೊಡನೆ ಸಮಾನ ರೂಪವನ್ನುಳ್ಳದ್ದಾದರೂ ಒ. ರೂಪವು ಅನಿಶ್ಚಿತ ಮೂಲಕ್ಕೆ ಸೇರಿದ್ದಾಗಿದೆ. —ಅಲ್ಲಿ ರೂಪಾಂತರವು ಹ.ಕ.ದ ರೂಪಾಂತರಗಳಲ್ಲೊಂದು;

---

[6] A Narasimhia, A Grammar of the Oldest Kanarese Inscriptions, 141–46, Mysore (1941).

ಇನ್ನಿತರ ರೂಪಾಂತರಗಳು ಹೊಸಕನ್ನಡದ ಭಾಷಾ–ಪ್ರಭೇದಗಳಲ್ಲಿ ಕಾಣವಾಗಿವೆ[7] ಒ.–ಆಗಿ ರೂಪವು ನವೀನವೆಂದೇ ತೋರುತ್ತದೆ.

(೩) ಪ್ರಥಮ ಪುರುಷ ಬಹುವಚನ ವಿಧೇಯಕ ಪ್ರತ್ಯಯವು ಬ್ರಾ. ದಲ್ಲಿ–ಓಣ, ಒ. ದಲ್ಲಿ–ಆನಿ,–ಅನಿ,–ಅನ ಆಗಿದೆ. ಉದಾ: ಬ್ರಾ. ಹೋಗ್–ಓಣ, ಒ. ವೋಗ್–ಆನಿ 'ಹೋಗೋಣ'; ಬ್ರಾ. ಮುಗ್ಸ್–ಓಣ, ಒ. ಮುಗ್ಸ್–ಆನಿ 'ಮುಗಿಸೋಣ'; ಬ್ರಾ. ಕೂತ್–ಕೊಳ್ಳ್–ಓಣ, ಒ. ಕೂತ್–ಕಳ್–ಆನ 'ಕುಳಿತುಕೊಳ್ಳೋಣ'. ಸ.ರೂ., ಹ.ಕ.–ಉವಮ್ ಮ.ಕ.–ಉವ, ಹೊ.ಕ (ಗ್ರಾಂಥಿಕ)–ಉವ,–ಉವನ, –ಉವಣ,–ಓಣ.[8] ಕಿಟ್ಟೆಲ್‌ರವರು ಪ್ರತಿಪಾದಿಸಿದ ಹಾಗೆ ಈ ಪ್ರತ್ಯಯದಲ್ಲಿ /ನ್/ವು/ಣ್/ಗಿಂತ ಮೊದಲಿನದಾದರೆ ಒ. ರೂಪಗಳು ಅದನ್ನು ಉಳಿಸಿಕೊಂಡಿರುವುದರಿಂದ ಪ್ರಾಚೀನವಾಗಿವೆ. ಆದರೂ, ಒ.ದಲ್ಲಿ ಬರುವ ಸ್ವರಗಳು ನವೀನವೆಂದೇ ತೋರುತ್ತವೆ.

(೪) ಕೆಲವು ಕ್ರಿಯಾಧಾತುಗಳು ಎರಡು ಭಾಷಾ–ಪ್ರಭೇದಗಳಲ್ಲಿ ಭಿನ್ನ ಸಪದಗಳನ್ನು ತೋರಿಸುತ್ತವೆ: ಆಗು 'ಆಗು', ಆದರೆ ಬ್ರಾ. ಆಗ್–ತ, ಒ. ಆ–ತ 'ಆಗುತ್ತಾ'; ಬ್ರಾ. ಹೋಗು, ಒ. ವೋಗು. ಆದರೆ, ಬ್ರಾ. ಹೋಗ್–ತ, ಒ. ವೋ–ತ 'ಹೋಗುತ್ತಾ'; ಬಾ 'ಬಾ'. ಆದರೆ, ಬ್ರಾ. ಬರ್–ತ, ಒ. ಬತ್–ತ 'ಬರುತ್ತಾ', ಒ. ರೂಪಗಳಿಗೆ ಹ.ಕ.ದಲ್ಲಿ ಯಾವ ಆಧಾರಗಳೂ ದೊರೆಯುವುದಿಲ್ಲ. ಆದರೂ ಬ್ರಾ. ಕೂ–ತು, ಒ. ಕುನ್–ತು 'ಕುಳಿತು' ರೂಪಗಳು ಬೇರೊಂದು ರೀತಿಯವಾಗಿವೆ; ಈ ಎರಡು ರೂಪಗಳೂ ಮ.ಕ. ಕಾಲದಿಂದಲೂ ಇದ್ದು ಕ್ರಮವಾಗಿ ೧೩೯೮ ಮತ್ತು ೧೫೮೫ರಿಂದ ಆಧಾರಗಳು ದೊರೆಯುತ್ತವೆ.[9]

(೫) ಬ್ರಾ. ದಲ್ಲಿ ಇರು 'ಇರು' ಕ್ರಿಯಾಪದವು ಕಾಲ ಪ್ರತ್ಯಯವಿಲ್ಲದಿರುವ ಕೆಲವು ರೂಪಗಳನ್ನು ಪಡೆದಿದೆ; ಇವುಗಳ ತೃತೀಯ ಪುರುಷ ರೂಪಗಳಿಗೆ ಸಮನಾಗಿ ಒ. ವು ಸರ್ವನಾಮ ಮತ್ತು ದೃಢೀಕರಣ ಸಪದ–ಎ ಯನ್ನು ಉಪಯೋಗಿಸುತ್ತದೆ. ಉದಾ: ಬ್ರಾ. ಇದ್ದಾನೆ, ಒ. ಅವ್ನ್–ಎ '(ಅವನು) ಇದ್ದಾನೆ'; ಬ್ರಾ. ಇದ್ದಾರೆ, ಒ. ಅವ್ರ್–ಎ '(ಅವರು) ಇದ್ದಾರೆ'; ಬ್ರಾ. ಇದೆ, ಒ. ಅದ್–ಎ '(ಅದು) ಇದೆ'. ಇವೆಲ್ಲವೂ ಹೊಸ ರೂಪಗಳು; ಅದ್–ಎ ಮಾತ್ರ ಹೊಸಕನ್ನಡ ಗ್ರಾಂಥಿಕ ಭಾಷೆಯಲ್ಲಿ ಕಾಣಸಿಗುತ್ತದೆ. ಇನ್ನುಳಿದ ಒ. ರೂಪಗಳು ಅದೇ ರೀತಿಯಲ್ಲಿ ವಿಸ್ತರಣೆಗೊಂಡವುಗಳು.

---

[7] Narasimhia, Grammar, 151–54.

[8] F. Kittel, A Grammar of the Kannada Language, 148–51, Mangalore (1903).

[9] Kittel, Grammar, 133–34.

ಈ ಮೇಲಿನ ವ್ಯಾಕರಣ ಸಮಾಲೋಚನೆಯು ಬ್ರಾ. ಭಾಷಾ-ಪ್ರಭೇದವೇ ಸಾಮಾನ್ಯವಾಗಿ ಹೆಚ್ಚು ಪ್ರಾಚೀನವಾದುದೆಂದು ತೋರಿಸುತ್ತದೆ.

೩

ಕೊನೆಯದಾಗಿ ಈ ಮುಂದಿನ ನಿದರ್ಶನಗಳು ಎರಡು ಭಾಷಾ ಪ್ರಭೇದಗಳೊಳಗಿನ ಶಬ್ದಗಳಲ್ಲಿರುವ ಭಿನ್ನ ಸ್ವರೂಪವನ್ನು ತಿಳಿಸುತ್ತವೆ. (ಹ. ಕ. ಮತ್ತು ಇತರ ದ್ರಾವಿಡ ರೂಪಗಳು ಕಿಟ್ಟೆಲ್‌ರವರ ನಿಘಂಟುವಿನಿಂದ ತೆಗೆದುಕೊಂಡವು):

(೧) ಕೆಲವು ಉದಾಹರಣೆಗಳಲ್ಲಿ ಬ್ರಾ. ಮತ್ತು ಒ. ರೂಪಗಳೊಳಗೆ ಕೇವಲ ಸ್ವಲ್ಪ ವರ್ಣಭೇದವಿದ್ದಾಗ ಬ್ರಾ. ರೂಪವೇ ಪ್ರಾಚೀನವಾದುದಾಗಿ ಕಾಣುತ್ತದೆ. ಉದಾ:

ಬ್ರಾ. ಹೊರ್ಡು, ಒ. ವೊಲ್ಡು 'ಹೊರಡು'; ಸ. ರೂ., ಹ. ಕ. ಪೊಱ, ಪೆಱ ತ. ಪಿಱ್, ಮ. ಪುಱ್, ತೆ. ಪೆಱ್

ಬ್ರಾ. ಬಾಗ್ಲು, ಒ. ಬಾಕ್ಲು 'ಬಾಗಿಲು'; ಸ. ರೂ., ಹ. ಕ. ಬಾಗಿಲ್

ಬ್ರಾ. ಬೊಮ್ಬೆ, ಒ. ಗೊಮ್ಬೆ 'ಗೊಂಬೆ'; ಸ. ರೂ., ಹ. ಕ. ಬೊಮ್ಬೆ, ತ. ಪೊಮ್ಮೃ, ತೆ. ಬೊಮ್ಮ.

ಬ್ರಾ. ಮತ್ತೆ, ಒ. ಮನ್ತೆ 'ಪುನಃ'; ಸ. ರೂ., ಹ. ಕ. ಮತ್ತೆ, ತ. ಮಱ್ಱೈ.

(೨) ಇನ್ನು ಕೆಲವು ಉದಾಹರಣೆಗಳಲ್ಲಿ ಒ. ರೂಪಗಳೇ ಹಳೆಯವಾಗಿ ತೋರುತ್ತವೆ; ಅವುಗಳೆರಡರಲ್ಲಿ ಸಾಮ್ಯವಿರಲೇಬೇಕೆಂಬ ನಿಯಮವಿಲ್ಲ. ಉದಾ:

ಬ್ರಾ. ಪ್ರಯಾಣ, ಒ. ಪಯಣ 'ಪ್ರಯಾಣ'. ಬ್ರಾ. ರೂಪವು ಸಂಸ್ಕೃತದ ಇತ್ತೀಚಿನ ಅನುಕರಣ. ಒ. ರೂಪವು ಹ.ಕ.ದ ಪಯಣದಿಂದ ಬಂದುದು; ಹ.ಕ. ರೂಪವೂ ಕೂಡ ಸಂಸ್ಕೃತದ ಪ್ರಯಾಣ ಅಥವಾ ಪ್ರಯಣ ರೂಪದಿಂದ ಬಂದುದು.

ಬ್ರಾ. ಬಹ್ಳ, ಒ. ಬಲು 'ಬಹಳ'; ಸ.ರೂ, ಮ.ಕ. ಬಹಳ, ಸಂ. ಬಹಲದಿಂದ; ಆದರೆ ಹ. ಕ. ಬಲ್, ತ. ವಲ್, ತೆ. ಬಲು.

ಬ್ರಾ. ತಗೊ, ಒ. ತೆಕೊ 'ತೆಗೆದುಕೊ'; ಸ. ರೂ, ಹ. ಕ. ತೆಕ್ಕೊಳ್ಳ್—

ಬ್ರಾ. ಹೇಗೆ, ಒ. ಯೆಂಗೆ 'ಹೇಗೆ'; ಸ. ರೂ., ಮ. ಕ. ಹೇಗೆ, ಆದರೆ ಹ. ಕ. ಹೆಙ್ಗೆ.

ಬ್ರಾ. ಹುಳಿ, ಒ. ಯೆಸ್ರು 'ಹುಳಿ'; ಸ. ರೂ., ಹ. ಕ.ಎಸರ್.

ಬ್ರಾ. ಊಟ ಮಾಡು, ಒ. ಉಣ್ಣು 'ಊಟಮಾಡು'; ಸ. ರೂ., ಹ. ಕ. ಉಣ್, ತ. ಉಣ್.

(೩) ಇನ್ನುಳಿದ ಉದಾಹರಣೆಗಳಲ್ಲಿ ಯಾವುದರ ಕಾಲ ಪ್ರಾಚೀನವೆಂಬುದು ಸ್ಪಷ್ಟವಿಲ್ಲ. ಉದಾ:

ಬ್ರಾ. ಸುಮ್ನೆ, ಒ. ಸುಮ್ಕೆ 'ಸುಮ್ಮನೆ'; ಸ. ರೂ., ಹ. ಕ. ಸುಮ್ಮನೆ ಮತ್ತು ಸುಮ್ಮಗೆ. ಎರಡಕ್ಕೂ ಒಂದೇ ಕೃತಿಯಲ್ಲಿ ಆಧಾರಗಳು ದೊರೆಯುತ್ತವೆ.

ಬ್ರಾ. ಯೆಷ್ಟು, ಒ. ಯೇಸು 'ಎಷ್ಟು'. ಎರಡಕ್ಕೂ ಮ. ಕ. ದ ಒಂದೇ ಕೃತಿಯಲ್ಲಿ ಆಧಾರಗಳು ದೊರೆಯುತ್ತವೆ.

ಬ್ರಾ. ಸರ್ತಿ, ಒ. ಸಾರಿ 'ಸರದಿ'. ಎರಡೂ ಆಧುನಿಕ ಪ್ರಯೋಗಗಳು. ಬ್ರಾ. ರೂಪವು ಸಂಸ್ಕೃತ ಸರತ್‌ನಿಂದ ಬಂದಿರಬೇಕು; ಒ. ರೂಪಕ್ಕೆ ಸ. ರೂ. ಮಲೆಯಾಳಂನ ಸಾರಿ.

ಬ್ರಾ. ಸೊಲ್ಪ, ಒ. ರವ್–ಅಸ್ಟು 'ಸ್ವಲ್ಪ'. ಎರಡೂ ಆಧುನಿಕವಾದುವೇ. ಬ್ರಾ. ರೂಪವು ಸಂಸ್ಕೃತದ ಸ್ವಲ್ಪದಿಂದ ಬಂದುದು; ಒ. ರೂಪವು 'ರವೆಯಷ್ಟು' ವಿನ ಸಂಕುಚಿತ ರೂಪ.

ಬ್ರಾ. ಸ್ನಾನ ಮಾಡು, ಒ. ನೀರ್–ಆಕ್‌-ಕೋ 'ಸ್ನಾನಮಾಡು'. ಎರಡೂ ಆಧುನಿಕ. ಬ್ರಾ. ರೂಪದ ಸ್ನಾನ ಸಂಸ್ಕೃತದಿಂದ ಬಂದುದು.

ಬ್ರಾ. ಸಿನಿಮ, ಒ. ಬಯ್ಸ್ಕೋಪು, 'ಚಲನ ಚಿತ್ರ'. ಎರಡೂ ಕ್ರಮವಾಗಿ ಇಂಗ್ಲಿಷ್‌ನ Cinema ಮತ್ತು bioscopeಗಳಿಂದ ಬಂದವು; ಅವುಗಳಲ್ಲಿ ಸಿನಿಮ ಎಂಬುದು ಇತ್ತೀಚಿನ ಅನುಕರಣವಾಗಿರಬೇಕು.

೪

ಮೇಲಿನ ವಿವೇಚನೆಯಿಂದ ಈ ಮುಂದಿನ ತೀರ್ಮಾನಕ್ಕೆ ಬರಬಹುದು: ಒ. ಭಾಷಾ-ಪ್ರಭೇದವು ಅನ್ಯಭಾಷೀಯ ಶಬ್ದಗಳನ್ನು ಮತ್ತು ಅನ್ಯ ವರ್ಣೀಯ ಪದ್ಧತಿಗಳನ್ನು ಬ್ರಾ. ಭಾಷಾ-ಪ್ರಭೇದದಷ್ಟು ಶೀಘ್ರವಾಗಿ ಸ್ವೀಕರಿಸುವುದಿಲ್ಲ. ಆದ್ದರಿಂದ ಅದರ ಶಬ್ದ ಸಮುದಾಯ ಹೆಚ್ಚು ಪ್ರಾಚೀನವಾದುದಾಗಿದೆ; ಬ್ರಾ. ವು ಸಂಸ್ಕೃತ ಮತ್ತು ಅನ್ಯಭಾಷೆಗಳೊಳಗಿನ ವರ್ಣ ಪದ್ಧತಿಗಳನ್ನು ಸ್ವೀಕರಿಸುವುದರಿಂದ ಒ. ಕ್ಕಿಂತ ಹೆಚ್ಚು ವರ್ಣ ಭೇದಗಳನ್ನು ಪಡೆದಿದೆ. ಇನ್ನೊಂದು ದೃಷ್ಟಿಯಿಂದ ಬ್ರಾ. ವು ದೇಶೀಯ ವರ್ಣಪರಿವರ್ತನಕ್ಕಾಗಲೀ ಅಥವಾ ವ್ಯಾಕರಣ ಪರಿವರ್ತನಕ್ಕಾಗಲೀ ಅಷ್ಟು ಮನ್ನಣೆ ಕೊಡುವುದಿಲ್ಲ.

ಬ್ರಾ. ದ ಅನ್ಯಭಾಷೀಯ ಅನುಕರಣಕ್ಕೆ ಕಾರಣಗಳನ್ನು ಕಂಡು ಹಿಡಿಯುವುದು ಅಷ್ಟೇನು ಕಷ್ಟವಲ್ಲ: ಸಾಂಪ್ರದಾಯಿಕವಾಗಿ ಸಂಸ್ಕೃತದಲ್ಲೂ, ಅದೇ ರೀತಿ ಇತ್ತೀಚೆಗೆ ಇಂಗ್ಲಿಷ್‌ನಲ್ಲೂ ಪರಿಣತರಾಗಿದ್ದಾರೆ. ಈ ಎರಡು ಭಾಷೆಗಳಿಗಿರುವ ಗೌರವವು ದ್ವಿ-ಭಾಷಿಗಳು ಆ ಭಾಷೆಗಳ ಶಬ್ದಗಳನ್ನು ಕನ್ನಡದಲ್ಲೂ ಉಪಯೋಗಿಸುವ ಸಂಭವವನ್ನು ಹೆಚ್ಚಿಸಿರಬೇಕು. ವರ್ಣ ಮತ್ತು ವ್ಯಾಕರಣ ಪರಿವರ್ತನೆಯಲ್ಲಿ ಬ್ರಾ. ದ ಸಂಪ್ರದಾಯ ಪ್ರಿಯತೆಗೆ ಕಾರಣಗಳನ್ನು ಕಂಡು ಹಿಡಿಯುವುದು ಅಷ್ಟು ಸುಲಭವಲ್ಲ. ಬ್ರಾಹ್ಮಣ ಜನಾಂಗದ ಅಧಿಕ ವಿದ್ಯಾಸಂಖ್ಯೆಯು

ಅದಕ್ಕೆ ಕಾರಣವಾಗಿರಬಹುದು ; ಅಂದರೆ ಗ್ರಾಂಥಿಕ ಶಬ್ದಕ್ಕಿರುವ ಶಾಶ್ವತ ರೂಪ ಮಾತನಾಡುವ ಭಾಷೆಯಲ್ಲಿ ಆಗುವ ಪರಿವರ್ತನೆಯನ್ನು ತಡೆಗಟ್ಟಬಲ್ಲದು.

ಈ ಸಂದರ್ಭದಲ್ಲಿ ದಕ್ಷಿಣ ದ್ರಾವಿಡ ಭಾಷೆಗಳಲ್ಲೊಂದಾದ ತುಳು ಭಾಷೆಯನ್ನು ಕುರಿತು ಸ್ವಲ್ಪ ಪರ್ಯಾಲೋಚಿಸುವುದು ಉಚಿತ. ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಅಥವಾ ಶೂದ್ರರು ತುಳುವಿನ ಬೇರೆ ಬೇರೆ ಭಾಷಾ-ಪ್ರಭೇದಗಳನ್ನು ಮಾತನಾಡಿದರೂ ಯಾವ ಭಾಷಾ-ಪ್ರಭೇದಕ್ಕೂ ಬರವಣಿಗೆಯಿಲ್ಲ. ಆದ್ದರಿಂದ ತುಳುವಿನ ಬ್ರಾ. ವು ವರ್ಣ ಪರಿವರ್ತನದಲ್ಲಿ ಶೂ. (ಶೂದ್ರ)ಕ್ಕಿಂತ ಹೆಚ್ಚು ವಿರೋಧವನ್ನು ವ್ಯಕ್ತಪಡಿಸುವುದಿಲ್ಲವೆಂದು ನಾವು ಊಹಿಸಬಹುದು. ತುಳುವಿನಿಂದ ದೊರೆತ ಸಾಮಗ್ರಿಯು[10] ಈ ಮುಂದಿನಂತಿದೆ: ಬ್ರಾ. ವು ಶೂ. ಕ್ಕಿಂತ ಹೆಚ್ಚು ಪ್ರಾಚೀನವಾಗಿರುವಂತೆ ತೋರುತ್ತದೆ.

ಪೂ. ದ್ರಾ. ದ ಸ್ವರಾದಿ ರೂಪಗಳಿಗೆ ಸಮಾನವಾಗಿ ಬ್ರಾ. ವು ಆದಿಯಲ್ಲಿ ಸ್ವರವನ್ನೂ ಶೂ. ವು ಶೂನ್ಯವನ್ನೂ ತೋರಿಸುತ್ತವೆ: ಬ್ರಾ. ಇಮ್ಬೊಳು, ಶೂ. ಮೋಳು 'ಈ ಹೆಂಗಸು' (ತ. ಇವಳ್, ಕ. ಇವಳು); ಬ್ರಾ. ಎಡಙ್ಗ್*u*, ಶೂ. ಡಙ್ಗ್*u* 'ಎಡ (ಕೈ) (ತ. ಇಟ್ಟೈ, ಕ. ಯೆಡ); ಬ್ರಾ. ಉಣ್ಪು, ಶೂ. ನುಪ್ಪು 'ಆಹಾರ' (ತ. ಉಣ್, ಕ. ಉಣ್ಣು 'ಊಟ ಮಾಡು').

ಪೂ. ದ್ರಾ. ದಲ್ಲಿ*ಚ್ ಇರುವಕಡೆ ಬ್ರಾ. |ಸ್| ವು ಶೂ. |ತ್|ಕ್ಕೆ ಸಮಾನವಾಗಿದೆ: ಬ್ರಾ. ಸಿಕ್-, ಶೂ. ತಿಕ್- 'ಸಿಕ್ಕು' (ತ. ಚಿಕ್ಕು, ಕ. ಸಿಕ್ಕು); ಊಷ್ಮಾಂಶವನ್ನು ಉಳಿಸಿಕೊಳ್ಳುವುದರಲ್ಲಿ ಬ್ರಾ. ವು ಇಲ್ಲಿ ಹೆಚ್ಚು ಪ್ರಾಚೀನತೆಯನ್ನು ತೋರಿಸುತ್ತದೆ.

ಪೂ. ದ್ರಾ. ದಲ್ಲಿ *ಞ್[11] ಇರುವ ಕಡೆ ಬ್ರಾ. /ಜ್/ ವು ಶೂ. /ದ್/ ಕ್ಕೆ ಸಮಾನವಾಗಿದೆ: ಬ್ರಾ. ಜೆಞ್ಜಿ, ಶೂ. ದೆಞ್ಜಿ 'ಏಡಿ' (ತ. ಞಣ್ಡು, ಞೆಣ್ಡು, ಕ. ಯೇಡಿ). ಬ್ರಾ. ವು ತಾಲವ್ಯಗುಣವನ್ನು ಉಳಿಸಿಕೊಳ್ಳುವುದರಲ್ಲಿ ಪ್ರಾಚೀನಾಂಶವನ್ನು ತೋರಿಸುತ್ತದೆ.

ಇನ್ನು ಕೆಲವೆಡೆಗಳಲ್ಲಿ ಶೂ. ರೂಪಗಳು ಹೆಚ್ಚು ಪ್ರಾಚೀನವಾಗಿರುವುದನ್ನು ಕಾಣಬಹುದು:

ಪೂ. ದ್ರಾ. ದಲ್ಲಿ *ಇ ಆ[12] ಇರುವ ಕಡೆ ಬ್ರಾ. ದ-ಆದಿಯಲ್ಲಿ ಬರುವ /ಏ/

---

[10] L. V. Ramaswami Aiyer, Materials for a sketch of Tulu Phonology, Indian Linguistics 6, 385–439.

[11] Burrow, Dravidian Studies V, BSOAS II, 595–616 (1946), esp. 605.

[12] Burrow, Dravidian Studies V, 599.

ಯು ಶೂ. ದ /ಯಾ/ ಕ್ಕೆ ಸಮಾನವಾಗಿದೆ: ಬ್ರಾ. ಏನ್ *u*, ಶೂ. ಯಾನ್ *u* 'ನಾನು' (ತ. ಯಾನ್, ಹ. ಕ. ಆನ್,); ಬ್ರಾ. ಏರ್ *u*, ಶೂ. ಯಾರ್ *u* 'ಯಾರು' (ತ. ಯಾರ್, ಕ. ಯಾರು).

ಪೂ. ದ್ರಾ. ದಲ್ಲಿ *ತ್ ಇರುವ ಕಡೆ ಬ್ರಾ. /ಸ್/ ವು ಶೂ. /ತ್/ ಕ್ಕೆ ಸಮಾನವಾಗಿದೆ: ಬ್ರಾ. ಸೋಜ್–, ಶೂ. ತೋಜ್–'ತೋರು' (ತ. ತೋನ್ಱು, ಕ. ತೋರು).[13]

ಇನ್ನು ಕೆಲವು ರೂಪಗಳಲ್ಲಿ ಎರಡು ಭಾಷಾ–ಪ್ರಭೇದಗಳೂ ಹೊಸ ಹಾದಿಯನ್ನು ತುಳಿದಿವೆ; ಯಾವುದನ್ನು ಹೆಚ್ಚು ಪ್ರಾಚೀನವಾದುದೆಂದು ಹೇಳಬರುವುದಿಲ್ಲ:

ಪೂ. ದ್ರಾ. ದಲ್ಲಿ *ೞ್[14] ಇರುವ ಕಡೆ ಬ್ರಾ. /ಳ್/ ವು ಶೂ. /ರ್/ ಗೆ ಸಮಾನವಾಗಿದೆ: ಬ್ರಾ. ಬಾಳ್æ, ಶೂ. ಬಾರ್æ 'ಬಾಳೆ' (ತ. ವಾೞೈ, ಹ. ಕ. ಬಾೞೆ, ಹೊ. ಕ. ಬಾಳೆ); ಬ್ರಾ. ಕೋಳಿ, ಶೂ. ಕೋರಿ 'ಕೋಳಿ' (ತ. ಕೋೞಿ, ಹ. ಕ. ಕೋೞಿ, ಹೊ. ಕ. ಕೋಳಿ); ಬ್ರಾ. ಬೂಳ್–, ಶೂ. ಬೂರ್–'ಬೀಳು' (ತ. ವಿೞ್, ಹ. ಕ. ಬೀೞ್, ಹೊ. ಕ. ಬೀಳು).

ಪರಿಮಿತವಾದ ಸಾಮಗ್ರಿಯ ಆಧಾರದ ಮೇಲೆ ಧ್ವನಿ ಪರಿವರ್ತನೆಯ ಪ್ರಮಾಣದ ಆಧಾರದಿಂದ ತುಳುವಿನ ಬ್ರಾ. ಮತ್ತು ಶೂ. ಗಳಲ್ಲಿರುವ ಭಿನ್ನತೆಯು ಕನ್ನಡದ ಬ್ರಾ. ಮತ್ತು ಒ. ಗಳಲ್ಲಿರುವ ಭಿನ್ನತೆಗಿಂತ ಕಡಿಮೆಯೆಂದು ನಾವು ಹೇಳಬಹುದು. ಭಾರತೀಯ ಭಾಷೆಗಳ ಜಾತೀಯ ಭಾಷಾ–ಪ್ರಭೇದಗಳ ಸಂಶೋಧನೆಯಲ್ಲಿ ತುಳುವಿನ ವಿಶೇಷ ಅಧ್ಯಯನ ಫಲದಾಯಕವಾಗುವುದರಲ್ಲಿ ಸಂಶಯವಿಲ್ಲ.

ಮೂಲ : ವಿಲಿಯಂ ಬ್ರೈಟ್ ಅನು : ಬಿ. ವಿ. ವೀರಭದ್ರಪ್ಪ

---

13 ತುಳುವಿನ ಆದಿ |ತ್ ಚ್ ಸ್ ದ್ ಜ್|ಗಳ ತೊಡಕಿನ ಚರಿತ್ರೆಯನ್ನು ಶ್ರೀ ರಾಮಸ್ವಾಮಿ ಅಯ್ಯರ್ ಅವರು ತಮ್ಮ Tulu initial africates and sibilants, Quarterly Journal of the Mythic Society, Bangalore, 22, 259–73 (1932)ನಲ್ಲಿ ವಿವರಿಸಿದ್ದಾರೆ. ಆದರೂ ಲೇಖಕರು ತಾವು ಸಂಗ್ರಹಿಸಿದ ವಿವಿಧ ಭಾಷಾ–ಪ್ರಭೇದಗಳ ಸಾಮಗ್ರಿಯನ್ನು ಸ್ಪಷ್ಟವಾಗಿ ಬೇರ್ಪಡಿಸಿಲ್ಲ. ಅದ್ದರಿಂದ 'ಸಿಕ್ಕು' ಎಂಬರ್ಥ ಬರುವ ಚಿಕ್ಕ್–, ತಿಕ್ಕ್–, šಇಕ್ಕ್-ಮತ್ತು ಸಿಕ್-ಎಂದು ಕೊಡಲಾಗಿದೆ. ಇದರಲ್ಲಿ ಮೊದಲಿನ ರೂಪವನ್ನು ಮಾತ್ರ ಅಪೂರ್ವ ಒಳ-ಭಾಷಾ-ಪ್ರಭೇದವೆಂದು ಬೇರ್ಪಡಿಸಬಹುದು.

14 * ೞ್‌ನ ಚರಿತ್ರೆ ಮತ್ತು ಅದರ ಆಧುನಿಕ ಉಚ್ಚಾರದ ಬಗ್ಗೆ ವಿವರಣೆಯನ್ನು Bh. Krishnamurthi, Proto Dravidian Ẓ,* Indian Linguistics 19 259–93 (= Turner Jubilee Vol. I; 1958)ನಲ್ಲಿ ನೋಡಬಹುದು.

ಉರಿಲಿಂಗದೇವನ ವಚನಗಳು

ಗ್ರಂಥಸಂಸ್ಕರಣ

[**ಕ:** ಇದು ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಕೆ. ೬೪೮ರ ಪುರಾತನರ ವಚನಗಳ ಓಲೆಪ್ರತಿ. ಇದನ್ನೇ ಮೂಲಪ್ರತಿಯನ್ನಾಗಿಟ್ಟುಕೊಳ್ಳಲಾಗಿದೆ. ಈ ಪ್ರತಿ ಉತ್ತಮವಾಗಿದೆ.

ಗ: ಇದೂ ಪುರಾತನರ ವಚನಗಳ ಓಲೆಯಕಟ್ಟು. ಇದು ಸದ್ಧರ್ಮ ದೀಪಿಕೆ ಸಂಪಾದಕರಾದ ಶ್ರೀ ಚೆನ್ನಮಲ್ಲಿಕಾರ್ಜುನಪ್ಪ ಅವರಿಂದ ಬಂದ ಪ್ರತಿ. ಇದೂ ಪ್ರಾ. ವಿ. ಸಂ. ದಲ್ಲಿದೆ.

ಚ: ಇದೂ ಪ್ರಾ. ವಿ. ಸಂ.ದ ಮಹಲಿಂಗನ ಏಕೋತ್ತರ ಶತಸ್ಥಲದ ಪ್ರತಿ. ಇದರಲ್ಲಿ ಕೆಲವು ವಚನಗಳು ಮಾತ್ರ ಇವೆ.

ಜ: ಇದು ಶಿವಾನುಭವ ಸಂ. ೧೪. ಸಂಚಿಕೆ ೯, ೧೦, ೧೧ರಲ್ಲಿ ಪ್ರಕಟವಾಗಿರುವ ವಚನಗಳು. ಇದರಲ್ಲಿ ಕೆಲವು ಹೆಚ್ಚು ವಚನಗಳು ಕಂಡುಬರುತ್ತವೆ. ಕೆಲವು ವಚನಗಳು ಪಾಠಾಂತರದೊಡನೆ ಪುನರುಕ್ತಿಯಾಗಿವೆ.

ಟ: ಇದು ಪ್ರಾ. ವಿ. ಸಂ.ದ ಕೆ. ೪೯೯ನೆಯ ವಚನಸಂಗ್ರಹದ ಓಲೆ ಪ್ರತಿ. ಇದರಲ್ಲಿ ಕೆಲವು ವಚನಗಳು ಮಾತ್ರ ದೊರೆಯುತ್ತವೆ.

ಡ: ಇದು ಕೆ. ೭೫ನೆಯ ವಚನಸಂಗ್ರಹದ ಓಲೆಪ್ರತಿ. ಇದೂ ಪ್ರಾ. ವಿ. ಸಂ.ದಲ್ಲಿದೆ.
ಸಂಕೇತ: ಪ್ರಾ. ವಿ. ಸಂ. ಪ್ರಾಚ್ಯವಿದ್ಯಾಸಂಶೋಧನಾಲಯ, ಮೈಸೂರು.]

ಎಮ್ಮ [1]ನಲ್ಲನವ್ವ ನ[1]ಲ್ಲರಿಗೆ ನಲ್ಲನು. ವಂಚನೆಗೆ ನೆರೆಯನು, ನಿರ್ವಂಚನೆಗೆ ನೆರೆವ[2]ನು[2] ಉರಿಲಿಂಗದೇವನು ॥ ೧ ॥

ಕಾ[3]ಯ[3]ಕ್ಕೆ ಕಾಹ ಕೊಡುವ[4]ರ[4]ಲ್ಲದೆ ಮನಕ್ಕೆ ಕಾ[5]ಹ[5] ಕೊಡುವರೇ [6]ಕೆಳದಿ[6]? ಇಂತ[7]ಪ್ಪ ನಲ್ಲನನೆಲ್ಲಿಯೂ ಕಾಣೆ. ಇಂತಪ್ಪ ಪುರುಷನನೆಲ್ಲಿಯೂ ಕಾಣೆ. ಇಂತಪ್ಪ[7] [8]ಚೋದ್ಯ[8]ವನೆಲ್ಲಿಯೂ ಕಾಣೆನು. ಸದ್ಗುಣ[9]ದ[9] ಕಾಹನು ಮನಕ್ಕೆ ಕೊಟ್ಟನು ಉರಿಲಿಂಗದೇ[10]ವನತಿ ಚೋದ್ಯವೆನಗೆ[10] ॥ ೨ ॥

* ನ[11]ಲ್ಲ[11]ನೊಲ್ಲನೆಂದು ಮುನಿದು ನಾನ[12]ಡಗ[12]ಲು ಅ[13]ಡಗುವೆಡೆಯೆಲ್ಲಾ ತಾನೆ ನೋಡೆಲಗ[13]ವ್ವಾ. ನಲ್ಲ ನೀನಿಲ್ಲದೆಡೆಯಿಲ್ಲ. ಅಡಗಲಿ[14]ಕಿಂಬಿಲ್ಲಾಗಿ[14] ಮುನಿದು ನಾನೇ[15]ಗುವೆನು[15], ಶರ[16]ಣು[16]ಗತಿವೋಗುವೆನು ಉರಿಲಿಂಗ ದೇವ[17]ನ[17] ॥ ೩ ॥

---

[1] ನ (ಗ) [2] ನು ಎನ್ನ (ಜ) [3] ಹ (ಕ) [4] ನ (ಕ ಗ) [5] ಹನು (ಕ ಗ) [6] ಅವ್ವಾ (ಜ) [7] ಪ್ಪ (ಜ) [8] ಸೋಜಿಗ(ಜ) [9] ಗುಣದಾಹಾ (ಕ ಗ) [10] ವನು ಅಜಿಃ (ಕ) ವನು ಸೋಜಿಗವವ್ವಾ (ಜ) ವನು ಛೋದ್ಯವೆನಗೆ (ಜ) [11] ಲ್ಲನ (ಜ) [12] ಗಲ (ಜ) [13] ಗಲುವ ಠಾವೆಲ್ಲಾ ತಾನೆಲಗ (ಜ) ಡಗುವ ಠಾವೆಲ್ಲಾ ತಾನೆ ಕಾಣ (ಜ) [14] ಕೆಗಿಂಬಿಲ್ಲ (ಜ) [15] ವೆ (ಜ) [16] ಣಿ (ಗ) [17] ಗೆ (ಜ) ರಿಗೆ (ಜ).

* ಗಾಡಿಗ ನಲ್ಲನು ಕಾಡಿಹನೆಲಗೆ. ಕೂಡಿಹನಗಲಿಹ ಕಾಡಿಹನೆನ್ನ [1]ಕೆಳದಿ. ನೀನಿ[1]ದ ಮಾಣಿಸು. ಅವನನಗ[2]ಲಿ[2]ದ ವಿರ[3]ಹಿಯ[3] ಕೂಡು[4]ವ[4] ಸುಖವ[5]ನು[5] ಉರಿಲಿಂಗದೇವನು ಬಲ್ಲನು ಕೆಳದಿ ‖ ೪ ‖

ಮಾನಸದಲ್ಲಿಪ್ಪನು, ಬುದ್ಧಿಯಲ್ಲಿಗೆ ಹೋಹನು. ಚಿತ್ತದಲ್ಲಿ ನೆಲೆಯಮ್ಮ ನಲ್ಲಗೆ ಕೇಳವ್ವ ಕೆಳದಿ. ಅಹಂಕಾರ ಕೂಡಿ, ಅಹಂಕಾರ ಅಹಂಕಾರರಿ? ಮತ್ತೆ ಯಾರಲ್ಲಿ ಕೂಡಿ ಸುಖಿಸುವ. ಇವರೆಲ್ಲರ ಮುಂದೆ ತನ್ನ ಹಿಡಿದು ನೆರೆದಡೆ ಅವರೆನ್ನ ನೇಗೆಯ್ವರು ಉರಿಲಿಂಗದೇವ ‖ ೫ ‖

ನಲ್ಲನ ಕೂ[6]ಡುವ[6] ಸುಖ ಭೋಗ ಧ್ರುವ್ಯವನೆಲ್ಲಿಂದ ತಪ್ಪೆನು ಹೇಳಾ ಕೆಳದಿ? ನಲ್ಲನ ಬೇಡಲು ನಾಚಿಕೆ ಎನಗೆ. ಮತ್ತೆ[7]ಲ್ಲಿಯೂ ನಿಲ್ಲೆನು. ಕೂ[7]ಡುವ ಶಕತಿಯ ತಾನಱಿದಿಹನು[8] ಕೇಳಾ ಕೆಳದಿ. ಹೆಣ್ಣು[9] ಹೆಣ್ಣು ಕೂ[9]ಡುವ ಸುಖವ ಮಣ್ಣಿನಲ್ಲಿ ನೆರಹುವೆನು ಉರಿಲಿಂಗದೇ[10]ವ ನಲ್ಲನ[10] ‖ ೬ ‖

ಇಂಬಿನ ಚುಂಬನ ಅಮೃತಾಹಾರ. ಆಲಿಂಗನವೇ ಆಭರಣ. [11]ಸೋಂ[11]ಕೇ [12]ವ[12]ಸ್ತ್ರ. ನೋಟವೇ ಕೂಟ. ಒಡನಾಟವೇ ಅಷ್ಟಭೋಗವೆನಗೆ. ಉರಿಲಿಂಗ ದೇವ[13]ನ ಕೂಟವೇ[13] ಪರಾತ್ಪರ ವಾಙ್ಮನಾತೀತ ಪರಮಸು[14]ಖ[14] ‖ ೭ ‖

* ಕಾಮನ ಕೊಂದು ಪಟ್ಟಕ್ಕೆ ನಿಂದ• ಕಾಮರಾಜ[15]ನು[15] ರಾಜಾಧಿರಾಜ ಗಂಡರನೆಲ್ಲರ ಹೆಂಡಿರ ಮಾಡಿ ನೆರೆವ ವೈ[16]ಸಿಕ[16] ಕಾಮ ನೀ ಕೇ[17]ಳಾ[17]. ಇಂತಪ್ಪ ಕಾಮಿ [18]ಎನಗತಿ[18] ಕಾಮಿಸಿ [19]ನೆರೆದು ಕಾಮಸಿದ್ಧಿಯನೀವನು[19] ಉರಿಲಿಂಗ ದೇವ[20]ನು[20] ‖ ೮ ‖

ಕಾಯಕ್ಕೆ ಕಾಯವಾಗಿ, ಪ್ರಾಣಕ್ಕೆ ಪ್ರಾಣವಾಗಿ, ಮನಕ್ಕೆ ಮನವಾಗಿ ನೆರೆದ ನೋಡೆಲಗವ್ವಾ. ನಲ್ಲನ ಬೇಟದ ಕೂಟದ ಸುಖವನೇನೆಂದು ಬಣ್ಣಿ[21]ಪೆ[21] ಮಹಾ ಸುಖ[22]ವ[22]? ನಲ್ಲನ ನೋಟ[23]ದ ಕೂಟ[23]ದನುವನೇನೆಂದುಪಮಿಸು[24]ವೆ[24] ಮಹಾ

---

1 ನೀನ (ಜ) 2 ಲ (ಕ ಗ) 3 ಹದಿ (ಜ) 4 ವ ಬೇಟದ (ಜ) 5 ನು ಮುಗುದೆ ನೀನರಿಯೆ. ಅಗಲಿದ ವಿರಹಿಯ ಕೂಟದ ಸುಖವನು (ಜ) 6 ಡಲು (ಜ) ಡುವಡೆ (ಡ) 7 ಆರೂ ಇಲ್ಲ ಇನ್ನು ಕೊ (ಜ) ಆರೂ ಇಲ್ಲ ಕೊ (ಡ) 8 ಕ ತಿಯ ತಾ (ಜ) ಕ್ತರು ನಾನಱಿಯೆ ನಲ್ಲ ತನ್ನ ತಾನಱಿದು ಕೊಡನು (ಡ) 9 ಹೆಣ್ಣು ಕೂ (ಕ) ಕೂ (ಜ) 10 ವ (ಜ) ವನ (ಡ) 11 ತೊಡೆ:ಸೋಂ (ಕ) 12 ಸುವ (ಜ ಡ) 13 ನ (ಗ) ನ ಕೂಟ (ಜಡ) 14 ಖವ ನೇನೆಂಬೆನವ್ವಾ (ಜ) ಖವೆನ ಗವ್ವಾ (ಡ) 15 ರಾನು (ಕ) ರಾಜನವ್ವಾ (ಜ) 16 ಸುಖ (ಕ) ಶಿಕ (ಜ) 17 ಳಾ ಕೆಳದಿ (ಜ) 18 ಯನತಿ ಕಾಮದಿಂದ (ಜ) 19 ದೆನವ್ವಾ (ಜ) 20 ನ (ಜ) 21 ಪೆ ಕೆಳದಿ (ಜ) 22 ವ ನಾನೇನೆಂಬೆನೆಲಗೆ (ಜ) 23 ಪ (ಕ) 24 ವೆನವ್ವಾ (ಜ)

* ' ಜ ' ಪ್ರತಿಯಲ್ಲಿ ಎರಡು ಸಲ ಪಾಠಾಂತರಗಳೊಡನೆ ಬಂದಿದೆ.

ಘನವ? ನಾನು ತಾನೆಂದು ವಿವರಿಸಬಾರದಂತೆ ನೆರದ[1]ನು ನೋಡಾ ಉ[1]ರಿಲಿಂಗ ದೇವನು ‖ ೯ ‖

ತ[2]ಕ್ಕ[2]ನ ತಕ್ಕಿಪ ತೆಱನನು ಚದುರೆ ಚದುರಿಸದೆ ನೀನುಸುರಾ. ಸತ್ಯವ ಜಪಿಸಲು ಸಿಕ್ಕುವ ನಲ್ಲನು ಸತ್ಯ ಸತ್ಯವು ಕೇಳಾ ಕೆಳದಿ. ಅವನುಂಬಲ್ಲಿ ಉಡುವಲ್ಲಿ ನೇಹ[3]ವ ಬೆರ[3]ಸಲು ಸಿಕ್ಕುವ ಬಿಡದಿರು ಉರಿಲಿಂಗದೇವನ ‖ ೧೦ ‖

ಇನಿಯ[4]ನೆನಗೆ ನೀನು.[4] ಇನ್ನೇನನೊಂಥ ನಾನಱಿಯೆ. ನೀ ನುಡಿಸಲು ನುಡಿವೆನು, [5]ನ[5]ಡಸಲು ನಡೆವೆನು. ನೀನಲ್ಲ[6]ದ[6]ಱಿಯೆನು ನಲ್ಲ ನೀ ಕೇಳಾ. [7]ನೀ[7]ನೇ ಗತಿ, ನೀನೇ ಮತಿ, ನಿನ್ನಾಣೆಯಯ್ಯಾ ಉರಿಲಿಂಗದೇವಾ ‖ ೧೧ ‖

ನಲ್ಲ ಮುಳಿದು ಹೋಗುತ್ತ, ಎನ್ನ ಮನವ ನಂಬದೆ ಮೈಗಾಹಾ[8]ಗಿ ಇರಿಸಿ ದವ[8]ನು ಉರಿಲಿಂಗದೇವನು ತಾ ಬಂದು ನೆರೆವನ್ನ ಬರ ‖ ೧೨ ‖

* ಎ[9]ನ್ನ[9] ನಲ್ಲ[10]ನೆನ್ನ ನೊಲ್ಲದಿದ್ದಡೆ ನಾ ಎಲ್ಲಿ[10] ಅಱಸುವೆನವ್ವಾ? ಗಂಗೆಯ ನೋನೆನು, ಗೌರಿಯ ನೋನೆನು, [11]ಎಲ್ಲಿ[11] ಅ[12]ಱಸುವೆ[12]ನವ್ವಾ? ಎನ್ನ ಅಂತರಂಗದ ಆತ್ಮಜ್ಯೋತಿ ಉರಿಲಿಂಗದೇವಾ ಯೆಂ[13]ದು ಇಲ್ಲಿಯೇ ಅಱಸುವೆ ನವ್ವಾ[13] ‖ ೧೩ ‖

ಅಂತರಂಗದಲ್ಲಿ ಆವರಿಸಿ ಬಹಿರಂಗದಲ್ಲಿ ತೋ[14]ಱುವೆ[14]. ಕಂಗಳ ಕೊನೆಯಲ್ಲಿ ಮೂರುತಿಯಾಗಿ ಮನದ ಕೊನೆಯಲ್ಲಿ [15]ತೋಱು[15]ವೆ. ಎನ್ನ ಬ್ರಹ್ಮರಂಧ್ರದಲ್ಲಿ [16]ತೋಱುವ[16] ಪರಂಜ್ಯೋ[17]ತಿ[17] ಉರಿಲಿಂಗದೇ[18]ವ ನೀನಯ್ಯಾ[18] ‖ ೧೪ ‖

ಆ[19]ದಾ[19]ಗಲೆನ್ನ ನನುಭವಿಸುವುದಲ್ಲದೆ ಹೇ ಳ ಬಾ ರ ದಾ ರಿ ಗೆ[20]ಯೂ ನೋಡಯ್ಯಾ[20]. ಕಾಣಬಾರದಾತಂಗೆ ಸವಿದೋಱಬಾರದ [21]ಪೋ[21]ಪು (?) ನೋಡಯ್ಯಾ. ಹೇಳಬಾರದ ಶಬುದ ಉರಿಲಿಂಗದೇವಾ ನಿಮ್ಮನಱಿವ ಸುಖವಿಕ್ಕ ಬಾರದು ತಕ್ಕವರಿಗಲ್ಲದೆ ‖ ೧೫ ‖

ನಲ್ಲನ ಕೂಡುವ ಭರದಲ್ಲಿ ಎನ್ನು ವನಿದಿರುವನೇನೆಂದಱಿ[22]ಯೆನು[22]. ನಲ್ಲನ ಕೂಡುವಾಗಳು ಎನ್ನುವ ನಲ್ಲನನೇನೆಂದಱಿ[23]ಯೆನು[23]. ಉರಿಲಿಂಗದೇವನ ಕೂಡಿದ ಬಳಿಕ ನಾನೊ ತಾನೊ ಏನೆಂದಱಿ[24]ಯೆನು[24] ‖ ೧೬ ‖

---

1 ನೆನ್ನನು (ಜ) 2 ಕ್ಕಿಪ ನಲ್ಲ (ಜ) 3 ಬೆಳಿ (ಜ) 4 ನೀನೆ ಎನಗೆ (ಜ) 5 ನೀನ (ಜ) 6 ದನ್ಯವ ನಾನ (ಜ) 7 ಎನಗೆ ನೀ (ಜ) 8 ನಿರಿಸಿದ (ಜ) 9 ಮ್ಮ (ಜ) 10 ನು ಒಲ್ಲೆನೆಂದು ಕೇಳಿದಡೆ ಇಲ್ಲಿಯೇ (ಜ) ನೊಲ್ಲನೆಂದು ಕಳುಹಿದಡೆ ಇಲ್ಲಿಯೆ (ಜ) 11 ಇಲ್ಲಿಯೇ (ಜ ಜ) 12 ರತು ಹೋಹೆ (ಜ) 13 ದು (ಕ ಗ) ಇಲ್ಲಿಯೇ ಅರತು ಹೋಹೆನವ್ವಾ (ಜ) 14 ಱಿದೆ (ಡ) 15 ತೊಳಲು (ಜಡ) 16 ತೊಳ ತೊಳಗಿ ಬೆಳಗುತಿಪ್ಪ (ಜ) 17 ತಿ ನೀನೇ (ಜ) 18 ವಾ (ಜ) ವನವ್ವಾ (ಡ) 19 ವಾ (ಕ) 20 ಯೂ (ಕ) 21 ಘಾ (ಗ) 22 ಯೆ (ಜಡ) 23 ಯೆ (ಚ ಜ ಡ) 24 ಯೆ (ಜಡ).

* 'ಜ' ಪ್ರತಿಯಲ್ಲಿ ಎರಡು ಸಲ ಪಾಠಾಂತರಗಳೊಡನೆ ಬಂದಿದೆ.

ನಲ್ಲನ ಕೂಡಿಹೆನೆಂದು [1]ನೆನೆ[1]ವನ್ನಬರ ತವಕ[2]ದಿಂದ[2] ಮೇಲುವಾಯ್ದು ನೋ[3]ಡ[3]ವ್ವಾ. ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿ, ಕಾಯದೊಳಗೆ ಕಾಯವಾ[4]ಗಿ[4], ತವಕಕ್ಕೆ ತವಕ ಮಿಗೆ ಮೇಲುವರಿದು ಕೂ[5]ಡಿದಂತೆ[5] ಕೂಡುವೆ ಉರಿಲಿಂಗದೇವನ ॥ ೧೭ ॥

ಆತನ ಬಿರಿದೆನ್ನ ಉರದಲ್ಲಿ ಇದೆ [6]ಕಂಡ[6]ಯ್ಯಾ. ಏಕೆ ಬಂ[7]ದಿರೊ[7] ಎಲೆ ಅ[8]ಣ್ಣಗಳಿರಾ[8] ? ನಿಮಗೆ ಅಪ್ಪು[9]ವುದಕ್ಕೆಡೆಯಿಲ್ಲ, ನೀವಪ್ಪುವಡೆ[9] ಅಡ್ಡ [10]ಬಂದ.[10] ಏಕೆ ಬಂ[11]ದಿರೊ[11] ಉರಿಲಿಂಗದೇವ[12]ನ[12]ಪ್ಪಿ [13]ಸೊಪ್ಪಾದ[13] ಹಿಪ್ಪೆಗೆ ॥ ೧೮ ॥

ಕಾಮ ನಿನ್ನ [14]ಬಿ[14]ಲ್ಲಾಳುತನವನು ಎಸುಗೆಯನು ನೋಡು[15]ವೆ [15]ಕೇಳೆಲವೊ. ಕುಸುಮ ಶರ[16]ವನು[16] ತೊಡು ನೀನು, [17]ನಿ[17]ನ್ನೆಸುಗೆ[18]ಯ[18], ನೋಡುವೆನು ಕೇ[19]ಳಾ[19]. ಎನ[20]ಗೆಯೂ[20] ಉರಿಲಿಂಗದೇವ[20]ಗೆಯೂ[20] ತೊಟ್ಟಿ[21]ಸೆಯ[21]ಲು ನೀ ಬಿಲ್ಲಾಳಹೆಯೋ ಕಾಮ ॥ ೧೯ ॥

ಇಬ್ಬರಿಗೊಂದಂಬ ತೊಡುವೆ ಗಡ ಕಾಮಾ. ಅಱಿದಱಿದು ಬಿಲುಗಾಱನ ಹೆಯೋ. ಎಸೆದಿಬ್ಬರೂ [22]ಒಂದ[22] ಹರು ಗಡಾ, ಇದು ಹೊಸತು, ಚೋದ್ಯವೀ ಸರಳ ಪ[23]ರಿ[23] ನೋಡಾ. ಎನಗೆಯೂ ಉರಿಲಿಂಗದೇ[24]ವ[24]ಗೆಯೂ ತೊಟ್ಟಿ[25]ಸು[25], ನಾವಿಬ್ಬರೊಂದಾಗೆ [26]ಬಿಲ್ಲಾಳ[26]ಹೆ ಎಸೆಯೆಲೋ ಕಾಮಾ ॥ ೨೦ ॥

ಕಾ[27]ಮ[27] ಕಾಮಿನಿಗೆ ಎರಡು ಗುಱಿ ಒಂದು ಸರಳೆಸುಗೆಯ ಮಾ[28]ಡುವೆ[28] ಕಾಮಾ. [29]ನಲ್ಲೊ ನಲ್ಲೊ ಬಿಲ್ಲಾಳೆಸೆಯ[29]ಲು ಎರಡೊಂದಪ್ಪುದು ಗಡ ಕಾಮಾ. ಎನ[30]ಗೆಯೂ[30] ಉರಿಲಿಂಗದೇವ[30]ಗೆಯೂ[30] ತೊಟ್ಟಿಸು. ಎರಡೊಂದಾದಡೆ ಬಿಲ್ಲಾಳಹೆ [31]ಎಸೆಯೊ. ನೀನೂ[31] ॥ ೨೧ ॥

* [32]ಒ[32]ಬ್ಬನೆ ಗರುವ[33]ನಿವ, ಒ[33]ಬ್ಬನೆ ಚೆಲುವನಿವ, [34]ಒ[34]ಬ್ಬನೆ ಧನಪತಿ ಕೇಳಾ ಕೆಳದಿ. [35]ಇ[35]ವಗೆ ಹಿರಿಯರಿಲ್ಲ, [36]ಇವಗೆ ಒ[36]ಡೆಯರಿಲ್ಲ. ಇಂತಪ್ಪ

---

1 ಮೇಲುವಾಯ್ವುವನ್ನಬರ (ಜ) 2 ದಲ್ಲಿ (ಡ) 3 ಡಿರೆ ಅ (ಡ) 4 ಗಿ ಕೂಡಿದ ನೋಡವ್ವಾ (ಜ) ಗಿ ಕೂಡಿದನು (ಡ) 5 ಡುವಂತೆ (ಡ) 6 ನೋಡಿರ (ಜ) 7 ದೆಯೊ (ಕ ಗ) 8 ಣ್ಣೂ (ಕ ಗ) 9 ವರಿಗೆ (ಕ ಗ) 10 ಏಕೆ ಬಂದೆ (ಗ) ಬಂದಿಪನೆನ್ನ ನಲ್ಲ (ಜ) 11 ದೆ (ಕ ಗ) 12 ನ ನ (ಕ ಗ) 13 ದ (ಜ) 14 ಬ (ಜ) 15 ವಡೆ (ಕ ಗ) 16 ವ (ಜ) 17 ಎಸುನಿ (ಕ) 18 ಯನು (ಜ) 19 ಳಾ ಕಾಮಾ (ಜ) 20 ಗೂ (ಗಜ) 21 ಸು ಎಸ (ಕ) ಸ ಎಸೆಯ (ಜ) 22 ಬಂದಿ (ಜ) 23 ರಿಯ (ಜ) 24 ವನಿ (ಜ) 25 ಸಿ (ಗ) 26 ನೀ ಬಲ್ಲಾಳನ (ಜ) 27 ಮಿನಿ (ಕ) ಮಿಗೆ (ಜ) 28 ಡು (ಜ) 29 ನಲ್ಲೊ ನಲ್ಲೊ ಬಿಲ್ಲಾಳೆ ಯೆಸ (ಗ) ಎಸೆಯ (ಜ) 30 ಗೆ (ಕ ಗ) 31 ಯೊ ಕಾಮಾ (ಜ) 32 ಇವನೊ (ಜ) 33 ಇವನೊ (ಜ) 34 ನೊ (ಜ) 35 ಅ (ಜ) 36 ಎನಗೊ (ಜ) ಅವಗೆ ಒ (ಜ).

* ಇದು ‘ ಜ ’ ಪ್ರತಿಯಲ್ಲಿ ಎರಡು ಸಲ ಪಾಠಾಂತರಗಳೊಡನೆ ಬಂದಿದೆ.

[1]ನ[1]ಲ್ಲನು ಲೇಸು ಕಾಣೆಲಗೆ. ನಾವೆ[2]ಲ್ಲರೊಂ[2]ದಾಗಿ ಹಿಡಿದು [3]ಬಿಡದಿ[3]ರೆ ಬಿಡಿಸುವ[4]ರಿನ್ನಿಲ್ಲ[4] ಉರಿಲಿಂಗದೇವನಾ ‖ ೨೨ ‖

[5]ಈ ನ[5]ಲ್ಲನ ಬೇಟದ ಕೂಟದ ಪರಿಯ[6]ನು ಏ[6]ನೆಂದು ಹೇಳುವೆ, ವಿಪರೀತ ಕೆಳದಿ. ಪುರುಷ ಶಕ್ತಿಯಾಗಿ, ಶಕ್ತಿ ಪುರುಷನಾಗಿ ನೆರೆದು ಸುಖಿಸುವನು ಕೇಳಾ ಕೆಳದಿ. ಅತಿಕಾಮಿ [7]ವಿಪರೀತನು ಉ[7]ರಿಲಿಂಗದೇವ[8]ನು[8] ನೆರೆಯಲು ನೆರೆವು[9]ದು[9] ಮನದಿಚ್ಛೆ ಕೆಳದಿ ‖ ೨೩ ‖

ಒಂದಲ್ಲ ಎರಡಲ್ಲ, ಮುವ್ವರು ಹೆಣ್ಣುಗಳ ಮಱೆಯಲ್ಲಿಪ್ಪ[10]ನ[10] ನೆರೆಯ ಲೆಂತ[11]ಹುದು[11]? ಹೆಣ್ಣಿನ ಮಱೆಯೊಗುವ[12] ನಲ್ಲಗೆ ಮತ್ತೆ ನಾಚಿಕೆಯಿಲ್ಲ ಕೇಳಾ[12] ಕೆಳದಿ. ಲೋಗರಪತಿಯ [13]ಮಱ[13]ಸಿಕೊಂಡಿಪ್ಪ ಚಂಡಿಯರಿಗೆ ಮತ್ತೆ ನಾಚಿಕೆಯಿಲ್ಲ ಕೇ[14]ಳಾ.[14] ಅವದಿರ ಝುಂಕಿಸಿ ತೊಲಗಿಸಿ[15]ರೆಂದ[15] ಉರಿಲಿಂಗದೇ[16]ವ[16] ‖ ೨೪ ‖

* [17]ಅವರಾರ[17] ಪರಿಯಲ್ಲ ಎಮ್ಮ ನಲ್ಲನು. ವಿಶ್ವ[18]ವೆಲ್ಲವೂ[18] ಸತಿಯರು. ಸೋಜಿಗದ ಪುರುಷನು. ಅವರವರ ಪರಿಯಲ್ಲಿ ಅವರ[19]ವರ[19] ನೆರೆವನು. ಅವರವರಿಗವರಂತೆ ಸುಖಮಯನು[20] ನೋಡಾ. ಅವರೆಲ್ಲರ ವಂಚಿಸಿ[20] ಎನ್ನ ನಗಲದ ಪರಿಯ[21] ನೋಡಾ[21] ಕೆಳದಿ. ನೀನೊಳ್ಳಿದಳಾದಡೆ ಮಹಾಮಂತ್ರವ ಜಪಿ[22]ಸು.[22] ನಿನ್ನ ನಗಲನು ನಿನ್ನಾಣೆ ಉರಿಲಿಂಗದೇವ, ತನ್ನಾ[23]ಣೆ ಕೆಳದಿ[23] ‖ ೨೫ ‖

ಹಾಡುವೆ ನಲ್ಲನ, ಬೇಡುವೆ ನಲ್ಲನ, ಕೂಡುವೆ ನಲ್ಲನ, ನಿಚ್ಚನಿಚ್ಚ [24]ನೋಡಾ.[24] ಅವನೆ ಸಖನೆನಗೆ, ಅವನೆ ಸುಖವೆನೆಗೆ. ಅವನೆ ಪ್ರಾಣವು ಕೇಳೆಲೆ ಕೆಳದಿ. ಉರಿಲಿಂಗದೇವನೆನಗೆ ಸಂಜೀವ[25]ನ[25] ಕೆಳದಿ ‖ ೨೬ ‖

§ ಉರಿಲಿಂಗದೇವ ನಿನ್ನನಗಲದ ಪರಿಯನು ಹೇಳಿಹೆನು ಕೇಳಾ ನಿನಗೆ ಸಖಿಯೆ. ಉರಿಲಿಂಗದೇವ ಎಂಬುದೆ ಮಂತ್ರ. ಉರಿಲಿಂಗದೇವ ಎಂಬುದೆ ಯಂತ್ರ. ಉರಿಲಿಂಗದೇವ ಎಂಬುದೆ ತಂತ್ರ. ಉರಿಲಿಂಗದೇವ ಎಂಬುದೆ ವಶ್ಯ. ಉರಿಲಿಂಗ ದೇವಾ ಉರಿಲಿಂಗದೇವಾ ಎನುತ್ತಿದೇನೆ ‖ ೨೭ ‖

ನಲ್ಲನ ರೂಪೆನ್ನ ನೇತ್ರವ ತುಂಬಿತ್ತು. ನಲ್ಲನ ನುಡಿಯೆನ್ನ ಶ್ರೋತ್ರವ

---

1 ನಲ್ಲನ (ಕ) 2 ಲ್ಲ ಒಂ(ಕ ಗ) 3 ಬಡಿದಿ (ಜ) ಬಡಿದ (ಜ) 4 ರಿಲ್ಲಲೇಸು (ಜ) ರೆಲ್ಲಲೇಸು (ಜ) 5 ನ (ಜ) 6 ನಾನೇ (ಜ) 7 ಯು (ಜ) 8 ನು ವಿಪರೀತದಿಂದ(ಜ) 9 ದೆನ್ನ(ಜ) 10 ವನ (ಜ) 11 ವ್ವ (ಜ) 12 ಕೇಳವ್ವ (ಜ) 13 ನು ಅರ (ಜ) 14 ಳವ್ವಾ (ಜ) 15 ಹಿಡಿದರೆ ಬಿಡದಿ ರೆಂದು (ಜ) (ಕಗ) 16 ವನ (ಕಗ) 17 ಆ (ಜಜ) 18 ವಿಲ್ಲವು (ಗ) ವೆಲ್ಲ (ಜ) 19 ನೆ (ಜ) 20 ಕೇಳಾಕೆಳದಿ ಆರ ಪರಿಯಲ್ಲ (ಜ) 21 ಹೇಳಾ (ಜ) ಕೇಳಾ (ಜ) 22 ಸಲು (ಜ) 23 ಣೆ (ಜ) 24 ಕೇಳಾಕೆಳದಿ (ಜ) 25 ನ ಕೇಳಾ (ಜ).

* ಇದು 'ಜ' ಪ್ರತಿಯಲ್ಲಿ ಎರಡು ಸಲ ಪಾಠಾಂತರಗಳೊಡನೆ ಬಂದಿದೆ.

§ ಇದು 'ಜ' ಪ್ರತಿಯಲ್ಲಿ ಇಲ್ಲ.

ತುಂಬಿತ್ತು. ನಲ್ಲನ ಸುಗಂಧವೆನ್ನ[1] ಘ್ರಾಣವ[1] ತುಂಬಿತ್ತು. ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು. [2]ನ[2]ಲ್ಲನ ಪ್ರೇಮವೆನ್ನ ಮನವ ತುಂಬಿತ್ತು. ನಲ್ಲನ [3]ಆಲಿಂಗನವೆನ್ನ ಅಂ[3]ತರಂಗ ಬಹಿರಂಗದಲ್ಲಿ [4]ಕೂಡಿ[4] ಸುಖಿಯಾ[5]ದೆ[5] ಉರಿಲಿಂಗ ದೇವನಾ ‖ ೨೮ ‖

[6]ಎಮ್ಮ[6]ನಲ್ಲನ ಕೂಡಿದ ಕೂಟವ ಇದಿರಿಗೆ ಹೇಳಬಾರದವ್ವಾ. ನೀವೆಲ್ಲಾ ನಿಮ್ಮ ನಲ್ಲನ ಕೂಡಿದ ಸುಖವ ಬಲ್ಲಂತೆ ಹೇಳಿ. ಉರಿಲಿಂಗದೇವ ಬಂ[7]ದು ನಿಱಿ[7]ಯ ಸೆಱಗ [8]ಸಡಿಲಿಸ[8]ಲೊಡನೆ ನಾನೊ ತಾನೊ ಏನೆಂದಱಿಯೆ[9]ನವ್ವಾ[9] ‖ ೨೯ ‖

* ಲಿಂ[10]ಗ ಕರ[10]ಸ್ಥಲಕ್ಕೆ ಬಂದ ಮತ್ತೆ ಕಂಗಳು ತುಂಬಿ ಒಱೆಯದಿರ್ದೊಡೆ ಆ ಲಿಂಗಪೂಜೆಯೇಕೆ? ಲಿಂಗವ ಜಿಹ್ವೆಯಲ್ಲಿ ನೆನೆವಾಗ ಅಂಗವ ಮಱೆಯದಿರ್ದೊಡೆ ಆ ಲಿಂಗದ ನೆನಹದೇಕೆ? ಲಿಂಗವಾರ್ತೆಯ ಕಿವಿ ತುಂಬಿ ಕೇಳಿ ಸರ್ವಾಂಗ ಝೊಂಪಿಸಿ ಮನಮಗ್ನವಾಗಿರದಿರ್ದೊಡೆ ಉರಿಲಿಂಗ ತಂದೆಯ ಸಿರಿಯ ನೆನೆಯಲೇಕೆ ? ‖೩೦‖

§ ಮಂಗಳಮಯ ಲಿಂಗವ ಮನ ಹಿಂಗದೆ ಸುಸಂಗಿಯಾಗಿ, ಮಹಾಲಿಂಗದ ಪ್ರಸಂಗಿಯಾಗಿರ್ಪಾತನ ಅಂಗವೆನಗೆ ಮಂಗಳತರಂಗ. ಆತನ ಪ್ರಸಂಗದಲ್ಲಿರಿಸಾ ಉರಿಲಿಂಗದೇವಾ ‖ ೩೧ ‖

§ ಮಹಾ ಬೆಳಗಿನ ಲಿಂಗವ ಕಯ್ಯಲ್ಲಿ ಕೊಟ್ಟರೆ ಕೊರಳಲ್ಲಿ ಕಟ್ಟಿಕೊಳಲೇಕೆ? ನೋಡುವ ಕ[11]ಣ್ಣ[11] ಮುಚ್ಚಿದ ಮತ್ತೆ ತನ[12]ಗೆ ಎ[12]ಡೆಯಾವುವುಂಟೆ? ಲಿಂಗವ ಹಿಂಗದೆ ಅಂಗಯ್ಯಲ್ಲಿ ಕೊಟ್ಟ ಮತ್ತೆ ಚಿತ್ತದಲ್ಲಿ ಹಿಂಗದಿರಬೇಕು ಉರಿಲಿಂಗ ತಂದೆಯ ಸಿರಿಯ ಭಾಷೆಯ ‖ ೩೨ ‖

[13]ಅ[13]ಂಗದಮೇಲೆ ಲಿಂಗದೇವನಿರ್ದಂತೆ ಇತರ ಸ್ಥಾವರಲಿಂಗಕ್ಕೆ ಹೋಗಿ, ದೇವರ ಕಂಡೆನೆಂದು [14]ನಲಿದುಲಿವುತ್ತಿರ್ಪ[14] ಸಲೆ ಮನುಜರುಗಳಿಗೆ, ಉಪದೇಶವ ಮಾಡುವ ಗುರುವಿಂಗೆ ಪುಣ್ಯದ ಬಟ್ಟೆಯ ಕೊಡ ಉರಿಲಿಂಗತಂದೆ ‖ ೩೩ ‖

* ತೀರ್ಥಯಾತ್ರೆಯಲ್ಲಿ ಕಂಡೆಹೆನೆಂ[15]ದೈದಿ[15] ಹೋಹ ಪರಿಯ ನೋಡಯ್ಯ ಮನೆಗೆ ಬಂದ ಜಂಗಮಕ್ಕಿಲ್ಲಾಯೆಂದು ಜಗಜಾತ್ರೆಯಲ್ಲಿ ಅನ್ನವನಿಕ್ಕಿದೊಡೆ ಪುಣ್ಯವೆಂಬಣ್ಣಗಳಿಗೇಕೆ ಸದಾಚಾರ ಉರಿಲಿಂಗತಂದೆ? ‖ ೩೪ ‖

---

1 ನಾಸಿಕ (ಜ) 2 ನಲ್ಲನ ಆಲಿಂಗನವೆಲ್ಲ ಸರ್ವಾಂಗ ತುಂಬಿತ್ತು ನ (ಜ) 3 ಆಂ (ಜ) 4 ನೆರೆದು (ಜ) 5 ದ (ಕ) 6 ಎಲೆ ಅವ್ವಾಎನ್ನ (ಜ) 7 ದೆನ್ನಸಿರಿ (ಜ) 8 ಹಿಡಿಯ (ಜ) 9 ನೂ (ಕಗ) 10 ಗ (ಟ) 11 ಣ್ಣು (ಗ) 12 ಗೊಂದೆ (ಗ) 13 ಲಿಂ (ಜ) 14 ಅರಿವುತಿಪ್ಪ (ಜ) 15 ಬುದು ಏಗೆಯ್ದು (ಗ).

* 'ಗಜಟ' ಪ್ರತಿಗಳಲ್ಲಿ ಮಾತ್ರ ಇದೆ.

§ 'ಗಟ' ಪ್ರತಿಗಳಲ್ಲಿ ಮಾತ್ರ ಇದೆ.

* ಉಂಡೆಹೆನೆಂಬಲ್ಲಿ ಅನ್ನವನಿಕ್ಕದೆ, ಸತ್ತ ಮತ್ತೆ ಅಕ್ಕಿಯ [1]ಹೇ[1]ರ ಮಸ್ತಕದಲ್ಲಿರಿಸಿ ಘಟ್ಟಿ ತುಪ್ಪ [2]ತುಯ್ಯಲ[2]ನುಣ್ಣೆಂದು ಬಿಕ್ಕಿ ಬಿಕ್ಕಳುವನಂತೆ, ಇವಱಚ್ಚುಗದ ಭಕ್ತಿಯ ಕಂಡು ಮೆಚ್ಚನಯ್ಯಾ ಎನ್ನ ಉರಿಲಿಂಗತಂದೆ || ೩೫ ||

† ಲೋಕದಂತೆ ಬಾರರು, ಲೋಕದಂ[3]ತೆ ಇರರು, ಲೋಕದಂತೆ[3] ಹೋಗರು ನೋಡಯ್ಯಾ. ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು ನೋಡಯ್ಯ ಉರಿಲಿಂಗದೇವಾ ನಿಮ್ಮ ಶರಣ[4]ರು ಉಪಮಾತೀತರಾಗಿ ಉಪಮಿಸಬಾರದು.[4] || ೩೬ ||

o ನೆನಹಿನ ನಲ್ಲನು ಮನೆಗೆ ಬಂದಡೆ ನೆನವುದಿನ್ನಾರನು ಹೇಳವ್ವಾ? ನೆ[5]ನ[5]ವ ಕ್ರೀಯಲ್ಲಿ ನೆರದು ಸುಖಿಯಹುದಲ್ಲದೆ ನೆನವುದಿನ್ನಾರ[6]ನು ಹೇಳವ್ವಾ?[6] ನೆನಹಿನ ನ[7]ಲ್ಲ[7] ಉರಿಲಿಂಗದೇವ[8]ನ[8] ಕಂಡ ಬಳಿಕ ನೆನವುದಿನ್ನಾರನು ಹೇಳವ್ವಾ? || ೩೭ ||

* ಕುಳಿತಾಗ ಭಕ್ತ, ಮುನಿದಾಗ ಮಾನವ. ಗೋಸುಂಬೆಯಂತೆ ಎನ್ನ ಮನವು ಗಳಿಗೆಗೊಂದು ಪರಿ, ಈಶ್ವರಾ. ನಿಮ್ಮ ಜಂಗಮವನುದಾಸೀನವ ಮಾಡಿ, ದಾಸೋಹವಿಲ್ಲದ ಅತಿ ದೂಷಕ ದ್ರೋಹಿ ನಾನಯ್ಯ. ಬೇಸತ್ತೆ ನೀ ಮನಕ್ಕೆ. ಸುಬುದ್ಧಿಯ ಹೇಳಿ ಈಶ್ವರಾ, ಸಂತಯಿಸಯ್ಯ ಉರಿಲಿಂಗದೇವಾ || ೩೮ ||

* ಅನಂತ ವೇದಶಾಸ್ತ್ರ ಆಗಮಪುರಾಣ ತರ್ಕತಂತ್ರಂಗಳನ್ನು ಆತ್ಮಮಾಡಿದ ನಲ್ಲದೆ, ಆತ್ಮನನವು ಮಾಡಿದುದಿಲ್ಲ. ಎನ್ನಂತರಂಗದ ಅಱಿವಿನ ಮೂರ್ತಿಯಾಗಿ ಎನ್ನ ಉರಿಲಿಂಗದೇವರು ಸಂಕಲ್ಪಿಸಿ ಆಗೆಂದರಾದವು || ೩೯ ||

* ಅಷ್ಟವಿಧಾರ್ಚನೆ ಷೋಡಶೋಪಚಾರವೆಂಬುದು ಬಾಹ್ಯಕ್ರೀ ಎಂಬ ಭಾವಭ್ರಮಿತರ ಮಾತ ಕೇಳಲಾಗದು, ಕೇಳಲಾಗದು. ಧನವುಳ್ಳಾತ ಅಷ್ಟ ಸಂಪದೈಶ್ವರ್ಯ ಭೋಗವ ಭೋಗಿಪನಲ್ಲದೆ, ಧನಹೀನ ದರಿದ್ರನೇನ ಭೋಗಿಸುವನೋ? ಲಿಂಗವು ಪ್ರಾಣವು ಅವಿರಳಾತ್ಮಕವಾಗಿ, ಅಮಳ ಸೋಂಕು ತುಳುಕಿ, ಬಾಹ್ಯಕ್ರೀಯಾಗಿ ಕರಸ್ಥಲಕ್ಕೆ ಬಂದುತ್ತರಿಸೆ, ಇದು ಅಂತರಂಗವಲ್ಲ ಬಹಿರಂಗವಲ್ಲ ಉರಿಲಿಂಗದೇವ || ೪೦ ||

* ಎನ್ನ ನಲ್ಲನ ಕೂಡಿದ ಸುಖದ ಸುಗ್ಗಿಯನೇನೆಂಬೆ ಕೇಳಾ ಕೆಳದಿ? ಸುಖದ ಸವಿಗೆ ಸ್ರವಿಸಿ ಹರಿಯಿತ್ತು. ಹೇಳಲು ನಾಚಿಕೆ, ಕೇಳಲು ನಾಚಿಕೆ. ಸುಖದ ರಸ

---

1 ಮೊ (ಜ) 2 ತೋಯವ (ಗಟ) 3 ತೆ (ಚ) 4 ರು (ಚ) 5 ರ (ಡ) 6 ನು (ಜಜ) 7 ಲ್ಲನು (ಡ) 8 ನ ಕರಸ್ಥಲದಲ್ಲಿ (ಜ)

† 'ಚಜ'ಗಳಲ್ಲಿ ಮಾತ್ರ ಇದೆ.

o 'ಜಡ'ಗಳಲ್ಲಿ ಇದೆ. 'ಜ'ದಲ್ಲಿ ಎರಡು ಸಲ ಬಂದಿದೆ.

ಮಡುಗಟ್ಟಿದಲ್ಲಿ ಉರಿಲಿಂಗದೇವನ ಕೂಡಿ ಸುಖಸಾಗರದಲ್ಲಿ ಕ್ರೀಡಿಸುತ್ತಿರ್ದೆ ಕೆಳದಿ ॥ ೪೧ ॥

* ಅಱಿದಡೆ ಶರಣ, ಮಱದಡೆ ಮಾನವ. ಪಾತಕನು ಹೊಲೆಯ ನಾನೇತಕ್ಕೆ ಬಾತೆ? ಹೊತ್ತಿಗೊಂದು ಪರಿಯ ಗೋಸುಂಬೆಯಂತೆ, ಈತನ ಶರಣರ ಕಂಡು ಉದಾಸೀನವ ಮಾಡುವ, ದಾಸೋಹವನಱಿಯದ ದೂಷಕನು ನಾನಯ್ಯಾ. ಈ ಬುದ್ಧಿಯ ಹೇಳಿ ಬೆಸತ್ತೆ ನೀ ಮನಕ್ಕೆ, ಈಶ ನೀ ಸಲಹಯ್ಯ ಉರಿಲಿಂಗತಂದೆ ॥೪೨॥

* ನಲ್ಲನ ಕೂಡುವನ್ನಕ್ಕ ಸುಖದ ಸುಗ್ಗಿಯನೇನೆಂದಱಿಯೆ ಕೇಳಾ ಕೆಳದಿ. ಸುಖದ ಸವಿಗೆ ಸವಿಸಿ, ಕೂಡಿದೆ ನೋಡವ್ವಾ. ತವಕಕ್ಕೆ ತವಕ ಮಿಗೆ ಮೇಲುವರಿದು ಕೂಡಿದಂತೆ ಕೂಡುವೆನುರಿಲಿಂಗದೇವನಾ ॥ ೪೩ ॥

—ಸಂ. ಬಿ. ಎಸ್. ಸಣ್ಣಯ್ಯ

---

* 'ಜ'ದಲ್ಲಿ ಮಾತ್ರ ಇದೆ. ೪೮ ಮತ್ತು ೪೨ ಎರಡೂ ಒಂದನ್ನೊಂದು ಹೋಲುತ್ತವೆ.

ಕನ್ನಡ ಸಾಹಿತ್ಯದಲ್ಲಿ ನಿಘಂಟುಗಳು

ಸಾಹಿತ್ಯವೆಂಬ ಭವ್ಯ ಭವನದ ಭದ್ರ ಬುನಾದಿ ನಿಘಂಟುಗಳು. ಸಾಹಿತ್ಯ ಬಾನ್ದಳವೆಂದರೆ–ನಿಘಂಟುಗಳು ಅಲ್ಲಿ ಮಿನುಗುವ ಕಾಂತಿಪೂರ್ಣ ತಾರೆಗಳು. ಸಾಹಿತ್ಯ ಸಾಗರವೆಂದರೆ–ನಿಘಂಟುಗಳು ಅಲ್ಲಡಗಿರುವ ಅನರ್ಘ್ಯ ರತ್ನಗಳು. ಶಬ್ದಗಳ ವ್ಯುತ್ಪತ್ತಿ, ವಿಸ್ತೀರ್ಣ, ಅರ್ಥಶಕ್ತಿಗಳ ನಿರ್ದಿಷ್ಟ ಮತ್ತು ನಿರ್ದುಷ್ಟ ಜ್ಞಾನಪ್ರಾಪ್ತಿ ನಿಘಂಟುಗಳಿಂದ ಸುಸಾಧ್ಯ. ಅಕ್ಷರಗಳ ಗುಂಪು ಶಬ್ದ, ಶಬ್ದಗಳ ಸಂಕಲನ ವಾಕ್ಯ, ವಾಕ್ಯಸರಣಿಯೇ ಮಾತು–ಅದುವೆ ಭಾಷೆ. ನಾಡಿನ ನಾಗರಿಕತೆಯ ವಿಕಾಸಕ್ಕೆ, ಸಂಸ್ಕೃತಿಯ ಉತ್ಕರ್ಷಕ್ಕೆ ಭಾಷೆಯೇ ತಾಯಿಬೇರು. ಅರ್ಥ ಸಂಪತ್ತಿನಿಂದ ರಂಜಿಸುವ ಶಬ್ದಗಳೇ ಅಮೂಲ್ಯ ಸಾಹಿತ್ಯ ರತ್ನಾಗಾರ. ಸೊಗಸು, ರಂಜನೆ, ಮಾರ್ದವತೆ ಮತ್ತು ಧ್ವನಿಯುಕ್ತವಾದ ಭಾಷೆಯೇ ಅಮರವಾಗುವ ಸಾಹಿತ್ಯಕ್ಕೆ ಸೆಲೆ. ಸಾಮಾನ್ಯ ಜನತೆಯ ಜನಜೀವನವನ್ನು ಪಡಿ-ಮೂಡಿಸುವುದೇ ಸಾಹಿತ್ಯದ ಏಕಮೇವಾದ್ವಿತೀಯ ಗುರಿ. ಜನರ ನಡತೆ ನಡಾವಳಿ, ಆಚಾರ ವಿಚಾರ, ಒಲವು ನಿಲವು ಮತ್ತು ಸಮಾಜದ ಶಿಷ್ಟಸಂಪ್ರದಾಯಗಳು, ನೀತಿ-ರೀತಿಗಳು ಭಾಷೆಯ ಪರಿಪೂರ್ಣ ಜ್ಞಾನದಿಂದ, ತನ್ಮೂಲಕ ಸಾಹಿತ್ಯದ ಸಮಗ್ರ ಅಧ್ಯಯನದಿಂದ ಸುಲಭಸಾಧ್ಯವಾಗುತ್ತದೆ. ಲಿಪಿಗಳ ಹುಟ್ಟು, ಭಾಷೋದಯ, ಸಾಹಿತ್ಯ ನಿರ್ಮಾಣದ ಪ್ರಾಚೀನತೆಯನ್ನು ವಿವರಿಸುವುದು ಇಲ್ಲಿ ಅಪ್ರಸ್ತುತ. ಸ್ಥೂಲವಾಗಿ ಹೇಳುವುದಾದರೆ ಭಾಷೆಯ ಜನನ, ವಿಕಾಸ, ಸಮೃದ್ಧಿ, ಮಾನವನ ಆನಂದಾನುಭವ ಪ್ರಜ್ಞೆ, ರಸಾನುಭವಶಕ್ತಿ, ಅನ್ವೇಷಣಾಸಕ್ತ ಧೀಮಂತತೆಯನ್ನವಲಂಬಿಸಿದೆ. ಇವುಗಳ ಸುಂದರ ಅಭಿವ್ಯಕ್ತಿಯ ಸಾಧನವೇ ಭಾಷೆ. ಅದರ ಗ್ರಂಥಸ್ಥ ಆಧಾರಗಳೇ ಸಾಹಿತ್ಯ. ಬಹಿರಂಗವಾಗಿ ಭಾಷೆಗಳಲ್ಲಿ ಭಿನ್ನತೆ ತಲೆದೋರಿದರೂ, ಅಂತರಂಗದಲ್ಲಿ ವಿಶ್ವಮಾನವರ ಜೀವನಾವಶ್ಯಕತೆಗಳ ಸಕಲ ವಾಹಿನಿಗಳ ಸೆಲೆ ಒಂದೇ ಆಗಿದೆ. ಬಹುಭಾಷಾಪ್ರಜ್ಞೆ ವಿಶ್ವಬಂಧುತ್ವಕ್ಕೆ, ವಿಶಾಲ ಮನೋಭಾವನೆಗೆ, ಮಾನವನ ಅತ್ಯಗತ್ಯವಾದ ಜೀವನಮೌಲ್ಯಗಳ ಪರಿಜ್ಞಾನಕ್ಕೆ, ಅವುಗಳ ಅನುಷ್ಠಾನಕ್ಕೆ ಸಾಧನವಾಗುತ್ತದೆ.

ಕನ್ನಡ ಸಾಹಿತ್ಯ, ಪ್ರಾಚೀನತೆ, ವೈವಿಧ್ಯತೆ, ವೈಶಿಷ್ಟ್ಯತೆಗಳ ದೃಷ್ಟಿಯಿಂದ ಭಾರತದ ಹಲವಾರು ಭಾಷೆಗಳಲ್ಲಿ ಗಣ್ಯಸ್ಥಾನ ಗಳಿಸಿದೆ. ಕನ್ನಡ ಭಾಷೆಯೂ, ಲಿಪಿಯೂ ಅಷ್ಟೇ ಸುಂದರ, ಸರಳ ಹಾಗೂ ಸುಭಗವಾಗಿ ಮೆರೆಯುತ್ತಿದೆ. ಈ ಭಾಷೆಯ ಅಂತರಾಳವನ್ನು, ಸಾಹಿತ್ಯದ ಜೀವಾಳವನ್ನು ತಿಳಿಯುವುದು ಎಲ್ಲ ಕನ್ನಡಿಗರ ಆದ್ಯ ಕರ್ತವ್ಯ. ಭಾಷೆಯ ಮೂಲಸ್ವರೂಪವನ್ನರಿಯಲು ಗ್ರಾಮ್ಯ ಪ್ರಯೋಗಗಳು ತುಂಬ ಸಹಕಾರಿ. ಹಳ್ಳಿಗರ ಮಾತಿನಲ್ಲಿ ಒರಟುತನ ಕಂಡು ಬಂದರೂ ಅದರ ಹಿಂದೆ ನೈಜತೆಯಿಂದ ನಲಿಯುವ ಸಾಹಿತ್ಯದ ನಿರಾಭರಣ

ಸೌಂದರ್ಯವಿದೆ. ಅವರ ಮಾತುಗಳು ಸಹಜತೆಯ ಸೊಬಗಿನ ಬಲದಿಂದ ಸಾಹಿತ್ಯದ ಮಟ್ಟವನ್ನು ತಲುಪಿವೆ; "ಜನಪದ ಸಾಹಿತ್ಯ"ವೆಂದು ಪ್ರಖ್ಯಾತವಾಗಿ, ಸಾಹಿತ್ಯದ ಪ್ರಮುಖ ಪ್ರಕಾರಗಳಲ್ಲೊಂದಾಗಿ ರಾರಾಜಿಸುತ್ತಿವೆ. ಗ್ರಾಮ್ಯ, ಸಂಸ್ಕೃತ, ಹಳಗನ್ನಡ, ನಡುಗನ್ನಡ, ಹೊಸಗನ್ನಡ, ಅನ್ಯಭಾಷೀಯ ಅಲ್ಲದೆ ಭಾಷೆಯ ಸಮರ್ಪಕವಾದ ಪ್ರಯೋಗ, ಅರ್ಥಸಂಪತ್ತಿಯ ನೈಜಸೌಲ್ಯ, ಅದರ ವಿಸ್ತೀರ್ಣ ತಿಳಿಯಲು–ನಿಘಂಟುಗಳೇ ಸಾಹಿತ್ಯಾಂಗಣದಲ್ಲಿ ಪ್ರಕಾಶಿಸುತ್ತಿರುವ ಪ್ರಾಜ್ವಲ್ಯ ಮಾನವಾದ ಜ್ಞಾನಪ್ರದೀಪಗಳು.

ಪ್ರಸ್ತುತ ಲೇಖನ, ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಕಂಡುಬಂದ ವಿವಿಧ ನಿಘಂಟುಗಳ ವಿಮರ್ಶಾತ್ಮಕ ವಿವರಣೆಯಾಗಿದೆ. ವಿಮರ್ಶೆಯ ಸೌಲಭ್ಯಕ್ಕಾಗಿ ಉಪಲಬ್ಧವಾದ ಎಲ್ಲ ನಿಘಂಟುಗಳನ್ನು ನಾಲ್ಕು ಬಗೆಯಾಗಿ ವಿಂಗಡಿಸಲಾಗಿದೆ.

೧) ಸಂಸ್ಕೃತ–ಕನ್ನಡ ನಿಘಂಟುಗಳು.
೨) ಕನ್ನಡ–ಸಂಸ್ಕೃತ ನಿಘಂಟುಗಳು.
೩) ಹಳಗನ್ನಡ–ಕನ್ನಡ ನಿಘಂಟುಗಳು.
೪) ಆಧುನಿಕ ನಿಘಂಟುಗಳು.

(೧) ಸಂಸ್ಕೃತ-ಕನ್ನಡ ನಿಘಂಟುಗಳು :—(i) ಕವಿವರ್ಯ ಎರಡನೆಯ ನಾಗವರ್ಮನು (ಕ್ರಿ. ಶ. ೧೧೪೫) ರಚಿಸಿರುವ "ವಸ್ತುಕೋಶ" ಪ್ರಪ್ರಥಮವಾಗಿ ಲಭ್ಯವಾದ ಸಂಸ್ಕೃತ-ಕರ್ಣಾಟಕ ನಿಘಂಟು. ಈ ಗ್ರಂಥದಲ್ಲಿ ಏಕಾರ್ಥ ನಾನಾರ್ಥ, ಸಾಮಾನ್ಯಕಾಂಡಗಳೆಂದು ಮೂರು ಕಾಂಡಗಳು, ಹದಿನೇಳು ವರ್ಗಗಳು, ಎಂಟುನೂರು ಶ್ಲೋಕಗಳಿವೆ. ಇದನ್ನು ಕಂದವೃತ್ತಗಳ ಸ್ವರೂಪದಲ್ಲಿ ರಚಿಸಲಾಗಿದೆ. ಈ ಕೃತಿಯ ಉತ್ಕೃಷ್ಟತೆಯನ್ನು ಸಾರುವ ಕೆಳಗಿನ ಕಂದಪದ್ಯ–ನಿಘಂಟುವಿನ ಉಪಯುಕ್ತತೆಯನ್ನು ಸಾರಿ ಸಾರಿ ಡಂಗುರ ಹುಯ್ಯುತ್ತಿದೆ.

ಪುದಿದ ಮನಸ್ತಮಮುಂ ಬಿಡೆ |
ಬೆದಱಿ ಸದರ್ಥ ಪ್ರಕಾಶಮುಂ ಮಾಡುಗುಮ |
ಪ್ಪುದಱಿಂ ಸಮಸ್ತ ವಿದ್ಯಾ |
ಪ್ರದೀಪಮಭಿದಾನಕೋಶಮಲ್ಲದೆ ಪೆಱತೇಂ ||

ಅಜ್ಞಾನಾಂಧಕಾರವನ್ನು ಹೋಗಲಾಡಿಸಿ ಸತ್ಯಾರ್ಥ ಪ್ರಕಾಶವನ್ನು ಬೀರುವುದರಿಂದಾಗಿ ಎಲ್ಲ ವಿದ್ಯೆಗಳಿಗೂ ತೇಜಃಪುಂಜವಾದ ಹೆಜ್ಜೊಡರಾಗಿದೆ ಈ ವಸ್ತುಕೋಶ. ಜಡಮತಿಗಳು ಜಲಕ್ಕನರಿಯಲೆಂಬ ಘನೋದ್ದೇಶದಿಂದ 'ಕವಿತಾಗುಣೋದಯ'ನಾದ ನಾಗವರ್ಮ "ವಸ್ತುಕೋಶ"ವನ್ನು ವಿರಚಿಸಿದ್ದಾನೆ. "ಅಕ್ಷೌಹಿಣಿ" ಶಬ್ದದ ಅರ್ಥವನ್ನು ಇಡೀ ಪಿರಿಯಕ್ಕರ ವೃತ್ತವೊಂದರಲ್ಲಿ ವಿವರಿಸಲಾಗಿದೆ. ಶಬ್ದಾರ್ಥದ ವ್ಯಾಪ್ತಿ, ಗುಣ್ಪು, ಪೆರ್ಮೆ ಎಲ್ಲದಕ್ಕೂ ಅತ್ಯುತ್ತಮ ನಿದರ್ಶನ.

" ಒಂದು ಸಾಮಜಮೊಂದು ತೇರ್ ಮೂಱಶ್ವಮಯ್ದು ಕಾಲಾಳ್ಗಳುಂ ಪತ್ತಿಯಕ್ಕುಂ |
ಸಂದ ಪತ್ತಿ ಮೂಱಾಗೆ ಸೇನಾಮುಖಂ ಮೂಱಱಿಂ ಗುಲ್ಮಂ ಮೂಱುಗುಲ್ಮ ||
ಕ್ಕೊಂದು ಗಣಮವು ಮೂಱು ವಾಹಿನಿ ತತ್ರಯಂ ಪೃತನಾಖ್ಯೆ ಪೃತನೆಗಳ್ ಮೂ |
ಱೊಂದಿತೋಱೆ ಚಮು ಮೂಱುಮನೀಕಿನಿ ಪತ್ತನೀಕಿನಿಯಕ್ಕೌಹಿಣಿಯೆನಿಕ್ಕುಂ ||

೨೧೮೭೦ ಆನೆಗಳು, ೨೧೮೭೦ ರಥಗಳು, ೬೫೬೧೦ ಕುದುರೆಗಳು, ೧೦೯೩೫೦ ಕಾಲಾಳ್ಗಳಿಂದೊಡಗೂಡಿದ ಸೇನಾವ್ಯೂಹವೇ " ಅಕ್ಷೌಹಿಣಿ "ಯೆಂದು ನೇರವಾಗಿ ಒಂದು ವಾಕ್ಯದಲ್ಲಿ ಹೇಳದೆ, ಅದರ ಸಮಗ್ರ ಹಾಗೂ ವಿರಳ ಚಿತ್ರವನ್ನು ಕಣ್ಮುಂದೆ ಕಟ್ಟುವಂತೆ, ಪತ್ತಿ, ಸೇನಾಮುಖ, ಗುಲ್ಮ, ಗಣ, ವಾಹಿನಿ, ಪೃತನೆ, ಚಮು, ಅನೀಕಿನಿ, ಮುಂತಾದ ಅಷ್ಟಸೇನಾವಿಭಾಗಗಳನ್ನೂ ಕೂಲಂಕಷವಾಗಿ ವಿವರಿಸಿದ್ದು ಸಕ್ರಮವಾದ ಕಾರ್ಯವಲ್ಲದೆ ಕವಿಯ ಸೂಕ್ಷ್ಮಾವಲೋಕನ ದೃಷ್ಟಿಗೆ ಅಪೂರ್ವ ಉದಾಹರಣೆಯಾಗಿದೆ.

(ii) **ಕವಿಪುಂಗವ ಅಭಿನವ ಮಂಗರಾಜ** (ಕ್ರಿ.ಶ. ೧೩೯೮): ಇವನು ವಿರಚಿಸಿದ " ಅಭಿನವನಿಘಂಟು " (ಮಂಗಾಭಿಧಾನ) ದ್ವಿತೀಯ ಗ್ರಂಥ. ಇದರಲ್ಲಿ ಸ್ವರ್ಗ, ಭೂ, ಪಾತಾಳ, ಸಾಮಾನ್ಯ, ನಾನಾರ್ಥ ಎಂಬ ಐದು ಕಾಂಡಗಳಿವೆ. ಪ್ರತಿಯೊಂದು ಕಾಂಡವು ಹಲವಾರು ವರ್ಗಗಳಾಗಿಯೂ ವಿಂಗಡಿಸಲ್ಪಟ್ಟಿದೆ. ಗ್ರಂಥ ಸ್ವರೂಪ ವಾರ್ಧಕ ಷಟ್ಪದಿಯಾಗಿದೆ. ಈ ಕೃತಿಯ ಶ್ರೇಷ್ಠತೆಯನ್ನೂ ಉಪಯುಕ್ತತೆಯನ್ನೂ ವ್ಯಕ್ತಗೊಳಿಸುವ ಕೆಳಗಿನ ಪದ್ಯ, ನಿಘಂಟುಗಳ ಮಹತ್ವವನ್ನು, ಆವಶ್ಯಕತೆಯನ್ನು ಪ್ರಕಟಗೊಳಿಸುವ ಅನುಪಮ ರಚನೆ.

ಪಡೆದ ತಾಯಂತಲಂಕಾರದಂದಮನೀವು |
ದಡರ್ದ ಪಿತನಂತೆ ಲಕ್ಷಣ ಸುಶಬ್ದಮನೀವು |
ದೊಡೆಯನಂತೆ ಪದಾರ್ಥಮಾವುದಂಗನೆಯಂತೆ ಭಾವರಸಗಳನೀವುದು ||
ಕಡು ಗುರುವಿನಂತತಿ ವಿಭಕ್ತಿ ಲಿಂಗಮನೀವು |
ದೊಡನಾಡಿಯಂತೆ ತಾತ್ಪರ್ಯಾರ್ಥಮಾವುದೆಂ |
ದೊಡರಿಸಿದನಭಿವ ನಿಘಂಟನಭಿನವ ಮಂಗನಭಿನವ ವಿಲಾಸದಿಂದೆ ||

ದೇಶ, ಕಾಲ, ಭಾಷಾತೀತವಾದ, ನಿತ್ಯ ವಿನೂತನವಾದ ಸುಸ್ಪಷ್ಟ ವಿವರಣೆ ಇಲ್ಲಿ ಲಭ್ಯವಾಗಿದೆ. ಔಚಿತ್ಯದ ರಂಜನೆಯಿಂದ ವರ್ಣನೆ ಹೃದಯಂಗಮವಾಗಿದೆ. ನಿಘಂಟು ತಾಯಂತೆ, ಪಿತನಂತೆ, ಒಡೆಯನಂತೆ, ಅಂಗನೆಯಂತೆ, ಗುರುವಿನಂತೆ, ಒಡನಾಡಿಯಂತೆ, ಅನುಕ್ರಮವಾಗಿ ಅಲಂಕಾರ, ಲಕ್ಷಣ, ಅರ್ಥ, ರಸ, ವ್ಯಾಕರಣ, ಸಾರಾಂಶವನ್ನು ತಿಳಿಯಪಡಿಸಲು ಸಹಕಾರಿಯಾಗುತ್ತದೆ. ಸಾಹಿತ್ಯಲೋಕದ ಬಂಧುಗಳಂತೆ, ಸ್ನೇಹಿತರಂತೆ, ಸಹೃದಯಿಗಳಂತೆ ನಿಘಂಟುಗಳು–ಸಾಮಾನ್ಯ ಜನಕ್ಕೆ, ಸಾಹಿತಿಗಳಿಗೆ ಮಾರ್ಗದರ್ಶನ ನೀಡುತ್ತವೆ. ಧ್ವನಿಯ ವಿವಿಧ ಪ್ರಕಾರಗಳು ಹಾಗೂ ಜನ್ಮಸ್ಥಳವನ್ನು ಬಹು ಚಮತ್ಕೃತವಾಗಿ ಕೆಳಗಿನ ಪದ್ಯದಲ್ಲಿ ನಿರೂಪಿಸಲಾಗಿದೆ.

ಕೇಂಕೃತಂ ಪಕ್ಷಿಯೊಳಗೀಂಕೃತಂ ವಾತನೊಳು |
ಝೋಂಕೃತಂ ತುಂಬಿಯೊಳು ಚೀತ್ಕೃತಂ ರಥಗಳೊಳು |
ಭೀಂಕೃತಂ ಬಾಣದೊಳು ಘೀಟ್ಕೃತಂ ಕಲಭದೊಳು ಬೃಂಹಿತಂ ಮದಗಜದೊಳು ||

ಕೇಂಕೃತ, ಝೋಂಕೃತ, ಚೀತ್ಕೃತ, ಭೀಂಕೃತ, ಘೀಟ್ಕೃತ, ಬೃಂಹಿತವೆಂಬ ಧ್ವನಿ ಸಮುದಾಯ ಅಲೆ ಅಲೆಯಾಗಿ ನಮ್ಮ ಕರ್ಣಪಟಲಕ್ಕೆ ತಾಕುತ್ತಲೆ, ಅವುಗಳ ಜನ್ಮಸ್ಥಳದ ಕಲ್ಪನೆ ತಕ್ಷಣ ನಮಗುಂಟಾಗುತ್ತದೆ. ಶಬ್ದಗಳ ಜೋಡಣೆ ಸ್ಮರಣೆಗೆ ಅನುಕೂಲವಾಗಿದೆಯಲ್ಲದೆ ' ಅಭಿನವ ಬಾಲಸರಸ್ವತಿ ' ಎಂಬ ಬಿರುದಾಂಕಿತನಾದ ಕವಿಯ ಕಲ್ಪನಾ ಚಾತುರ್ಯಕ್ಕೆ ಪ್ರತೀಕವಾಗಿದೆ.

(iii) **ಕವಿವರೇಣ್ಯ ದೇವೋತ್ತಮ** (ಕ್ರಿ.ಶ. ೧೬೦೦): ಇವನು ನಿರ್ಮಿಸಿದ "ನಾನಾರ್ಥ ರತ್ನಾಕರ" ತೃತೀಯ ಗ್ರಂಥ. ಇದರಲ್ಲಿ ೧೮೯ ವೃತ್ತಗಳಿವೆ. ಒಂದು ಶಬ್ದಕ್ಕೆ ಹಲವಾರು ಅರ್ಥ ಹೇಳುವುದೇ ಇದರ ವೈಶಿಷ್ಟ್ಯ. "ವಿಧಿ" ಶಬ್ದದ ನಾನಾರ್ಥ ಕೆಳಗೆ ವಿವರಿಸಲಾಗಿದೆ.

ಕಾಲದೊಳಂಬುಜಾನನೊಳುತ್ತಮನೊಳ್ ಕವಿಯೊಳ್ ವಿಧಾನದೊಳ್ |
ಮೇಳದೊಳಂ ವಿಚಕ್ಷಣನೊಳಂ ಶ್ರುತಿಯೊಳ್ ವಿಧಿ ಶಬ್ದಮಕ್ಕುಂ ||

'ವಿಧಿ' ಶಬ್ದಕ್ಕೆ ಏಳು ವಿವಿಧಾರ್ಥ ಹೇಳಲಾಗಿದೆ. ಶಬ್ದದ ಒತ್ತಡದ ಬಳಕೆಯಿಂದಾಗಿ ಅರ್ಥಕ್ಷೇತ್ರ ವಿಸ್ತಾರಗೊಳ್ಳುತ್ತದೆ. ಶಬ್ದದ ಅರ್ಥಸಂಪತ್ತಿಯಿಂದ ಭಾಷಾ ಸೊಗಸು, ಭಾಷಾ ಪ್ರೌಢಿಮೆ ಹೆಚ್ಚುತ್ತದೆ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಈ ಬಗೆಯ ಕೃಷಿ ಹಿಂದೆ ಆದದ್ದು ಶುಭ ಚಿಹ್ನೆಯ ಸಂಕೇತ. ಅದರ ಫಲವಾಗಿ ಇಂದು ಕನ್ನಡ ಸಾಹಿತ್ಯ ಭೂಮಿಯಲ್ಲಿ ಸೊಗಸು ಪ್ರೌಢಿಮೆಯ ಹುಲುಸಾದ ಬೆಳೆ ದೃಗ್ಗೋಚರವಾಗುತ್ತಿದೆ.

(iv) **ಕವಿಶ್ರೇಷ್ಠ ವಿಟ್ಠಲ** (ಕ್ರಿ.ಶ. ೧೬೦೦): ಇವನು ಅಮರಕೋಶಕ್ಕೆ "ಕನ್ನಡ ವ್ಯಾಖ್ಯಾನ" ಬರೆದಿರುವನು. ಪರಸ್ಪರ ಭಾಷಾ ಪರಿಚಯಕ್ಕೆ, ಹೊಕ್ಕು ಬಳಕೆಗೆ, ವೈದುಷ್ಯತೆಗೆ ಈ ಬಗೆಯ ಉಪಕ್ರಮ ಸ್ತುತ್ಯಾರ್ಹ. ಭಾಷೆಯ ಜೀವಂತಿಕೆಗೆ ವ್ಯಾಖ್ಯಾನಗಳು ಕಾರಣ. ಒಂದು ಭಾಷೆಯ ಸುಪ್ತ ಜ್ಞಾನವನ್ನು ಅನ್ಯಭಾಷೀಯರಿಗೆ ಪ್ರಕಟಿಸದೆ ಇದ್ದಲ್ಲಿ ಆ ಭಾಷೆ ಬಹುದಿನ ಬದುಕಿ ಬಾಳಲಾರದು. ಭಾಷೆ–ವ್ಯಕ್ತಿ ; ಭಾಷೆಗಳು–ಸಮಾಜ, ವ್ಯಕ್ತಿ–ಸಮಾಜ ತ್ಯಜಿಸಿ ಒಂಟಿಯಾಗಿ ಜೀವಿಸುವುದು ಹೇಗೆ ದುಸ್ಸಾಧ್ಯವೋ, ಹಾಗೆ ಒಂದು ಭಾಷೆ ಅನ್ಯಭಾಷೆಯ ಸಂಪರ್ಕವಿಲ್ಲದೆ, ಸಂಪದ್ಯುಕ್ತ ಭಾಷೆಯಾಗಿ ಬಹುದಿವಸ ಬಾಳಲಾರದು. ಕವಿ ವಿಟ್ಠಲನು ವ್ಯಾಖ್ಯಾನ ಬರೆಯದಿದ್ದಲ್ಲಿ "ಅಮರಕೋಶ" ನಿರ್ಜೀವ ಗ್ರಂಥವಾಗುತ್ತಿತ್ತು. ಈಗಲೂ ಅನೇಕ ಸಂಸ್ಕೃತ ಗ್ರಂಥಗಳು, ಹಳಗನ್ನಡ ಕಾವ್ಯಗಳು ಜನಸಾಮಾನ್ಯಕ್ಕೆ ಅರ್ಥವಾಗುವುದಿಲ್ಲ. ಸಾಹಿತ್ಯಕ್ಕೆ ಉಳಿಗಾಲವೆಂದರೆ ಆ ಸಾಹಿತ್ಯದ ಭಾಷೆಯ ವಿಪುಲವಾದ ವೆಗ್ಗಳವಾದ

ಬಳಕೆಯಿಂದ ಮಾತ್ರ ಸಾಧ್ಯ. ವ್ಯಾಖ್ಯಾನಗಳು ಇದನ್ನು ಸಾಧಿಸುವ ಸಾಧನಗಳಲ್ಲೊಂದಾಗಿವೆ.

(೨) **ಕನ್ನಡ-ಸಂಸ್ಕೃತ ನಿಘಂಟುಗಳು : ಕವಿ ತಿಲಕ ಚತುರಾಸ್ಯ ಬೊಮ್ಮರಸ** (ಕ್ರಿ.ಶ. ೧೪೫೦): ಇವನು ಕಟ್ಟಿದ "ಚತುರಾಸ್ಯ ನಿಘಂಟು" ಕನ್ನಡ ಹಾಗೂ ತದ್ಭವಗಳಿಗೆ ಸಂಸ್ಕೃತ ಅರ್ಥವನ್ನು ಹೇಳುವ ಏಕಮೇವಾದ್ವಿತೀಯ ಗ್ರಂಥ. ಈ ನಿಟ್ಟಿನಲ್ಲಿ ಚತುರಾಸ್ಯ ಬೊಮ್ಮರಸನು ನಡೆದುದೇ ಮಾರ್ಗವಾಗಿದೆ. ಕಾವ್ಯಗಳಲ್ಲಿ ತದ್ಭವಗಳ ಪ್ರಯೋಗ ಜನತಾಂತರ್ದೃಷ್ಟಿಗೆ ಸಾಕ್ಷಿ. ಸಾಹಿತ್ಯ, ಸಾಮಾನ್ಯ ಜನತೆಯ ಕೈದೀವಿಗೆಯಾಗಲೆಂಬ ಉಚ್ಚಧ್ಯೇಯವೇ ದೇಶಿ, ತದ್ಭವಗಳ ಬಳಕೆಯ ಹೆಚ್ಚಳಕ್ಕೆ ಕಾರಣ. ಈ ವಿಧದ ಸ್ವತಂತ್ರ ಬಳಕೆಯೇ ಭಾಷಾ ಬೆಳವಣಿಗೆಗೆ ಸಬಲವಾದ ಆಧಾರ. ಮಡಿವಂತಿಕೆಯಿಂದ ಭಾಷೆಗೆ ಕ್ಷಯ ಅಂಟುವ ಸಂಭವ. ಹಲವಾರು ಭಾಷೆಗಳನ್ನು ಕಲಿಯುವುದೇ ಇದಕ್ಕೆ ನಿವಾರಣೋಪಾಯ. ಈ ಹೊತ್ತಿಗೆಯಲ್ಲಿ ೧೩೦ ಪದ್ಯಗಳಿವೆ.

ಎಲರುಣಿಯೆನೆ ಭುಜಗಂ ನೆಲ ।
ಕಲನೆಂದೆನೆ ಲೋಭಿ ಕಾವನೆನೆ ಕಾಮುಂ ಕಾ ।
ದಲನೆಂದೆನೆ ನಲ್ಲಂ ನಾ ।
ಣಿಲಿಯೆನಲಭಿಮಾನಹೀನನೆಲೆ ಚತುರಾಸ್ಯ ॥.

ವಿವರಣೆಯ ಶೈಲಿ ಸುಲಭವೂ, ಸುಭಗವೂ ಆಗಿದೆ.

(೩) **ಹಳಗನ್ನಡ–ಕನ್ನಡ–ನಿಘಂಟುಗಳು : (i) ಕವಿ ಚಕ್ರವರ್ತಿ ರನ್ನ** (ಕ್ರಿ.ಶ. ೯೯೩) ರಚಿಸಿದ "ರನ್ನ ಕಂದ" ಪ್ರಾಚೀನತೆಯ ದೃಷ್ಟಿಯಿಂದ ನಿಘಂಟುಗಳಲ್ಲಿ ಅಗ್ರಸ್ಥಾನ ಗಳಿಸಿದೆ. ಕರ್ತಾರನು ನಿಘಂಟುಗಳ ಆವಶ್ಯಕತೆಯ ಕಹಳೆಯೂದಿ ಉತ್ತಮ ಆದರ್ಶ ಪ್ರಸ್ತಾಪಿಸಿದ್ದಾನೆ. ದೊರೆತ ಅಸಮಗ್ರ ಪ್ರತಿಯಲ್ಲಿ ೧೨ ಕಂದಗಳಿವೆ. ಈ ಕೃತಿಯು ಹಳಗನ್ನಡ ಶಬ್ದಗಳಿಗೆ ಕನ್ನಡ ಅರ್ಥವನ್ನು ಹೇಳುವ ಪ್ರಪ್ರಥಮ ನಿಘಂಟು. ಸ್ಮರಣಾನುಕೂಲಿಯಾಗಿ ಕಂದಸ್ವರೂಪದಲ್ಲಿ ವಿರಚಿತವಾಗಿದೆ.

ಸಣ್ಣದೆನಲ್ ಕಿಱಿದಕ್ಕುಂ ।
ಪಣ್ಣೆನೆ ಮಾಡೆಂಬ ವಾಚಿ ಬಱಿಯೆನೆ ವಂಶಂ ।
ಎಣ್ಣೆನೆ ಲೆಕ್ಕಿಪುದುಂ ಬಿಸು ।
ಗಣ್ಣೆನೆನಲ್ ಗೊರವನಪ್ಪುದೆಲೆ ಕವಿರತ್ನಾ ॥

ಐದು ಹಳಗನ್ನಡ ಶಬ್ದಗಳಿಗೆ ಬಹು ಸೊಗಸಾದ ಸಾರವತ್ತಾದ ಮಾರ್ಗದಲ್ಲಿ ಕನ್ನಡ ಅರ್ಥವನ್ನು ಹೇಳಲಾಗಿದೆ. ಒಂದು ಸಲ ಓದಿದ ಮೇಲೆ ಬಹುಕಾಲ ಸ್ಮರಣೆಯಲ್ಲಿರುವುದೇ ಇದರ ವೈಶಿಷ್ಟ್ಯ.

(ii) **"ಕರ್ಣಾಟಕ ಶಬ್ದಸಾರಂ"**: ನಿರ್ಮಾತೃವಿನ ಹೆಸರು ಅಜ್ಞಾತವಾಗಿದೆ. ವಚನರೂಪದಲ್ಲಿದ್ದರೂ ಛಂದೋಬದ್ಧವಾಗಿರುವುದೆ ಈ ಕೃತಿಯ ಹೆಚ್ಚಳಿಕೆ.

ಈ ಗ್ರಂಥದ ಕಾಲ ಕ್ರಿ.ಶ. ೧೪೦೦ ಇರಬಹುದೆಂದು " ಕರ್ಣಾಟಕ ಕವಿ ಚರಿತೆ " ಕಾರರಾದ ಶ್ರೀಯುತ ಆರ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ರೆ. ಎಫ್. ಕಿಟ್ಟೆಲ್‌ರು ಅದನ್ನೇ ಸಮರ್ಥಿಸಿದ್ದಾರೆ. ಗದ್ಯ ಸ್ವರೂಪದ ಈ ನಿಘಂಟು ವಿನಲ್ಲಿ ೬೭೬ ವಾಕ್ಯಗಳಿವೆ, ಹಾಗೂ ೧೪೧೬ ಶಬ್ದಗಳಿಗೆ ಅರ್ಥ ನಿರೂಪಣೆ ಮಾಡಲಾಗಿದೆ. ಈಶ್ವರನಿಗೆ ೩೩, ಪಾರ್ವತಿಗೆ ಐದು, ವೀರಭದ್ರನಿಗೆ ಐದು ಹೆಸರು ಗಳನ್ನು ಹೇಳಲಾಗಿದೆ. ಕೆಳಗಿನ ಉದಾಹರಣೆಯಿಂದ ಇದರ ಬಂಧ ಗೌರವ ವನ್ನರಿಯುವ :

" ಕಂದೆಂದುಂ ಕಱಿಕೆಯೆಂದುಂ ಕಳಂಕಂ, ಜತ್ತುಳಮೆಂದು ಫೇನಂ, ಕ್ರಾಬ್ಬಿರಮೆಂದು ಕಾಡ ಹೊನಲ್."

ಕಳಂಕ, ನೊರೆ, ಕಾಡ ಪ್ರವಾಹಕ್ಕೆ ಪರ್ಯಾಯವಾಗಿ ಹಳಗನ್ನಡ ಶಬ್ದ ಗಳನ್ನು ಹೇಳಲಾಗಿದೆ. ಪ್ರಾಚೀನ ನಿಘಂಟುಕಾರರು ತಮ್ಮ ಕೃತಿರಚನೆಯನ್ನು ಪದ್ಯ ಇಲ್ಲವೆ ಗದ್ಯ ಸ್ವರೂಪದಲ್ಲಿ ಮಾಡಿರುವುದು ಆಶ್ಚರ್ಯಾವಹವಾಗಿದೆ. ಅವರ ಕೃತಿನಿರ್ಮಾಣ ಕೌಶಲಕ್ಕೆ ಅಗಾಧ ಆದರ್ಶ ಪ್ರಸ್ಥಾಪಿತವಾಗಿದೆ.

(iii) **" ಕಬ್ಬಿಗರ ಕೈಪಿಡಿ "** ಅನಾಮಧೇಯನಿಂದ ರಚಿತವಾಗಿದೆ. ಸುಮಾರು ಕ್ರಿ. ಶ. ೧೪೦೦ರಲ್ಲಿ ಈ ಗ್ರಂಥ ಹುಟ್ಟಿರಬೇಕೆಂದು ಕವಿಚರಿತೆಕಾರರು ಅಭಿಪ್ರಾಯಪಟ್ಟಿದ್ದಾರೆ. ಕಂದವೃತ್ತಗಳ ಸ್ವರೂಪದಲ್ಲಿದ್ದು, ೯೯ ಪದ್ಯಗಳಿವೆ. ಇದರ ಬಂಧ ಸಾಮಾಗ್ರಿಯನ್ನರಿಯಲು ಕೆಳಗಿನ ಕಂದವನ್ನು ಪರಾಮರ್ಶಿಸುವ :—

ಪುಟ್ಟಿಗೆಯೆನಲ್ ಮುದ್ದಾನ್ನಂ |
ಮಟ್ಟಿಗದನೆನೆ ಬಿಟ್ಟಿನಟ್ಟಿದಂ ಕೆಟ್ಟನೊಳಂ |
ಮೊಟ್ಟಿಗದನೆನೆ ಪೊಡವಟ್ಟನೊ |
ಳುಟ್ಟಿಗದನೆನೆ ಪ್ರೀತಿವಟ್ಟನೊಳ್ ತಳೆದಿರ್ಕುಂ ||

ಪ್ರಾಸಬದ್ಧವಾದ ರಚನೆ ಆಕರ್ಷಣೀಯವಾಗಿದೆ. ಆನಂದದಾಯಕವಾಗಿದೆ.

(iv) **ಕವಿತಿಲಕ " ಲಿಂಗಮಂತ್ರಿ "ಯು** ಸೃಷ್ಟಿಸಿದ " ಕಬ್ಬಿಗರ ಕೈಪಿಡಿ" ವಾರ್ಧಕ–ಷಟ್ಪದಿಯ ಸ್ವರೂಪದಲ್ಲಿದ್ದು ೧೦೦ ಪದ್ಯಗಳನ್ನೊಳಗೊಂಡಿದೆ. ಕೆಳಗಿನ ಪದ್ಯಭಾಗದಲ್ಲಿ ನಿಘಂಟು ರಚನೆಯ ರೀತಿ, ಕಾರಣಗಳನ್ನು ಸರಳವಾಗಿ ನಿರೂಪಿಸ ಲಾಗಿದೆ.

" ಮಿಸುಪ ಗೂಢ ಪದ ಪ್ರಯೋಗದೊಳ್ಪಂ ರಸಮ
ನೊಸರ್ವಚ್ಚಗನ್ನಡದ ಚೆಲ್ವುಮಂ ತದ್ಭವದ ಬೆಸುಗೆಯಂ
....
....
....
ಉಸಿರೆಂದು ಕೋವಿದರ್ ಬೆಸಸಲಾನಿದಕೆ ಶೋ
ಭಿಸುವ ಕಬ್ಬಿಗರ ಕೈಪಿಡಿಯೆಂದು ಪೆಸರನಿತ್ತೊಸೆದು ಪೇಳ್ದಪೆನು "

ಗೂಢ ಪದ ಪ್ರಯೋಗದ ಗುಣೋತ್ಕರ್ಷವನ್ನು, ಅಚ್ಚಗನ್ನಡದ ರಸೋತ್ಕರ್ಷಕ ಸೌಂದರ್ಯವನ್ನು, ತದ್ಭವಗಳ ಚಿರ ಪರಿಚಯವನ್ನು, "ಕಬ್ಬಿಗರ ಕೈಪಿಡಿ" ಯಿಂದ ವ್ಯಕ್ತಪಡಿಸಲಾಗಿದೆ. ಪಂಡಿತರ ಬಿನ್ನಹದ ಮೇರೆಗೆ ತಾನು ರಚಿಸಿದುದಾಗಿ ಕವಿ ಹೇಳಿದ್ದಾನೆ.

"ಮಣಿಯೆನೆ ನಮಸ್ಕಾರಕ್ಕೆ ಪೆಸರಕ್ಕುಂ"

'ಮಣಿ' ಎಂಬ ಹಳಗನ್ನಡ-ಶಬ್ದಕ್ಕೆ ಕನ್ನಡ ಅರ್ಥವನ್ನು ಹೇಳಿದ ಬಗೆ ಮೇಲಿನ ಸಾಲಿನಲ್ಲಿ ಸ್ಫುಟವಾಗಿ ಪ್ರಕಟಗೊಂಡಿದೆ.

(v) **ಕವಿ ಲಲಾಮ "ವಿರಕ್ತ ತೋಂಟದಾರ್ಯ"ರು** (ಕ್ರಿ.ಶ. ೧೫೬೦) ವಿರಚಿಸಿದ "ಕರ್ನಾಟಕ ಶಬ್ದಮಂಜರಿ" ಯು ವಾರ್ಧಕ ಷಟ್ಪದಿಯ ಸ್ವರೂಪ ದಲ್ಲಿದ್ದು ೧೨೦ ಪದ್ಯಗಳಿಂದ ಮೈಗೂಡಿದೆ. ಅಚ್ಚಗನ್ನಡ, ಗೂಢಪದ, ತತ್ಸಮ, ತದ್ಭವಗಳನ್ನು ಕುರಿತು ಯೋಗ್ಯ ತಿಳುವಳಿಕೆಯುಂಟಾಗಲೆಂಬ ಸದುದ್ದೇಶದಿಂದ, ಪೂರ್ವ ಕವೀಶ್ವರರು ತೋರಿದ ಸನ್ಮಾರ್ಗವನ್ನನುಸರಿಸಿ ಇದನ್ನು ರಚಿಸಲಾಗಿದೆ ಯೆಂದು ಕವಿವರ್ಯನು ಹೇಳಿದ್ದಾನೆ.

"ತುರುವರ್ ಗೋವರ್ಕಳೆನೆ...." ಎಂಬ ರೀತಿಯಲ್ಲಿ ಹಳಗನ್ನಡ ಶಬ್ದಗಳಿಗೆ ಅರ್ಥನಿರೂಪಣೆ ಮಾಡಲಾಗಿದೆ.

(vi) **ಕವಿಶ್ರೇಷ್ಠ "ಸೂರ್ಯ" ನು** (ಕಿ. ಶ. ೧೬೪೦) ಸೃಷ್ಟಿಸಿದ "ಕವಿ ಕಂಠಹಾರ" ಕಂದಸ್ವರೂಪದಿಂದ ಮೈವೆತ್ತಿದೆ. ಇದು ೨೭೧ ಕಂದ ಪದ್ಯಗಳಿಂದ ಸಂಪದ್ಭರಿತವಾಗಿದೆ. ಪ್ರಾಚೀನ ಕವಿಗಳ ಸತ್ಪಥವನ್ನೇ ಅನುಕರಿಸಿ ಅತ್ಯುತ್ತಮ ಕನ್ನಡ-ಶಬ್ದಗಳೆಂಬ ಮಣಿ ನಿಚಯದಿಂದ ರಂಜಿಸುವ ಕಂಠಹಾರವನ್ನು ಸಿದ್ಧ ಗೊಳಿಸಿದುದಾಗಿ ಕವಿಯು ಆತ್ಮ ಶ್ಲಾಘನೆಯನ್ನು ಮಾಡಿಕೊಂಡಿದ್ದಾನೆ. ವಿಮರ್ಶ ಕರು ಕೆಳಗಿನ ಮಣಿಕಂದವನ್ನು ಪರೀಕ್ಷಿಸಲಿ:—

ಸಿರಿಯರಸನರಲ ಪೊಡೆಯಂ |
ಪರಿಕಿಸೆ ತಾಂ ಸೌರಿಯೆಂದುಮಿಂಗಡಲಳಿಯಂ |
ನೆರೆ ರಕ್ಕಸ ಬೇರಂ ತಾ |
ವರೆಗಣ್ಣಂ ಕಾವನೈಯ್ಯನುಂ ಕಾರೊಡಲಂ ||

ವಿಷ್ಣುವಿನ ಪರ್ಯಾಯ ನಾಮಗಳನ್ನು ಕಂದ ಪದ್ಯದ ಚೌಕಟ್ಟಿನಲ್ಲಿ ಬಹು ರಮ್ಯವಾಗಿ ನಿಯೋಜಿಸಲಾಗಿದೆ.

(vii) **"ಕರ್ನಾಟಕ ನಿಘಂಟು":**—ನಿರ್ಮಾತೃ ಅಜ್ಞಾತಕವಿ. ೧೬ನೆಯ ಶತಮಾನದಲ್ಲಿ ಹುಟ್ಟಿರಬೇಕೆಂದು ಊಹೆ. ಇದರಲ್ಲಿ ೯೯ ಕಂದ ವೃತ್ತಗಳಿವೆ: ಅರ್ಥ ವಿವರಣೆ ಪರಿಣಾಮದಾಯಕವಾಗಿದೆ.

"ಪಕ್ಕಿ ಪಕ್ಷಿಯೆ, ರಕ್ಕೆ ರಕ್ಷೆಯೆ, ಸಕ್ಕದಂ ಸುರಭಾಷಿತಂ...." "ಭಟ್ಟಾ

ಕಳಂಕಯತೀಂದ್ರಾಯ ನಮಃ" ಎಂದು ಹೇಳಿಕೊಂಡಿರುವುದರಿಂದ ಇದರ ಕರ್ತೃ ಭಟ್ಟಾಕಳಂಕನ (ಕ್ರಿ. ಶ. ೧೬೦೪) ಸಮಕಾಲೀನ ಅಥವಾ ಉತ್ತರ ಕಾಲೀನನಾಗಿರಬೇಕು.

(viii) **"ಶೃಂಗಾರ" ಕವಿ** (ಕ್ರಿ. ಶ. ೧೬೦೦) ರಚಿಸಿದ "ಕರ್ನಾಟಕ ಸಂಜೀವನ" ವಾರ್ಧಕ ಷಟ್ಪದಿಯ ಛಂದಸ್ ಸ್ವರೂಪದಲ್ಲಿದ್ದು ೩೫ ಪದ್ಯಗಳನ್ನೊಳಗೊಂಡಿದೆ. ಱಟ, ಕುಳ, ಕ್ಷಳಗಳಿಂದ ಕೂಡಿದ ಶಬ್ದಗಳಿಗೆ ಅರ್ಥ ವಿವರಿಸಲಾಗಿದೆ.

"ಸೇವಕಂ ದಾಸಿಯುಂ ತೊಟ್ತಿಕ್ಕುಂ...."

ಅಚ್ಚಗನ್ನಡದಲ್ಲಿ ಅರ್ಥ ಹೇಳುವುದರಿಂದ, ಲಕ್ಷಣಕ್ಕೆ ಸುಸ್ವರೂಪತೆ, ಸಾರ್ಥಕತೆ ಲಭಿಸುತ್ತದೆಂಬಾಶಯ ಕವಿಯ ಶುದ್ಧಗನ್ನಡ ಪ್ರೇಮಕ್ಕೆ ಪರಿಶುದ್ಧವಾದ ನಿದರ್ಶನ. "ಕನ್ನಡದೊಳೊರೆವೊಡಿದು ಲಕ್ಷಣಕೆ ಜೀವನಂ."

(IX) **ಮಹಾ ವೈಯಾಕರಣಿಯಾದ "ಕೇಶಿರಾಜ"ನು** (ಕ್ರಿ.ಶ. ೧೨೬೦) ರಚಿಸಿದ ಸರಸತಿಗೆರಡನೆಯ ಬೀಣೆಯಂತಿರುವ "ಶಬ್ದಮಣಿ ದರ್ಪಣ" ತೋರಿಕೆಗೆ ಕರ್ಣಾಟಕ ಲಕ್ಷಣ ಶಬ್ದಶಾಸ್ತ್ರವಾಗಿ ಕಂಡರೂ, ನಿಘಂಟುಗಳು ಸಾಧಿಸುವ ಮಹತ್ಕಾರ್ಯವನ್ನೂ ನೆರವೇರಿಸಿದೆ. ಶಾಸ್ತ್ರ, ಗ್ರಂಥಗಳ ನಿರ್ಮಾಣದಲ್ಲಿ ಕೈಚಳಕ ತೋರಿಸಿದ ಕೇಶಿರಾಜನು ನಿಘಂಟುವೊಂದನ್ನು ಪ್ರತ್ಯೇಕವಾಗಿ ಏಕೆ ರಚಿಸಿರಬಾರದು? ಈತನು ಬರೆದಿರಬಹುದಾದ ಬೇರೆ ಐದು ಗ್ರಂಥಗಳು ಬೆಳಕಿಗೆ ಬಂದರೆ ಸತ್ಯಾಂಶ ತಿಳಿಯಬಹುದಾಗಿದೆ. ಶಬ್ದಗಳೆಂಬ ಅಮೂಲ್ಯ ಮಣಿಬಂಧದಿಂದ ನಿರ್ಮಿತವಾದ ದರ್ಪಣ—ಶಬ್ದಮಣಿದರ್ಪಣ. ಇದರಲ್ಲಿ ವ್ಯಾಕರಣಕ್ಕೆ ಸಂಬಂಧಿಸಿದ ಎಂಟು ಸಂಧಿಗಳಿದ್ದು ಕೊನೆಯಲ್ಲಿ "ಪ್ರಯೋಗಸಾರವೆಂಬ ಶಬ್ದಾರ್ಥ ನಿರ್ಣಯಂ" ಎಂಬ ಹೆಸರಿನ ಒಂಬತ್ತನೆಯ ಸಂಧಿಯೂ ಇದೆ. ಪೂರ್ವಕಾಲೀನ ಕವಿಗಳು ತಮ್ಮ ಕಾವ್ಯಗಳಲ್ಲಿ ಪ್ರಯೋಗಿಸಿದ ಗೂಢಪದಗಳ ಅರ್ಥವನ್ನು ಈ ಕೊನೆಯ ಸಂಧಿಯಲ್ಲಿ ಕೊಟ್ಟಿದ್ದಾನೆ. ಇದರಲ್ಲಿ ೧೯೧ ಪದಗಳ ಅರ್ಥನಿರೂಪಣೆ ಮಾಡಲಾಗಿದೆ. ಶಬ್ದಜ್ಞನಾದ ಕೇಶಿರಾಜನ ನಡು ಬಡವಲ್ಲ. ಆತನು ವ್ಯಾಕರಣ ಮತ್ತು ನಿಘಂಟುಗಳ ಭಾರವನ್ನು ಏಕಕಾಲಕ್ಕೆ ಎತ್ತುವ ಸಾಹಸ ಮಾಡಿದ್ದು ಇದಕ್ಕೆ ಸಾಕ್ಷಿ.

ಅಪರಿಮಿತ ವಿದ್ಯರೆನಿಸಿ |
ರ್ದಪುರಾಣ ಕವೀಂದ್ರರಖಿಳ ಕಾವ್ಯಂಗಳ ಗೂ ||
ಢಪದ ಪ್ರಯೋಗಮಂ ನೆರೆ |
ಪಿ ಪದಾರ್ಥಂಗಳನಣಂ ಮನಂಬುಗೆ ಪೇೞ್ವೆಂ ||

ಲಕ್ಷಣ ಶಿಕ್ಷಾಚಾರ್ಯನೆನಿಸಿದ ಕೇಶಿರಾಜನು "ಅಣಂ ಮನಂಬುಗೆ ಪೇೞ್ವೆಂ" ಎಂದು ಹೇಳುವುದರಲ್ಲಿ, ಕವಿಯ ಸಹೃದಯತೆಗೆ, ಭಾಷಾಪ್ರೇಮಕ್ಕೆ ದ್ಯೋತಕವಾಗಿದೆ. ಸಾಹಿತ್ಯ ಪ್ರಯೋಜನಕಾರಿಯಾಗಲೆಂಬ ಕಳಕಳಿ ಪ್ರಕಟವಾಗಿದೆ. ಕೆಲವು ಶಬ್ದಗಳ ಅರ್ಥವನ್ನು ಪರಾಂಬರಿಸುವ :—

ಸೈಪೆಂದು ಪುಣ್ಯಂ, ನಿಕ್ಕುವಮೆಂದು ನಿಶ್ಚಯಂ।
ನನಸೆಂದು ದಿಟಂ, ಮುನ್ನೀರೆಂದು ಸಮುದ್ರಂ।
ಮೊನೆಯೆಂದು ಕಾಳಗಂ, ಪಂಡಿತವಕ್ಕಿಯೆಂದುಂ
ಕನ್ನಡ ವಕ್ಕಿಯೆಂದುಂ ಗಿಳಿ ॥

ಏಕ, ದ್ವಿ, ತ್ರಿ, ಚತುಃ ಪಂ।
ಚಾಕಲಿತಾರ್ಥಂಗಳಾಗಿ ೞನೊಳವು ನಿಸ।
ರ್ಗಾಕೃತಿಯಿಂದವನಾದಿ ಮ।
ಹಾಕವಿಕೃತಿ ದೃಷ್ಟಮಂ ನಿರಾಕುಳಮುಸಿರ್ವೆಂ॥

'ನಿರಾಕುಳಮುಸಿರ್ವೆಂ' ನೆಂಬ ಆತ್ಮವಿಶ್ವಾಸದಿಂದ "ೞ" ಅಕ್ಷರವನ್ನೊಳಗೊಂಡ ಶಬ್ದಗಳ ಪಟ್ಟಿಯೊಂದನ್ನು ಕೊಟ್ಟು ಏಕ, ದ್ವಿ, ತ್ರಿ, ಚತುಃ, ಪಂಚಾರ್ಥಗಳನ್ನು ಅನುಕ್ರಮವಾಗಿ ನಿರೂಪಿಸಿರುವನು.

ಅಗೞ್ತೆಯೆಂದು ಖನನಂ; ಅೞ್ತಿಯೆಂದು ಪ್ರೀತಿ; ಉಂಬೞಿಯೆಂದು ಕೊಡುಗೆ.
ನೆಗೞ್ತೆಯೆಂದು ಪ್ರಸಿದ್ಧಿಯುಂ ಚರಿತ್ರಮುಮಕ್ಕುಂ.
ಮೊೞಗೆಂದು ಮುಗಿಲ ದನಿಯುಂ ಒಂದು ಮರದ ಪೆಸರುಂ ವಾದನವಿಧಿಯುಮಕ್ಕುಂ.
ಕೀೞೆಂದು ಒರೆಯಿಲ್ಲದ ಬಂಗಾರಮುಂ, ತುರಗಮುಖದ ಲೋಹಮುಂ, ಕ್ಷೀಣಕುಲನುಂ, ಕೆೞಗುಮಕ್ಕುಂ.

ಮಹಾಕವಿ ಹರಿಹರನು ಪ್ರಾಸ ಮತ್ತು ಅರ್ಥ ವಿಷಯದಲ್ಲಿ ೞ, ಕುಳ, ಕ್ಷಳಗಳ ಗೊಂದಲವೇ ಬೇಡವೆಂದು ಕಂಠೋಕ್ತವಾಗಿ ಹೇಳಿದ್ದನು. ತತ್ಪರಿಣಾಮವಾಗಿ ಈ ಸಂಪ್ರದಾಯಕ್ಕೆ ಬಂದೊದಗಿದ ಶೈಥಿಲ್ಯವನ್ನು ನಿವಾರಿಸಲೋಸುಗ, ಕೇಶಿರಾಜನು ಇವುಗಳ ಪ್ರಾಸ ಮತ್ತು ಅರ್ಥವಿಷಯವು ನಿಯಮಬದ್ಧವೆಂದು ಸಾರಿದ್ದಾನೆ. ಇದಲ್ಲದೆ ಧಾತುಪ್ರಕರಣದಲ್ಲಿ "ಕ್ರಿಯಾರ್ಥೋ ಧಾತುಃ" ಎಂದಾರಂಭಿಸಿ ೯೬೮ ಧಾತುಗಳ ವ್ಯುತ್ಪತ್ತಿ, ಅರ್ಥ ಸಂಪತ್ತಿಯನ್ನು ವಿವರಿಸಿ, ಕನ್ನಡ ಸಾಹಿತ್ಯ ಸಮೃದ್ಧಿಗೆ, ಭಾಷಾ ಬೆಳವಣಿಗೆಗೆ ಅತ್ಯದ್ಭುತ ಸೇವೆ ಸಲ್ಲಿಸಿರುವನು. ನಿಘಂಟುಕಾರರು ಎತ್ತಲಾರದ ಹೊರೆಯನ್ನೆತ್ತಿ ಅವರಿಗೆ ಗುರುವಾಗಿ ತಾನೆ ಲೋಕದ ಲಾಕ್ಷಣಿಕನಂತೆ ಮೆರೆದಿದ್ದಾನೆ. ಕನ್ನಡ ಸಾಹಿತ್ಯಕ್ಕೆ ಅನುಪಮ ಕಾಣಿಕೆ ನೀಡಿದ್ದಾನೆ. ಇದಲ್ಲದೆ ಅಕಾರಾದಿ ವೈದ್ಯ ನಿಘಂಟುಗಳೂ ಹಲವಾರು ಟೀಕೆಗಳೂ ಇವೆ.

(೪) ಆಧುನಿಕ ನಿಘಂಟುಗಳು : (i) ಆಧುನಿಕ ನಿಘಂಟುಗಳೆಲ್ಲಕ್ಕೂ ಮಾತೃಸ್ಥಾನದಲ್ಲಿರುವ ರೆವರೆಂಡ ಎಫ್. ಕಿಟ್ಟೆಲ್‌ರು (ಕ್ರಿ. ಶ. ೧೮೯೪) ರಚಿಸಿದ ಕನ್ನಡ-ಇಂಗ್ಲಿಷ್ ನಿಘಂಟು ೧೭೫೨ ಪುಟಗಳುಳ್ಳ ಘನಹೊತ್ತಿಗೆ. ಬಾಸೆಲ್ ಎವ್ಯಾಂಜೆಲಿಕಲ್ ಮಿಷನ್ ಸಂಸ್ಥೆಯವರು, ಬ್ರಿಟಿಷ್ ಸರಕಾರ ಸ್ಥಾಪಿಸಿದ ಇಂಡಿಯಾ ಆಫೀಸ್‌ನಿಂದ ಹಾಗು ಮೈಸೂರು ಸರಕಾರದಿಂದ ಧನಸಹಾಯ ಪಡೆದು ಈ ನಿಘಂಟು ಪ್ರಕಟಪಡಿಸಿದ್ದು ಸ್ತುತ್ಯಾರ್ಹ. ಅಂದಿನ ಮೈಸೂರು ಸರಕಾರ ನಿಘಂಟು ಪ್ರಕಟನೆ

ಯಲ್ಲಿ ತೋರಿದ ಆಸಕ್ತಿ ಸ್ಮರಣೀಯ. ಶ್ರೀಯುತ ಕಿಟ್ಟೆಲ್‌ರು ಕನ್ನಡ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನಮಾಡಿ, ಅಲ್ಲಿಯ ಶಬ್ದಪ್ರಯೋಗವನ್ನು ಕರತಲಾಮಲಕಮಾಡಿಕೊಂಡೇ ಈ ಮಹತ್ಕಾರ್ಯಕ್ಕೆ ಕೈಹಾಕಿದ್ದಾರೆ. ಶಬ್ದದ ಅರ್ಥ ವಿವರಣೆಯನ್ನು ಸೂಕ್ಷ್ಮಾತಿಸೂಕ್ಷ್ಮವಾಗಿಯೂ, ಪೂರ್ವಕವಿ ಪ್ರಯೋಗಗಳ ನಿದರ್ಶನಗಳೊಂದಿಗೂ, ಸಂದರ್ಭೋಚಿತವಾದ ಗಾದೆಮಾತುಗಳ ಉದಾಹೃತದೊಂದಿಗೂ ಮಾಡಲಾಗಿದೆ, "ಅ" ಅಕ್ಷರದ (೧೭) ಅರ್ಥವನ್ನು ಬಹು ವಿಸ್ತಾರವಾಗಿಯೂ ಶಾಸ್ತ್ರಬದ್ಧವಾಗಿಯೂ ಎರಡು ಪುಟಗಳಷ್ಟು ಕೊಟ್ಟಿರುವುದು ಕನ್ನಡ ಭಾಷೆಯ ಪ್ರೌಢಿಮೆಗೆ ಸಾಕ್ಷಿಯಾಗಿದೆ. ನಿಘಂಟುಕಾರರು ತಳೆಯಬಹುದಾದ ವಿಶಾಲಹೃದಯ, ಪಾಂಡಿತ್ಯ, ಕಷ್ಟಸಹಿಷ್ಣುತೆಗೆ ಆದರ್ಶವಾಗಿದೆ. ಕೆಲವು ಶಬ್ದಾರ್ಥಗಳನ್ನು ಅನುಲಕ್ಷಿಸುವ :

ಅ=The first letter of the alphabet.

ಅ ಆ ಬಾರದಿದ್ದರೆ ಅಮರವಾದರೂ ಹೇಟು ! ಎಮ್ಬನ್ತೆ.

ನಿನ್ನೆ=Yesterday. ನಿನ್ನೆ ಉಣ್ಡದ್ದು ಬಯಸೋದು ಯಾಕೆ ?

ಪಂಚತ್ವ=Five foldness; Death

ಭೀಮ, ಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್.

ಈ ನಿಘಂಟು ಅರ್ಥಶಕ್ತಿಯ ಸಂಚಯವಾಗಿದೆ, ವ್ಯಾಕರಣ ಪ್ರಕ್ರಿಯೆಗಳ ಪ್ರಯೋಗಶಾಲೆಯಾಗಿದೆ, ಅನುಭವದ ಖನಿಯಾಗಿದೆ, ಮಹಾಕಾವ್ಯಗಳ ತವರಾಗಿದೆ.

ಕನ್ನಡ-ಸಾಹಿತ್ಯ ದೇವಿಯ ಅಡಿದಾವರೆಗೆ ಅರ್ಪಿಸಿದ ಭಕ್ತಿ ಕುಸುಮಗಳಂತಿರುವ ಇನ್ನುಳಿದ ನಿಘಂಟುಗಳ ಪಟ್ಟಿಯನ್ನು ಕೆಳಗೆ ಕೊಡಲಾಗಿದೆ:

(೧) ಕನ್ನಡ–ಇಂಗ್ಲಿಷ್ ನಿಘಂಟು; ಕರ್ತೃ ರೆವರೆಂಡ ರೀವ್ಸ್.

(೨) ಗಂಗಾಧರ ಮಡಿವಾಳೇಶ್ವರ ಕನ್ನಡ ನಿಘಂಟು.

(೩) ಶ್ರೀ ಸಿದ್ಧಾಂತಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಅಮರಕೋಶಕ್ಕೆ ಬರೆದ ವ್ಯಾಖ್ಯೆ.

(೪) ಶ್ರೀ ಗುರುರಾವ ವಿಠ್ಠಲ್ ಮೊಹರೆಯವರು ಬರೆದ "ಶಬ್ದಸಂಗ್ರಹ."

(೫) ಶ್ರೀ ಎಚ್. ವಿ. ರಮಾಕಾಂತ ರಾವ್‌ರ 'ಕನ್ನಡ-ಕನ್ನಡ ಕೋಶ.'

(೬) 'ಕನ್ನಡ ನಿಘಂಟು' Published by the Mangalore Trading Association Ltd., Mangalore.

(೭) ಶ್ರೀ ಗಂ. ಮ. ತೂರಮರಿಯವರ "ಕರ್ನಾಟಕ ಶಬ್ದ ಮಂಜರೀ ಕೋಶ."

(೮) ಶ್ರೀ ಟಿ. ಸುಬ್ಬರಾಯಶಾಸ್ತ್ರಿಗಳ "ಶಬ್ದಾರ್ಥ ಕಲ್ಪದ್ರುಮ."

(೯) ಶ್ರೀ ಶಿವರಾಮಕಾರಂತರ "ಸಿರಿಗನ್ನಡ ಅರ್ಥಕೋಶ."

(೧೦) ಶ್ರೀ ಪಂಡಿತ ಜೆ. ಎ. ಕವಲಿಯವರ "ಸಚಿತ್ರ ಕನ್ನಡ-ಕನ್ನಡ-ಕಸ್ತೂರಿಕೋಶ" (ಇದು ಚಿತ್ರಗಳಿಂದೊಡಗೂಡಿ ವೈಶಿಷ್ಟ್ಯಪೂರ್ಣವಾಗಿದೆ).*

ಇವಲ್ಲದೆ ದ್ರಾವಿಡ ಭಾಷೆಗಳ ಇನ್ನಿತರ ನಿಘಂಟುಗಳು, ಗಾದೆಗಳು, ಮೈಸೂರು ವಿದ್ಯಾ ಇಲಾಖೆಯವರಿಂದ ಪ್ರಕಟಗೊಂಡ ಗ್ರಂಥಗಳು, ಗ್ರಾಮ್ಯ ಶಬ್ದಗಳು ಎಲ್ಲವೂ ಕನ್ನಡಶಬ್ದಗಳ ಅರ್ಥಸಂಪತ್ತನ್ನು, ಅರ್ಥವ್ಯಾಪ್ತಿಯುನ್ನು ಹೆಚ್ಚಿಸಲು ಸಹಕಾರಿಯಾಗಿವೆ.

ಕೊನೆಯದಾಗಿ ಪ್ರಾಚೀನ ಕವಿಗಳು ರಚಿಸಿದ ನಿಘಂಟುಗಳ ವೈಲಕ್ಷಣ್ಯಗಳನ್ನು ಕೆಳಗೆ ಕಂಡಂತೆ ಕ್ರೋಢೀಕರಿಸಬಹುದು.

(೧) ಶಬ್ದಾರ್ಥವನ್ನು ನೇರವಾಗಿ ಹೇಳದೆ ಕಾವ್ಯಮಯವಾಗಿ ವಿವರಿಸುವುದು.

(೨) ಸೂತ್ರಪ್ರಾಯವಾಗಿ ಹೇಳುವ ಉದ್ದೇಶದಿಂದ ವಿಶೇಷವಾಗಿ ಕಂದವೃತ್ತಗಳ ಛಂದಸ್ ಸ್ವರೂಪದಲ್ಲಿ ನಿಘಂಟುಗಳನ್ನು ರಚಿಸಿರುವುದು.

(೩) ಸ್ಮರಣಾನುಕೂಲಿಯಾಗಿರಲೆಂಬ ಆಶಯದಿಂದ ಒಂದೊಂದು ಪದ್ಯದಲ್ಲಿ ಹಲವಾರು ಶಬ್ದಗಳನ್ನು ಪ್ರಾಸಬದ್ಧವಾಗಿ ಸಂಯೋಜಿಸಿ, ರಮ್ಯವಾದ ರೀತಿಯಲ್ಲಿ ಅರ್ಥ ವಿವರಿಸಿದ್ದು.

ಶ್ರೀ ಎಫ್. ಕಿಟ್ಟೆಲ್‌ರನ್ನು ಹೊರತುಪಡಿಸಿ ಆಧುನಿಕ ನಿಘಂಟುಕಾರರು ಕೇವಲ ಅರ್ಥವನ್ನು ನೇರವಾಗಿ ಹೇಳುವ ನೀತಿಯನ್ನನುಸರಿಸಿದ್ದಾರೆ. ಶ್ರೀಯುತ ಕವಲಿಯವರು ಸಚಿತ್ರವಾಗಿ ನಿಘಂಟುವನ್ನು ರಚಿಸಿದ್ದು ಈ ದಿಸೆಯಲ್ಲಿ ಪ್ರಗತಿಪರ ಹೆಜ್ಜೆಯಾಗಿದೆ. ವಿಜ್ಞಾನದ ಹಲವಾರು ಬಗೆಯ ಶೋಧಗಳಿಂದಾಗಿ, ಪ್ರಜಾಪ್ರಭುತ್ವ ಪ್ರಣಾಳಿಕೆಯ ಅನುಸರಣೆಯಿಂದಾಗಿ, ಸಂಸ್ಕೃತಿಯ ಬಹುಮುಖ ವಿಸ್ತರಣೆಯಿಂದಾಗಿ ಇಂದಿನ ಪರಿಸ್ಥಿತಿಗೆ ತಕ್ಕಂತೆ ಅತ್ಯಾಧುನಿಕ ನಿಘಂಟುವೊಂದು ನಿರ್ಮಾಣವಾಗಬೇಕಾದುದು ಅವಶ್ಯವಾಗಿದೆ. ಇದನ್ನು ಮನದಂದು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಹಾಗು ಮೈಸೂರು ರಾಜ್ಯಸರಕಾರ ಪರಸ್ಪರರು ಒಂದು ಒಪ್ಪಂದದ ಮೇರೆಗೆ **"ಕನ್ನಡ-ಕನ್ನಡ ನಿಘಂಟು"** ಮತ್ತು **"ಕನ್ನಡ ವಸ್ತುಕೋಶ"** ಎರಡನ್ನು ಪ್ರತ್ಯೇಕವಾಗಿ ಸಂಪಾದಿಸಿ ಪ್ರಕಟಿಸುವ ಸಾಹಸೋದ್ಯ

---

* ಶ್ರೀ ನರಸಿಂಹರಾಜ ಕರ್ಣಾಟಕ ಭಾಷಾಕರಂ-(೯೩೫)-ಪಂಡಿತ ಜೆ. ರಘುಪತ್ಯಾಚಾರ್ಯ. —ಸಂ.

ಮಕ್ಕೆ ತೊಡಗಿದ್ದುದು ಶುಭಚಿಹ್ನೆ. ಕೆಲವು ವರ್ಷಗಳಲ್ಲಿಯೇ ಈ ಕನಸು ನನಸಾಗಿ ಕನ್ನಡಿಗರ ಕೈಗೆ ಈ ಘನ ಹೊತ್ತಿಗೆಗಳು ಬಂದು ನಮ್ಮ ನುಡಿಯ ಬಲ್ಮೆ ಬೆಳವಣಿಗೆ ಜೀವಂತಿಕೆಯ ಪರಿಚಯ್ಯವಾಗುವುದಲ್ಲದೆ ನಾಡಿನ ಸಂಸ್ಕೃತಿಯ ಸತ್ವ ಪ್ರಕಾಶ ಎಲ್ಲೆಡೆಯೂ ಪಸರಿಸುವುದು.

ವ್ಯಾಕರಣದಿಂದೆ ಪದಮಾ |
ವ್ಯಾಕರಣದ ಪದದಿನರ್ಥಮರ್ಥದೆ ತತ್ವಾ |
ಲೋಕಂ ತತ್ವಾಲೋಕದಿ |
ನಾಕಾಂಕ್ಷಿಪ ಮುಕ್ತಿಯಕ್ಕುಮದೆ ಬುಧರ್ಗೆ ಫಲಂ ||

ವ್ಯಾಕರಣ ವಿದುಷನಾದ ಕೇಶಿರಾಜನು ಮೇಲಿನ ಕಂದದಲ್ಲಿ ವ್ಯಾಕರಣ ಜ್ಞಾನದಿಂದಾಗುವ ಫಲವನ್ನು ಹೇಳಿದ್ದರೂ, ತತ್ವಾಲೋಕನದೃಷ್ಟಿ ಕೇವಲ ಅರ್ಥ ದಿಂದ ಮಾತ್ರ ಸಾಧ್ಯವೆಂಬುದು ಅಷ್ಟೇ ಸ್ಪಷ್ಟವಾಗಿ ವೇದ್ಯವಾಗುತ್ತದೆ. ನಿಘಂಟು ಗಳ ಜ್ಞಾನದಿಂದಲೂ ಇದೇ ಫಲ ಲಭ್ಯವಾಗುವುದಿಲ್ಲವೆ?

—ಶಾಂತಯ್ಯ ಕೆಂಪಯ್ಯ ಮಠ

ಗ್ರಂಥ ಋಣ

೧. **ಕರ್ಣಾಟಕ ಕವಿಚರಿತೆ:** (ಪ್ರಥಮ ಸಂಪುಟ)
ಆರ್. ನರಸಿಂಹಾಚಾರ್ಯವಿರಚಿತ ಪರಿಶೋಧಿತ ಮುದ್ರಣ, ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨. **ಕನ್ನಡ ಸಾಹಿತ್ಯಚರಿತ್ರೆ:**
ರಂ. ಶ್ರೀ. ಮುಗಳಿ (ಉಷಾ ಸಾಹಿತ್ಯಮಾಲೆ, ಮೈಸೂರು.)

೩. **ಕನ್ನಡ–ಇಂಗ್ಲಿಷ್ ನಿಘಂಟು:**
ರೆ. ಎಫ್. ಕಿಟ್ಟೆಲ್.

೪. **ಸಿರಿಗನ್ನಡ ಅರ್ಥಕೋಶ:** ಶಿವರಾಮ ಕಾರಂತ.

೫. **ಸಚಿತ್ರ ಕನ್ನಡ–ಕನ್ನಡ ಕಸ್ತೂರಿಕೋಶ:**
ಪಂಡಿತ ಜೆ. ಎ. ಕವಲಿ.

೬. **ಶಬ್ದಮಣಿ ದರ್ಪಣ:**
ಕೇಶಿರಾಜ.

ಒಂದನೆಯ ಗುಣವರ್ಮನ ಕೃತಿಗಳು

ಮಹಾಕವಿಗಳು ತಮ್ಮ ಕೃತಿರತ್ನಗಳ ಮೂಲಕ ಕೀರ್ತಿಶಾಲಿಗಳಾಗಿ ಬಾಳಿಕೊಂಡಿದ್ದಾರೆ. ಕೆಲವು ಕವಿಗಳ—ಕೃತಿಗಳ ಹೆಸರುಗಳು ಬೇರೆ ಕೃತಿಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ಕೆಲವು ಕೃತಿಗಳೂ ಅಲ್ಲಲ್ಲಿ ಉದ್ಧರಿಸಲ್ಪಟ್ಟಿವೆ. ಪ್ರಾಚೀನ ಸಾಹಿತ್ಯಕಾರರು (ಮತಾಚಾರ್ಯರು) ತಂತಮ್ಮ ವಿಚಾರಗಳನ್ನು—ಕಾಲ ದೇಶ ಮತಾದಿಗಳನ್ನು—ಹೇಳುವುದಕ್ಕೆ ಸಾಹಸಮಾಡಿಲ್ಲ. ಹಾಗಾಗಿ ಅವರ ಕೃತಿಗಳ ವಿಚಾರಗಳ ಅನ್ವೇಷಣ—ವಿಮರ್ಶನಗಳು ಆಗಾಗ ನಡೆಯುತ್ತಿರುತ್ತವೆ. ಒಂದನೆಯ ಗುಣವರ್ಮನು ಅನ್ವೇಷಣೆಗೆ ತಕ್ಕ ಕನ್ನಡದ ಮಹಾಕಾವ್ಯಕರ್ತನು—ಮಹಾಕವಿಯು. ಇವನ ಕೃತಿಗಳೆರಡರ ಹೆಸರುಗಳು—ಪದ್ಯಗಳು ಅಲ್ಲಲ್ಲಿ ಮಿನುಗುತ್ತಿವೆ. ಇವುಗಳು ಈ ಕೃತಿಕಾರನ—ಕೃತಿಗಳ ಸಾಕಲ್ಯಜ್ಞಾನಕ್ಕೆ ಪರ್ಯಾಪ್ತವಾಗಿಲ್ಲ; ಇವನ ಬಗ್ಗೆ ಇನ್ನೂ ಹೆಚ್ಚು ಬೆಳಕು ಬೀಳಬೇಕು; ಆ ಉದ್ದೇಶದಿಂದಲೇ ಪ್ರಕೃತ ಲೇಖನ ಪ್ರಾರಂಭಿಸಲಾಗಿದೆ.

'ಕರ್ಣಾಟಕ ಕವಿಚರಿತೆ'ಯಲ್ಲಿ ಶ್ರೀ ಆರ್. ನರಸಿಂಹಾಚಾರ್ಯರೂ, 'ಕನ್ನಡ ಸಾಹಿತ್ಯ ಚರಿತ್ರೆ' ಮತ್ತು 'ಅಭಿವಂದನೆ'ಗಳಲ್ಲಿ ಶ್ರೀ ಆರ್. ಎಸ್. ಮುಗಳಿಯವರೂ ಇವನ ಕೃತಿಗಳ ವಿಷಯಾಂಶ ಎತ್ತಿ, ಚರ್ಚಿಸಿದ್ದಾರೆ. ಆ ಹಿನ್ನೆಲೆಯಿಂದಲೇ ಇಲ್ಲಿ ಮುಂದಡಿಯಿಡಲಾಗಿದೆ. ಬೇರೆ ಒಂದೆರಡು ಕೃತಿಗಳು ಇದಕ್ಕೆ ಆಧಾರಗಳಾಗಿವೆ. ಕನ್ನಡದಲ್ಲಿ ಗುಣವರ್ಮನೆಂಬ ಹೆಸರಿನ ಇಬ್ಬರು ಕವಿಗಳಿದ್ದಾರೆ. 'ಹರಿವಂಶ ಪುರಾಣ' ಮತ್ತು 'ಶೂದ್ರಕ' ಕಾವ್ಯಗಳನ್ನು ಬರೆದವನೊಬ್ಬನು; 'ಪುಷ್ಪದಂತಪುರಾಣ' ಮತ್ತು 'ಚಂದ್ರನಾಥಾಷ್ಟಕ'ಗಳನ್ನು ಬರೆದವನೊಬ್ಬನು. 'ಪುಷ್ಪದಂತಪುರಾಣ'ದಲ್ಲಿ ಇ. ೧೨೦೯ ಜನ್ನನನ್ನು ಹೊಗಳಿದೆ. ಪೂರ್ವ ಕವಿಗಳ ಸಾಲಿನಲ್ಲಿ 'ಗುಣವರ್ಮನ ಮೆಯ್ಸಿರಿ' ಎಂದಿದೆ. ಆದುದರಿಂದ ತತ್ಪೂರ್ವದ ಗುಣವರ್ಮನು ಬೇರೊಬ್ಬನೆಂದು ತಿಳಿಯುತ್ತದೆ. ಇ. ೧೧೧೨ರಲ್ಲಿದ್ದ ನಯಸೇನನು 'ಗುಣವರ್ಮನ ಜಾಣ್' ಎಂದನು. "ಅಂತು ನಯಸೇನನಿಂದ ಸ್ತುತನಾದ ಗುಣವರ್ಮನಿಗೂ, ಜನ್ನನನ್ನು ಸ್ತುತಿಸುವ ಗುಣವರ್ಮನಿಗೂ ಆವ ಸಂಬಂಧವೂ ಇಲ್ಲವೆಂಬುದು ಸ್ಪಷ್ಟವಾಗದೆ ಇರಲಾರದು" (ಕ. ಕ. ಚ. ೧—೨೪). ಇ. ೧೦೪೯ ರಲ್ಲಿದ್ದ ಶ್ರೀಧರಾಚಾರ್ಯನು 'ಜಾತಕತಿಲಕ'ದಲ್ಲಿ 'ಶ್ರೀ ಶೀಲಭದ್ರಂ ? (ಗುಣವರ್ಮ)ನನ್ನು' ಸ್ಮರಿಸಿದ್ದಾನೆ (ಅದೇ ೧—೯೨). ಈ ಮಾತು ಸರಿಯಾದರೆ ಮೇಲಿನದನ್ನು ಸಮರ್ಥಿಸುತ್ತದೆ.

ಎರಡನೆಯ ನಾಗವರ್ಮನು 'ಕಾವ್ಯಾವಲೋಕನ'ದಲ್ಲಿ 'ನಾಗವರ್ಮನ ಗುಣವರ್ಮನ ಶಂಖವರ್ಮನ ಅಧ್ವಾನಂಗಳ್' ಎಂದುದರಿಂದ, ಗುಣವರ್ಮನು ಲಕ್ಷಣ ಗ್ರಂಥಕಾರನಾಗಿಯೂ ಇದ್ದಂತೆ ತೋರುತ್ತದೆ (ಅದೇ ೧—೨೫). ಈ ಊಹನೆಗೆ ಬೇರೆ ಬೆಂಬಲಗಳಿಲ್ಲ. ಮಹಾಕವಿಯ ಕೃತಿ—ಪದ್ಯಗಳೇ ಉದಾಹರಣೆಗೆ ಸಾಕಲ್ಲದೆ,

ಪ್ರತ್ಯೇಕ ಲಕ್ಷಣ ಗ್ರಂಥವಿರಬೇಕಾಗಿಲ್ಲ. ಕಾಳಿದಾಸಾದಿ ಮಹಾಕವಿಗಳ ಕೃತಿಗಳು– ಪದ್ಯಗಳು ಅಲಂಕಾರಾದಿಗಳಿಗೆ ಉದಾಹರಣೆಗಳಾಗಿವೆಯಲ್ಲದೆ ಅವರೆಲ್ಲಾ ಮಂದಿ ಪ್ರತ್ಯೇಕ ಲಕ್ಷಣಕಾರರಾಗಿಲ್ಲ. ಗುಣವರ್ಮನ ಬೇರೆ ಗ್ರಂಥದ ಹೆಸರು— ಊಹನೆಯಿಂದಲೂ—ಕೇಳಿಬಂದಿಲ್ಲ !

ಇ. ೧೨೦೫ರ ಪಾರ್ಶ್ವಪಂಡಿತನು "ಗುಣವರ್ಮಂ ಸತ್ಕವಿತಾ | ಗುಣಮುಂ ಭವ್ಯತ್ವಗುಣಮುಮಾತ್ಮಯಶೋರ | ಕ್ಷಣಮೆನೆ ಮೆರೆದಂ ಪೆಸರಿಂ | ಪ್ರಣೂತಮೆನೆ ಪೇಳ್ದ ನೇಮಿನಾಥಾನ್ವಯಮಂ" ಎಂದಿದ್ದಾನೆ. ಇ. ೧೨೬೦ರ ಕೇಶಿರಾಜನು "ಈಂದ ಪುಲಿಯಾವೊಲಿರ್ದಳ್—ಎಂದು ಗುಣವರ್ಮನ ಹರಿವಂಶ ಪ್ರಯೋಗಂ" ಎಂದಿದ್ದಾನೆ. ಇವೆರಡು ಹೆಸರು ಒಂದೇ ಕೃತಿಯದಾಗಿದೆ. ಇ. ೧೧೭೦ರ ನೇಮಿ ಚಂದ್ರನು ಬರೆದ 'ಅರ್ಧನೇಮಿ ಪುರಾಣ'ದಲ್ಲಿ "ಜಿನಕಥೆಯೊಳ್ | ಸಂದಿಸಿ ವಸುದೇವಾಚ್ಯುತ | ಕಂದರ್ಪರ ಕಥೆಗಳನಿತುಮಂ ವಿರಚಿಸುವೆಂ (೧-೪೦)" ಎಂದಿದ್ದಾನೆ. ಇ. ೧೧೪೦ರ ಕರ್ಣಪಾರ್ಯನು ಬರೆದ 'ನೇಮಿನಾಥ ಪುರಾಣ'ವು 'ಹರಿವಂಶ ಕುರುವಂಶವೆರಡುಮಂ' ಹಾಗೂ ನೇಮಿತೀರ್ಥಂಕರ ಚರಿತ್ರವನ್ನು ಬೆರಸಿದುದಾಗಿದೆ. ಆ ಮೊದಲು ಚಾವುಂಡರಾಯನು ಈ ಕತೆಗಳನ್ನು ಹೇಳಿದ್ದಾನೆ. ಅಂದರೆ ನೇಮಿನಾಥನ ಕಥೆಯೊಂದಿಗೆ ಹರಿವಂಶದ ಮತ್ತು ಕುರುವಂಶದ ಕಥೆಗಳನ್ನು ಬೆರಸಿ ಒಂದನೆಯ ಗುಣವರ್ಮನು ಕೃತಿಸಿರಬೇಕು, ಅವೆರಡು ಹೆಸರುಗಳು ಒಂದೇ ಕೃತಿಯವಾಗಿರುತ್ತವೆ. ಇದರ (ಹರಿವಂಶದ) ಒಂದೆರಡು ಪದ್ಯಗಳನ್ನು ನಾಗವರ್ಮ, ಕೇಶಿರಾಜ, ಅಭಿನವವಾದಿವಿದ್ಯಾನಂದರು ಉದಾಹರಿಸಿದ್ದಾರೆ. ಇದು ಪದ್ಯ ಕಾವ್ಯವೋ, ಚಂಪೂಕಾವ್ಯವೋ (ಗದ್ಯಮಿಶ್ರಿತವೋ) ಎಂದು ತಿಳಿಯಬರುವುದಿಲ್ಲ. ಇದೊಂದು ಜೈನಪುರಾಣ. ಇದು ಕಾರಣ ಒಂದನೆಯ ಗುಣವರ್ಮನು ಜೈನಕವಿ ಎಂದಿಷ್ಟು ಸ್ಪಷ್ಟವಾಗುತ್ತದೆ.

ಇವನ ಇನ್ನೊಂದು ಕೃತಿ 'ಶೂದ್ರಕ ಕಾವ್ಯ'. ಇದು ಚಂಪೂಕೃತಿಯೆಂದು ಸ್ಪಷ್ಟವಾಗುತ್ತಿದೆ. ಅಭಿನವವಾದಿವಿದ್ಯಾನಂದನು 'ಕಾವ್ಯಸಾರ'ದಲ್ಲಿ ಇದರದೊಂದು ಗದ್ಯವೆತ್ತಿದ್ದಾನೆ. ಎರಡನೆಯ ನಾಗವರ್ಮ, ಕೇಶಿರಾಜ, ಮಲ್ಲಿಕಾರ್ಜುನರು ಇದ ರಿಂದ ಕೆಲವು ಪದ್ಯಗಳನ್ನು ಉದಾಹರಿಸಿದ್ದಾರೆ. ಇ. ೧೪೫೦–೧೫೫೦ ರಲ್ಲಿದ್ದನೆಂಬ ವಿದ್ಯಾನಂದನು 'ಕಾವ್ಯಸಾರ'ದಲ್ಲಿ ಅರುವತ್ತಕ್ಕಿಂತಲೂ ಮಿಕ್ಕಾದ ಪದ್ಯಗಳನ್ನು ಇದರಿಂದ ಆರಿಸಿದ್ದಾನೆ. (ಈತನ ಕಾಲಮಾನ ವಿಚಾರಕ್ಕೆ 'ಶ್ರೀ ಪಂಜೆಯವರ ನೆನಪಿಗಾಗಿ' ನೋಡಿರಿ.) ಪರಂತು, 'ಕಾವ್ಯಸಾರ'ದಲ್ಲಿ ಇವನ ೪೧ ಪದ್ಯಗಳನ್ನು ಆರಿಸಿದ್ದಾನೆಂ'ಬುದು ಸರಿಯಲ್ಲ (ಅಭಿವಂದನೆ, ಪುಟ ೩೮೨). ೪೫ ಅಧ್ಯಾಯ ಗಳುಳ್ಳ ಈ 'ಕಾವ್ಯಸಾರ'ದಲ್ಲಿ ಇವನ (ಗುಣವರ್ಮನ) ಪದ್ಯಗಳು ೨೧ ಅಧ್ಯಾಯ ಗಳಲ್ಲಿ ಹರಡಿವೆ. ಇತರರು ಆರಿಸಿದವುಗಳನ್ನೂ ಲೆಕ್ಕಿಸಿದರೆ, ಸಾಧಾರಣ ೭೦ ಪದ್ಯಗಳು ಇವನ ಕೃತಿಯವೆಂದು ತಿಳಿಯುತ್ತವೆ. ಆದರೆ ಇವುಗಳಿಂದ ಈ ಕಾವ್ಯದ ಅಪೂರ್ಣ—ಲಘುಪರಿಚಯ ಮಾತ್ರ ಸಾಧ್ಯವಾಗಿದೆ !

ಮಹಾಕಾವ್ಯದಲ್ಲಿ ಬರುವ ವರ್ಣನೆಗಳನ್ನು ವಿಂಗಡಿಸಿ ೧೮ ಬಗೆಯವುಗಳೆಂದು ಹೇಳಿದೆ. "ಉದಧಿ ಪುರಾಧಿಪ ಸುತ ಮಂತ್ರ ದೂತಗಮನಾಜಿವಿರಹ ಪರಿಣಯ ಸುರತರ್ತು ದಿನೇಶಚಂದ್ರ ಮಧು ಕುಭೃದುದಕವನಸ್ಪತಿಯೆ ಕೃತಿಗೆ ಪದಿನೆಂಟಂಗಂ" (ಉದಯಾದಿತ್ಯಾಲಂಕಾರ). ಈ ೧೮ ಬಗೆಗಳು ಮಹಾಕಾವ್ಯದಲ್ಲಿ ಬಂದೇ ತೀರಬೇಕೆಂದಲ್ಲ, ಇವಲ್ಲಿ ಹಲಬಗೆಗಳು ಔಚಿತ್ಯವರಿತು ಬಿತ್ತರಿಸುವುದಕ್ಕೆ ಮಹಾ ಕಾವ್ಯದಲ್ಲಿ ಅವಕಾಶವಿದೆ. 'ಕಾವ್ಯಸಾರ'ದಲ್ಲಿ 'ಶೂದ್ರಕ ಕಾವ್ಯ'ದಿಂದ ಈತರದ ೧೮ ಬಗೆಗಳು ಉದಾಹರಿಸಲಾಗಿವೆ. ಇಷ್ಟರಿಂದಲೂ ಈ ಕಾವ್ಯದ ಸ್ಥೂಲ ಪರಿಚಯವಾಗದು. ಇನ್ನೂ ಇದರ ಆಕರಗಳೇನೆಂದು ಪರಿಶೀಲಿಸಬೇಕಾಗಿದೆ. ಈ ಬಗೆಗೆ ತುಸ ವಿಚಾರ ಮಥನವಾಗಿದೆ, ಅದಕ್ಕೆ ಪೋಷಕವಾಗಿ ತಿಳಿದ ಸಂಗತಿ ಬರೆಯಲಿದೆ.

'ಕಾವ್ಯಸಾರ', 'ಕಾವ್ಯಾವಲೋಕನ'ಗಳಲ್ಲಿ ಹೇಳಿದ ಈ ಕಾವ್ಯದ ಪದ್ಯ ಗಳಲ್ಲಿ 'ಮಹೇಂದ್ರಾಂತಕ, ಕಾಮದ, ಗಂಗಚಕ್ರಾಯುಧ' ಇತ್ಯಾದಿ ಬಿರುದು ಗಳುಳ್ಳ ಗಂಗರಾಜನೊಬ್ಬನನ್ನು ಶೂದ್ರಕರಾಜನಿಗೆ ಹೋಲಿಸಿದಂತೆ ತಿಳಿಯುತ್ತದೆ. ಗಂಗರಾಜರಲ್ಲಿ ಈ ಬಿರುದುಗಳುಳ್ಳವನು ಎರೆಯಪ್ಪನು. ಆದುದರಿಂದ ಈ ಕನ್ನಡ ಮಹಾಕವಿ ಆ ಗಂಗರಾಜನನ್ನು ಆಶ್ರಯಿಸಿದ್ದನು (ಅವನ ಕಾಲವಿಚಾರ ಮುಂದೆ ಬರೆದಿದೆ). ಗುಣವರ್ಮನು ತತ್ಪೂರ್ವದ ದಂಡಿಯ 'ಅವಂತಿ ಸುಂದರೀ ಕಥೆ' ಹಾಗೂ ತತ್ಪ್ರಾಚೀನ ಕೃತಿಗಳ ಹಿನ್ನೆಲೆಯಿಂದ ಶೂದ್ರಕ ಕಥೆಯನ್ನು ಬರೆಯುತ್ತಾ, ತನ್ನ ಆಶ್ರಯದಾತನಾದ ಗಂಗರಾಜನನ್ನು ಅವನಿಗೆ ಹೋಲಿಕೆಗೊಳಿಸಿದ್ದಾನೆ (ಅಭಿವಂದನೆ). ದಂಡಿಯು ಹೇಳಿದ ಕಥೆಯಲ್ಲಿಯ 'ಶೂದ್ರಕ' ಇತ್ಯಾದಿ ವ್ಯಕ್ತಿ ವಿಷಯಗಳ ಬಗೆಗೆ ವಿವರವಿನ್ನೂ ತಿಳಿದಿಲ್ಲ. ಈಯೆಡೆಯನ್ನು ವಿವೇಚಿಸುವ ವಿದ್ವಾಂಸರೊಬ್ಬರ ಲೇಖನದ ಸಾರ ಹೀಗಿದೆ :

' "ಮಹಾರಾಜ ಸಮುದ್ರಗುಪ್ತ ಸಾಹಸಾಂಕನು 'ಕೃಷ್ಣಚರಿತ'ದಲ್ಲಿ ಹೇಳಿದ್ದಾನೆ—

"ಪುರಂದರಬಲೋವಿಪ್ರಃ ಶೂದ್ರಕಃ ಶಾಸ್ತ್ರ ಶಸ್ತ್ರವಿತ್ ।
ವತ್ಸರಂ ಸ್ವಂ ಶಕಾನ್ಜಿತ್ವಾ ಪ್ರವರ್ತಯತ ವೈಕ್ರಮಂ ॥
ಭೂಯಃ ಸ ಮೃಚ್ಛಕಟಿಕಂ ನವಾಂಕಂ ನಾಟಕಂ ವ್ಯಧಾತ್ ।
ವ್ಯಧಾತ್ ತಸ್ಮಿನ್ ಸ್ವಚರಿತಂ ವಿದ್ಯಾನಯಬಲೋರ್ಜಿತಂ ॥"

ಈ ಶೂದ್ರಕ ವೈಕ್ರಮ ಸಂವತ್ಸರಕ್ಕೆ ಮಾಲವಸಂವತ್, ಕೃತಸಂವತ್ ಎಂಬೆರಡು ಹೆಸರಿವೆ. ಶೂದ್ರಕನ ಮೇಲೆ 'ವಿನಯವತೀ ಶೂದ್ರಕ' ಕಥೆ ಬರೆಯ ಲಾಗಿದೆ. 'ವಿನಯವತಿ' ಎಂಬ ಉಲ್ಲೇಖ 'ಅವಂತಿಸುಂದರೀ ಕಥೆ' ಯಲ್ಲಿದೆ. ಬಾಣಭಟ್ಟನು ಶೂದ್ರಕನ ಕಥೆಯನ್ನು ಹೊಗಳಿದ್ದಾನೆ. (ಮಹಾ) ವೀರನ ಮೋಕ್ಷ ದಿಂದ ೪೭೦ ವರ್ಷದ ಅನಂತರ ಶೂದ್ರಕನ ಕಾಲವೆಂದು ನಿರ್ಣಯವಾಗಿದೆ.

ಇದುವೇ ವಿಕ್ರಮ ಸಂವತ್ಸರದ ಕಾಲವೆಂದು ಸರ್ವರಿಗೂ ತಿಳಿದಿದೆ. ಈ ಶೂದ್ರಕನಿಗೆ ಗುಣಕರ್ಮಗಳಿಗೆ ಅನುಸಾರವಾಗಿ ಹಲವು ಹೆಸರುಗಳಿವೆ. ಕ್ಷೀರಸ್ವಾಮಿ ಬರೆದ ಅಮರಕೋಶದ ಟೀಕೆಯಲ್ಲಿದೆ—

" ವಿಕ್ರಮೋ ವಿಕ್ರಮಾದಿತ್ಯಃ ಸಾಹಸಾಂಕಃ ಶಕಾಂತಕಃ |
ಶೂದ್ರಕಸ್ತ್ವಗ್ನಿಮಿತ್ರಾಖ್ಯೋ ಹಾಲಃ ಸ್ಯಾತ್ಸಾತವಾಹನಃ ||"

ಶುಂಗವಂಶದ ಅಗ್ನಿಮಿತ್ರನು ಏತತ್ಪೂರ್ವದವನು. ಆತನನ್ನು ಕಾಳಿದಾಸನು 'ಮಾಳವಿಕಾಗ್ನಿಮಿತ್ರ'ದಲ್ಲಿ 'ಸಂಪದ್ಯತೇ ನ ಖಲು ಗೋಪ್ತರಿ ನಾಗ್ನಿಮಿತ್ರೇ' ಎಂದನು. ಈ ಶೂದ್ರಕಾಗ್ನಿಮಿತ್ರನು 'ಗೋಡವಹ' ವೆಂಬ ಪ್ರಾಕೃತ ಕಾವ್ಯದಲ್ಲಿ ಹೇಳಲ್ಪಟ್ಟಿದ್ದಾನೆ. 'ಶಾರ್ಙ್ಗಧರ ಪದ್ಧತಿ'ಯಲ್ಲಿ ವಿಕ್ರಮಾದಿತ್ಯ ಮೇಂಠನದೆಂಬ ಶ್ಲೋಕವು ಇವನದೇ ಆಗಿದೆ. ಹಾಗಾಗಿ, 'ರಾಜತರಂಗಿಣಿ' ಯಲ್ಲಿ 'ವಿಕ್ರಮಾದಿತ್ಯ-ಶೂದ್ರಕರು' ಬೇರೆ ಬೇರೆಯೆಂದು ಹೇಳಿದ ಭೇದವು ಪ್ರಮಾದಜನಿತವಾಗಿದೆ. ಇವನಿಗೆ 'ವಿಷಮಶೀಲ' ನೆಂಬ ಹೆಸರಿದೆ. 'ಕಥಾಸರಿತ್ಸಾಗರ' ದಲ್ಲಿಯ 'ವಿಷಮ ಶೀಲ ಲಂಬಕ' ವು ಇವನ ಕಥೆಯನ್ನು ಹೇಳುತ್ತದೆ. ಅಲ್ಲಿ 'ವಿಕ್ರಮನ ತಂದೆ ಉಜ್ಜಯಿನೀ ಪತಿಯಾದ ಮಹೇಂದ್ರಾದಿತ್ಯ' ನೆಂದುದು ಸರಿಯಲ್ಲ. ಮಹೇಂದ್ರಾದಿತ್ಯನು ಸ್ಕಂದಗುಪ್ತ ವಿಕ್ರಮಾದಿತ್ಯನ ತಂದೆಯಾಗಿದ್ದನು.

ಶೂದ್ರಕನ ಒಬ್ಬ ಮಿತ್ರ ಮೂಲದೇವ–ಧೂರ್ತರಾಜನು. ಅವನ ಕಥೆ 'ಬೃಹತ್ಕಥೆ' ಯಲ್ಲಿದೆ. ಬಾಣಭಟ್ಟನು 'ಕರ್ಣೀಸುತ'ನೆಂದು ಅವನನ್ನು ಹೆಸರಿಸಿದ್ದಾನೆ. ಅವನು ಸ್ವಾನುಭೂತ ಕಥೆಯನ್ನು ಪ್ರತ್ಯೇಕಶಃ ವಿಕ್ರಮಾದಿತ್ಯನಿಗೆ ಹೇಳುವಂತೆ 'ಕಥಾಸರಿತ್ಸಾಗರ' ದ 'ವಿಷಮಶೀಲ ಲಂಬಕ' ದಲ್ಲಿದೆ—

" ಇತ್ಯೇತಾಂ ಮೂಲದೇವಸ್ಯ ನಿಶಮ್ಯ ವದನಾತ್ಕಥಾಂ |
ವಿಕ್ರಮಾದಿತ್ಯ ನೃಪತಿಸ್ತು ತೋಷ ಸಹ ಮಂತ್ರಿಭಿಃ ||

ಅದೊಂದು ಬೇರೆ ಪದ್ಯದಲ್ಲಿ ಇವನ ಸಂಗತಿ ಹೇಳಿದೆ

" ಅಪಿ ಯಃ ಶ್ರಿತಮಾತೃಗುಪ್ತವಿದ್ಯಾ |
ಧಿಪ ಸೇತು ಪ್ರವರಾದಿ ಸೂರಿ ಹೃದ್ಯಂ ||
ಸುಷಮಾ ಮಥಿತಾ ಹಿಮಾದ್ರಿಭೂಮೌ |
ವಿಷಮಾದಿತ್ಯ–ತೋಽವತಾತ್ಸ ಬೌಮುಂ ||"

ಇದರಿಂದ ವಿಷಮಶೀಲ, ವಿಷಮಾದಿತ್ಯ ನಾಮಗಳೆರಡು ಶೂದ್ರಕನಿಗೆ ಸಿದ್ಧವಾಗುತ್ತವೆ. ರಾಮಿಲ ಸೋಮಿಲರು ಶೂದ್ರಕನ ಕಥಾಲೇಖಕರಾಗಿದ್ದರು. ಅದು ಸಮುದ್ರಗುಪ್ತನ 'ಕೃಷ್ಣ ಚರಿತ' ದಲ್ಲಿದೆ—

" ತತ್ಕಥಾಂ ಕೃತವಂತೌ ಯೌ ಕವೀ ರಾಮಿಲ ಸೋಮಿಲೌ |
ತಸ್ಯೈವ ಸದಸಿ ಸ್ಥಿತ್ವಾ ತೌ ಮಾನಂ ಬಹ್ವವಾಪ್ನುತಾಂ ||"

ಸೋಮಿಲ್ಲನ ಹೆಸರನ್ನು ಕಾಳಿದಾಸನು ಹೇಳಿದ್ದಾನೆ. ರಾಮಿಲನು 'ಮಣಿಪ್ರಭಾ ನಾಟಕ' ಬರೆದಿದ್ದಾನೆ.

ಈ ಶೂದ್ರಕ ವಿಕ್ರಮನಿಗೆ ಹರ್ಷನೆಂಬ ಹೆಸರೂ ಬೇರೆ ಇದೆ. ಇವನೇ ಮಾತೃಗುಪ್ತನಿಗೆ ಕಶ್ಮೀರ ರಾಜ್ಯವಿತ್ತನು. ಈ ಕತೆ ಕಲ್ಹಣನ 'ರಾಜ ತರಂಗಿಣಿ' ಯಲ್ಲಿ ತಪ್ಪಾಗಿ ಬಂದಿದೆ, ಮಾತೃಗುಪ್ತನು ಸ್ಕಂದಗುಪ್ತವಿಕ್ರಮಾದಿತ್ಯನ ಸಭ್ಯನೆಂದು. ಸ್ಕಂದಗುಪ್ತನ ಪಿತಾಮಹನಾದ ಮಹಾರಾಜ ಸಮುದ್ರಗುಪ್ತನು ಮಾತೃಗುಪ್ತನನ್ನು ಸ್ಮರಿಸಿದ್ದಾನೆ.

ದ್ವಿತೀಯ ವಿಕ್ರಮಾದಿತ್ಯನೆಂದರೆ ಚಂದ್ರಗುಪ್ತನು. ಈರ್ವರೂ ಶಕಾರಿಗಳೆಂಥು ಪ್ರಸಿದ್ಧರು. ಪೂರ್ವಶಕ ಶಾಖೆಯನ್ನು ನಾಶಿಸಿದ್ದವನು ಶೂದ್ರಕ ವಿಕ್ರಮನು. ದ್ವಿತೀಯ ಚಷ್ಟಣ ಶಕ ಶಾಖೆಯನ್ನು ನಾಶಿಸಿದವನು ಚಂದ್ರಗುಪ್ತ ವಿಕ್ರಮನು—ಸ್ಕಂದಗುಪ್ತ ವಿಕ್ರಮನು—ಆಗಿರಬೇಕು. ಈ ರಾಜರ ಕಾಲದಲ್ಲಿ ಕಾವ್ಯಕಾರನಾದ ಕಾಳಿದಾಸನು ಇದ್ದನು. ಮೂರನೆಯ ಕಾಳಿದಾಸನು ಪದ್ಮಗುಪ್ತನು, ಭೋಜರಾಜನ ತಂದೆಯಾದ ಸಿಂಧುಲವಿಕ್ರಮನ ಸಭಾಸದನಾಗಿದ್ದನು. ಜ್ಯೋತಿರ್ವಿದಾಭರಣದಲ್ಲಿ ಹೇಳಿದ ಸಂವತ್ಪ್ರವರ್ತಕತ್ವವು ಸಮುದ್ರಗುಪ್ತ—ಚಂದ್ರಗುಪ್ತ ವಿಕ್ರಮಾದಿತ್ಯರಲ್ಲಿ ಯಾರಿಗೆಂದು ದೃಢವಾಗಿ ನಿರ್ಣಯಿಸಲಾಗಿಲ್ಲ (ಶ್ರೀ ಪಂಥಜ್ಞ್ಯಾ ರಾಮಶಾಸ್ತ್ರಿ, ಸಂಸ್ಕೃತ ಮಹಾ ವಿದ್ಯಾಲಯ, ದೆಹಲಿ, ಇವರು 'ಸಂಸ್ಕೃತ ರತ್ನಾಕರ' ದಲ್ಲಿ ಬರೆದ ಲೇಖನವಿದು, ತಾ॥ ೬-೭-೪೮ರಲ್ಲಿ ಅಯೋಧ್ಯೆಯ 'ಸಂಸ್ಕೃತಂ' ಸಾಪ್ತಾಹಿಕದಲ್ಲಿ ಪುನಃ ಪ್ರಕಟಿಸಲಾಗಿದೆ).

'ಶೂದ್ರಕನೇ ಪ್ರಥಮ ವಿಕ್ರಮಾದಿತ್ಯ' ನೆಂಬೀ ಸಂಸ್ಕೃತ ಲೇಖನದ ವಿಚಾರ ಪ್ರಕೃತೋಚಿತವಾಗಿದೆ. ಕಾಳಿದಾಸನು ಕ್ರಿ. ಪೂ. ಪ್ರಥಮ ಶತಕದಲ್ಲಿದ್ದನೆಂದು ಇದರಲ್ಲಿ ಹೇಳಿದಂತೆ, ಕಾಳೆ ಮೊದಲಾದವರ ಆಶಯವದೆ. (ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರ 'ಸಂಸ್ಕೃತ ನಾಟಕ' ಮತ್ತು ಶ್ರೀ ಎಂ. ಲಕ್ಷ್ಮೀನರಸಿಂಹಯ್ಯನವರ 'ಕಾಳಿದಾಸ' ನೋಡಿರಿ.) ಆ ಮೇರೆಗೆ, ಪ್ರಥಮ ವಿಕ್ರಮಾದಿತ್ಯನೇ ಶೂದ್ರಕನೆಂದು ಮೊದಲಾದ ಹೆಸರುಗಳಿಂದ ಕೂಡಿದ್ದಾನೆಂಬ ಈ ಲೇಖನ ಸ್ವೀಕರಣೀಯವಾಗಿದೆ.

ಈ ಶೂದ್ರಕರಾಜನ ಆಸ್ಥಾನದ ರಾಮಿಲಸೋಮಿಲರು ತತ್ಕಥಾ ಲೇಖಕರಾಗಿದ್ದರು. ದಂಡಿಯು ಆ 'ವಿನಯವತೀ—ಶೂದ್ರಕ ಕಥೆ' ಯನ್ನು ವಿಸ್ತರಿಸಿ 'ಅವಂತಿ ಸುಂದರೀ ಕಥೆ' ಯನ್ನು ಬರೆದನು. ಕನ್ನಡದ ಮಹಾಕವಿಯಾದ ಒಂದನೆಯ ಗುಣವರ್ಮನು 'ವಿನಯವತೀ—ಶೂದ್ರಕ ಕಥೆ'ಯನ್ನೂ, 'ಅವಂತಿಸುಂದರೀ ಕಥೆ'ಯನ್ನೂ ಕಂಡಿರಬಹುದು; ಅವನ್ನು ಆಧರಿಸಿ, ಕನ್ನಡರಾಜನ ಕಥೆಯನ್ನು ಬೆರಸಿ—'ಶೂದ್ರಕ ಕಾವ್ಯ'ವನ್ನು ಬರೆದನೆನ್ನಬಹುದು.

೮೮೬-೭ರಲ್ಲಿ ಎರೆಯಪ್ಪನಿಗೆ ರಾಜಮಲ್ಲನು ಪಟ್ಟಗಟ್ಟಿರಬೇಕು" (ಕ.ಅ.ಮ.೧೭೯). ಇ. ೯೧೯-೨೦ ರವರೆಗೆ ಇವನಾಳಿದ್ದನು.

"ನೊಳಂಬಮಹೇಂದ್ರನನ್ನು ಎರೆಯಪ್ಪನು ಅತಿರೌದ್ರವಾದ ಯುದ್ಧದಲ್ಲಿ ಕೊಂದು, ನೊಳಂಬನ ರಾಜ್ಯದ ಆಯಮೆಟ್ಟುಗಳಾದ ಸೂರೂರು, ನಾಡುಗಾಣಿ, ಮಿಡಿಗೆ, ಸೂಡಿ ಶೈಲೇಂದ್ರ, ತಿಪ್ಪೇರು, ಹೆಂಜೆರು ಮೊದಲಾದ ಅಭೇದ್ಯವಾದ ದುರ್ಗಗಳನ್ನು ಸ್ವಾಧೀನಪಡಿಸಿಕೊಂಡನು" (ಅದೇ. ೧೮೨). "ಕ್ರಿ.ಶ.೮೯೫-೯೮ರ ಮಧ್ಯದಲ್ಲಿ ಎರೆಯಪ್ಪನು ಮಹೇಂದ್ರನನ್ನು ಕೊಂದನೆಂಬುದು ಸ್ಪಷ್ಟವಾಗುತ್ತದೆ" (ಅದೇ. ೨೧೩).

ಗಂಗಎರೆಯಪ್ಪನ ಕಾಲವಿಚಾರದ ಈ ನಾಲ್ಕು ಹೇಳಿಕೆಗಳಲ್ಲಿ ಕೊನೆಯದು ಸವಿವರ ಹಾಗೂ ಸಾಧಾರವಾಗಿರುವುದು. ಈ ಕಾವ್ಯವು ೮೯೫-೯೮ ರ ಅನಂತರ ಸು. ೯೦೦ ರೊಳಗೆ ರಚಿತವಾಗಿರಬಹುದು. ಗಂಗನೊಳಂಬರ ಕಾಳಗವು ಮುಗಿದೊಡನೆ ಈ ಕಾವ್ಯರಚಿತವಾಗಿರಬಹುದೆನ್ನಲು ಅಡ್ಡಿಗಳಿಲ್ಲ. 'ಕಾವೇರಿಯ ನೀರ್ವೊಲಿತ್ತ ಬರೆ ನಿಮ್ಮ ಬಲಂ ಶತಖಂಡಮಾಗದೇ' ಎಂದು ವಾಚಿಸಿರುವುದರಿಂದ, ಈ ಕವಿ ಕಾವೇರೀ ಪ್ರಾಂತ್ಯದವನೆಂದು ತೋರಬಹುದು. ಇನ್ನು ಈ ಕಾವ್ಯದ ವಿಚಾರದಲ್ಲಿ ತುಸು ಬರೆಯಬೇಕಾಗಿದೆ—

"ಇದರ ನಿರೂಪಣ ಪದ್ಧತಿ ಪ್ರೌಢವೂ ಸಾಂಪ್ರದಾಯಿಕವೂ ಆಗಿರಬೇಕೆಂದು ವರ್ಣನಾಪದ್ಯಗಳಿಂದ ತಿಳಿಯುತ್ತದೆ. ಆದರೆ ಇದು ಬರಿಯ ಒಬ್ಬ ಪ್ರಾಚೀನ ವ್ಯಕ್ತಿಯ ಚರಿತ್ರೆ ಇಲ್ಲವೆ ಕಲ್ಪಿತ ಕಥೆಯಾಗಿರದೆ 'ತತ್ಕಾಲೀನ ಚರಿತ್ರೆಯನ್ನು ಸೂಚಿಸುವ ವೀರಪ್ರಚುರವಾದ ಕಾವ್ಯ' ವೆಂಬುದನ್ನು 'ಕನ್ನಡಸಾಹಿತ್ಯ ಚರಿತ್ರೆ' (ಪುಟ ೫೦-೫೧) ಯಲ್ಲಿ ತೋರಿಸಲು ನಾವು ಪ್ರಯತ್ನಿಸಿದ್ದೇವೆ.....ರಾಜವರ್ಣನೆಯ ಪದ್ಯಗಳಲ್ಲಿ ಗುಣವರ್ಮನು ಒಂದು ಬಗೆಯ ಆತ್ಮೀಯತೆಯನ್ನೂ, ಅಭಿಮಾನದ ಅತಿರೇಕವನ್ನೂ ಅತಿಶಯೋಕ್ತಿಯನ್ನೂ ಮೆರೆದಿದ್ದಾನೆ. ತತ್ಕಾಲೀನ ಆಸಕ್ತಿಯಿಲ್ಲದೆ ಇದು ಸಾಮಾನ್ಯವಾಗಿ ಸಾಧ್ಯವಿಲ್ಲ....ಪ್ರೌಢಕಾವ್ಯಗಳಲ್ಲಿ ವರ್ಣನೆಯ ಅತಿಶಯೋಕ್ತಿ ವಾಡಿಕೆಯೆಂಬುದು ದಿಟವಾದರೂ ಸಮಸಾಮಯಿಕನಾದ ರಾಜನ ಬಿರುದುಗಳನ್ನು ಶೂದ್ರಕನಲ್ಲಿ ಆರೋಪಿಸಿ ಒಂದು ಹೆಮ್ಮೆಯ ತಾರಸ್ವರದಲ್ಲಿ ಅವನನ್ನು ವರ್ಣಿಸಿರುವ ವೈಖರಿ ನಮಗೆ ತಿಳಿದಮಟ್ಟಿಗೆ ಪಂಪ ಮುಂತಾದ ಮುಂದಣ ಕವಿಗಳ ಲೌಕಿಕ ಕಾವ್ಯಗಳ ರಾಜಕೀಯಧ್ವನಿಗೆ ಮೊದಲನೆಯ ಕೋಳಿಕೂಗೆಂಬುದನ್ನು ಒಪ್ಪಬೇಕು" (ಅಭಿವಂದನೆ. ೩೮೫).

ಕನ್ನಡದ ಪ್ರಾಚೀನಕೃತಿಗಳಲ್ಲಿ ಸಂಸ್ಕೃತಭಾಷಾಪ್ರಾಚುರ್ಯವಿರುವುದನ್ನು ಹಲವು ಶಿಲಾಲೇಖಗಳು ಮತ್ತು ಗ್ರಂಥಗಳಿಂದ ತಿಳಿಯುತ್ತೇವೆ. ಅವುಗಳಲ್ಲಿ ನವೀನವರ್ಣನೆ, ಅಲ್ಲಲ್ಲಿ ತಿರುಳ್ಗನ್ನಡದ ನುಡಿಗಳು ಕಾಣದಿಲ್ಲ; ವರ್ಣನಾನುಗುಣವಾಗಿ ಶೈಲಿಯ ಬಿಗುಪು-ಲಗು ಬಗೆಗಳು ಹೊಂದಿವೆ. ಪ್ರಸ್ತುತ 'ಶೂದ್ರಕ'ಕಾವ್ಯವು

ಈ ಮಾತಿಗೆ ಹೊರತಾಗಿಲ್ಲ. ಇದರ ಹಿನ್ನೆಲೆ ಸಂಸ್ಕೃತಗ್ರಂಥವಾಗಿರುವುದೂ ಇದಕ್ಕೊಂದು ಕಾರಣ. ಇಲ್ಲಿ ಅಭಿನವವಾದಿವಿದ್ಯಾನಂದನು ಹೇಳಿದ-ಶೂದ್ರಕ ಕಾವ್ಯದ ಪದ್ಯಗಳಲ್ಲಿ ಮುಖ್ಯ-ಸರಸವಾದುವು ಪರಿಚಯಿಸತಕ್ಕುವು. ಬೇರೆ ಡೆಯ ಒಂದೆರಡು ಪದ್ಯಗಳೂ ಎಡೆಯರಿತು ಒಳಗೊಳ್ಳುತ್ತವೆಯೆಂದು ಸೂಚಿಸು ತ್ತೇನೆ:

(೧) ಕವಿಯು ಕಾವ್ಯಾರಂಭದಲ್ಲಿ ವಸ್ತು ನಿರ್ದೇಶಕ ಅಥವಾ ದೇವತಾಸ್ತುತಿ ಯನ್ನು ಬರೆದು, ಅನಂತರ ಕಾವ್ಯಾಂತರಾಳಕ್ಕೆ ನಮ್ಮನ್ನು ಕರೆದೊಯ್ಯುತ್ತಾನೆ. ಈ ಕಾವ್ಯದ ಪ್ರಾರಂಭ ಪದ್ಯವಾಗಿರಬಹುದೆಂದು ಊಹಿಸಿದ ಪದ್ಯವಿದು (ಕಾವ್ಯಾವ. ಉಪೋ. ೬೫) :

> " ಶ್ರೀರಾಜಾವರ್ತದಿಂ ಕಂಡಿರಿಸಿದ ಸಿರಿವೋಲ್ ಕೌಸ್ತುಭಂ ಮೇಘಮಾಲಾ |
> ಕಾರಂಬೋಲ್ ಶಂಖಮುಮ್ಮಂಗೊಡಲಿಯ ಮುಗುಳ್ವೋಲ್ ನಾಭಿಕೂಪೋಪ
> ಜಾತಂ ||
> ನೀರೇಜಂ ನೀಳ್ದ ಕನ್ನೆಯ್ದಿಲವೊಲಿರೆ ತನುಚ್ಛಾಯೆಯಿಂ ಮಿಕ್ಕ ಲೋಕಾ |
> ಧಾರಂ ರಕ್ಷಿಪ್ಪನಕ್ಕೀ ಭುವನಭವನಮಂ ಗಾಂಗಚಕ್ರಾಯುಧಾಂಕಂ ||"

ನಾಗವರ್ಮನು 'ಭಾಷಾ ಭೂಷಣ'ದಲ್ಲಿ ಉದಾಹರಿಸಿದ ಈ ಪದ್ಯದಲ್ಲಿ 'ಗಾಂಗಚಕ್ರಾಯುಧಾಂಕ'ನೆಂಬುದು ಮರುಳ ಪುಣಸೆಯ ಗಂಗನೆಂದು ಡಾ|| ಎಸ್. ಶ್ರೀಕಂಠಶಾಸ್ತ್ರಿಯವರು ಬರೆದಿದ್ದಾರೆ (ಸೋರ್ಸಸ್ ಒಫ್ ಕರ್ನಾಟಕ ಹಿಸ್ಟರಿ. ೧೪೭). ಆ ರಾಜನಿಗೆ ಈ ಬಿರುದು ಹೇಳಿರುವುದು ಇದಕ್ಕೆ ಕಾರಣ (ಕ. ಅ. ಮ. ೧೯೩). ಆದರೆ 'ಶೂದ್ರಕ' ಕಾವ್ಯದಿಂದ ಎತ್ತಿದ ಬೇರೆ ಪದ್ಯಗಳಲ್ಲಿ ಈ ಬಿರುದು ಎರೆಯಪ್ಪ ನಿಗೂ ಹೇಳಿದೆ(ಕಾವ್ಯಸಾರ-ಪದ್ಯ ೨೧೫, ೩೬೧). ನೊಳಂಬ ಮಹೇಂದ್ರನಿಗೆ 'ನೊಳಂಬ ನಾರಾಯಣ'ನೆಂಬ ಬಿರುದಿದೆ. ಅವನನ್ನು ಕೊಂದಿರುವ ನೀತಿ ಮಾರ್ಗ ಎರೆಯಪ್ಪನಿಗೆ 'ಗಂಗಚಕ್ರಾಯುಧಾಂಕ'ನೆಂಬುದು ಉಚಿತವಾಗಿದೆ. ಈ ಬಿರುದನ್ನು ಆ ಮೇಲಣ ರಾಜರು ಗೌರವದಿಂದಲೇ ಧರಿಸಿದ್ದಾರೆ. ಹಾಗಾಗಿ, ಈ ಪದ್ಯವು 'ಶೂದ್ರಕ' ಕಾವ್ಯದ ಪ್ರಾರಂಭಪದ್ಯವಾಗಿರುತ್ತದೆ. ನಾರಾಯಣ ಹಾಗೂ ಗಂಗನಾರಾಯಣರನ್ನು ಶ್ಲೇಷರೂಪದಲ್ಲಿ, ಅಭೇದವಾಗಿ, ಚೆಲುವಾಗಿ ಕವಿ ನಿರೂಪಿಸಿದ್ದಾನೆ. ಇದರ ರಾಜವಂಶಾವಳಿ, ಕವಿಪರಿಚಯ, ಇತ್ಯಾದಿ ವಿಭಾಗಗಳ ಪದ್ಯಗಳು ದೊರಕಿಲ್ಲ !

(೨) ಪ್ರಾರಂಭದ ಉದಧಿವರ್ಣನೆಯ ಆರು ಪದ್ಯಗಳಿಲ್ಲಿವೆ: 'ಗಂಭೀರ ಸ್ಫಾರವೇಳಾ-', 'ಅದು ಮತ್ತೆಂತೆಂದೊಡೆ-' ಎಂಬೆರಡು ಸಾಮುದ್ರ ಗಾಂಭೀರ್ಯ ಹಾಗೂ ಜಲಚರಗಳ ಕಾರ್ಕಶ್ಯಗಳನ್ನು ಪ್ರತಿಧ್ವನಿಸುತ್ತವೆ. ಅನಂತರ ಮೂರು ಪದ್ಯಗಳು ತಿಮಿಂಗಿಳಾದಿ ಮತ್ಸ್ಯಗಳ ಜೀವನವರ್ಣಕವಾಗಿವೆ. ಇನ್ನೊಂದು ಪದ್ಯ ಅಲಂಕಾರಯುಕ್ತವಾಗಿದೆ—

ಈ ಮಾತಿಗೆ ಹೊರತಾಗಿಲ್ಲ. ಇದರ ಹಿನ್ನೆಲೆ ಸಂಸ್ಕೃತಗ್ರಂಥವಾಗಿರುವುದೂ ಇದಕ್ಕೊಂದು ಕಾರಣ. ಇಲ್ಲಿ ಅಭಿನವವಾದಿವಿದ್ಯಾನಂದನು ಹೇಳಿದ-ಶೂದ್ರಕ ಕಾವ್ಯದ ಪದ್ಯಗಳಲ್ಲಿ ಮುಖ್ಯ-ಸರಸವಾದುವು ಪರಿಚಯಿಸತಕ್ಕುವು. ಜೇರೆ ಡೆಯ ಒಂದೆರಡು ಪದ್ಯಗಳೂ ಎಡೆಯರಿತು ಒಳಗೊಳ್ಳುತ್ತವೆಯೆಂದು ಸೂಚಿಸುತ್ತೇನೆ.

(೧). ಕವಿಯು ಕಾವ್ಯಾರಂಭದಲ್ಲಿ ವಸ್ತು ನಿರ್ದೇಶಕ ಅಥವಾ ದೇವತಾಸ್ತುತಿಯನ್ನು ಬರೆದು, ಅನಂತರ ಕಾವ್ಯಾಂತರಾಳಕ್ಕೆ ನಮ್ಮನ್ನು ಕರೆದೊಯ್ಯುತ್ತಾನೆ. ಈ ಕಾವ್ಯದ ಪ್ರಾರಂಭ ಪದ್ಯವಾಗಿರಬಹುದೆಂದು ಊಹಿಸಿದ ಪದ್ಯವಿದು (ಕಾವ್ಯಾವ. ಉಪೋ. ೬೫):

"ಶ್ರೀರಾಜಾವರ್ತದಿಂ ಕಂಡಿರಿಸಿದ ಸಿರಿವೊಲ್ ಕೌಸ್ತುಭಂ ಮೇಘಮಾಲಾ |
ಕಾರಂಬೋಲ್ ಶಂಖಮಮ್ಮಂಗೊಡಲಿಯ ಮುಗುಳ್ವೋಲ್ ನಾಭಿಕೂಪೋಪ ಜಾತಂ ||
ನೀರೇಜಂ ನೀಳ್ದ ಕನ್ನೆಯ್ದಿಲವೊಲಿರೆ ತನುಚ್ಛಾಯೆಯಿಂ ಮಿಕ್ಕ ಲೋಕಾ |
ಧಾರಂ ರಕ್ಷಿಪ್ಪನಕ್ಕೀ ಭುವನಭವನಮುಂ ಗಾಂಗಚಕ್ರಾಯುಧಾಂಕಂ ||"

ನಾಗವರ್ಮನು 'ಭಾಷಾ ಭೂಷಣ'ದಲ್ಲಿ ಉದಾಹರಿಸಿದ ಈ ಪದ್ಯದಲ್ಲಿ 'ಗಾಂಗಚಕ್ರಾಯುಧಾಂಕ'ನೆಂಬುದು ಮರುಳ ಪುಣಸೆಯ ಗಂಗನೆಂದು ಡಾ|| ಎಸ್. ಶ್ರೀಕಂಠಶಾಸ್ತ್ರಿಯವರು ಬರೆದಿದ್ದಾರೆ (ಸೋರ್ಸಸ್ ಒಫ್ ಕರ್ನಾಟಕ ಹಿಸ್ಟರಿ. ೧೪೭). ಆ ರಾಜನಿಗೆ ಈ ಬಿರುದು ಹೇಳಿರುವುದು ಇದಕ್ಕೆ ಕಾರಣ (ಕ. ಅ. ಮು. ೧೯೩). ಆದರೆ 'ಶೂದ್ರಕ' ಕಾವ್ಯದಿಂದ ಎತ್ತಿದ ಬೇರೆ ಪದ್ಯಗಳಲ್ಲಿ ಈ ಬಿರುದು ಎರೆಯಪ್ಪನಿಗೂ ಹೇಳಿದೆ(ಕಾವ್ಯಸಾರ-ಪದ್ಯ ೨೧೫, ೩೬೧). ನೊಳಂಬ ಮಹೇಂದ್ರನಿಗೆ 'ನೊಳಂಬ ನಾರಾಯಣ'ನೆಂಬ ಬಿರುದಿದೆ. ಅವನನ್ನು ಕೊಂದಿರುವ ನೀತಿಮಾರ್ಗ ಎರೆಯಪ್ಪನಿಗೆ 'ಗಂಗಚಕ್ರಾಯುಧಾಂಕ'ನೆಂಬುದು ಉಚಿತವಾಗಿದೆ. ಈ ಬಿರುದನ್ನು ಆ ಮೇಲಣ ರಾಜರು ಗೌರವದಿಂದಲೇ ಧರಿಸಿದ್ದಾರೆ. ಹಾಗಾಗಿ, ಈ ಪದ್ಯವು 'ಶೂದ್ರಕ' ಕಾವ್ಯದ ಪ್ರಾರಂಭಪದ್ಯವಾಗಿರುತ್ತದೆ. ನಾರಾಯಣ ಹಾಗೂ ಗಂಗನಾರಾಯಣರನ್ನು ಶ್ಲೇಷರೂಪದಲ್ಲಿ, ಅಭೇದವಾಗಿ, ಚೆಲುವಾಗಿ ಕವಿ ನಿರೂಪಿಸಿದ್ದಾನೆ. ಇದರ ರಾಜವಂಶಾವಳಿ, ಕವಿಪರಿಚಯ, ಇತ್ಯಾದಿ ವಿಭಾಗಗಳ ಪದ್ಯಗಳು ದೊರಕಿಲ್ಲ!

(೨) ಪ್ರಾರಂಭದ ಉದಧಿವರ್ಣನೆಯ ಆರು ಪದ್ಯಗಳಿಲ್ಲಿವೆ: 'ಗಂಭೀರಸ್ಫಾರವೇಳಾ-', 'ಅದು ಮತ್ತೆಂತೆಂದೊಡೆ-' ಎಂಬೆರಡು ಸಾಮುದ್ರ ಗಾಂಭೀರ್ಯ ಹಾಗೂ ಜಲಚರಗಳ ಕಾರ್ಕಶ್ಯಗಳನ್ನು ಪ್ರತಿಧ್ವನಿಸುತ್ತವೆ. ಅನಂತರ ಮೂರು ಪದ್ಯಗಳು ತಿಮಿಂಗಿಳಾದಿ ಮತ್ಸ್ಯಗಳ ಜೀವನವರ್ಣಕವಾಗಿವೆ. ಇನ್ನೊಂದು ಪದ್ಯ ಅಲಂಕಾರಯುಕ್ತವಾಗಿದೆ—

“ ಕರಿಮಕರಂಗಳುಚ್ಚಳಿತ ಭಂಗುರ ತುಂಗ ತರಂಗಮಾಲೆಯುಂ |
ಖರ ರದನಾಗ್ರದಿಂದಿಱಿಯೆ ಮುತ್ತುಗಳಂತಿರೆ ಸೂಸಿ ಪಾಯ್ವ ಶೀ ||
ಕರದೊಳೆ ನಾಂದು ಸೇಡುಗೊಳುತಂ ಸುಳಿದೂದುವ ಗಾಳಿ ಬರ್ಪ ದೇ |
ವರ ವರಕಾಂತೆಯರ್ಕಳ ಪರಿಶ್ರಮಮಂ ಕಳೆದತ್ತು ವಾರ್ಧಿಯೊಳ್ || ”
(ಕಾ. ಸಾ. ೭೮)

(೩) ಈ ಕಾವ್ಯದ ನಾಯಕನ ಜನನದ ವರ್ಣನೆ ಮೊದಲಾಗಿ ಬರೆಯಲಾಗುತ್ತದೆ. ‘ರಾಜನು ದೇವಾಂಶಸಂಭೂತ’ ನೆಂಬುದು ಪ್ರಾಚೀನರ ನಂಬುಗೆ (ಮನು. ೭-೪-೮). ಅದು ಕಾರಣ, ರಾಜಪುತ್ರೋದಯವು ‘ಲೋಕಮಂ ಪೊರೆಯಲ್ಕೆಂ’ದು ಹೇಳಿದೆ—

“ ವರುಣಂ ವಾರ್ಧಿಯಿನಬ್ಜಜಂ ಕಮಲದಿಂ, ದೈತ್ಯಾಲಯಸ್ತಂಭದಿಂ |
ನರಸಿಂಹಂ, ಘಟದಿಂ ಘಟೋತ್ಮಜನಿನಂ ಪೂರ್ವಾದ್ರಿಯಿಂ, ತಿಂಗಳಿಂ ||
ಕಿರಣಂ, ಧಾರಿಣಿಯಿಂ ಫಣೀಂದ್ರನೊಗೆವಂತುತ್ಸಾಹದಿಂ ಲೋಕಮಂ |
ಪೊರೆಯಲ್ಕೆಂದಸಹಾಯ ಶೌರ್ಯನೊಗೆದಂ ಶ್ರೀಗಂಗಚಕ್ರಾಯುಧಂ || ” (೩೬೧)

(೪) ಗಂಗರಾಜನಾದ ಎರೆಯಪ್ಪನ ನಾಲ್ಕು ಗುಣಗಳು ಒಂದೆಡೆ ವರ್ಣನಾತ್ಮಕವಾಗಿ ಹೇಳಿವೆ :

“ ಎರೆದರ್ ಸಂತುಷ್ಟರಾದರ್, ಕದನದೊಳಿದಿರಂ ಮಿಱಿ ಮಾಱಾಂತು ನಿಂದಾಂ |
ತರಿಭೂಪರ್ ಭಸ್ಮಮಾದರ್, ಭಯರಸವಶದಿಂ ಕಂಡರಬ್ಜಾಸನಾಯು ||
ರ್ಧರರಾದರ್, ಬಿರ್ದುಗೊಂಡಾಡುವ ಮದನಮದೋನ್ಮತ್ತೆಯರ್ ನಲ್ಲರಾದರ್ |
ನರರಾರ್ ನಿನ್ನನ್ನರಿನ್ನೀ ಭುವನಭವನದೊಳ್ ಗಂಗ ಚಕ್ರಾಯುಧಾಂಕಾ || ” (೨೧೫)

(೫) ಮಹಾರಾಣಿಯ ವರ್ಣನೆ ಶಾಸ್ತ್ರೀಯವಾಗಿ ಹೇಳಿದೆ; ಆಕೆಯ ಬಾಹ್ಯ ರೂಪದ ವಿಚಾರ ‘ಅಬ್ಜಜಂಗಂ ಬಣ್ಣಿಸಲರಿದು’ ಎನ್ನುತ್ತಾನೆ, ಕವಿವರ್ಯ ಗುಣವರ್ಮನು.—

“ ಸಣ್ಣಂ ನಡು, ತಿಣ್ಣಂ ಮೊಲೆ |
ಬಣ್ಣಂ ಪಸುರ್ವೆಸಟಿ ಬಣ್ಣವಧರಂ ಮಧುರಂ ||
ಕಣ್ಣಲರ್ಗಣ್, ಎಮೆ ಮಂದಂ |
ಬಣ್ಣಿಸಲರಿದಬ್ಜಜಂಗಮಾಕೆಯ ರೂಪಂ || ” (೨೮೧)

(೬) ರಾಜನು ವಿನೋದಕ್ಕಾಗಿ ಪುರಸಂಚಾರಕ್ಕೆ ಹೋಗುವ ವರ್ಣನೆ ಕಾವ್ಯದಲ್ಲಿ ಸಾಂಪ್ರದಾಯಿಕವಾಗಿ ಬರುತ್ತದೆ. ಅದಾಗ ವಿರಹಸ್ತ್ರೀಯಪರಿತಾಪವು ಚಿತ್ರಿತವಾಗಿದೆ.—

“ ಸುಟಿಯದೆಬನ್ನಿ ಮೀಯೆಡೆಗೆ ಕಾದುಮಹಾಂಬುಧಿಗಾಣ್ಬ ಕೂಪದಿಂ |
ಕೆಳಗಣದೊಂದು ತಾಣದೊಳಗಿರ್ದಮಳ್ದಾವರೆಯಂತೆ ತೋರ್ಕೆಯು ||
ರ್ಬಟಿಯದೆ ತಳ್ತ ಪೆರ್ಮೊಲೆಗಳೊಳ್ ಕೊಳಗೊಂಡಿರೆಲೆಂದು ಕಣ್ಣ ನೀ |
ರಿಟಿದುವು, ಬಾಳೆಮೀನ್ ಜಲಮನಟ್ಟಿಸಲಾರದೆ ಕಾಱುವಂತೆವೋಲ್ || ” (೬೧೧)

(೭) ಪ್ರಾಕೃತಿಕವರ್ಣನೆಯಲ್ಲಿ ಮಾಗಿಯ ಹಿಮದ ಗಾಢವೇನೆಂದು ಕವಿ ಸುಮನೋಜ್ಞವಾಗಿ ಹೇಳಿದ್ದಾನೆ.–

" ಬೆಳಗಪ್ಪ ಜಾವದಯ್ಕಿಲ್ |
ಕೊಳೆ ಶೀತಕ್ಕಾಱದಕ್ಕಿ ತೊಟ್ಟರ್ದ ಥರಾ ||
ತಳಮೆಂಬ ಪೆಣ್ಣ ಪೊಸಕಂ |
ಚುಳಿಕೆಯ ಸೀರ್ಮುತ್ತಿನಂದಮಾದುವು ಪನಿಗಳ್ || " (೬೯೪)

(೮) ಸರೋವರವಿಹಾರವು ಕಾವ್ಯದಲ್ಲಿ ಬರುವ ವರ್ಣನಾತ್ಮಕ ಘಟ್ಟವೊಂದು. ಈ ಕವಿ ಇಡಿಯ ಪದ್ಯದಲ್ಲಿ ಶ್ಲೇಷಾತ್ಮಕವಾಗಿ ಸಕಾರಣವಾಗಿ ಸರಸ್ಸನ್ನು ಹೊಗಳಿದ್ದಾನೆ.–

" ಪೆಱಗಸಿದಾಗಿ ಮುಂತಗಲಿತಪ್ಪುದಱಿಂದೆ, ಥರಾತಳಂ ತಗು |
ಳ್ದಿಱಿಪುದಱಿಂದೆ, ಕೊಂಕಿ ಪಱಿಯುತ್ತಿರವಿಂದೆ, ಕೊಲಲ್ಕೆ ಮೊಕ್ಕಳಂ ||
ನೆಱೆದುದಱಿಂದೆ, ಸಪ್ತಮುಖದಿಂದೆ, ವಿಷೋನ್ನತಿಯಿಂದೆ, ಭೋಗದೊಳ್ |
ತುಱುಗಿರವಿಂದೆ, ಪೋಲ್ತುದು ಮಹಾನದಿ ರುಂದ್ರಫಣೀಂದ್ರರಾಜನಂ || " (೭೪೭)

(೯) ಪ್ರತಿದಿನ ಮೂಡುವ ಸೂರ್ಯನನ್ನು 'ನವೋ ನವೋ ಭವತಿ ಜಾಯಮಾನಃ' ಎಂದು ಶ್ರುತಿಯು ವರ್ಣಿಸಿದೆ; ಕಾವ್ಯದಲ್ಲಿ ಅದರ ವರ್ಣನಾಂಗವಿದ್ದೇ ಇರಬೇಕಾದುದು. ಒಣಹುಲ್ಲನ್ನು ಸುಡುವ ಕಾಳ್ಗಿಚ್ಚಿನ ಹೋಲಿಕೆಯಿಲ್ಲಿದೆ.–

" ಬಳೆದ ತಮಮೆಂಬ ಕರಡಮು |
ನಳವಲ್ಲದೆ ಸುಟ್ಟು ಕಿಡಿಸಲೆಂದಜನುದಯಾ ||
ಚಳದೊಳ್ ತಗುಳ್ಚಿ ತಳ್ತೊಡ |
ನಳುರ್ವ ದವಾಗ್ನಿಯವೊಲರ್ಕನುದಯಂಗೆಯ್ದಂ || " (೮೭೧)

(೧೦) ಅಸ್ತಮಯಕಾಲದ ಸೂರ್ಯನ ಕಿರಣ ಹರಡಿ ವಿಚಿತ್ರವಾಗಿರುವುದನ್ನು ದಿನಾಲೂ ಕಾಣುತ್ತೇವೆ. ಕವಿಯು ಅದನ್ನು ಸರಸವಾಗಿ ವರ್ಣಿಸಿದ್ದಾನೆ.–

" ಕಿರಣಂಗಳೆ ಕಾವುಗಳೆನೆ |
ಹರಿದಶ್ವಂಗಳೆ ಪಸುರ್ತ ಪಸುರೆಲೆಯೆನೆ ತೋ ||
ರ್ಪರುಣ ದಿನಮಣಿ ಬಯಲ್ದಾ |
ವರೆಯನೆ ಪೋಲ್ತಿರ್ದನಪರಗಿರಿವರ ಶಿರದೊಳ್ || " (೮೮೦)

(೧೧) ಚಂದ್ರೋದಯವು ಮನೋನಯನಾಂದಕರವು. ಕವಿಪ್ರತಿಭೆಯಲ್ಲಿ ಇದರ ದರ್ಶನದ ಬಣ್ಣನೆಯಿಲ್ಲಿದೆ.—

" ಒಡನೆ ಸುರಾಸುರರ್ ಕನಕಪರ್ವತಮಂ ಕಡೆಗೋಲ ಮಾಡಿ, ಮೇಣ್ |
ಪೆಡೆ ಪಲವಪ್ಪ ವಾಸುಕಿಮಹೋರಗನಂ ಕಡೆಗಣ್ಣಿಮಾಡಿ, ಪಾ ||
ಲ್ಗಡಲನುಪಾಯದಿಂ ಕಡೆಯೆ, ರಾಹುಗೆ ವಾಯುಪಥಾಗ್ರಮೆಂಬ ಪೆ
ರ್ಮಡಕೆಯೊಳಿಕ್ಕಿ ಕೊಟ್ಟ ಪೊಸಬೆಣ್ಣೆವೊಲಿರ್ದುದು ಚಂದ್ರಮಂಡಲಂ || " (೯೩೮)

'ಸಮುದ್ರನವನೀತ'ವೆಂದು ಚಂದ್ರನಿಗೆ ಹೆಸರಿಸುವರು (ನಾನಾರ್ಥರತ್ನಮಾಲೆ–ಇರುಗಪ ದಂಡಾಧಿನಾಥ). ಆ ಮೇರೆಗೆ ಇಲ್ಲಿ ವಿವರಿಸಲಾಗಿದೆಯೆನ್ನಬಹುದು.

(೧೨) ವನವು ಕ್ರೂರವಾಗಿದ್ದರೂ, ವನವಿಹಾರ ಬಲು ರಮ್ಯವಾಗಿದೆ. ವನದಲ್ಲಿಯ ಹಲವು ಹಕ್ಕಿಗಳ ಹೆಸರು ಕನ್ನಡದಲ್ಲಿ ಹೇಳಿವೆ—

ಕಾರಂಡಂ ಕೆಂಗಣ್ಣಂ |
ಭೇರುಂಡಂ ಪೊಱಸು ಕಾಗೆಗಂಬೊಂದುರಿಗಂ ||
ಕಾಱುಕಿಱುವೀಳೆ ಕೊಯ್ಕಂ |
ಕೀರಂ ಜಂಹರಡೆ ಸುರಗಿಗಿಡಿ ಪೆರ್ಗಿಡುಗಂ ||

ಕೋಗಿಲೆ ಚಾದಗೆ ಪೋದಗೆ |
ಮೂಗಿಗಲಿಂ ಜಂಚೆ ಕೊಂಚೆ ನೂಲೆಳಗಂಪಂ ||
ಕಾಗೆ ಪೊಣರ್ವಕ್ಕಿ ಪೊಂಗುರು |
ಗೂಗೆ ಮುಕುಂದಂ ಬಲಾಕೆ ಲಾವುಗೆ ಸೇನಂ ||" (೧೦೪೩-೪)

(೧೩) ಮೃಗಬೇಟೆಯು ರಾಜನ ಕರ್ತವ್ಯ, ಅತಿಯಾದರೆ ಅಹಿತವೆನ್ನುವುದು. ಇಲ್ಲಿ ಒಂದೆಡೆ 'ಶೂದ್ರಕ'ನ ಹೆಸರಿದೆ. ಉಪಮೆಯಿಂದ ಕೂಡಿದ ಈ ಪದ್ಯಗಳು ಸೊಗಸಾಗಿವೆ.—

ಕೀಲಿಸೆ ಕಂಧರದೊಳ್ ಭೂ |
ಪಾಲಕನಿಡೆ ನೊಂದ ಪಂದಿ ತಿರುಗುವ ಪದದೊಳ್ ||
ಕೋಲಿಂದಾಢುವ ತಿಗುರಿಯ |
ವೋಲಂತಿರೆ ತೋಱುತಿಟ್ಟ ತನು ಕೆಡೆವಿನೆಗಂ ||

ತುಂಗಗಿರಿ ಶಿಖರದಿಂದಂ |
ಲಂಗಿಸಿ ಶೂದ್ರಕನ ಪೊಳೆವ ಸುರಿಗೆಯ ಮೊನೆಯೊಳ್ ||
ಪೊಂಗಿ ಸೊಡರ್ಗುಡಿಯ ಮೇಲೆ ಪ |
ತಂಗಂ ಪಾಯ್ವಂತೆ ಪಾಯ್ದು ಬರ್ದುದು ಸಿಂಗಂ ||". (೧೧೧೩-೪)

(೧೪) ಲೌಕಿಕಸುಖದ ಪರಾಕಾಷ್ಠೆಯೆಂದರೆ ಶೃಂಗಾರಮಯ ದಾಂಪತ್ಯ, ಗಂಡ ಹೆಂಡಿರ ಬೇಟ, ಸಂತತಿಯುತ್ಪತ್ತಿಗಳೆಂದರೆ ಸುಳ್ಳಲ್ಲ. ಈ ವಿಭಾಗವು ಇಲ್ಲಿ ಅತ್ಯುದಾತ್ತವಾಗಿ, ಶಾಸ್ತ್ರೀಯವಾಗಿ ಬಿತ್ತರಿಸಲಾಗಿದೆ.—

"ಚರಣಾಲಕ್ತಕ ಲಾಂಛನಂ ನಿಟಿಲದೊಳ್........ವಿಚಿ |
ತ್ರರತ ಪ್ರೌಢತೆ ಭಾವಗಮ್ಯಮೆನಿಕುಂ ಶ್ರೀರೂಪಕಂದರ್ಪನಾ ||"
"ಸಮಪಾದಂ ಕಟಿಪಾರ್ಶ್ವದಲ್ಲಿ ನಿಲೆ....ಸಮಸತ್ತ್ವಂಬಡುವಂತಿರಾಯ್ತು ಸುರತ
ಪ್ರಾರಂಭಕೋಳಾಹಳಂ ||"
"ಒಡನೊಡನಪ್ಪಿದರ್ ಭರದ ಕಾಳಸೆಯಂತಿರೆ ತಮ್ಮೊಳಿರ್ವರುಂ" (೬೫೫-೭)

"...ಚಿತ್ರಾಸನೆ ತಚ್ಚಿತ್ತಪ್ರಿಯಂಗೇಂ ಮೆರೆದಳೊ ಸುರತಕ್ರೀಡೆಯಂ ಪ್ರೌಢಿಯಿಂ ದಂ ॥"
"ಸಮರತಸೌಖ್ಯದೊಳ್ ಸತಿ.... ಶರೀರಮನೊಕ್ಕು ತನ್ನ ನೋರಮಣ
ನ ಹೃನ್ನಿಧಾನಮನುಪಾರ್ಜಿಪ ಯೋಗಿನಿಯಂತಿರೊಪ್ಪಿದಳ್ ॥" (೬೬೪–೫)

ಇದೊಂದು ಪದ್ಯದಲ್ಲಿ ನಾಯಕಿ 'ವಿನಯವತಿ'ಯ ಹೆಸರಿದೆ—

"ಸುಯ್ಯ ಮಿಡುಪುಡುಗದಿರೆಯುಂ।
ಮೆಯ್ಯರೆಮುಳ್ಗದೆಯುಮಂತೆ ಲುಂಪದಿನಿರುಳೊಳ್ ॥
ಬಯ್ಯಲೆ ಪೊಯ್ಯಲೆ ಕುರುಳಂ।
ಕೊಯ್ಯಲೆ ಬೆಳಗಾಯ್ತು ವಿನಯವತಿಗಂ ಪತಿಗಂ ॥" (೬೭೬)

ಭವಭೂತಿಯು 'ರಾತ್ರಿರೇವ ವ್ಯರಂಸೀತ್' ಎಂದಂತೆ ಸೊಗಸಾಗಿದೆ.

(೧೫) ರಾಜನ ವಿಜಯಯಾತ್ರೆಗೆ ಹಲವು ಧುರಂಧರರು ಸೇರುತ್ತಾರೆ. ಅವರ ಮಾತುಗಳು ಕೆಚ್ಚಿನಿಂದ ಕೂಡಿವೆ. ಇಲ್ಲಿಯ ಉತ್ಸಾಹ ಅಭಿನಂದನೀಯ ವಾಗಿದೆ.—

"ಇಱಿಯದೆ ಕೆಮ್ಮನುಂತೆ ಭುವನಂಗಳಸುಂಗೊಳೆ ತಕ್ಕುದೆಂದೊಡೇ।
ಮಱುಕಮನೆಂಬುದೇವಿರಿದಿದೆನ್ನ ಭುಜಾಸಿಗೆ ತೇದು ಪೂಸಲುಂ॥
ನೆಱೆಯದು, ನೀನಿರಾನೆ ರಿಪುಸೇನೆಗೆ ಸಾಲ್ವೆನವುಂಕಿ ಪೇಡಿಪಾಡಿಗ।
ಟ್ಟಱಿವೆಡೆಗೈಯ ಕೈಯುಗುರೆ ಸಾಲದೆ ನಚ್ಚಿನ ಕೈದುವೇಟ್ಟಿಪ್ಪೆದೇ ॥" (೪೧೧)

ಒಡನೆ ದರಿದ್ರರೆಲ್ಲಮಭಿಮಾನಿಗಳಪ್ಪೊಡಂ, ಅಳ್ವನಿಚ್ಚೆಯಂ।
ನುಡಿವವರೆಲ್ಲಮಾತನೆಡಱೊಳ್ ನಿಲಲಾರ್ಪೊಡಂ, ಅರ್ಥರಾಶಿಯಂ॥
ಪಡೆವವರೆಲ್ಲಮೋಗಡಿಸದೀವೊಡಂ, ಆಜಿಯೊಳುರ್ಚಿ ಕೈದುವಂ।
ಪಿಡಿವವರೆಲ್ಲಮಣ್ಣುಮ್ಮವೊಡಂ, ಈ ಯುಗಮೇಕೆ ಕನಿಷ್ಠಮಪ್ಪುದೋ ॥" (೪೨೪)

ಆರ ನೆಗೞ್ತೆಯುಂ ಬಲಮುಮಾಯತಿಯುಂ ಚಲಮುಂ ಪ್ರಭುತ್ವಮುಂ।
ದೂರದೊಳಿರ್ದು ನೋಡೆ ಸೊಗಯಿಪ್ಪುದು ಬೆಟ್ಟದ ನುಣ್ಪಿನಂತೆ ಪೊ॥
ಕ್ಕಾರಯೆ ಕಾಣಲಾಗದಱಿನಲ್ಲಿರೆ ಬಲ್ಲಿದರಲ್ಲದಂತೆ ಕಾ।
ವೇರಿಯ ನೀರ್ವೊಲಿತ್ತಬರೆ ನಿಮ್ಮಬಲಂ ಶತಖಂಡಮಾಗದೇ ॥" (೪೩೫)

"ಪಱೆಯ ಧರಾತಳಮಂ ಗುಣ।
ದಱಿವನೊಡಂಬಡದ ಕಾಮುದಂಗೀಯದೆ, ಆದ॥
ರ್ಕಱಿಪೆ ದೆಸೆಗಳ್ಗೆ ಕೆಮ್ಮನೆ।
ಮೊಱಗುವಿರೇಂ, ಮೊಱಗಿದಂತೆ ಕೊಳ್ವುವೆ ಮುಱಗಳ್ ॥" (೪೩೭)

(೧೬) ಸೇನೆ ಮುನ್ನಡೆದುದನ್ನು ವರ್ಣಿಸುವಲ್ಲಿ ಗಂಗರಾಜನ ನೀತಿಮಾರ್ಗ ವೆಂಬ ಬಿರುದು ಹೇಳಿದಂತಿದೆ (೪೬೩). ಇದರಂತೆ 'ಪ್ರತಿರೂಪ ಶೂದ್ರಕ,' 'ಉದಾರ ಮನ್ಮಥ'ನೆಂಬ ಬಿರುದುಗಳೂ ಕಾಣುತ್ತವೆ (೫೩೪–೫). 'ಕಾವ್ಯಾವಲೋಕನ'ದಲ್ಲಿ ಎತ್ತಿದ ಒಂದು ಪದ್ಯದಲ್ಲಿ ಯುದ್ಧವರ್ಣನೆಯಿದೆ.—

"....ಪಾವಿನ ಬೆನ್ನೊಳಾದುವನತಿಪ್ರಾರಂಭದಿಂದೇಱಿಮಂ।
ಜನಕಾಧೀಶತನೂಜೆಯಾಣ್ಮನಿಸುವಂತೆಚ್ಚಂ ಮಹೇಂದ್ರಾಂತಕಂ॥ (೩೫೧)

(೧೭) ರಾಜರಿಗೆ ಯುದ್ಧವು ಯಜ್ಞದಂತೆ ಪವಿತ್ರ ಕರ್ತವ್ಯವಾಗಿದೆ. ಆ ಯುದ್ಧರಂಗದ ವರ್ಣನೆ ಗದ್ಯರೂಪದಲ್ಲಿ ಶ್ಲೇಷಮಯವಾಗಿ ಭಯಂಕರವಾಗಿ ಇಲ್ಲಿ ಹೇಳಿದೆ—"ಸಂಗರಾರ್ಜುನಂ ಸಿದ್ಧನಂತಾಸಿದ್ಧಕ್ಷೇತ್ರಮಂ ಪುಗುತಂದನದೆಂತಪ್ಪುದೆಂದೊಡೆ...." (೫೯). ಯುದ್ಧದಲ್ಲಿ ಈ ರಾಜನಿಗೆ ಗೆಲುವು ದೊರೆಯಿತೆಂದು ವ್ಯಾಜಸ್ತುತಿರೂಪದಲ್ಲಿ ವರ್ಣಿಸಲಾದ ಪದ್ಯವು 'ಕಾವ್ಯಾವಲೋಕನ'ದಲ್ಲಿದೆ.

"ಗೆಲವಂ ಕೊಂಡಭಿಮಾನಿಯಾದನ್, ಒಳಕೊಂಡನ್ಯಾವನೀಕಾಂತೆಯಂ |
ಸಲೆ ಶೌಚವ್ರತಿಯಾದನ್, ಇರ್ತರದೆರಳ್ಮಾತಾಡಿ ಬಟ್ಟಿಂ ಜಗ ||
ದ್ವಲಯಕ್ಕೊರ್ನುಡಿಕಾಱನಾದನ್, ಅನಯಕ್ಕುಳ್ಕಿಕ್ಕಿ ಸಂಗ್ರಾಮದೊಳ್ |
ಕಲಿಯಾದಂ, ವಿಪರೀತಜಾತಚರಿತಂ ಭೂಪಾಲರೊಳ್ ಕಾಮದಂ ||" (೨೬೧)

ಶೂದ್ರಕನಿಗೆ 'ವಿಷಮಶೀಲ'ನೆಂದು ಹೆಸರಿದೆ; ಅದನ್ನು ವಿವರಿಸಿ ಈ ಗಂಗರಾಜನಿಗೆ ಹೇಳಿದೆ.

(೧೮) ರಾಜನು ವಿಜಯಿಯಾಗಿ ಮರಳಿ ಬರುವ ವರ್ಣನೆಯಿದು.

"ನಲ್ಲಂಬಿಂದಿಸೆ ಪುಷ್ಪಬಾಣನಿರ್ದಯಂ ಬೆಂಬೀಟ್ಟು ಬೆಳ್ಪಾಗಿ ತ |
ಕ್ಕೆಲ್ಲಂ ಕೆಟ್ಟಿರ್ದಗೆಟ್ಟು ಜಂಗಮಲತಾ ಸಲ್ಲೀಲೆಯರ್ ಬಾಲೆಯರ್ ||
ಚೆಲ್ಲಂ ಬೇಂಟದ ತೋಟಯೊಳ್ ತೊಡರೆ ಕಂಡತ್ತಟ್ಟಿಱಿಕೊಳ್ ನೋಡೆ ಮೆ |
ಯ್ಯೆಲ್ಲಂ ದಿಟ್ಟಿಗಳಾದೊಡಿಂದ್ರನೆನಿಸಲ್ಕಾರ್ತಂ ಮಹೇಂದ್ರಾಂತಕಂ ||" (ಕಾ. ಸಾ. ೫೫೧)

ಕೊನೆಮಾತು : ೧ನೆಯ ಗುಣವರ್ಮನು 'ವಿನಯವತಿ ಶೂದ್ರಕ ಕಥೆ' ಹಾಗೂ 'ಅವಂತಿಸುಂದರೀ ಕಥೆ'ಗಳನ್ನು ಆಧರಿಸಿ, ಗಂಗರಾಜ ಎರೆಯಪ್ಪನನ್ನು ಅಭೇದ ರೂಪದಲ್ಲಿರಿಸಿ, ಕನ್ನಡದಲ್ಲಿ ಈ ಮಹಾಕಾವ್ಯವೊಂದನ್ನು ಬರೆದನು. ಈ ಚಂಪೂಕಾವ್ಯದಿಂದ ೧೫–೧೬ನೆಯ ಶತಕದ 'ಕಾವ್ಯಸಾರ'ದಲ್ಲಿ ಹಲವು ಪದ್ಯಗಳು ಉದ್ಧರಿಸಿವೆ. ಆಗ ಈ ಕಾವ್ಯವು ಉಪಲಬ್ಧವಿರಬೇಕು. ಶೂದ್ರಕರಾಜನೆಂದರೆ ಪ್ರಥಮ ವಿಕ್ರಮಾದಿತ್ಯನೆಂದು ಹೆಸರುಗೊಂಡವನ ಕಥೆಯೇ ಇಲ್ಲಿ ಹೇಳಿದೆಯೆಂದು ನಾವು ತಿಳಿಯಲಡ್ಡಿಯಿಲ್ಲ! ಇತಿಶಂ.

—ವಿದ್ವಾನ್ ಕೆ. ವೆಂಕಟರಾಯಾಚಾರ್ಯ

ಕೆಲವು ಸಂಕೇತಗಳ ವಿವರ

ಕ. ಕ. ಚ. =ಕರ್ಣಾಟಕ ಕವಿಚರಿತೆ
ಕ. ಸಾ. ಚ. =ಕನ್ನಡ ಸಾಹಿತ್ಯ ಚರಿತ್ರೆ
ಕ. ಅ. ಮ. =ಕರ್ಣಾಟಕ ಆರಸು ಮನೆತನಗಳು
ಸಂ. ನಾ. =ಸಂಸ್ಕೃತ ನಾಟಕ
ಸಂ. ಕ. ಚ. =ಸಂಸ್ಕೃತ ಕವಿಚರಿತೆ

ಪರ್ಣಕುಟಿ ಹೂಬಿಟ್ಟು ಪಂಚವಟಿಯಾಗಲಿ

ಕೊಳೆಯೊಟ್ಟಿರುವೀ ಹಳೆಯೆಲುಬು ಕಳಚಿಟ್ಟು
ಹೊಸ ಜನ್ಮ ಚಂಡಾಡಲಿ ಬೆಳಕಿನಲ್ಲಿ ;
ಹುರುಪು ಹುಮ್ಮಸಿನ ಬೀಜಬಿನ್ನಾಣವೆಸೆಯಲಿ
ಹಚ್ಚ ಹಸುರಿನ ಕನಸು ಪುಟಿಯಲಿ.

ಪರೆ ಬಿಸುಟು ಹಾವುಸರ ಹೂವಾಗಿ ಹರಿಯಲಿ
ಮಣ್ಣು ಕಣಕಣ ನಗಲಿ ಚುಂಬಕ ಕ್ಷೇತ್ರ ;
ಬೊಗಸೆ ಮಣ್ಣಿನ ತುಂಬ ನಕ್ಷತ್ರ ನಟಿಸಲಿ
ಪರ್ಣಕುಟಿ ಹೂಬಿಟ್ಟು ಪಂಚವಟಿಯಾಗಲಿ.

ಬಿದುರು ಬೆಟ್ಟಗಳಿಂದ ಮುರಲಿ ನಾದವು ಅದುರಿ
ಹಳದಿ ಚಿಂತೆಗಳುದುರಿ, ಹಸುರಾಡಲಿ ;
ಹದಗೆಟ್ಟ ಹರಳು-ಧೂಳಿ-ತಗ್ಗಿನ ರಸ್ತೆ-ನೆಲ
ಸಿಮೆಂಟು-ಡಾಂಬರಿನ-ದರ್ಪಣಗಳಾಗಲಿ.

ದಾನವ ಕೈಕಟ್ಟಿರುವ ಕಪ್ಪು ಕಟ್ಟೆಯನೊಡೆದು
ಉದಯ ಸ್ವಚ್ಛಂದವಾಗಿ ಉಕ್ಕಿ ಬರಲಿ ;
ಹದ್ದು-ಮನ ಕಡಿದು, ಗೂಬೆಯಿರುಳಳಿದು
ನಾಯಿ ಪ್ರಾಮಾಣಿಕದ ದಿನ ಮೂಡಲಿ.

—ಬುದ್ದಣ್ಣ ಹಿಂಗಮಿರೆ

ಸ್ಫೂರ್ತಿ

೧

ಗದುಗಿನ ಭಾರತವನ್ನು ಬರೆದ ನಾರಣಪ್ಪನ ಕೃತಿರಚನೆಯ ವಿಧಾನವನ್ನು ಕುರಿತು ಒಂದು ಸ್ವಾರಸ್ಯವಾದ ದಂತಕಥೆ ಉಂಟು: ನಾರಣಪ್ಪ ದಿನವೂ ಸ್ನಾನ ಮಾಡಿ ಶುಚಿರ್ಭೂತನಾಗಿ ಒದ್ದೆ ಬಟ್ಟೆಯನ್ನುಟ್ಟುಕೊಂಡು ವೀರನಾರಾಯಣನ ಸನ್ನಿಧಿಯಲ್ಲಿ 'ಲಿಪಿಕಾರ'ನಾಗಿ ಕುಳಿತುಕೊಳ್ಳುತಿದ್ದನಂತೆ. ಎಲ್ಲಿನತನಕ ಮೈಮೇಲಿನ ಆ ಮಡಿ ಒದ್ದೆಯಾಗಿರುತ್ತಿತ್ತೋ ಅಲ್ಲಿನತನಕ ಆತ ಕೃತಿರಚನೆಯಲ್ಲಿ ಮುಳುಗಿರುತಿದ್ದನಂತೆ; ಯಾವಾಗ ಆ ಬಟ್ಟೆ ಆರಿತೋ ಆಗ ಆತ ತನ್ನ ರಚನೆಯನ್ನು ನಿಲ್ಲಿಸುತಿದ್ದನಂತೆ.

ಈ ದಂತಕಥೆ ಸ್ಫೂರ್ತಿತತ್ವವನ್ನು ಬಹು ಸೊಗಸಾಗಿ ನಿರೂಪಿಸುತ್ತದೆ; ಸ್ಫೂರ್ತಿತತ್ವವನ್ನು ಕುರಿತು ಎಲ್ಲ ದೇಶಗಳಲ್ಲಿಯೂ ಪ್ರಚಲಿತವಾದ, ಸಹಜವಾದ ಧಾರ್ಮಿಕ ಸಂಬಂಧಿಯಾದ ನಂಬಿಕೆಗಳನ್ನೂ ಮತ್ತು ಅದರ ವ್ಯಾಪಾರವನ್ನೂ ಸಂಕೇತಿಸುತ್ತದೆ.

ನಾರಣಪ್ಪ ವೀರನಾರಾಯಣನ ದೇಗುಲದಲ್ಲಿ ಎಲ್ಲಿನತನಕ ಮೈಮೇಲಿನ ಬಟ್ಟೆ ಒದ್ದೆಯಾಗಿರುತಿತ್ತೋ ಅಲ್ಲಿನತನಕ ಕೃತಿರಚನೆಯಲ್ಲಿ ಮುಳುಗಿರುತಿದ್ದ ಎಂಬ ಕಥೆಯನ್ನೂ, 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ'—ಎಂಬ ಅವನ ಹೇಳಿಕೆಯನ್ನೂ ಒಟ್ಟಿಗೆ ಇರಿಸಿಕೊಂಡು ಪರಿಶೀಲಿಸಿದರೆ, ನಾರಣಪ್ಪ 'ವೀರನಾರಾಯಣ' ಎಂಬ ದಿವ್ಯ ಶಕ್ತಿಯೊಂದರ ಉಪಕರಣವಾಗಿ ಕೃತಿರಚನೆ ಮಾಡುತ್ತಿದ್ದ, ಅದೂ ಯಾವುದೋ ಒಂದು ನಿಯತಕಾಲದಲ್ಲಿ, ತನ್ನ ಶುಚಿತ್ವದಿಂದ ಕವಿವ್ಯಕ್ತಿ ಆ ದಿವ್ಯಶಕ್ತಿಯ ಮಾಧ್ಯಮವಾಗಲು ಪಾತ್ರನಾದ ಸಮಯದಲ್ಲಿ, ಅವನು ಉಟ್ಟ ಮಡಿ ಆರುವತನಕ ಅಥವಾ ಅವನು ಸ್ಫೂರ್ತಿಯಲ್ಲಿರುವತನಕ ಬರೆಯುತ್ತಿದ್ದ ಎನ್ನುವ ವಿಷಯ ಸ್ಪಷ್ಟವಾಗುತ್ತದೆ. ನಾರಣಪ್ಪನ ಕೃತಿ ಸಮಸ್ತವನ್ನೂ ಈ ಬೆಳಕಿನಲ್ಲಿಯೂ ಪರಿಶೀಲಿಸಿದ ವಿಮರ್ಶಕರು ಕೆಲವು ವೇಳೆ ಟೀಕಿಸಿದ್ದೂ ಉಂಟು: ಈತನ ಕೃತಿಯಲ್ಲಿ ಎಷ್ಟೋ ಭಾಗಗಳು ಆತ ಉಟ್ಟ 'ಮಡಿ' ಆರಿದ ಮೇಲೆಯೂ ಬರೆದವುಗಳಾಗಿವೆ—ಎಂದು. ಎಂದರೆ ಆತನ ಕೃತಿಯಲ್ಲಿ ಸ್ಫೂರ್ತಿಯಿಂದ ಬರೆದ ಭಾಗಗಳು ಹೇಗೋ ಹಾಗೆಯೆ ಸ್ಫೂರ್ತಿಯಿಲ್ಲದೆ ಕೇವಲ ರಚನಾನೈಪುಣ್ಯದಿಂದಲೂ ಬರೆದ ಭಾಗಗಳು ಉಂಟು—ಎಂದು !

ಇದರಿಂದ ಸ್ಪಷ್ಟವಾಗುವುದು ಇಷ್ಟು: ಕವಿಕೃತಿಯಲ್ಲಿ ಕೆಲವೆಡೆ ಏನೋ ಹೊಳಪು, ಏನೋ ಸೆಳೆವು ಇರುವ ಭಾಗಗಳುಂಟು. ಅಂಥ ಕಡೆ ನಮಗೂ 'ಮೈಯಲಿ ಮಿಂಚಿನಹೊಳೆ ತುಳುಕಾಡುವುದು.' ನಾವು ಅಂಥ ಸಮಯದಲ್ಲಿ ಒಂದು ಬಗೆಯ ಸುಖ ರೋಮಾಂಚನವನ್ನು ಪಡೆಯುತ್ತೇವೆ. ಆ ಉಜ್ವಲವಾದ

ಭಾಗಗಳನ್ನು ಕುರಿತು ನಾವು, ನಿಜವಾಗಿಯೂ ಈ ಭಾಗಗಳನ್ನು ಕವಿ ಸ್ಫೂರ್ತಿಯಿಂದ ಬರೆದಿದ್ದಾನೆ, ಇಲ್ಲಿ ನಿಜಕ್ಕೂ ಪ್ರತಿಭೆಯ ಉಜ್ವಲತೆ ಇದೆ ಎನ್ನುತ್ತೇವೆ. ಮತ್ತೆ ಕೆಲವೆಡೆ ಕವಿಕೃತಿ ರೂಪದಲ್ಲಿ ಕಾವ್ಯವಾಗಿದ್ದರೂ ನಮ್ಮ ಮನಸ್ಸನ್ನು ಆ ಭಾಗಗಳು ಆಳವಾಗಿ ವ್ಯಾಪಿಸದೆ, ಸುಮ್ಮನೆ ರಂಜಿಸಬಹುದು. ಕೇವಲ ಸಾಂಪ್ರದಾಯಿಕವಾದ ವರ್ಣನೆಗಳ ಮೂಲಕ ಕಥಾಸರಣಿಯನ್ನು ಛಂದೋಬದ್ಧವಾಗಿ ಎಳೆದುಕೊಂಡು ಹೋಗುವಲ್ಲಾಗಲಿ, ಕವಿ ತನ್ನ ಮತಧರ್ಮಕ್ಕೆ ಸಂಬಂಧಪಟ್ಟ ಉಪದೇಶಗಳನ್ನು ಹೇಳುವಲ್ಲಾಗಲಿ, ಅಥವಾ ಕೇವಲ ತನ್ನ ರಚನಾನೈಪುಣ್ಯವನ್ನು ಪ್ರದರ್ಶಿಸಲೆಂದು ಬರೆದ ಭಾಗಗಳಲ್ಲಾಗಲಿ ನಮಗೆ ಅನ್ನಿಸುತ್ತದೆ, ಇಲ್ಲಿ ಸ್ಫೂರ್ತಿಯ ಸ್ಪರ್ಶವಿಲ್ಲ ಎಂದು. ಅಂಥ ಕಡೆ ಕವಿಯ ಪ್ರತಿಭೆ ಬರೀ ತೆಳ್ಳಗಾಗಿ, ಕಾವಿಲ್ಲದೆ ಹೊಳಪಿಲ್ಲದೆ ಕೇವಲ ಬುದ್ಧಿಗೆ ವಶವಾಗಿ ಕೆಲಸಮಾಡುತ್ತದೆ ಎಂಬುದನ್ನು ಗುರುತಿಸುತ್ತೇವೆ. ಹೀಗೆ ಕವಿಕೃತಿಯಲ್ಲಿ ಕೆಲವೆಡೆ ವಿದ್ಯುತ್ ಸಂಚಾರವೂ, ಕೆಲವೆಡೆ ಕೇವಲ ರಚನಾನೈಪುಣ್ಯವೂ ಕಾಣಿಸುತ್ತದೆ. ಇದು ಸಹೃದಯರನೇಕರ ಅನುಭವ.

ಅನೇಕ ಕವಿಗಳ ಅನುಭವ ಇದು: ಆಗಾಗ ಅವರನ್ನು ಅನೂಹ್ಯವಾದ ಅನಿರೀಕ್ಷಿತವಾದ ಶಕ್ತಿಯೊಂದು ತೆಕ್ಕನೆ ಆಕ್ರಮಿಸುತ್ತದೆ. ಆಗ ಅವರು ಉಳಿದ ಸಮಯಗಳಲ್ಲಿಗಿಂತ ಸುಲಭವಾಗಿ ಮತ್ತು ಸೊಗಸಾಗಿ ಕೃತಿರಚನೆ ಮಾಡಬಲ್ಲರು. ಅತ್ಯಂತ ಜಾಗರೂಕತೆಯಿಂದ ಮತ್ತು ವಿಶೇಷ ಪ್ರಯತ್ನಗಳಿಂದ ಕೃತಿರಚನೆ ಮಾಡುವ ಕ್ಷಣಗಳಿಂದ ಬೇರೆಯಾದ ಈ ಸಮಯದಲ್ಲಿ ತಟಕ್ಕನೆ ಎಲ್ಲಿಂದಲೋ ಪಂಕ್ತಿ ಪಂಕ್ತಿಗಳೇ ಇಳಿದುಬರುವಂತೆ ಕವಿಗೆ ಅನುಭವವಾಗುತ್ತದೆ. ಬಹು ಹಿಂದೆಯೇ ಪ್ಲೇಟೋ ಹೇಳಿದ: "ಎಲ್ಲ ಉತ್ತಮ ಕವಿಗಳೂ—ಭಾವಗೀತೆಯ ಕವಿಗಳಾಗಲಿ, ಮಹಾಕಾವ್ಯವನ್ನು ಬರೆದ ಕವಿಗಳಾಗಲಿ—ತಮ್ಮ ಅತ್ಯುತ್ತಮ ಕೃತಿಗಳನ್ನು ಬರೆದದ್ದು ಕೇವಲ ಕುಶಲತೆಯಿಂದ ಅಲ್ಲ, ಆವೇಶದಿಂದ, ಸ್ಫೂರ್ತಿಯಿಂದ ಮತ್ತು ಬೇರೊಂದು ಶಕ್ತಿಗೆ ವಶವಾಗುವುದರಿಂದ……..ಈ ಒಂದು ಸ್ಥಿತಿಗೆ ಒಳಗಾಗದಿರುವಾಗ ಕವಿ ಕೇವಲ ನಿರ್ಬಲ; ಅಂಥ ಹೊತ್ತಿನಲ್ಲಿ ಭವಿಷ್ಯವಾಣಿಯನ್ನು ನುಡಿಯುವುದು ಆತನಿಗೆ ಅಸಾಧ್ಯ."[1]

'ಸ್ಫೂರ್ತಿ' ವಿಶಾಲವಾದ ಅರ್ಥದಲ್ಲಿ ಕೇವಲ ಕಲಾನಿರ್ಮಿತಿಗೆ ಮಾತ್ರ ಸೀಮಿತವಾದುದಲ್ಲ. ಬದುಕಿನಲ್ಲಿ ಎಲ್ಲೆಲ್ಲಿ ವ್ಯಕ್ತಿಗಳು—ಸಾಮಾನ್ಯನಿಂದ ಹಿಡಿದು ಅಸಾಮಾನ್ಯನ ತನಕ—ಯಾವುದೋ ಒಂದು ಕ್ಷಣದಲ್ಲಿ ತಮ್ಮ ಅರಿವಿಗೆ ಮೀರಿದ ಶಕ್ತಿವಿಶೇಷವೊಂದರ ಸೆಳೆತಕ್ಕೆ ಸಿಕ್ಕು ಅಪೂರ್ವವಾದ, ವಿಸ್ಮಯಕಾರಿಯಾದ ಭಾವನೆಗಳನ್ನು, ಸತ್ಯಗಳನ್ನು ಕಂಡುಕೊಳ್ಳುವರೋ ಮತ್ತು ಕೃತಿಗಳನ್ನು ನಿರ್ವಹಿಸುವರೋ ಅಂಥ ಎಲ್ಲ ಕ್ರಿಯೆಗಳಿಗೂ ಈ ಮಾತು ಅನ್ವಯಿಸುತ್ತದೆ. ದೊಡ್ಡ ದೊಡ್ಡ ರಾಜಕೀಯ ಭಾವನೆಗಳು, ಅಪೂರ್ವವಾದ ವೈಜ್ಞಾನಿಕ ಸತ್ಯಗಳು,

[1] Herbert Read: Essays in Literary Criticism, p. 133.

ಪಂಡಿತರ ಅಸಾಧಾರಣ ಸಂಶೋಧನೆಗಳು, ತತ್ವಜ್ಞರ ತತ್ವಗಳು ಎಷ್ಟೋಸಲ ಸ್ಫೂರ್ತಿಯಿಂದ ಹೊಳೆದವುಗಳಾಗಿವೆ. ಸ್ಫೂರ್ತಿ ಎನ್ನುವುದು ಹೇಗೋ ಬಂದು ಏನೋ ಒಂದನ್ನು ಹೊಳೆಯಿಸಿ ಹೋಗುವ ವಿಶೇಷಾನುಭವ. ಅದೊಂದು ಅನಿರೀಕ್ಷಿತ ಶಕ್ತಿಸಂಚಾರ. ಅದರ ಮುಖ್ಯ ಲಕ್ಷಣ ಆವೇಶ; ಅದರ ಪರಿಣಾಮ ಅಪೂರ್ವ ಕೃತಿನಿರ್ಮಾಣ.

ಕವಿ ತನ್ನ ಅತ್ಯುತ್ತಮ ಕೃತಿಗಳನ್ನು ರಚಿಸುವುದು ಸ್ಫೂರ್ತಿಯಿಂದ ಎನ್ನುವ ಮಾತು ಅತ್ಯಂತ ಪ್ರಾಚೀನ ಕಾಲದಿಂದಲೂ ಬಂದಿದೆ. "ಸ್ಫೂರ್ತಿತತ್ವ, ಮಾನವತೆ ಯಾವುದು ಜಡ, ಯಾವುದು ಚೈತನ್ಯ ಎನ್ನುವುದನ್ನು ಗುರುತಿಸಲು ಕಲಿಯಿತೋ ಅಂದೇ ಆರಂಭವಾಗಿರಬೇಕು. ಎಂದರೆ ಅದು ಇತಿಹಾಸಕ್ಕೆ ಅಸ್ಪಷ್ಟವಾದ ಮಬ್ಬಿನಾಚೆಯ ಸಂಗತಿ........ ಯಾರೋ ಒಬ್ಬ ಮೈದುಂಬಿ ಮಾತನಾಡಿದಾಗ ಆತನ ಭೌತಿಕ ಶರೀರದೊಳಕ್ಕೆ ದೈವೀಚೈತನ್ಯವೆ ಪ್ರವೇಶಿಸಿದಂತೆ ತೋರಿರಬೇಕು. ಹಿಬ್ರೂ ಪ್ರವಾದಿಗಳೆಲ್ಲರೂ ಭಗವದ್ವಾಣಿಯಿಂದ ಮೈದುಂಬಿದವರೆಂದೂ ಅಥವಾ ಸ್ಫೂರ್ತಿಯಿಂದ ಮಾತನಾಡಿದವರೆಂದೂ ಪರಿಗಣಿಸಲ್ಪಟ್ಟಿದ್ದಾರೆ. ಕ್ರಮೇಣ ಈ ಭಾವನೆ ಕವಿಗೂ ಅನ್ವಯವಾಗತೊಡಗಿದುದು ಸಹಜವಾಗಿಯೇ ತೋರುತ್ತದೆ. ಏಕೆಂದರೆ ಕವಿಯೂ ಪ್ರವಾದಿಯಂತೆ ಅತಿಮಾನುಷವಾಣಿಯಿಂದ ಮಾತನಾಡುವಂತೆ ಅವರಿಗೆ ತೋರಿರಬೇಕು."[2] ಹೀಗಾಗಿ ಕವಿಕರ್ಮವೂ ಒಂದು ಧಾರ್ಮಿಕ ಕ್ರಿಯೆಯೇ ಆಯಿತು. ಕಲಾಕೃತಿ ದಿವ್ಯಚೈತನ್ಯವೊಂದರ ಕೃಪಾವಿಶೇಷದ ಪರಿಣಾಮ ಎನ್ನುವ ಭಾವನೆ ಎಲ್ಲ ದೇಶದ ಪ್ರಾಚೀನ ಕಾಲದ ನಂಬಿಕೆಯಾಗಿದೆ. ಈ ನಂಬಿಕೆಯನ್ನು ಕವಿಗಳು ತಮ್ಮ ಕೃತಿಗಳಲ್ಲಿ ಸ್ಫೂರ್ತಿಯ ಆವಾಹನೆ ಮಾಡುವಲ್ಲಿ, ಅದನ್ನೊಂದು ದೇವ–ದೇವೀರೂಪದಲ್ಲಿ ಸ್ತುತಿಸಿ ತಮ್ಮ ಕೃತಿಯನ್ನು ನೀನೇ ನಡೆಸು ಎಂದು ಕೇಳಿಕೊಳ್ಳುವ ಹಂಬಲಿಕೆಗಳಲ್ಲಿ, ಸಮರ್ಥಿಸಿದ್ದಾರೆ. ಯಾರು ತಮ್ಮ ಅಂತರಂಗದ ಪಾರಿಶುದ್ಧತೆಯಿಂದ, ಧ್ಯಾನ ಧಾರಣಾದಿ ಸಾಮರ್ಥ್ಯಗಳಿಂದ ಚಿತ್ತಸ್ವಾಸ್ಥ್ಯವನ್ನು ಗಳಿಸಿಕೊಳ್ಳುವರೋ ಅಂಥ ಸಾಧಕರಲ್ಲಿ ಕೃಪಾರೂಪವಾದ ಸ್ಫೂರ್ತಿ ಪ್ರವಹಿಸಿ ಕಲಾನಿರ್ಮಿತಿಗೆ ಕಾರಣವಾಗುತ್ತದೆ ಎನ್ನುವ ಈ ನಂಬಿಕೆ, ಈ ಸ್ಫೂರ್ತಿತತ್ವ ಅತ್ಯಂತ ಉನ್ನತವಾದ ಧಾರ್ಮಿಕ ಅಥವಾ ಆನುಭಾವಿಕ ತತ್ವದೊಂದಿಗೆ ತನ್ನ ಅಭಿನ್ನತೆಯನ್ನು ಸ್ಥಾಪಿಸಿಕೊಂಡದ್ದರ ಸಾಕ್ಷಿಯಾಗಿದೆ.[3]

---

[2] Herbert Read: Essays in Literary Criticism, p. 132-133.

[3] Inspiration ಎನ್ನುವ ಮಾತಿಗೆ ಮೂಲತಃ ಇರುವ ಅರ್ಥ, ಶ್ವಾಸಕೋಶದೊಳಕ್ಕೆ ಉಸಿರನ್ನು ಎಳೆದುಕೊಳ್ಳುವ ಒಂದು ದೈಹಿಕಕ್ರಿಯೆ (ಉಚ್ಛ್ವಾಸ) ಎನ್ನುವುದು; ಆದರೆ ಇದು ರೂಪಕವಾಗಿ ಮಾನಸಿಕ ಕ್ರಿಯೆಯಾದ ಕಲಾನಿರ್ಮಾಣಗಳಿಗೂ ಅನ್ವಯವಾಗಿದೆ. ಕ್ರೈಸ್ತ ಧರ್ಮಗ್ರಂಥಗಳಲ್ಲಿ ನೇರವಾಗಿ ವ್ಯಕ್ತಿ ದೈವೀಶಕ್ತಿಗೆ ವಶವಾಗುವಿಕೆ ಎಂಬ ಅರ್ಥವನ್ನು ಪಡೆದಿದೆ. ಹೀಗೆ ಇದು, ದೈಹಿಕ-ಮಾನಸಿಕ-ಧಾರ್ಮಿಕ ಕ್ರಿಯೆ ಎಂಬ ಅರ್ಥದಲ್ಲಿ ಬಳಕೆಯಾಗಿದೆ.

ಸ್ಫೂರ್ತಿಯ ವಿಚಾರದಲ್ಲಿರುವ ನಂಬಿಕೆ ಭಾರತೀಯರಾದ ನಮ್ಮಲ್ಲಿ ಇನ್ನೂ ಆ ಪರಂಪರಾಗತವಾದ ಪಾವಿತ್ರ್ಯವನ್ನೆ ಉಳಿಸಿಕೊಂಡಿರುವುದಾದರೂ, ಪಾಶ್ಚಾತ್ಯರಲ್ಲಿ ಹದಿನೇಳು ಹದಿನೆಂಟನೆಯ ಶತಮಾನದ ಹೊತ್ತಿಗೆ ಸ್ಫೂರ್ತಿಯನ್ನು ಕುರಿತು ಪರಂಪರಾಗತವಾಗಿ ಬಂದ ಈ ಭಾವನೆ ತನಗೆ ಧರ್ಮದೊಂದಿಗೆ ಇದ್ದ ಸಂಬಂಧವನ್ನು ಕಳೆದುಕೊಂಡಿತು. ವಿಲಿಯಂ ಮಾರಿಸ್ ಎಂಬಾತ ಉದ್ಘೋಷಿಸಿದ : "ಸ್ಫೂರ್ತಿ-ಗೀರ್ತಿ ಎಂಬ ಮಾತೇನಿದ್ದರೂ ಕೇವಲ ಅರ್ಥಶೂನ್ಯವಾದದ್ದು ; ಸ್ಫೂರ್ತಿ ಅನ್ನುವಂಥ ವಿಶೇಷ ಶಕ್ತಿಯೇ ಇಲ್ಲ ; ಅದೇನಿದ್ದರೂ ಕೇವಲ ರಚನಾನೈಪುಣ್ಯವಷ್ಟೇ."[3] ಮನಸ್‌ಶಾಸ್ತ್ರದ ಪ್ರಕಾರ "ಸ್ಫೂರ್ತಿ ಎನ್ನುವುದು ಕವಿನಿರ್ಮಿತಿಯಲ್ಲಿ ಕಂಡುಬರುವ ಅಜ್ಞಾತದ (Unconscious) ಅಂಶಕ್ಕೆ ಒಂದು ಸಾಂಪ್ರದಾಯಿಕವಾದ ಹೆಸರು ಮಾತ್ರ."[4] ಅದೊಂದು ನಿರಂತರವಾದ ಮಾನಸಿಕ ಉತ್ಸಾಹ. ಯಾರನ್ನು ಪ್ರತಿಭಾಶಾಲಿಗಳು ಎನ್ನುತ್ತೇವೆಯೋ ಅವರ ಕೃತಿರಚನೆಯ ಮನಃಸ್ಥಿತಿಯಲ್ಲಿ ಕಂಡುಬರುವ ಉತ್ಸಾಹರೂಪದ ಆವೇಶವೇ ಸ್ಫೂರ್ತಿ.

ಯಾವಾಗ ಸ್ಫೂರ್ತಿ ತತ್ವ ದೈವಿಕ-ಧಾರ್ಮಿಕ ಸಂಬಂಧವನ್ನು ಕಳೆದುಕೊಂಡು 'ಅದೊಂದು ಮಾನಸಿಕ ಉತ್ಸಾಹ' ಎನ್ನುವ ಸಾಧಾರಣತೆಗಿಳಿಯಿತೋ ಅಂದಿನಿಂದಲೆ ಸ್ಫೂರ್ತಿಯನ್ನು ಕುರಿತ ಪ್ರಾಚೀನ–ನವೀನ ಭಾವನೆಗಳ ಘರ್ಷಣೆ ಆರಂಭವಾದಂತೆ ತೋರುತ್ತದೆ.* ಪ್ರಾಚೀನರ ಪ್ರಕಾರ ಕಾವ್ಯಾರಂಭ ದೇವತಾಸ್ತುತಿಯಿಂದ. ಕವಿ ಅಲ್ಲಲ್ಲಿ ಮತ್ತೆ ಮತ್ತೆ ಸ್ಫೂರ್ತಿಯ ಅಧಿದೇವತೆಯನ್ನು ಆವಾಹನೆ ಮಾಡುತ್ತಾ ಮುಂದುವರಿಯುವ ಆ ರಚನೆ ಅದೆಷ್ಟು ಕೃತಕ ಅನ್ನಿಸಿದರೂ, ಕಾವ್ಯನಿರ್ಮಿತಿಗೆ

---

[3] C. M. Bowra : Inspiration and Poetry, p. 2

[4] Austin warren, Rene welleek : Theory of Literature, p. 80.

* ಮಾನವ ಮನಸ್ಸು ಏನಿದ್ದರೂ ಅನುಕರಿಸಬಲ್ಲುದೆ ಹೊರತು ಏನನ್ನೂ ಸೃಷ್ಟಿಸಲಾರದು ಎನ್ನುವ ಭಾವನೆ ಪಾಶ್ಚಾತ್ಯರಲ್ಲಿ ೧೭ನೆ ಶತಮಾನದತನಕವೂ ಪ್ರಚಲಿತವಾದದ್ದರಿಂದ, Imagination ಎನ್ನುವ ಮಾತಿಗೆ ಅದೊಂದು ಅನುಕರಣ ಶಕ್ತಿ ಎಂಬ ಅರ್ಥ ಮಾತ್ರ ಇತ್ತು. ಆದರೆ ಯಾವ ನಿರ್ಮಿತಿಯನ್ನು Imaginative ಎನ್ನುತ್ತಾರೋ ಅದರಲ್ಲಿ ಕೇವಲ ಅನುಕರಣೆ ಎನ್ನಲಾಗದ ಅಪೂರ್ವವಾದ, ಅತಿಶಯವಾದ ಭಾಗಗಳನ್ನು ಕಂಡಾಗ, ಅವುಗಳಿಗೆ ಕಾರಣವಾದ ಸೃಷ್ಟಿಶೀಲವಾದ ಅಂಶಕ್ಕೆ Inspiration ಎಂದು ಕರೆದು ಅದೊಂದು ದೈವೀಕೃಪಾರೂಪವಾದ ಆವೇಶ ಎಂದು ಒಪ್ಪಿಕೊಂಡಂತೆ ತೋರುತ್ತದೆ. ಕೇವಲ ಧಾರ್ಮಿಕ ಕ್ರಿಯೆಗಳಲ್ಲಿದ್ದ ಈ ಆವೇಶ ಕ್ರಮೇಣ ಕವಿನಿರ್ಮಿತಿಗೂ ಅನ್ವಯವಾಗತೊಡಗಿ, ಸ್ಫೂರ್ತಿ ಸಾಹಿತ್ಯ ಸಂಬಂಧವನ್ನು ಪಡೆಯಿತು. ಆದರೆ ೧೭–೧೮ನೆ ಶತಮಾನದ ವಿಚಾರಕ್ರಾಂತಿಯ ಪರಿಣಾಮವಾಗಿ ಮಾನವಮತಿಗೆ ಕೇವಲ ಅನುಕರಿಸುವ ಶಕ್ತಿ ಮಾತ್ರವಲ್ಲದೆ, ಸೃಷ್ಟಿಸುವ ಶಕ್ತಿಯೂ ಉಂಟೆಂಬ ಸತ್ಯ ಗೋಚರಿಸಿತೋ ಆಗ Imagination ಎಂಬುದು ಸೃಷ್ಟಿಶೀಲವಾದ ಮಾನವ ಮತಿಯ ಒಂದು ಉಪಕರಣ ಎಂಬ ಭಾವನೆ ಅಂಗೀಕೃತವಾಗಿ Inspiration ಎಂಬ ಮಾತಿಗೆ ಅದುವರೆಗೂ ಇದ್ದ ಸ್ಥಾನ ಕಡಮೆಯಾಗಿ, ಅದಕ್ಕಿದ್ದ ದೈವಿಕ–ಧಾರ್ಮಿಕ-ಸಂಬಂಧ ಕಡಿದುಹೋಗಿ, ಅದು ಕೇವಲ ಒಂದು ಮಾನಸಿಕ ಉತ್ಸಾಹ ಎನ್ನುವ ಅರ್ಥವನ್ನು ಪಡೆದಂತೆ ತೋರುತ್ತದೆ.

ಕಾರಣ ಏನೋ ಒಂದು ದಿವ್ಯಸ್ಫೂರ್ತಿ ಎನ್ನುವ ನಂಬಿಕೆಯೇ ಅದರ ಬೆನ್ನೆಲುಬಾಗಿತ್ತು. ಆದರೆ ಈ ವಿಚಾರದಲ್ಲಿ ಆಧುನಿಕ ಕವಿ ಈ ಭಾವನೆಯನ್ನು ಒಪ್ಪಲಾರ. ಆಧುನಿಕ ಕವಿಗೂ ಪ್ರಾಚೀನ ಕವಿಗೂ ಈ ವಿಚಾರದಲ್ಲಿ ಪ್ರಧಾನವಾದ ವ್ಯತ್ಯಾಸ ಇಷ್ಟೆ : ಪ್ರಾಚೀನ ಕವಿ ಅಂದುಕೊಳ್ಳುತ್ತಿದ್ದ, ತಾನು ಏನಿದ್ದರೂ ಒಂದು ಉಪಕರಣ ಮಾತ್ರ, ಅತಿಮಾನುಷ ಶಕ್ತಿಯೊಂದು ತನ್ನ ಮೂಲಕ ಬರೆಯುತ್ತಿದೆ ಎಂದು. ಆದರೆ ಆಧುನಿಕ ಕವಿ ತನ್ನ ಕೃತಿರಚನೆಯ ಸಾಮರ್ಥ್ಯಕ್ಕೆ ಬೇರೊಂದು ದೈವೀಶಕ್ತಿ ಕಾರಣ ಎನ್ನುವುದನ್ನು ಒಪ್ಪದೆ, ಅದಕ್ಕೆ ತಾನೇ ಕಾರಣ ಎಂದು ಭಾವಿಸುತ್ತಾನೆ. ಸ್ಫೂರ್ತಿಯಿಂದ ಹೊಳೆದ ಅಲ್ಪ–ಸ್ವಲ್ಪವನ್ನು ಅನಂತರದ ನಿರಂತರ ಶ್ರಮದಿಂದ ಮತ್ತು ಬುದ್ಧಿಕುಶಲತೆಯಿಂದ ತಿದ್ದಿ–ತೀಡಿ ರೂಪಿಸುವ ಕಾರಣ, ಕೃತಿನಿರ್ಮಾಣದ ಹೆಮ್ಮೆಯನ್ನು ತಾನೇ ಸಂಪೂರ್ಣವಾಗಿ ಹೊರಲು ಇಚ್ಛಿಸುತ್ತಾನೆ. ಹಳೆಯ ಕವಿ ಕೃತಿನಿರ್ಮಿತಿಯಲ್ಲಿ ತನ್ನ ಸಾಮರ್ಥ್ಯವನ್ನು ಅಗ್ಗಳಿಕೆಯನ್ನು ಗುರುತಿಸುವನಾದರೂ, ಅದೇನಿದ್ದರೂ ಭಗವತ್‌ಕೃಪೆ ಎನ್ನುವ ವಿನಯದಲ್ಲಿ ತನ್ನನ್ನು ಮರೆಮಾಡಿಕೊಳ್ಳುತ್ತಾನೆ.† ಪ್ರಾಚೀನ ಮತವನ್ನು ಕುರಿತು ಆಧುನಿಕರಿಗೆ ಅನ್ನಿಸುವುದು ಬಹುಶಃ ಹೀಗೆ: ಪರಂಪರಾಗತವಾದ ಭಾವನೆಯಂತೆ ಕೃತಿ ಸಂಪೂರ್ಣವೂ ದೈವೀಸ್ಫೂರ್ತಿಯಿಂದಲೇ ರಚಿತವಾಗಿದ್ದಪಕ್ಷದಲ್ಲಿ ನಾವು ದೊಡ್ಡ ದೊಡ್ಡ ಕವಿಗಳೆಂದು ಭಾವಿಸತಕ್ಕವರ ಕೃತಿಗಳಲ್ಲಿ ಅಷ್ಟೊಂದು ನೀರಸವಾದ ಭಾಗಗಳು ಏಕಿವೆ? ಆ ದೈವೀಶಕ್ತಿಯೆ ಈ ನೀರಸವಾದ ಭಾಗಗಳನ್ನು ಬರೆಯಿತೆ? ಹಾಗಿದ್ದಪಕ್ಷದಲ್ಲಿ ಇಂಥ ನೀರಸ ನಿರ್ಮಾಣಕ್ಕೆ ಕಾರಣವಾದ ಆ ದೈವೀಪ್ರತಿಭೆಯ ಅಸಾಮರ್ಥ್ಯವನ್ನು ಕುರಿತು ವಿಷಾದಪೂರ್ವಕವಾದ ಕನಿಕರದ ನಗೆ ಬೀರಬಹುದಲ್ಲದೆ ಮೆಚ್ಚಿಕೊಳ್ಳಬಹುದೆ? ಹೀಗೆ ದೈವೀಶಕ್ತಿಯನ್ನು ಕನಿಕರಕ್ಕೆ ಈಡುಮಾಡಿ ಕೆಳಗೆಳೆಯುವ ಬದಲು, ಕೃತಿಯನ್ನು ತಾನೇ ಬರೆದೆ ಎಂದು ಹೇಳಲಿ; ಆಗ ಕೃತಿಯ ಗುಣ ದೋಷಗಳೆರಡನ್ನೂ ತಾನೇ ಜವಾಬ್ದಾರಿಯಿಂದ ಹೊರುವ ಧೈರ್ಯ ಆತನಿಗೆ ಬಂದೀತು.

ಆಧುನಿಕ ವಿಚಾರದಲ್ಲಿನ ದಿಟ್ಟತನ ಮೆಚ್ಚಬೇಕಾದದ್ದೆ. ಆದರೆ ಆಧುನಿಕ ಕವಿ ಹೀಗೆ ಭಾವಿಸಿದ ಮಾತ್ರಕ್ಕೆ ತಾನು ಸ್ಫೂರ್ತಿಯಿಂದ ಬರೆಯುವುದೇ ಇಲ್ಲವೆಂದೇನೂ ಹೇಳುವುದಿಲ್ಲ. ಅದೊಂದು ಮಾನಸಿಕವಾದ ವಿಶೇಷ ಶಕ್ತಿ ಎಂದು ಆತ ಕರೆದ ಮಾತ್ರಕ್ಕೆ ಅದರ ಅಪೌರುಷೇಯತ್ವವನ್ನು ಅಲ್ಲಗಳೆದಂತೇನೂ ಆಗಲಿಲ್ಲ. ಅವನಿಗೂ

† 'ವೀರನಾರಾಯಣನೆ ಕವಿ, ಲಿಪಿಕಾರ ಕುವರವ್ಯಾಸ........'

'ಹಲಗೆ ಬಳಪವ ಹಿಡಿಯದೊಂದಗ್ಗಳಿಕೆ, ಪದವಿಟ್ಟಳುಪದೊಂದಗ್ಗಳಿಕೆ, ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ, ಬಳಸಿ ಬರೆಯಲು ಕಂಠಪತ್ರದ ಉಲುಹುಗೆಡದಗ್ಗಳಿಕೆ"— ಎಂದು ನಾರಣಪ್ಪ ತನ್ನ ನಾಲ್ಕಗ್ಗಳಿಕೆಯನ್ನು ಹೆಮ್ಮೆಯಿಂದ ಗುರುತಿಸಿಕೊಂಡರೂ, "ಎಂಬೀ ಬಲುಹು ವೀರನಾರಾಯಣನ ಕಿಂಕರಗೆ" ಎನ್ನುವ ವಿನಯದಲ್ಲಿ ಅದೆಲ್ಲವೂ ತಟಕ್ಕನೆ ಅವನತವಾಗುವ ರೀತಿ ಗಮನಾರ್ಹವಾಗಿದೆ.

ಗೊತ್ತು, ಯಾವ ಕವಿಯೂ ವೇಳಾಪಟ್ಟಿಯನ್ನು ಹಾಕಿಕೊಂಡು ತಾನು ಈ ಹೊತ್ತಿನಲ್ಲಿ ಇಂಥ ಕವಿತೆಯನ್ನು ಬರೆಯುತ್ತೇನೆ ಎಂದು ಹೇಳಲಾರ, ಎಂಬುದು. ಭಾವತೀವ್ರತೆ ಯಾವ ಹೊತ್ತಿನಲ್ಲಿ ಅಜ್ಞಾತದ ತಲಾತಲದಿಂದ ಬಂದು ಆತನ ಪ್ರಜ್ಞೆಯ ಬಾಗಿಲನ್ನು ತಟ್ಟುತ್ತದೆಯೋ ಆಗ ಆತ ಅದಕ್ಕೆ ಓಗೊಡದೆ ಇರಲಾರ. ಆಧುನಿಕ ಕವಿ ತಾನು ಹಿಂದಿನವರ ಹಾಗೆ ಪ್ರವಾದಿ ಅಲ್ಲ ಎಂದು ಸಾಧಿಸಿಕೊಂಡರೂ, ತಾನು ಕೃತಿರಚನೆಮಾಡುವ ಸಮಯದಲ್ಲಿ, ತನ್ನ ದೈನಂದಿನ ರೂಢಿಯ ಸಮಯದಲ್ಲಿಗಿಂತ ಭಿನ್ನವಾದ ನಿಲುವಿನಲ್ಲಿ, ವಿಶೇಷವಾದ ಶಕ್ತಿಸ್ಪಂದನವೊಂದರ ತುಯ್ತಕ್ಕೆ ಸಿಕ್ಕಿರುತ್ತೇನೆ ಎನ್ನುವುದನ್ನು—ಆತ ತನ್ನ ಅನುಭವವನ್ನೆ ವಸ್ತುನಿಷ್ಠವಾಗಿ ವಿಶ್ಲೇಷಿಸಿಕೊಂಡಾಗ—ಅಲ್ಲಗಳೆಯಲಾರ. ಹಿಂದಿನವರು ಅದೊಂದು ದೈವೀಶಕ್ತಿ ಎಂದರು; ಇಂದಿನವರು ಅದೊಂದು ವಿಶೇಷ ಮಾನಸಿಕ ಉತ್ಸಾಹ ಎಂದರು. ಅವರು ಕೊಟ್ಟುಕೊಂಡ ಹೆಸರು ಬೇರೆ ಬೇರೆಯಾದರೂ ಉಸಿರು ಮಾತ್ರ ಒಂದೇ. ಹಿಂದಿನವರು ಈ ಶಕ್ತಿಯ ಕಾರಣ ಅಗೋಚರ ಅಗಮ್ಯ ಎಂದು ಭಾವಿಸಿದ್ದರಿಂದ ಅದೊಂದು ದೈವೀಶಕ್ತಿ ಎಂದರು. ಇಂದಿನವರು ಅದೊಂದು ಮಾನಸಿಕ ಶಕ್ತಿ ಎಂದರೂ, ಮನಸ್ಸು ಮತ್ತು ಅದರ ಶಕ್ತಿಗಳು ಇನ್ನೂ ಅಗೋಚರ ಅಗಮ್ಯವಾಗಿಯೇ ಉಳಿದಿವೆ. ಒಟ್ಟಿನಲ್ಲಿ ಸ್ಫೂರ್ತಿ ಎನ್ನುವುದೊಂದು ಅಸಾಧಾರಣ ಅನಿರೀಕ್ಷಿತ ಶಕ್ತಿಸಂಚಾರ. "ಕಾವ್ಯ-ಕಲಾ ನಿರ್ಮಾಣದಲ್ಲಿ ಸ್ಫೂರ್ತಿ ಎಂಬುದೊಂದುಂಟು. ಅದನ್ನು ಕುರಿತು ನಾವು ಹೆಚ್ಚೇನೂ ಹೇಳಲಾಗದಿದ್ದರೂ, 'ಕವಿ ಕೇವಲ ರಚನಾ ನಿಪುಣನಷ್ಟೇ, ಹೆಚ್ಚೇನೂ ಅಲ್ಲ'—ಎನ್ನುವ ಅಭಿಪ್ರಾಯವನ್ನು ನಾವು ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ. ಸ್ಫೂರ್ತಿಯ ವಿಚಾರದಲ್ಲಿ ಪ್ರಾಚೀನರೊಂದಿಗೆ ಒಪ್ಪುವಂಥ ಸಮಾನಾಂಶಗಳನ್ನು ನಾವು ಕಡೆಗಣಿಸಲಾಗುವುದಿಲ್ಲ"[7]

೨

ಕವಿ-ಕಲಾವಿದರು ಸ್ಫೂರ್ತಿಯಿಂದ ಕೃತಿರಚನೆ ಮಾಡುತ್ತಾರೆ ಎನ್ನುವ ಭಾವನೆ ಪ್ರಾಚೀನಕಾಲದಿಂದಲೂ ಬಂದದ್ದು. ಮಾನವತೆಯ ಅರುಣೋದಯ ಕಾಲದಲ್ಲಿ ಕವಿ ತನಗೆ ಅದೆಲ್ಲಿಂದಲೋ ಒಂದು ಶಕ್ತಿ ಹರಿದುಬಂದು ತನ್ನ ಮೂಲಕ ಹೊರಹೊಮ್ಮುತ್ತಿದೆ ಎಂದು ಭಾವಿಸಿದ್ದ. ಈ ಸರಳ ಸಾಧಾರಣ ನಂಬಿಕೆ ಇಂದಿಗೂ ತನ್ನ ಸತ್ವವನ್ನು ಕಳೆದುಕೊಂಡಿಲ್ಲ. ಸ್ಫೂರ್ತಿಯ ಸ್ವರೂಪವನ್ನು ವರ್ಣಿಸತಕ್ಕವರೆಲ್ಲಾ ಈ ಭಾವನೆಯನ್ನೆ ಬೇರೆ ಬೇರೆಯ ಮಾತುಗಳಲ್ಲಿ ಹೇಳಿದ್ದಾರೆ: "ಕೆಲವರಲ್ಲಿ ಕೆಲವು ಸಲ ಸೃಷ್ಟಿಶೀಲವಾದ ಕಲ್ಪನೆ ಒಂದು ಬಗೆಯ ಭಾವದ ಅಲ್ಲೋಲ-ಕಲ್ಲೋಲದಿಂದ ಕೂಡಿರುತ್ತದೆ. ಒಂದು ಭಾವವೋ ಹಲವು ಭಾವಗಳೋ ಅಂತರಂಗದಿಂದ ಮೊದಲೇ ರೂಪುಗೊಂಡು, ಯಾವರೀತಿಯಾದ ಪ್ರಜ್ಞಾ

[7] C. M. Bowra: Inspiration and Poetry, P. 3.

ಪೂರ್ವಕವಾದ ಪ್ರಯತ್ನವೂ ಇಲ್ಲದೆ ಅಥವಾ ಇಚ್ಛೆಯೂ ಇಲ್ಲದೆ, ಅಪೌರುಷೇಯ ವೆಂಬಂತೆ ಅಭಿವ್ಯಕ್ತಗೊಳ್ಳುತ್ತವೆ. ಕೃತಿನಿರ್ಮಿತಿಯ ಈ ತೀವ್ರಕ್ಷಣಗಳನ್ನು 'ಸ್ಫೂರ್ತಿ' ಎಂದು ನಾವು ಗುರುತಿಸುತ್ತೇವೆ."[8] ಕವಿ ಸ್ಫೂರ್ತಿಯಲ್ಲಿದ್ದಾನೆ ಎಂದರೆ ಅವನು ಆಗಲಿ ಬೇರೆ ಯಾರೊ ಮಾಡಿದ್ದನ್ನೆ ತಿರುಗಿ ಮಾಡುತ್ತಿದ್ದಾನೆ ಅಥವಾ ವ್ಯವಸ್ಥೆಗೊಳಿಸಿ ಬರೆಯುತ್ತಿದ್ದಾನೆ ಎಂದು ಅರ್ಥವಲ್ಲ. ಅವನಿಗೇ ಅರಿಯದ ಶಕ್ತಿಯೊಂದು ಅವನನ್ನು ಸೆರೆಹಿಡಿದಿದೆ ಎಂದು ಅರ್ಥ. ಈ ಕಾರಣ ಕ್ಕಾಗಿಯೇ 'ಕೃತಿನಿರ್ಮಿತಿಯ ಈ ತೀವ್ರ ಕ್ಷಣ'ಗಳಲ್ಲಿ ರಚಿತವಾದ ಕೃತಿಭಾಗ ಗಳನ್ನು 'ಸೃಷ್ಟಿ' ಎಂದೋ ಅತ್ಯಂತ ಸೋಪಜ್ಞವಾದದ್ದೆಂದೋ ಗುರುತಿಸುತ್ತೇವೆ. ಇಂಥ ಹೊತ್ತಿನಲ್ಲಿ "ಕವಿಯ ಮನಸ್ಸನ್ನು ಉಳಿದ ವ್ಯಾಪಾರಗಳಿಂದ ಬಿಡಿಸಿ ಏನೋ ಒಂದು ಅತೀತವಾದ ಶಕ್ತಿ ಆಕ್ರಮಿಸುತ್ತದೆ. ಅದು ಅವನ ಇರವಿಕೆಯನ್ನೆಲ್ಲಾ ತುಂಬುತ್ತದೆ. ಅದರ ಸ್ವರೂಪವನ್ನು ನಾವು ವಿವರಿಸಲಾರೆವು; ಆದರೆ ಅದರ ಹಲವು ಅಂಶಗಳನ್ನು ಗುರುತಿಸಬಲ್ಲೆವು: ಈ ಎಲ್ಲದರ ಕೇಂದ್ರದಲ್ಲಿ ಏನೋ ಒಂದು ಭಾವ ಇರುವುದೆಂದು ತೋರುತ್ತದೆ. 'ಅದೊಂದು ಮಬ್ಬು ಮಬ್ಬಾದ ವಿವರಿಸ ಲಾಗದ ಸ್ಥಿತಿ. ಅದಕ್ಕೆ ತನ್ನದೇ ಆದ ಸ್ವಭಾವವೂ ಪರಿವೇಷವೂ ಉಂಟು. ಬುದ್ಧಿಯಿಂದ ಗ್ರಹಿಸಲಾಗದ, ವಿಶ್ಲೇಷಿಸಲಾಗದ ಅದು ಕವಿಯಮೇಲೆ ದರ್ಶನದ ಗಾಂಭೀರ್ಯ ಮತ್ತು ಅಧಿಕಾರದಿಂದ ಕವಿಯುತ್ತದೆ. ಕವಿ ಅದೇನೆಂಬುದನ್ನು ಸಂಪೂರ್ಣವಾಗಿ ಗ್ರಹಿಸಲಾರದವನಾದರೂ, ಅದು ತನ್ನ ಮೇಲೆ ಸ್ಥಾಪಿಸಿದ ಅಧಿಕಾರವನ್ನು ಅರಿಯುತ್ತಾನೆ."[9] ಈ ಅನುಭವವನ್ನು ಕುರಿತು ಕವಿಯೊಬ್ಬನ ಹೇಳಿಕೆ ಇದು: "ನನ್ನ ಅನುಭವವನ್ನೆ ಗಮನಿಸಿ ಹೇಳುವುದಾದರೆ ಅದೊಂದು ಮಾತಿನ ಮಳೆಗರೆಯುವ ಭಾವದ ಮಬ್ಬು ಮೋಡ."[10] ಕವಿ ಸ್ಫೂರ್ತಿಯಲ್ಲಿ ದ್ದಾನೆ ಎಂದರೆ ಅವನಲ್ಲಿ ಆಗ ಒಂದು ಅಸಾಧಾರಣ ಶಕ್ತಿ ಸಂಚಾರವಾಗಿದೆ ಎಂದು ಅರ್ಥ. "ವಿಶೇಷ ಉರುಬಿನಲ್ಲಿ ಜೀವಶಕ್ತಿ ಉಕ್ಕಿ ಯಾವುದೋ ವ್ಯಾಪಾರಕ್ಕೆ ಮನಸ್ಸನ್ನೂ ಶ್ರಮವನ್ನೂ ತಿರುಗಿಸುವುದು ಅದರ ಲಕ್ಷಣ."[11] ಸ್ಫೂರ್ತಿಯ ಸ್ವರೂಪದಲ್ಲಿ ಕಂಡುಬರುವ ಲಕ್ಷಣ ಈ "ಬಿರುಬು." ಅದೊಂದು ತೀವ್ರತರವಾದ ಚಟುವಟಿಕೆ. ಶಕ್ತಿಸ್ಫೋಟವೇ ಅದರ ಸ್ವಭಾವ. ಈ ಆವೇಗದಲ್ಲಿ ಕವಿಯ ಭಾವನೆಗಳು ತಾವೇ ತಾವಾಗಿ, ಲೀಲಾಜಾಲವಾಗಿ ಅನೂಹ್ಯವಾದ ರೀತಿಯಲ್ಲಿ ಬಂದು ಒಗ್ಗೂಡುತ್ತವೆ. ಪದಗಳು, ಪ್ರತಿಮೆಗಳು, ಮತ್ತು ಛಂದಸ್ಸು ಈ ಎಲ್ಲದರ ಒಂದು ಮಾಂತ್ರಿಕ ಸಂಯೋಜನೆ ನಡೆಯುತ್ತದೆ. ಆಗ ಕವಿಯೇ ಅದನ್ನು

[8] Felix clay: The origin of the Sense of Beauty, P. 246.

[9] C. M. Bowra: Inspiration and Poetry, P. 4.

[10] Stephen Spender: The making of a Poem, P. 53.

[11] ವಿ. ಸೀತಾರಾಮಯ್ಯ: ಕವಿಕಾವ್ಯ ದೃಷ್ಟಿ, ಪು. ೬೪.

ತಡೆಯಲಾರ. ಅವನ ಪಾಲಿಗೆ ಅದುವರೆಗೂ ಯಾವುದು ಅಜ್ಞಾತವಾಗಿತ್ತೋ ಅದು ಜ್ಞಾತವಾಗುತ್ತದೆ; ಯಾವುದು ಅಸ್ಪಷ್ಟವಾಗಿತ್ತೋ ಅದು ಸ್ಪಷ್ಟವಾಗುತ್ತದೆ; ಯಾವುದು ಅನೂಹ್ಯವಾಗಿತ್ತೋ ಅದು ಪ್ರತ್ಯಕ್ಷ ವಿಸ್ಮಯವಾಗಿ ಪರಿಣಮಿಸುತ್ತದೆ. ಎಷ್ಟೋವೇಳೆ ಈ ಸ್ಫೂರ್ತಿಯ ಆವೇಶದಿಂದ ಹೊರಹೊಮ್ಮುವ ಭಾವಗಳು ಕವಿಯ ಅಭಿವ್ಯಕ್ತಿಯ ಕ್ರಿಯೆಯನ್ನು ಮುಂಚೆ ಹರಿದೋಡಬಹುದು. ಕವಿಯ ರಚನಾಶಕ್ತಿ ಆ ರಭಸವನ್ನು ತನ್ನಲ್ಲಿ ಹಿಡಿದಿಡಲು ಅಸಮರ್ಥವಾಗಿ ಹಿಂದೆ ನಿಲ್ಲಬಹುದು. ಈ ಉಭಯಸಂಕಟದಲ್ಲಿ ಕವಿ ಕೊರಗಿದರೂ ಮೂಲತಃ ಸ್ಫೂರ್ತಿಯ ಮನಃಸ್ಥಿತಿ ಒಂದು ಆನಂದದ ಸ್ಥಿತಿ ಎಂದೇ ಹೇಳಬಹುದು. ಕವಿ ವೈಯಕ್ತಿಕವಾಗಿ ಯಾವ ಭಾವತುಮುಲದಲ್ಲೇ ಇರಲಿ, ಅವನ ಸ್ಫೂರ್ತಿಗೆ ಪ್ರಚೋದಕವಾದ ವಸ್ತುವಿನ ಸ್ವಭಾವ ಹೇಗೇ ಇರಲಿ ಅವನು ಒಮ್ಮೆ ಸ್ಫೂರ್ತಿಗೆ ವಶವಾದನೆಂದರೆ ಮುಗಿಯಿತು. ಅವನನ್ನು ಲೌಕಿಕ ಪರಿಸರದಿಂದ ಪಾರುಮಾಡಿ ಒಂದುಬಗೆಯ ರಸಾನಂದದಲ್ಲಿ ನಿಲ್ಲಿಸುತ್ತದೆ. ಇದರಿಂದಾಗಿ ಅವನಿಗೆ ಆ ಹೊತ್ತಿನಲ್ಲಿ ಕಾಲದ ಉಪಾಧಿ ಜಗುಳಿ ಹೋಗಿ ಕಾಲಾತೀತವಾದ ಒಂದು ಸ್ಥಿತಿಯನ್ನು ಆತ ಅನುಭವಿಸುತ್ತಾನೆ. ಲೋಕ ಸೌಂದರ್ಯಾನುಭವದ ಸಮಯದಲ್ಲಾಗಲಿ, ಸೌಂದರ್ಯಾನುಭವದ ಪರಿಭಾವನೆಯ ಪರಿಣಾಮವಾದ ಸ್ಫೂರ್ತಿಯಲ್ಲಾಗಲಿ, ಕವಿಗೆ ಹಿಂದು-ಮುಂದುಗಳ ಭಾವನೆ ಜಾರಿಹೋಗಿ, ಅವನು ಕಾಲಾತೀತವಾದ ನಿಲುವನ್ನು ಅನುಭವಿಸುತ್ತಾನೆ. ತಾನು ಇಷ್ಟು ಹೊತ್ತು ಸ್ಫೂರ್ತಿಯಲ್ಲಿ ಮುಳುಗಿದ್ದೆನೆಂಬ ಲೆಕ್ಕಾಚಾರವಾಗಲಿ, ಇಷ್ಟು ಕಾಲ ಸ್ಫೂರ್ತಿಯಲ್ಲಿದ್ದು ಕಾಲವನ್ನು ವ್ಯರ್ಥಮಾಡಿದೆನೇ ಎಂಬ ವಿಷಾದವಾಗಲಿ ಇರುವುದಿಲ್ಲ. ಅದೊಂದು ಬಗೆಯ ಸಮಾಧಿ. ಅದರಲ್ಲಿ ಕವಿಗೆ ಕಾಲ–ದೇಶ–ವ್ಯಕ್ತಿ ಪ್ರಜ್ಞೆಯೆಲ್ಲವೂ ಕರಗಿಹೋಗುತ್ತದೆ. ಈ ಅರ್ಥದಲ್ಲಿ ಸ್ಫೂರ್ತಿಯ ಸ್ಥಿತಿಯನ್ನು ವರ್ಣಿಸಬಹುದಾದುದು ಎರಡು ರೀತಿಯಲ್ಲಿ : "ಅದು ನಮ್ಮದೆಂದುಕೊಳ್ಳಲಾಗದ ಏನೋ ಒಂದು ಶಕ್ತಿ. ಅದು ನಮಗೆ ಕೊಡಲ್ಪಟ್ಟಿದೆ. ಅದರಲ್ಲಿ ನಮ್ಮನ್ನು ನಾವೆ ಕಳೆದುಕೊಳ್ಳುತ್ತೇವೆ.—ಇದು ಒಂದು ಮುಖ. ನಮ್ಮನ್ನು ನಾವು ಕಂಡುಕೊಳ್ಳುವುದು ಅದರಲ್ಲಿ ; ನಮ್ಮ ನಿಜಸ್ವರೂಪದ ಅರಿವು ಅದರಿಂದಲೆ—ಇದು ಇನ್ನೊಂದು ಮುಖ."[12] ಈ ಎರಡೂ ಪರಸ್ಪರ ವಿರೋಧವೆಂಬಂತೆ ತೋರಬಹುದು. ಆದರೆ ಸ್ಫೂರ್ತಿಯಲ್ಲಿ ಕವಿಗೊದಗುವ ಅನುಭವದ ಸ್ವರೂಪವೇ ಇದು. ಕವಿ ಸ್ಫೂರ್ತಿಯಲ್ಲಿ ತನ್ನನ್ನು ತಾನು ಕಳೆದುಕೊಳ್ಳುತ್ತಾನೆ ಎಂದರೆ ಅದರ ಅರ್ಥ, ಕವಿ ಸ್ಫೂರ್ತಿಯಲ್ಲಿ ತನ್ನ ಲೋಕ ವ್ಯಕ್ತಿತ್ವದಿಂದ ಪಾರಾಗಿ ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳುತ್ತಾನೆ ಅಥವಾ ಅಹಂ ವ್ಯಕ್ತಿತ್ವವನ್ನು ನೀಗಿಕೊಳ್ಳುತ್ತಾನೆ—ಎಂದು.† ಕವಿಯ ಅಹಂವ್ಯಕ್ತಿತ್ವದ ನಿರಸನವೇ ಆತ ತನ್ನ ನಿಜವಾದ ಕವಿ

12. A.C. Bradley : A Miscellany, P. 231.

† "........it is not the expression of personality, but an escape from personality......,,T. S. Eliot : Selected Prose, P. 30.

ವ್ಯಕ್ತಿತ್ವವನ್ನು ಕಂಡುಕೊಳ್ಳಲು ಇರುವ ಏಕೈಕ ಮಾರ್ಗ. ಆದಕಾರಣ ಸ್ಫೂರ್ತಿಯಲ್ಲಿ ಕವಿ ತನ್ನನ್ನು ತಾನು ಕಂಡುಕೊಳ್ಳುತ್ತಾನೆ; ಕೃತಿಮುಖೇನ ವ್ಯಕ್ತವಾಗುವ ಆ ಕವಿ ವ್ಯಕ್ತಿತ್ವವೇ ಅವನ ನಿಜಸ್ವರೂಪ. ಕವಿ ಕಳೆದುಕೊಳ್ಳುವುದು ತನ್ನ ಲೋಕ ವ್ಯಕ್ತಿತ್ವವನ್ನು; ಕಂಡುಕೊಳ್ಳುವುದು ಕವಿವ್ಯಕ್ತಿತ್ವವನ್ನು. ಕವಿಗೆ ಅದೊಂದು ರೂಪಾಂತರ; ಅದೊಂದು ಆತ್ಮಬಲಿ ಮತ್ತು ಪುನರ್ಜನ್ಮ. ಈ ಕ್ರಿಯೆಯಲ್ಲಿ ಕವಿ ತನ್ನ ಅಹಂ ವ್ಯಕ್ತಿತ್ವವನ್ನು ಕಳೆದುಕೊಳ್ಳದೆ, ತನ್ನಲ್ಲಿನ ಕಲಾವ್ಯಕ್ತಿತ್ವವನ್ನು ಕಂಡುಕೊಳ್ಳಲಾರ. ಈ ಅರ್ಥದಲ್ಲಿ ಪ್ರತಿಯೊಂದು ಕಲಾನಿರ್ಮಿತಿಯೂ ಒಂದು ನೂತನ ಸೃಷ್ಟಿ—ಕೃತಿಯ ದೃಷ್ಟಿಯಿಂದ ಮಾತ್ರವಲ್ಲ ಕವಿಯ ದೃಷ್ಟಿಯಿಂದಲೂ. ಅತ್ಯುತ್ತಮ ಕೃತಿಯೊಂದು ನಿರ್ಮಾಣವಾದನಂತರ ಕೃತಿಗೆ ಹೇಗೋ ಕವಿಗೂ ಹಾಗೆಯೆ ಅದೊಂದು ಪುನರ್ಭವ; ಭವದ ಪುನರ್ಭವ.†

ಸ್ಫೂರ್ತಿಯ ಪ್ರಧಾನಲಕ್ಷಣ 'ಆವೇಶ'ವಾದದ್ದರಿಂದ, ಆವೇಶದ ಸ್ವರೂಪವೆ ಅತ್ಯಂತ ತಾತ್ಕಾಲಿಕ, ಹಾಗೆ ಮಿಂಚಿ ಹೀಗೆ ಮಾಯವಾಗತಕ್ಕದ್ದು ಎನ್ನುವುದು ಸ್ವತಸ್ಸಿದ್ಧವಾದ ಸಂಗತಿ. ಕಲಾನಿರ್ಮಿತಿಯಲ್ಲಿ, ಅದಕ್ಕೆ ಅಗತ್ಯವಾದ ಈ ಸ್ಫೂರ್ತಿ ಅಥವಾ ಭಾವತೀವ್ರತೆ ಥಟ್ಟನೆ ಬಂದು ಥಟ್ಟನೆಯೇ ನಡುವೆ ಕಡಿದುಹೋದಾಗ, ಕೃತಿ ಅಪೂರ್ಣವಾಗಿಯೇ ನಿಲ್ಲುವುದುಂಟು. ಷೆಲ್ಲಿ ಕವಿಯ ರಚನೆಗಳಲ್ಲಿ ಹೀಗೆ ಅರ್ಧಕ್ಕೇ ನಿಂತ ಎಷ್ಟೋ ಪದ್ಯಗಳಿವೆ. ಹೀಗಾದಾಗ ಕವಿ ಅನಂತರ ಪ್ರಯತ್ನ ಪಟ್ಟು ಹೇಗೋ ಮುಗಿಸಿದಾಗ ಆತನ ಪ್ರಯತ್ನದ ತೇಪೆ ಕಾಣಿಸುವುದುಂಟು. 'ಕುಬ್ಲಾಖಾನ್' ಕವನವನ್ನು ರಚಿಸುವ ಹೊತ್ತಿನಲ್ಲಿ ಕವಿ ಕೋಲ್‌ರಿಜ್‌ನಿಗೆ ಯಾರೋ ಬಂದು ಕಾವ್ಯವಿಮುಖನನ್ನಾಗಿಮಾಡಿದ್ದರ ಪರಿಣಾಮವಾಗಿ ಆ ಕವಿತೆ ಹಾಗೆಯೇ ಅಪೂರ್ಣವಾಗಿ ಉಳಿಯಿತೆನ್ನುವ ವಿಚಾರ ಇದಕ್ಕೊಂದು ನಿದರ್ಶನ. ಸ್ಫೂರ್ತಿ ಎನ್ನುವುದು ಕವಿಗೆ ಯಾವಾಗಲೋ ಬಂದು ಅವನನ್ನು ಆಕ್ರಮಿಸಿ ನಂತರ ಹಾಗೆಯೇ ಬಿಟ್ಟುಹೋಗುವ ಒಂದು ಶಕ್ತಿವಿಶೇಷ.

ಕವಿಗೊದಗುವ ಭಾವತೀವ್ರತಾರೂಪವಾದ ಸ್ಫೂರ್ತಿ ಹೆಚ್ಚುಹೊತ್ತು ನಿಲ್ಲತಕ್ಕದ್ದಲ್ಲವಾದುದರಿಂದ, ಅದು ನೀಡುವ ಅಭಿವ್ಯಕ್ತಿ ಸಹಜವಾಗಿಯೆ ಹ್ರಸ್ವವಾಗಿರಬೇಕಲ್ಲದೆ ದೀರ್ಘವಾಗಿರಲು ಸಾಧ್ಯವಿಲ್ಲ ಎನ್ನುವ ಒಂದು ಭಾವನೆ ಭಾವಗೀತೆಯ ಸಿದ್ಧಾಂತದಮೇಲೆ ವಿಶೇಷ ಪರಿಣಾಮಮಾಡಿರುವಂತೆ ತೋರುತ್ತದೆ. ಮಹಾಕಾವ್ಯಕ್ಕೂ ಭಾವಗೀತೆಗೂ ಪ್ರಧಾನವಾಗಿ ಎದ್ದು ಕಾಣುವ ವ್ಯತ್ಯಾಸ ಅವುಗಳ ಗಾತ್ರವನ್ನು ಕುರಿತದ್ದು. ಮಹಾಕಾವ್ಯ ಗಾತ್ರದಲ್ಲಿ ದೀರ್ಘವಾದದ್ದು, ಭಾವಗೀತೆ ಹ್ರಸ್ವವಾದದ್ದು. ಭಾವಗೀತೆ ಹ್ರಸ್ವವಾಗಿರಲು ಕಾರಣ, ಕವಿಗೊದಗುವ

---

† ಶ್ರೀ ಕುವೆಂಪು ಅವರು 'ರಾಮಾಯಣದರ್ಶನ'ದಲ್ಲಿ 'ಶ್ರೀ ಕುವೆಂಪುವ ಸೃಜಿಸಿದೀ ಮಹಾ ಛಂದಸಿನ ಮೇರುಕೃತಿ'–ಎಂದು ಹೇಳಿರುವ ಮಾತನ್ನು ಇಲ್ಲಿ ನೆನೆಯಬಹುದು.

ಈ ಭಾವತೀವ್ರತೆ (=ಸ್ಫೂರ್ತಿ) ಎಷ್ಟಾದರೂ ತಾತ್ಕಾಲಿಕ, ಹೆಚ್ಚೆಂದರೆ ಅದು ಅರ್ಧ ಘಂಟೆಗಿಂತ ಮಿಗಿಲಾಗಿ ನಿಲ್ಲಲಾರದು. ಇದು ಕೆಲವರ ವಾದ.[13] ಇವರ ಪ್ರಕಾರ ಕೃತಿ ನಿರ್ಮಾಣದಲ್ಲಿ ಕವಿಗೊದಗುವ ಭಾವತೀವ್ರತೆ ಅಥವಾ ಸ್ಫೂರ್ತಿ ಸಹಜವಾಗಿಯೆ ಹೆಚ್ಚುಹೊತ್ತು ನಿಲ್ಲತಕ್ಕದ್ದಲ್ಲವಾದ್ದರಿಂದ, ಅದು ಭಾವಗೀತೆಗಳಲ್ಲಿ ಮಡುಗಟ್ಟಿ ನಿಲ್ಲುವಂತೆ ಮಹಾಕಾವ್ಯದಲ್ಲಿ ಅಖಂಡವಾಗಿ ನಿಲ್ಲದು. ಹಾಗಾದರೆ ಮಹಾಕಾವ್ಯ ಒಂದು ಅತ್ಯುತ್ತಮ ಸಾಹಿತ್ಯ ಪ್ರಕಾರವಾಗಿಲ್ಲವೆ? ಅದು ಹೆಚ್ಚೆಂದರೆ ಅರ್ಧ ಘಂಟೆಯಷ್ಟು ಮಾತ್ರ ನಿಲ್ಲಬಹುದಾದ ಭಾವತೀವ್ರತೆಯ ಪರಿಣಾಮ ಅಲ್ಲವಲ್ಲ ಎಂದರೆ ಅವರು ಹೇಳುತ್ತಾರೆ: ವಾಸ್ತವವಾಗಿ ಯಾವುದನ್ನು ಮಹಾ ಕಾವ್ಯ ಎಂದು ನೀವು ಕರೆಯುತ್ತೀರೋ ಅದು, ಕವಿ ಬೇರೆ ಬೇರೆಯ ಕಾಲದಲ್ಲಿ ಬೇರೆ ಬೇರೆಯ ಕ್ಷಣಗಳಲ್ಲಿ ಇಂತಹ ಭಾವತೀವ್ರತೆಗೆ ಅಭಿವ್ಯಕ್ತಿಯನ್ನು ನೀಡಿದ ಅನೇಕ ಭಾವಗೀತೆಗಳ ಸರಣಿ' ಅಲ್ಲದೆ ಬೇರೆ ಅಲ್ಲ. ಆದುದರಿಂದಲೆ ಅಲ್ಲಿ ಮೊದಲಿಂದ ಕಡೆತನಕ ಭಾವಗೀತೆಯಲ್ಲಿನಂತೆ ರಸತೀವ್ರತೆಯ ಅನುಭವ ಆಗದು; ಆ ಭಾವತೀವ್ರತೆ ಬಿಡಿ ಬಿಡಿಯಾಗಿ ಆಗುತ್ತದೆ. ಎಂದರೆ ಮಹಾಕಾವ್ಯದಲ್ಲಿ ಅಲ್ಲಲ್ಲಿ ಭಾವಗೀತೆಗಳ ಅಥವಾ ಭಾವತೀವ್ರತೆಯಿಂದ ಮೂಡಿದ ಭಾಗಗಳಿವೆ; ಅಲ್ಲಿ ಇಂಥ ತುಣುಕುಗಳನ್ನು ಸೇರಿಸುವ ಬೇರೊಂದು ಸಂಘಟನಾಶಕ್ತಿ ಕೆಲಸ ಮಾಡಿದೆ. ಒಂದು ಭಾವಗೀತೆಯನ್ನೂ ಮತ್ತೊಂದು ಭಾವಗೀತೆಯನ್ನೂ ಅಲ್ಲಿ 'ನೀರಸ'ವಾದ ಕೆಲವು ಭಾಗಗಳು ಕೂಡಿಸಿರುತ್ತವೆ.[14] ಇದು ಇವರ ವಾದ. ಮಹಾಕಾವ್ಯ ಮತ್ತು ಭಾವಗೀತೆಗಳಿಗಿರುವ ಈ ವ್ಯತ್ಯಾಸದ ಚರ್ಚೆಯ ವಿವರಕ್ಕೆ ಕೈಹಾಕದೆ ಮೇಲಿನ ವಾದವಷ್ಟನ್ನೆ ಪರಿಶೀಲಿಸಬಹುದು: ಸ್ಫೂರ್ತಿ ಅನ್ನತಕ್ಕದ್ದು ಒಂದು ಆವೇಶ, ಔಜ್ವಲ್ಯ, ಆದುದರಿಂದ ಅದು ಹೆಚ್ಚುಹೊತ್ತು ನಿಲ್ಲತಕ್ಕದ್ದಲ್ಲ ಎನ್ನುವುದನ್ನೂ, ಭಾವಗೀತೆ ಹ್ರಸ್ವವಾಗಲು ಇದೂ ಒಂದು ಕಾರಣವಿರಬಹು ದೆನ್ನುವ ಅಂಶವನ್ನೂ ಒಪ್ಪಬಹುದು. ಹಾಗೆಯೆ ಮಹಾಕಾವ್ಯದಲ್ಲಿ ಸ್ಫೂರ್ತಿಯ ಸ್ಪರ್ಶವಿಲ್ಲದ 'ನೀರಸ'ವಾದ ಎಷ್ಟೋ ಭಾಗಗಳು ಇರಬಹುದೆಂಬ ಮಾತನ್ನೂ ಒಪ್ಪಬಹುದು. ಆದರೆ ಭಾವಗೀತೆಗಳೇ ನಿಜವಾದ ಸ್ಫೂರ್ತಿಯ ವಿಸ್ಫುಲಿಂಗಗಳಾಗ ಬೇಕಾಗಿಲ್ಲ; ಅಲ್ಲಿಯೂ ಸ್ಫೂರ್ತಿಯಿಲ್ಲದ ವಿರಚನೆಗಳುಂಟು ಎನ್ನುವ ಸಂಗತಿಯನ್ನು ಮರೆಯಬಾರದು. ಇಷ್ಟರಮೇಲೆ ಮಹಾಕಾವ್ಯದ ರಚನೆಗೆ ಮೂಲವಾದ ಮತ್ತು ಭಾವಗೀತೆಗೆ ಪ್ರೇರಕವಾದ ಕವಿ ವ್ಯಕ್ತಿತ್ವನಿಷ್ಠವಾದ ಸ್ಫೂರ್ತಿಯ ವಿಶೇಷತೆಯಲ್ಲಿ ಎಷ್ಟೊಂದು ವ್ಯತ್ಯಾಸವಿದೆ ಎನ್ನುವ ವಿಷಯವನ್ನೂ ಗಮನಿಸಬೇಕು. ಸ್ಫೂರ್ತಿ

---

[13] ಇದು Edger Allen Poe ಮತ್ತು John Drinkwater ಇವರ ಮತ: Narman Hepple: Lyrical forms in English, P. 10.

[14] John Drinkwater: The Lyric, P. 43. 44.

ಎನ್ನುವುದು ಹಾಗೆ ಬಂದು ಹೀಗೆ ಹೋಗುವ ಒಂದು ಶಕ್ತಿ ಎನ್ನುವುದನ್ನು ಒಪ್ಪಿದರೂ, ಅದನ್ನು ಮಹಾಕಾವ್ಯ ರಚನೆಯಲ್ಲಿ ತಕ್ಕಮಟ್ಟಿಗೆ ಉದ್ದಕ್ಕೂ ನಿಲ್ಲಿಸಿ ಕೊಳ್ಳುವುದು ಮಹಾಕವಿಯ ಸಾಮರ್ಥ್ಯದ ಒಂದು ವಿಶೇಷತೆ ಎನ್ನುವುದು ಸಹೃದಯರ ಅನುಭವಕ್ಕೆ ದೂರವಾದ ವಿಚಾರವೇನಲ್ಲ. ಆದರೆ ಭಾವಗೀತೆಯನ್ನು ಕುರಿತು ಚರ್ಚಿಸಿದ ಕೆಲವರು ಒಂದು ದೀರ್ಘಕೃತಿ (ಮಹಾಕಾವ್ಯವೇ ಮೊದಲಾದ ಕಥನ ಪ್ರಕಾರಗಳು)ಯಲ್ಲಿ ಅತ್ಯುಜ್ವಲವಾದ ಭಾಗಗಳು ಅಲ್ಲಲ್ಲಿ ಇವೆ, ಹಾಗೆ ಉಜ್ವಲವಾಗಿರುವ ಭಾಗಗಳೆ ಭಾವಗೀತೆಗಳು ಅಥವಾ ಶುದ್ಧಕಾವ್ಯ—ಎಂದು ಹೇಳಿದ ಮಾತಿನಲ್ಲಿಯೂ ಅರ್ಥವಿಲ್ಲದೆ ಇಲ್ಲ. ಯಾವ ಮಹಾಕಾವ್ಯವನ್ನು ತೆಗೆದು ಕೊಂಡರೂ ನಮಗೆ ಕವಿಕೃತಿಯಲ್ಲಿ ಮೊದಲಿಂದ ಕಡೆತನಕ ಕವಿಕಲ್ಪನೆಯೆ ಕೆಲಸಮಾಡಿರುವುದಾದರೂ, ಅದು ಕೆಲವೆಡೆ ಮಾತ್ರ ಉಜ್ವಲವಾದ ಶೃಂಗಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಇಂಥ ಭಾಗಗಳಲ್ಲಿ ಏನೋ ತೀವ್ರತೆ, ಏನೋ ಮಿಂಚು ನಮ್ಮ ಅನುಭವಕ್ಕೆ ಬರುತ್ತದೆ. ಎಂದರೆ ಕವಿಕೃತಿಯಲ್ಲಿ ಉದ್ದಕ್ಕೂ ಕಲ್ಪನೆಯ ನಿರ್ಮಿತಿ ಉಂಟೆಂಬುದನ್ನು ಒಪ್ಪಿದರೂ, ಸ್ಫೂರ್ತಿಯ ಸ್ಪರ್ಶ ಎಲ್ಲ ಕಡೆಯೂ ಉಂಟೆಂಬುದನ್ನು ನಾವು ಒಪ್ಪುವುದಿಲ್ಲ. ಮಹಾಕಾವ್ಯದಲ್ಲಿ ಮಾತ್ರ ವಲ್ಲ, ಭಾವಗೀತೆಗಳಲ್ಲಿಯೂ ಸಹ ಎಷ್ಟೋ ಸಲ ಮೊದಲ ಕೆಲವು ಪಂಕ್ತಿಗಳಲ್ಲಿ ಕಾಣಿಸಿಕೊಂಡ ಸ್ಫೂರ್ತಿ ಕಡೆ ಕಡೆಯಲ್ಲಿ ಬತ್ತಿಹೋಗಬಹುದು. ಎಷ್ಟೋಸಲ ಪದ್ಯದ ನಡುವೆ ಬಂದ ಯಾವುದೋ ಒಂದು ಪ್ರತಿಮೆಯೋ, ಇಡೀ ಕವನವನ್ನು ಜೀವಂತವನ್ನಾಗಿಸುವ ಒಂದು ಪಂಕ್ತಿಯೋ, ಸ್ಫೂರ್ತಿಯಿಂದ ಹೊಮ್ಮಿ ಬರಬಹುದು. ಆದರೆ ಮಹಾಕಾವ್ಯದಲ್ಲಂತೂ ಈ ಏರಿಳಿತ ವಿಶೇಷವಾಗಿ ಅನುಭವಕ್ಕೆ ಬರುತ್ತದೆ. ಆಗ ಅನ್ನಿಸುತ್ತದೆ ಕಾವ್ಯನಿರ್ಮಾಣಕ್ಕೆ ಅಗತ್ಯವಾದ ಕಲ್ಪನೆ ಉದ್ದಕ್ಕೂ ಇರುವು ದಾದರೂ, ಸ್ಫೂರ್ತಿ ಮಾತ್ರ ಅಲ್ಲಲ್ಲಿ ಬಂದು ತನ್ನ ಮಿಂಚಿನ ಹೆಜ್ಜೆಯನ್ನು ಒತ್ತಿ ಹೋಗಿದೆ ಎಂದು.

ಈ ಚರ್ಚೆಯಿಂದ ನಾವು ಮತ್ತೊಂದು ಸಮಸ್ಯೆಗೆ ಇಳಿದಂತಾಯಿತು. ಕಲ್ಪನೆಗೂ ಸ್ಫೂರ್ತಿಗೂ ವ್ಯತ್ಯಾಸ ಉಂಟೆ? ಹಿಂದಿನ ವಿಚಾರ ಸರಣಿಯನ್ನು ಗಮನಿಸಿದರೆ ವ್ಯತ್ಯಾಸವುಂಟು ಎನ್ನಿಸುತ್ತದೆ.

ಪಾಶ್ಚಾತ್ಯರಲ್ಲಿ Inspiration ವಿಚಾರವನ್ನು ಹೇಳುವಾಗ Imagination ಎನ್ನುವ ಮಾತನ್ನೂ, Imagination ವಿಚಾರವನ್ನು ಹೇಳುವಾಗ Inspiration ಎನ್ನುವ ಮಾತನ್ನೂ, ತಾರದೆ ಅವೆರಡನ್ನೂ ಪ್ರತ್ಯೇಕವಾಗಿಯೆ ಇರಿಸಿಕೊಂಡು ಚರ್ಚಿಸಿರುವಂತೆ ತೋರುತ್ತದೆ. ಈ ಎರಡರ ವ್ಯತ್ಯಾಸ ಹಾಗೂ ಸಂಬಂಧಗಳನ್ನು ಚರ್ಚಿಸಿರುವ ಸಂಗತಿ ನಮ್ಮ ಕಣ್ಣಿಗೆ ಬಿದ್ದಿಲ್ಲ. Inspiration ಎನ್ನುವ ಮಾತಿಗೆ 'ಸ್ಫೂರ್ತಿ' ಎನ್ನುವ ಮಾತನ್ನು ಸಂವಾದಿಯಾಗಿರಿಸಿಕೊಂಡಂತೆ, Imagination ಎನ್ನುವ ಮಾತಿಗೆ 'ಕಲ್ಪನೆ' ಎನ್ನುವ ಮಾತನ್ನು ಸಂವಾದಿಯಾಗಿರಿಸಿಕೊಂಡು ಈ

ಎರಡರ ವ್ಯತ್ಯಾಸವನ್ನು ಗುರುತಿಸಬಹುದು: ಕಲ್ಪನೆ ಎಲ್ಲರಲ್ಲಿಯೂ ತರ-ತಮಗಳಲ್ಲಿ ಇರುವ ಒಂದು ಶಕ್ತಿ. ಆದರೆ ಇದು ಕವಿಯಲ್ಲಿ ವಿಶೇಷ ರೂಪದಲ್ಲಿ ಇರುತ್ತದೆ. ಆದುದರಿಂದಲೆ ದೈನಂದಿನ ಸಾಧಾರಣ ವಾಸ್ತವಲೋಕ ಆತನ ಕಣ್ಣಿಗೆ ಅಪರಿಚಿತ ವಿನೂತನವಾಗಿ ಕಾಣುತ್ತದೆ. ಕಲ್ಪನೆಯ ಕಣ್ಣಿನಿಂದ ಆತನಿಗೆ ಒಂದು ಮತ್ತೊಂದಕ್ಕೆ ಇರುವ ಸಾದೃಶ್ಯ ಸಂಪತ್ತನ್ನು ಗುರುತಿಸಲು ಸಾಧ್ಯವಾಗುತ್ತದೆ. ಒಂದು ಮತ್ತೊಂದಕ್ಕೆ ಇರುವ ಸಾದೃಶ್ಯವನ್ನು ತಟಕ್ಕನೆ ಗುರುತಿಸುವ, ಲೋಕವಾಸ್ತವದಲ್ಲಿ ಒಂದು ವಿಶೇಷ ಅರ್ಥವನ್ನು ಕಾಣುವ ಈ ಶಕ್ತಿ ವಿಶೇಷತೆಯೆ ಕಲ್ಪನೆ. ಒಂದು ಮೋಡವನ್ನು ನೋಡುತ್ತಲೆ ಕವಿಗೆ ಅದೊಂದು ಜಲಕ್ರೀಡೆಯಲ್ಲಿ ತೊಡಗಿರುವ ಗಜ ದಂತೆ ತೋರಬಹುದು; ಮತ್ತೊಬ್ಬ ಕವಿಗೆ ಆಕಾಶದ ನೀಲಿಯಲ್ಲಿ ಕಂಡ ಒಂಟಿ ಮೋಡ ಬಾನಿನ ಜಗುಲಿಯ ನೀಲಿಯಲ್ಲಿ ಆಡುವ ಬಿಳಿ ಮುಗಿಲಿನ ಕೂಸಿನಂತೆ ತೋರಬಹುದು; ತಂಗಾಳಿಗೊಲೆಯುವ ಬಳ್ಳಿಯೊಂದು ಲತಾನಟಿಯಂತೆ ತೋರ ಬಹುದು. ಹೀಗೆ ಒಂದು ಮತ್ತೊಂದರ ಸಾದೃಶ್ಯ ಶ್ರೀಯನ್ನು ಕಾಣುವ, ಪರಿಭಾವಿ ಸುವ ಈ ಶಕ್ತಿಯೇ ಕಲ್ಪನೆ. ಆದರೆ ಹಾಗೆ ಕಂಡದ್ದನ್ನು ಮಾತಿನಲ್ಲಿ ಕಂಡರಿಸ ಬೇಕಾದರೆ, ತಾನು ಕಂಡ ಅನುಭವವನ್ನು ಉಕ್ತಿ ಕ್ರಿಯಾಭಿಮುಖವನ್ನಾಗಿ ಮಾಡ ಬೇಕಾದರೆ, ಅವನ ಕಲ್ಪನೆಗೆ ಪ್ರಚೋದಕವಾದ ಒಂದು ವಿಶೇಷಾವೇಶ ಒದಗಿ ಬರುತ್ತದೆ. ಇದೇ ಸ್ಫೂರ್ತಿ. ಎಂದರೆ ಕಲ್ಪನೆ ಕೇವಲ ಕಾಣತಕ್ಕದ್ದು ಎಂದು ಅರ್ಥವಲ್ಲ. ಕಲ್ಪನೆ ಕಾಣುವಾಗ ಹೇಗೋ ಕಟ್ಟುವಾಗಲೂ ಇರುತ್ತದೆ. ಆದರೆ ಅದನ್ನು ಉಜ್ವಲಗೊಳಿಸುವ ಆವೇಶರೂಪವಾದ ಸ್ಫೂರ್ತಿ ಕಟ್ಟುವಾಗ ಮಾತ್ರ ಒದಗಿಬರತಕ್ಕ ಒಂದು ಶಕ್ತಿ. ಕಟ್ಟುವಿಕೆಗೆ ಪ್ರಚೋದಕವಾದ ಈ ಶಕ್ತಿ,† ಆವೇಶ ರೂಪವಾದುದರಿಂದ, ಅದು ಕೃತಿನಿರ್ಮಿತಿಯಲ್ಲಿ ಅಲ್ಲಲ್ಲಿ ನಿರ್ಗಮಿಸಿದಾಗ, ಸ್ಫೂರ್ತಿಯ ಸ್ಪರ್ಶವಿಲ್ಲದೆ ರಚಿತವಾದ ಭಾಗಗಳು ಕಂಡುಬರುತ್ತವೆ. ಅಲ್ಲೆಲ್ಲಾ ಕವಿಯ ಸಹಜ ಕಲ್ಪನಾಶಕ್ತಿ ಬುದ್ಧಿಯ ಸಹಾಯದಿಂದ ಕೆಲಸಮಾಡುವುದರಿಂದ ಆ ಭಾಗಗಳು ನೀರಸವಾಗದೆ ರಮ್ಯವಾಗಿಯೆ ಇದ್ದರೂ, ಸ್ಫೂರ್ತಿಯಿಂದ ಹೊಮ್ಮಿದ ಭಾಗಗಳಷ್ಟು ಉಜ್ವಲವಾಗಿಲ್ಲದೆ ಇರಬಹುದು. ಆದರೆ ಎಲ್ಲಿ ಸ್ಫೂರ್ತಿಯಾಗಲಿ, ಕಲ್ಪನೆಯಾಗಲಿ ಎರಡೂ ಇಲ್ಲದೆ ಕವಿ ಕೇವಲ ವ್ಯುತ್ಪತ್ತಿ ಮತ್ತು ನೈಪುಣ್ಯಬಲದಿಂದ ಹೊಸೆದ ಭಾಗಗಳಿರುತ್ತವೆಯೋ ಅವೆಲ್ಲವೂ ಛಂದೋಬದ್ಧವಾಗಿ 'ಕಾವ್ಯ' ದಂತೆ ತೋರಿದರೂ ಅವು ಬರಿ ನೀರಸವೋ, ಕೇವಲ ಚಮತ್ಕಾರ ಪ್ರಧಾನವೋ ಆಗಿ, ಕಿಡಿ ಯಿಲ್ಲದ ಬೂದಿಬರೆವಣಿಗೆಮಾತ್ರವಾಗಿಬಿಡುತ್ತವೆ. ಆದರೆ ಎಲ್ಲೆಲ್ಲಿ ಸ್ಫೂರ್ತಿಯ

---

† ಹಾಲು ಕರೆಯುವ ಮುನ್ನ ಕರು ಕೆಚ್ಚಲಿಗೆ ಬಾಯಿಟ್ಟು ಕೊಂಚ ಕುಡಿದನಂತರ ಗೌಳಿಗನಿಗೆ ಹಾಲುಕರೆಯುವ ಕ್ರಿಯೆ ಹೇಗೆ ಸುಲಭವೂ ಸರಾಗವೂ ಆಗುವುದೋ ಹಾಗೆಯೆ, ಕಲ್ಪನೆಗೆ ಸ್ಫೂರ್ತಿಯ ಸ್ಪರ್ಶ ಪ್ರಚೋದನೆ ಲಭಿಸಿದಾಗಲೆ ಅದು ಸಲೀಸಾಗಿ ಕ್ರಿಯಾಭಿ ಮುಖವಾಗುತ್ತದೆ ಎನ್ನಬಹುದು. ಈ ಉಪಮೆಯನ್ನು ಹೆಚ್ಚು ವಿಲಂಬಿಸಿ ನೋಡಬಾರದು.

ಸ್ಪರ್ಶವುಂಟೋ ಅಲ್ಲೆಲ್ಲಾ ಕಾವ್ಯ ಅತ್ಯಂತ ಉಜ್ವಲವಾಗಿ ಓದುಗನಲ್ಲಿಯೂ ಸ್ಫೂರ್ತಿಯನ್ನು ತುಂಬುತ್ತದೆ.* ಆದಕಾರಣ ಸ್ಫೂರ್ತಿ ಎನ್ನುವುದು ಕೃತಿ ನಿರ್ಮಾಣಕಾಲದಲ್ಲಿ ಪ್ರಾಪ್ತವಾಗುವ ಒಂದು ವಿಶೇಷಾವೇಶ ಎಂದು ತಿಳಿಯಬೇಕು. ಅಲ್ಲದೆ ಸ್ಫೂರ್ತಿ ಎನ್ನುವ ಮಾತಿನ ಬಳಕೆಯನ್ನೂ ಗಮನಿಸಿದರೆ ಅದರ ಲಕ್ಷಣ ಇನ್ನೂ ಸ್ಪಷ್ಟವಾಗುತ್ತದೆ. ಕವಿ ಸ್ಫೂರ್ತಿಯಿಂದ ಬರೆದ, ಭಾಷಣಕಾರ ಸ್ಫೂರ್ತಿಯಿಂದ ಮಾತನಾಡಿದ, ಯೋಧ ಸ್ಫೂರ್ತಿಯಿಂದ ಹೋರಾಡಿದ, ಕಲಾವಿದ ಸ್ಫೂರ್ತಿಯಿಂದ ಚಿತ್ರಬರೆದ, ಗಾಯಕ ಸ್ಫೂರ್ತಿಯಿಂದ ಹಾಡಿದ—ಎನ್ನುತ್ತೇವೆ. ಕವಿ ಕಲ್ಪನೆಯ ಕಣ್ಣಿಂದ ನೋಡಿದ ಎನ್ನುತ್ತೇವೆಯೆ ಹೊರತು ಸ್ಫೂರ್ತಿಯಿಂದ ನೋಡಿದ ಎನ್ನುವುದಿಲ್ಲ. ಎಂದರೆ ಸ್ಫೂರ್ತಿ ಮಾಟಕ್ಕೆ ಸಂಬಂಧಿಸಿದ್ದೆ ಹೊರತು ನೋಟಕ್ಕಲ್ಲ. ಸ್ಫೂರ್ತಿ ಎನ್ನುವುದು ಪರಿಭಾವನಾ ತಾಟಸ್ಥ್ಯವಲ್ಲ, ಅದೊಂದು ವಿಶೇಷ ಚಟುವಟಿಕೆ. ಎಲ್ಲೆಲ್ಲಿ ಕಲಾಪ್ರವೃತ್ತಿ ನೂತನ ನಿರ್ಮಾಣದಲ್ಲಿ ತೊಡಗುತ್ತದೆಯೋ ಅಲ್ಲಲ್ಲಿ ಆ ಪ್ರವೃತ್ತಿಯನ್ನು ತನ್ನ ಸ್ಪರ್ಶದಿಂದ ಉಜ್ವಲಗೊಳಿಸುವ ಕಾರ್ಯ ಸ್ಫೂರ್ತಿಯದು.† ಹಾಗೆ ಸ್ಫೂರ್ತಿಯಿಂದ ಉಜ್ಜ್ವಲವಾದ ಕೃತಿಯನ್ನೋ, ಕೃತಿಭಾಗಗಳನ್ನೋ ನಾವು ಆ ಕವಿಯ ಅತ್ಯುತ್ತಮ ಭಾಗಗಳೆಂದು ಗುರುತಿಸುತ್ತೇವೆ.

---

* ನಿಧರ್ಶನಕ್ಕೆ ನಮ್ಮ ಯಾವ ಹಳಗನ್ನಡ ಕಾವ್ಯವನ್ನಾದರೂ ನೋಡಬಹುದು. ಪಂಪನ ಆದಿಪುರಾಣದಲ್ಲೇ, ಫೀಲಾಂಜನೆಯ ನೃತ್ಯ, ಜನ್ಮಾಭಿಷೇಕ ವರ್ಣನೆ, ವಿಜಯ ಪ್ರಶಸ್ತಿಯ ಪ್ರಸಂಗ, ಭರತ ಬಾಹುಬಲಿ ಯುದ್ಧ ಇಂಥ ಪ್ರಸಂಗಗಳಲ್ಲಿ ಕಂಡುಬರುವ ಸ್ಫೂರ್ತಿಯ ಉಜ್ವಲತೆ, ಬೇರೆ ಭಾಗಗಳಲ್ಲಿ ಕಾಣದು. ಮಹಾಕವಿಯಾದವನು, ತನ್ನ ಸಹಜ ಕಲ್ಪನೆಯಿಂದ ಕೃತಿನಿರ್ಮಾಣಕ್ಕೆ ತೊಡಗಿದಾಗ ಅವನ ಸಹಜಸಂಚಾರಭೂಮಿಕೆಯೆ ಅತಿಶಯವಾಗಿರುವುದರಿಂದ ಆ ನಿರ್ಮಿತಿ ಒಂದು ವೇಳೆ ಸ್ಫೂರ್ತಿಯ ಸ್ಪರ್ಶವಿಲ್ಲದೆಹೋದರೂ, ಕಲ್ಪನಾಬಲದಿಂದ ಉತ್ತಮವಾಗಿಯೆ ಇರುತ್ತವೆ. ಆದರೆ ಎಲ್ಲಿ ಕಲ್ಪನೆ ಸ್ಫೂರ್ತಿ ಎರಡೂ ಇಲ್ಲದ 'ರಚನೆ' ಗಳಿರುತ್ತವೋ, ಅವು ನೀರಸವೋ, ಚಮತ್ಕಾರವೋ ಆಗಿರುತ್ತವೆ. ಇಂಥವು ಸಾಮಾನ್ಯ ಕವಿಗಳಲ್ಲಿ ಸಮೃದ್ಧವಾಗಿ ದೊರೆಯುತ್ತವೆ.

† ಸ್ಫೂರ್ತಿ ಎನ್ನುವುದು ಕಲೆಯಲ್ಲದ ಕ್ಷೇತ್ರಗಳಲ್ಲಿಯೂ ಕಂಡುಬರುವ ಮಾಟಕ್ಕೆ ಸಂಬಂಧಿಸಿದ ಒಂದು ಶಕ್ತಿ. ದೈಹಿಕವಾಗಿ ಅತ್ಯಂತ ದುರ್ಬಲನಾದ ವ್ಯಕ್ತಿಯೂ ತನ್ನ ಮಾನ ಗೌರವದ ರಕ್ಷಣೆಯಲ್ಲಿ ಅಪ್ರತಿಮ ವೀರಾವೇಶದಿಂದ ಹೋರಾಡಿದ್ದುಂಟು; ಸಾಧಾರಣವಾದ ಬಡಕಲು ಹಸುವೊಂದು ತನ್ನ ಎಳೆಗರುವಿನ ಸಂರಕ್ಷಣೆಯಲ್ಲಿ ಹುಲಿಯೊಂದನ್ನು ತಿವಿದು ಕೊಂದುದುಂಟು. ಇಲ್ಲೆಲ್ಲಾ ಒಂದು ವಿಶೇಷ ಆವೇಶವನ್ನು ಗುರುತಿಸಬಹುದು. ಒಬ್ಬನಲ್ಲಿ ವ್ಯಕ್ತವಾಗುವ ಸ್ಫೂರ್ತಿ ಉಳಿದವರಲ್ಲೂ ಸ್ಫೂರ್ತಿಯನ್ನು ಪ್ರಚೋದಿಸಬಹುದು. ಹಿರಿಯ ಉದ್ದೇಶಕ್ಕಾಗಿ ಹೋರಾಡಿದವನ ಸ್ಫೂರ್ತಿ, ಉಳಿದವರಲ್ಲೂ ಸ್ಫೂರ್ತಿಯನ್ನು ಉಂಟುಮಾಡಬಹುದು. ವಿವೇಕಾನಂದರ ಭಾಷಣಗಳು– ಲಿಖಿತ ರೂಪದಲ್ಲಿದ್ದರೂ–ನಮ್ಮಲ್ಲಿ ಸೂರ್ತಿಯನ್ನು ಉಕ್ಕಿಸಿ ನಮ್ಮನ್ನು ಕಾರ್ಯೋನ್ಮುಖರನ್ನಾಗಿ ಮಾಡುತ್ತವೆ.

೩

'ಸ್ಫೂರ್ತಿ' ಎನ್ನುವ ಪದ ನಮ್ಮಲ್ಲಿ ಹೊಳಹು, ಸ್ಪಂದನ, ಅಭಿವ್ಯಕ್ತಿ ಎನ್ನುವ ಅರ್ಥಗಳಲ್ಲಿ ಬಳಕೆಯಲ್ಲಿದ್ದರೂ,* ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅದು ಪ್ರತಿಭಾವ್ಯಾಪಾರಕ್ಕೆ ಸಂಬಂಧಿಸಿದ ಒಂದು ಪಾರಿಭಾಷಿಕ ಪದವಾಗಿ ಬಳಸಲ್ಪಟ್ಟಿಲ್ಲ.† ಇಂಗ್ಲಿಷಿನ Inspiration ಪದಕ್ಕೆ 'ಸ್ಫೂರ್ತಿ' ಎನ್ನುವ ಪದವನ್ನು ಸಂವಾದಿಯಾಗಿ ಯಾರು ಮೊಟ್ಟಮೊದಲು ಬಳಸಲು ಮೊದಲುಮಾಡಿದರೋ ತಿಳಿಯಬೇಕಾದ ಸಂಗತಿ. ಈಗ ನಾವು ಯಾವುದನ್ನು ಸ್ಫೂರ್ತಿ ಎಂದು ಕರೆಯುತ್ತೇವೆಯೋ ಆ ಒಂದು ವ್ಯಾಪಾರಕ್ಕೆ ನಮ್ಮ ಪ್ರಾಚೀನ ಆಲಂಕಾರಿಕರು ಕೊಟ್ಟ ಹೆಸರು 'ರಸಾವೇಶ' ಎಂಬುದು. ಈ ರಸಾವೇಶ ಎನ್ನುವುದು ಪ್ರತಿಭಾ ವ್ಯಾಪಾರದಲ್ಲಿಯೆ ಅಂತರ್ಗತ ವಾಗುವ ಒಂದು ಕ್ರಿಯೆ. ನಮ್ಮವರು ಹೇಳುವ ಪ್ರತಿಭಾ ವ್ಯಾಪಾರ, ಪಾಶ್ಚಾತ್ಯರು ಹೇಳುವ Imagination (ಕಲ್ಪನೆ) ಮತ್ತು Inspiration (ಸ್ಫೂರ್ತಿ) ಎರಡನ್ನು ಒಳಕೊಳ್ಳುತ್ತದೆ. ಪ್ರತಿಭೆಯೆ ಕಾವ್ಯಕ್ಕೆ ತಾಯಿ. ಅದರ ಸ್ವರೂಪವನ್ನೂ ವರ್ಣಿಸುತ್ತಾ ಆಲಂಕಾರಿಕರೆಲ್ಲರೂ ಅದೊಂದು ಸ್ಫುರಣೆ, ಹೊಳಪು ಎನ್ನುತ್ತಾರೆ.§ ಆದರೆ "ಈ ಪ್ರತಿಭಾವ್ಯಾಪಾರಕ್ಕೆ ಮೊದಲಿಂದ ಕೊನೆಯತನಕ ನಿಯಾಮಕವಾದ ಮತ್ತೊಂದು ತತ್ವವುಂಟು. ಅದೇ ರಸಾವೇಶ. ಧ್ವನಿ ತತ್ವದ ಸಮರ್ಥಕಾರನಾದ ಅಭಿನವಗುಪ್ತನಿಗೂ ಅದರ ಖಂಡನಕಾರನಾದ ಮಹಿಮಭಟ್ಟನಿಗೂ ಈ ವಿಚಾರ ದಲ್ಲಿ ಏಕಕಂಠತೆಯಿದೆ. 'ರಸಾವೇಶ ವೈಶದ್ಯ ಸೌಂದರ್ಯ ನಿರ್ಮಾಣಕ್ಷಮತ್ವ'ವೇ

---

*. A. A. Macdonell, Monior Williams, V. S. Apte, ಇವರ ಸಂಸ್ಕೃತ ನಿಘಂಟುಗಳಲ್ಲೆಲ್ಲಾ 'ಸ್ಫೂರ್ತಿ' ಎನ್ನುವ ಪದಕ್ಕೆ Flash, Sparkle, be manifested, Quivering, Shining, emotion of the mind, Flashing on the mind, Vibration–ಎನ್ನುವ ಹಲವು ಅರ್ಥಗಳಿವೆ.

† ಕಲ್ಪನೆ, ಶೈಲಿ, ಸ್ಫೂರ್ತಿ–ಈ ಮೂರು ಪದಗಳು ನಮ್ಮಲ್ಲಿದ್ದರೂ, ನಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಅವು ಪಾರಿಭಾಷಿಕ ಪದಗಳಾಗಿ ಪ್ರಯೋಗವಾಗಿಲ್ಲ. ಆಧುನಿಕ ವಿಮರ್ಶೆಯ ಭಾಷೆಯಲ್ಲಿ ಇವುಗಳು ವಿಶೇಷವಾಗಿ ಬಳಕೆಯಲ್ಲಿವೆ.

§ "ಪ್ರತಿಭೆ" ಎಂಬ ಶಬ್ದದ ಅಕ್ಷರಾರ್ಥ "ಹೊಳಹು". ಇದರ ಕಾರ್ಯವನ್ನು ಸರಳ ವಾದ ಮಾತುಗಳಲ್ಲಿ ರುದ್ರಟನು ಹೀಗೆ ಹೇಳಿದ್ದಾನೆ: . . . "ಸಮಾಹಿತವಾದ ಮನಸ್ಸಿನಲ್ಲಿ ಅನೇಕ ಪ್ರಕಾರವಾಗಿ ಅರ್ಥವೂ ಅದನ್ನು ತಿಳಿಸಲು ಕ್ಲಿಷ್ಟವಲ್ಲದ ಪದಗಳೂ ಯಾವುದರಿಂದ ಹೊಳೆಯುವುವೋ ಅದೇ ಶಕ್ತಿ. ಇದನ್ನೇ ಪ್ರತಿಭೆಯೆಂದು ಇತರರು ಕರೆಯುವರು." "ಯಾವುದು ಶಬ್ದಸಮೂಹವನ್ನೂ ಅರ್ಥಪುಂಜವನ್ನೂ ಅಲಂಕಾರತಂತ್ರವನ್ನೂ ಇದೇ ಬಗೆಯ ಇತರ ಉಕ್ತಿಮಾರ್ಗವನ್ನೂ ಹೃದಯದಲ್ಲಿ ಹೊಳೆಯಿಸುತ್ತದೋ ಅದೇ ಪ್ರತಿಭೆ"— [ರಾಜಶೇಖರನ 'ಕಾವ್ಯಮೀಮಾಂಸಾ' ಪು. ೧೧-೧೨], ತೀ. ನಂ. ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಪು. ೧೬೨-೧೬೩.

ಪ್ರತಿಭೆಯೆಂದು ಅಭಿನವಗುಪ್ತನ ಉಕ್ತಿ [ಧ್ವನ್ಯಾ. ಲೋಚನ. ಪು. ೨೯]".[15] ಅಪೂರ್ವ ವಸ್ತುವನ್ನು ನಿರ್ಮಿಸಬಲ್ಲ ಪ್ರಜ್ಞಾವಿಶೇಷವಾದ ಪ್ರತಿಭೆಯ ಲಕ್ಷಣವೇ ಇದು: ರಸಾವೇಶದ ವೈಶದ್ಯದ ಪರಿಣಾಮವಾಗಿ ಸೌಂದರ್ಯಮಯವಾದ ಕಾವ್ಯ ನಿರ್ಮಾಣ ಕೌಶಲ. ರಸಾವೇಶವಿಲ್ಲದೆ ಕಾವ್ಯ ನಿರ್ಮಾಣವೆ ಇಲ್ಲ. "ಕವಿಯ ಹೃದಯದಲ್ಲಿ ರಸದ ಕಾವು ಉಂಟಾದಾಗಲೇ ಅವನ ಪ್ರತಿಭೆ ಉಜ್ವಲಿಸುವುದು. . . ಪ್ರತಿಭೆ ಚುರುಕಾಗಿ ಓಡುವ ಕುದುರೆಯಂತೆ; ಆದರೆ ಕಡಿವಾಣವನ್ನೂ, ಚಾವಟಿಯನ್ನೂ ಕೈಯಲ್ಲಿ ಹಿಡಿದು ಎಲ್ಲಿ ಎತ್ತ ಓಡಿಸಬೇಕೋ ಓಡಿಸಿ ತಿರುಗಿಸಬೇಕೋ ತಿರುಗಿಸಿ ಹಿಂದಕ್ಕೆ ಜಗ್ಗಬೇಕೋ ಜಗ್ಗಿ ಸರಿಯಾದ ದಾರಿಯಲ್ಲಿ ನಡಸುವ ಸಾರಥಿ ಕವಿಯ ರಸಾವೇಶ".[16] ಈ ರಸಾವೇಶವನ್ನು ಕುರಿತು ಆಲಂಕಾರಿಕರು ಹೇಳಿರುವುದು ಅತ್ಯಲ್ಪ. ಆದರೆ ಕವಿಗಳು ಮಾತ್ರ ತಮ್ಮ ಕಾವ್ಯಾರಂಭದಲ್ಲಿ ಮಾಡುವ ದೇವತಾ ಸ್ತುತಿಯಲ್ಲಿ, ಕಾವ್ಯವನ್ನು ನಡಸುವ ದಿವ್ಯಶಕ್ತಿಯನ್ನು ಆವಾಹನೆ ಮಾಡುವಲ್ಲಿ ಸ್ಫೂರ್ತಿ ತತ್ವದ ಪ್ರಾಚೀನಭಾವನೆಯನ್ನೆ ವ್ಯಕ್ತಪಡಿಸಿದ್ದಾರೆ. ನಮ್ಮ ಆಲಂಕಾರಿಕರ ದೃಷ್ಟಿಯಲ್ಲಿ ಪ್ರತಿಭಾವ್ಯಾಪಾರವೆ ವಿಶೇಷವ್ಯಾಪಕವಾದ ತತ್ವ. ಪ್ರತಿಭೆ ನವನವ ಉನ್ಮೇಷ ಶಾಲಿನಿ—ಹೊಸಹೊಸತನ್ನು ಹೊಳೆಯಿಸುವ ಶಕ್ತಿ ನವನವ ಉಲ್ಲೇಖ ಶಾಲಿನಿ—ಹೊಸಹೊಸತಾಗಿ ಕಟ್ಟುವ ಶಕ್ತಿ, ಎರಡೂ ಆದುದರಿಂದ ಕಟ್ಟುವ ಶಕ್ತಿಗೆ ಅತ್ಯಗತ್ಯವಾದ 'ರಸಾವೇಶ' ಎನ್ನುವುದು ಸ್ಫೂರ್ತಿ ಅಲ್ಲದೆ ಬೇರೆ ಅಲ್ಲ.

೪

ಕವಿ ಕಂಡದ್ದನ್ನು ಕಟ್ಟುತ್ತಾನೆ, ಹಾಗೆ ಕಟ್ಟುವಲ್ಲಿ ಸ್ಫೂರ್ತಿಯನ್ನು ಗುರುತಿಸುತ್ತೇವೆ ಎಂದರೆ, ಕವಿ ಕಾಣುವ ಘಟ್ಟ ಒಂದು ಉಂಟು, ಅದು ಮುಗಿದಮೇಲೆ ಕಟ್ಟುವ ಕೆಲಸ ಶುರುವಾಗುತ್ತದೆ ಎಂದು ಅರ್ಥವಾಗಲು ಅವಕಾಶವಿದೆ. ಆದರೆ ವಾಸ್ತವಾಂಶ ಹಾಗಿಲ್ಲ. ದರ್ಶನ ಮೊದಲು, ವರ್ಣನೆ ಅದರ ಹಿಂದೆ. ಹೀಗೆ ಮಾಡುವ ವಿಭಾಗ ಕೇವಲ ಔಪಚಾರಿಕ. ನವ ನವ ಉನ್ಮೇಷ ಹಾಗೂ ನವ ನವ ಉಲ್ಲೇಖ ಎರಡೂ ಒಂದೇ ಶಕ್ತಿಯ ಎರಡು ಮುಖಗಳು. ಅಲ್ಲಿ ಕಾಣುವಾಗಲೂ ಕಟ್ಟುವ ಅಂಶವಿರುತ್ತದೆ, ಕಟ್ಟುವಾಗಲೂ ಕಾಣುವ ಅಂಶವಿರುತ್ತದೆ. ಆದರೆ ಯಾವುದು ಸ್ಫೂರ್ತಿಯಲ್ಲಿ ಕವಿಗೆ ಒದಗಿಬರುತ್ತದೆಯೋ ಅದೆಲ್ಲವನ್ನೂ ಭಾಷೆಯಲ್ಲಿ ಸಂಪೂರ್ಣವಾಗಿ ಹಿಡಿದಿಡಲಾಗುವುದಿಲ್ಲ; ಸ್ಫೂರ್ತಿಯ ಕಾವು ಎಷ್ಟೋ ವೇಳೆ ಭಾಷೆಯ ಕಟ್ಟನ್ನು ಮೀರಿ ಮುಂದೆ ಹೋಗಬಹುದು, ಅಥವಾ ಮತ್ತೆ ಕೆಲವು ವೇಳೆ ಭಾಷೆಯಲ್ಲಿ ಹಿಡಿದಿಡುವ ಪ್ರಯತ್ನದಲ್ಲಿ ಸ್ಫೂರ್ತಿಯ ಕಾವೇ ಇಳಿಮುಖವಾಗಬಹುದು. ಕವಿಗೊದಗುವ ಆವೇಶರೂಪವಾದ ಸ್ಫೂರ್ತಿಯಲ್ಲಿ ನುಗ್ಗಿ ಬರುವ ಪದ, ಪದಪುಂಜ, ಅಲಂಕಾರ ಪ್ರಕಾರಗಳು ಈ ಎಲ್ಲವೂ, ಆತನ ವ್ಯುತ್ಪತ್ತಿ

15-16 ತೀ. ನಂ. ಶ್ರೀಕಂಠಯ್ಯ : ಭಾರತೀಯ ಕಾವ್ಯಮೀಮಾಂಸೆ : ಪು. ೧೭೫, ೧೭೬

ಅಭ್ಯಾಸಗಳಿಂದ ಸಿದ್ಧವಾದ ಭಾಷೆಯ ಸಾಹಚರ್ಯದಲ್ಲಿ ಅಭಿವ್ಯಕ್ತಿಯನ್ನು ಪಡೆಯುವಾಗ, ಕಲಾವಿದ ಆಶ್ರಯಿಸಬೇಕಾದ ಅಭಿವ್ಯಕ್ತಿಯ ಮಾಧ್ಯಮದ ಸಹಜ ಮಿತಿಯಿಂದಲೋ ಏನೋ ಸ್ಫೂರ್ತಿ ಕುಂಠಿತವಾಗಲೂಬಹುದು. ಅಂಥ ಹೊತ್ತಿನಲ್ಲಿ ಕವಿ ಕೊರಗುವುದೂ ಉಂಟು. ಷೆಲ್ಲಿ ಕವಿ ಇಂಥ ಅನುಭವವನ್ನು ಕುರಿತು "ಯಾವಾಗ ರಚನೆ ಆರಂಭವಾಯಿತೋ ಆಗ ಸ್ಫೂರ್ತಿ ಇಳಿಮುಖವಾಗುತ್ತದೆ ಅಥವಾ ಕಾವನ್ನು ಕಳೆದುಕೊಳ್ಳುತ್ತದೆ. ಜಗತ್ತಿನ ಅತ್ಯುತ್ತಮ ಕಾವ್ಯ ಎಂದು ಯಾವುದನ್ನು ಕರೆಯುತ್ತೇವೋ ಅದು ಕೂಡಾ ಬಹುಶಃ ಕವಿಯ ಮೂಲಾನುಭವದ ದುರ್ಬಲ ಛಾಯೆ ಮಾತ್ರ"[17]—ಎಂದು ಹೇಳುತ್ತಾನೆ. ಈ ಹೇಳಿಕೆಯಲ್ಲಿನ ಉತ್ತರಾರ್ಧದಷ್ಟು ಪೂರ್ವಾರ್ಧ ಸರಿ ಎಂದು ತೋರುವುದಿಲ್ಲ. ಕವಿಯ ಸ್ಫೂರ್ತಿ ದೈನಂದಿನ ವ್ಯವಹಾರದ ಸಾಮಗ್ರಿಯಾದ ಭಾಷೆಯಲ್ಲಿ ಪ್ರವಹಿಸಿ ಅದನ್ನು ಪರಿವರ್ತಿಸಿ ಕವಿ ಪ್ರತಿಭೆಯ ವಲಯಕ್ಕೆ ಎತ್ತಿಕೊಡುತ್ತದೆ. ಹೀಗಿರುವಾಗ ಕವಿ ಕೃತಿ ರಚನೆಗೆ ತೊಡಗಿದ ಒಡನೆ ಅಥವಾ ಭಾಷಾ ಸಾಮಗ್ರಿಯಲ್ಲಿ ಅದನ್ನು ಹಿಡಿದಿಡಲು ಮೊದಲು ಮಾಡಿದ ಒಡನೆ ಸ್ಫೂರ್ತಿ ಇಳಿಮುಖವಾಗುತ್ತದೆ ಎನ್ನುವುದು ಹೇಗೆ? ಹಾಗೆ ನೋಡಿದರೆ ಯಾವುದು ಸ್ಫೂರ್ತಿಯಲ್ಲಿ ಮೊದಲು ಕಾಣಿಸುತ್ತದೆಯೋ ಅದು ಕೃತಿಯ ಸರ್ವಸ್ವವೂ ಅಲ್ಲ. ಸ್ಫೂರ್ತಿಯಲ್ಲಿ ಮೊದಲು ಗೋಚರಿಸುವುದು ಇನ್ನೂ ಬರಲಿರುವ ಭಾವ ಪರಂಪರೆಯ ಮುಂಚೂಣಿಯ ಭಾಗವೋ ಅಥವಾ ಅದರದೊಂದು ಮುಖವೋ ಆಗಿರಬಹುದು. ಅದರ ಹಿಂದೆ ಇನ್ನೂ ಏನೇನಿದೆ ಅನ್ನುವುದು ಕವಿಗೆ ಗೋಚರಿಸುವುದು ಕೃತಿರಚನೆ ಪೂರ್ಣವಾದಮೇಲೆಯೇ. ಇದರಮೇಲೆ ಸ್ಫೂರ್ತಿ ಎನ್ನುವುದು ಕೃತಿನಿರ್ಮಾಣದ ಆರಂಭ ಮಾತ್ರವಲ್ಲ, ಕವಿ ಷೆಲ್ಲಿ ಭಾವಿಸುವಂತೆ; ಅದು ಕೃತಿನಿರ್ಮಾಣದ ಉದ್ದಕ್ಕೂ ನಡೆಯುವ, ನಡೆಯಬೇಕಾದ ಕ್ರಿಯೆ. ಕೃತಿನಿರ್ಮಾಣ ಎನ್ನುವುದು ಮೊದಲು ಸ್ಫೂರ್ತಿಯಲ್ಲಿ ಹೊಳೆದು ಆಮೇಲೆ ಭಾಷೆಯಲ್ಲಿ ಮೈದೋರುವ ಕ್ರಿಯೆ ಅಲ್ಲ; ಅದು ಬರೆಯುತ್ತಾ ಹೋದಂತೆ ತೆರೆಯುತ್ತಾ ಹೋಗುವ ಒಂದು ಚಟುವಟಿಕೆ. ಮೊಟ್ಟಮೊದಲ ಹೊಳೆ ಹರಿದಂತೆ ಅದರ ರೀತಿ. ಮೊಟ್ಟಮೊದಲ ಹೊಳೆ ತಾನು ಹರಿಯುತ್ತಲೇ ತನ್ನ ಪಾತ್ರವನ್ನೂ ನಿರ್ಮಿಸಿಕೊಂಡಂತೆ ಸ್ಫೂರ್ತಿ ಹರಿಯುತ್ತಲೇ ತನ್ನ ರಚನೆಯ ಪಾತ್ರವನ್ನು ರೂಪಿಸುತ್ತಾ ಹೋಗಬಹುದು. ಕೃತಿನಿರ್ಮಾಣ ಮುಗಿದಮೇಲೆ ಅದರ ರಚನೆ ಕವಿಗೇ ಬೆರಗನ್ನು ತರಬಹುದು. ಆದ್ದರಿಂದ ಕೃತಿ ಮುಗಿದನಂತರವೆ ಕವಿಗೆ ಅದರ ಆಕೃತಿ ಗೋಚರವಾಗುವುದು. ಆದರೆ ಇಷ್ಟುಮಾತ್ರ ನಿಜ: ಕವಿ ತನ್ನ ಮೂಲಾನುಭವವನ್ನು ತನ್ನ ಅಭಿವ್ಯಕ್ತಿಯೊಂದಿಗೆ ಹೋಲಿಸಿಕೊಂಡಾಗ, ತನ್ನ

---

[17] Edmund D. Jones: English critical Essays (19th century)—A Defence of Poetry: Shelley, P. 132.

ಉಜ್ವಲವಾದ ಅನುಭವದ ಎದುರಿಗೆ ತನ್ನ ಅಭಿವ್ಯಕ್ತಿ ತೀರಾ ಸಪ್ಪೆಯಾಗಿ ತೋರ ಬಹುದು; ತನ್ನ ಅನುಭವ ಎಷ್ಟೊಂದು ಉಜ್ವಲವಾಗಿತ್ತು, ಆದರೆ ಅದನ್ನೆಲ್ಲಾ ಹಿಡಿದಿಡಲು ಆಗಿಲ್ಲವಲ್ಲ ಎಂದು ಅನ್ನಿಸಬಹುದು. ಹಾಗನ್ನಿಸಿದಮಾತ್ರಕ್ಕೆ "ರಚನೆಗೆ ತೊಡಗಿದಾಗಲೆ ಸ್ಫೂರ್ತಿ ಇಳಿಮುಖವಾಗುತ್ತದೆ" ಎಂದು ಅರ್ಥವಲ್ಲ. ಕವಿಯ ಉಜ್ವಲವಾದ ಅನುಭವವೆಲ್ಲವೂ ಭಾಷೆಯಲ್ಲಿ ಸಂಪೂರ್ಣವಾಗಿ ಪ್ರಕಟ ವಾಗುವುದೂ ಸಾಧ್ಯವಿಲ್ಲ; ಆದರೆ ಓದುಗರಾದ ನಮಗೆ ಭಾಷೆಯಲ್ಲಿ ಪ್ರಕಟವಾದ ಸೊಗಸು ಸಮರ್ಪಕವಾಗಿದ್ದರೆ ತೃಪ್ತಿಯನ್ನು ತರುತ್ತದೆ, ಅದುಸಾಕು; ಕವಿಗಂತೂ ಅತೃಪ್ತಿ ಇದ್ದೇ ಇರುತ್ತದೆ, ಅವನಿಗೆ ಅದು ಬೇಕು. ಈ ಅತೃಪ್ತಿಯ ನಿಲುವಿನಲ್ಲಿ 'ಜಗತ್ತಿನ ಅತ್ಯುತ್ತಮ ಕಾವ್ಯ ಎಂದು ಯಾವುದನ್ನು ಕರೆಯುತ್ತೇವೋ ಅದು ಕೂಡಾ ಬಹುಶಃ ಕವಿಯ ಮೂಲಾನುಭವದ ದುರ್ಬಲ ಛಾಯೆ ಮಾತ್ರ'—ಎಂದು ಕೊರಗುವ ಷೆಲ್ಲಿಯೊಂದಿಗೆ ನಾವೂ ದನಿಕೂಡಿಸಬಹುದು.

ಸ್ಫೂರ್ತಿಯಲ್ಲಿರುವಾಗ ಕವಿ ಉಳಿದ ಸಮಯಗಳಲ್ಲಿಗಿಂತ ಸುಲಭವಾಗಿ ಮತ್ತು ಸೊಗಸಾಗಿ ಬರೆಯಬಲ್ಲನು ಎಂದರೆ ಆ ಸಮಯದಲ್ಲಿ ಪ್ರಯತ್ನದ ಅಂಶ ಎಳ್ಳಷ್ಟೂ ಇಲ್ಲವೆಂದು ಅರ್ಥವಲ್ಲ. ಕೆಲವರು ಸ್ಫೂರ್ತಿಯಲ್ಲೇ ಥಟ್ಟನೆ ಇಡೀ ಕವನವನ್ನು ಲೀಲಾಜಾಲವಾಗಿ ಬರೆದು ಮುಗಿಸಬಹುದು; ಅಂಥ ಕಡೆ ಯಾವ ಪ್ರಯತ್ನವೂ ಕಾಣಿಸದೆ ಇರಬಹುದು. ಮತ್ತೆ ಕೆಲವರು ಸ್ಫೂರ್ತಿಯಿಂದ ಹೊಳೆದ ದ್ದನ್ನು ಹಿಡಿದಿರಿಸಿಕೊಂಡು ಅನಂತರ ನಿಧಾನವಾಗಿ ಕೂತು, ತಿದ್ದಿ, ತೀಡಿ, ಕಂಡರಿಸಿ ಪೂರೈಸಬಹುದು. ಒಬ್ಬ ಕವಿ ಹೇಳುತ್ತಾನೆ: "ಸ್ಫೂರ್ತಿ ಎನ್ನುವುದು ಕೃತಿಯ ಮೊದಲೂ ಹೌದು, ಕೃತಿಯ ತುದಿಯೂ ಹೌದು. ಅದು ಕವಿಯ ಮನಸ್ಸಿನಲ್ಲಿ ಗೋಚರಿಸುವ ಮೊದಲ ಭಾವ, ಮತ್ತು ಶಬ್ದಗಳಲ್ಲಿ ರೂಪುದಾಳುವ ಕಡೆಯ ಭಾವ. ಈ ಆರಂಭ ಮುಕ್ತಾಯಗಳ ನಡುವೆ ಬೆವರಿನ ಶ್ರಮದ ಪಂದ್ಯವನ್ನು ಕವಿ ಗೆಲ್ಲ ಬೇಕಾಗಿದೆ".[18] ಮಹತ್ತಾದ ಕಲಾನಿರ್ಮಾಣದಲ್ಲಿ ಕೇವಲ ಸ್ಫೂರ್ತಿಯ ಕಾರ್ಯ ವಷ್ಟೇ ಅಲ್ಲ, ಅನಂತರದ ವಿಶೇಷ ಪರಿಶ್ರಮದ ಕಾರ್ಯವೂ ಇರುತ್ತದೆ. ದೊಡ್ಡ ಕೃತಿಯನ್ನು ಬರೆದ ಕವಿಗಳ ಹಸ್ತಪ್ರತಿಯನ್ನು ನೋಡಿದರೆ ಅವರು ಸ್ಫೂರ್ತಿದತ್ತ ವಾದ ಕೃತಿಯನ್ನು ಹೇಗೆ ಅನಂತರದ ತಿದ್ದುವಿಕೆಗೆ ಒಳಪಡಿಸಿರುತ್ತಾರೆ ಎನ್ನುವುದು ಗೋಚರಿಸುತ್ತದೆ.* ನಮ್ಮವರೂ ಈ ಮಾತನ್ನು ಹೇಳಿದ್ದಾರೆ. "ರಸಾವೇಶದಲ್ಲಿ

---

[18]. Stephen Spender: The making of a poem. P. 52.

*After the fine first rapture of inspiration which ignites the fire, there must always come the labor at the blacksmith's bellows' the Soot, the Sweat, and Smoke of the forge, and the Clanging of the hammer on the anvil, in order to fashion the final Perception of great art, Any one who is familiar with the original manuscript of genius can observe the evidence of this dual process of creative agony.

Louis K. Anspacher: The Challenge of the Unknown, P. 122.

ಕಾವ್ಯವನ್ನು ರಚಿಸುವವನಿಗೆ ವಿವೇಚನೆಯುಳ್ಳ ದೃಷ್ಟಿ ಇರುವುದಿಲ್ಲ; ಆದಕಾರಣ ಆಮೇಲೆ ಪರೀಕ್ಷಿಸಬೇಕು ('ರಸಾವೇಶತಃ ಕಾವ್ಯಂ ವಿರಚಯತೋ ನ ಚ ವಿವೇಕ್ತ್ರೀ ದೃಷ್ಟಿಃ, ತಸ್ಮಾದನುಪರೀಕ್ಷೇತ'). ಹೆಚ್ಚಾದದ್ದನ್ನು ಬಿಡುವುದು, ಸಾಲದ್ದನ್ನು ಕೂಡಿಸುವುದು, ಸರಿಯಲ್ಲದ್ದನ್ನು ಮಾರ್ಪಡಿಸುವುದು, ಮರೆತದ್ದನ್ನು ನೆನಪಿಗೆ ತಂದುಕೊಳ್ಳುವುದು; ಇತ್ಯಾದಿ."[19]—ಎನ್ನುತ್ತಾನೆ ರಾಜಶೇಖರ ತನ್ನ ಕಾವ್ಯ ಮೀಮಾಂಸೆಯಲ್ಲಿ. "ಕಾವ್ಯಮಂ ನಡೆಸುವಾತಂ ರಸಾವೇಶ ಮಱಹು ಆಲಸ್ಯವೆಡೆಗೊಳಲು" ತಪ್ಪುತ್ತಾನೆ ಎಂದು ರಾಘವಾಂಕ ಹೇಳುತ್ತಾನೆ.[20] ಎಂದರೆ ಸ್ಫೂರ್ತಿ ಅಥವಾ ರಸಾವೇಶದಲ್ಲಿ ಕವಿ ಬರೆಯುವಾಗ ವಿವೇಚನೆಯುಳ್ಳ ದೃಷ್ಟಿಯಿರುವುದಿಲ್ಲವಾದ ಕಾರಣ ಹಲವು ತಪ್ಪುಗಳಾಗುತ್ತವೆ, ಎನ್ನುವ ವಿಷಯವನ್ನು ನಮ್ಮವರು ಗುರುತಿಸಿದ್ದಾರೆ. ಸ್ಫೂರ್ತಿಯಿಂದ ರಚಿತವಾದದ್ದನ್ನು ಲೇಖಕರು ಅನಂತರದ ವಿವೇಚನೆಯ ಅಧೀನಕ್ಕೆ ಒಪ್ಪಿಸುವುದು ಒಳ್ಳೆಯದು. ತಾನು ಕೇವಲ ಸ್ಫೂರ್ತಿಯಿಂದಲೇ ಬರೆದಿದ್ದೇನೆ, ಒಂದು ಪದವನ್ನೂ ಅಳಿಸುವ ಗೋಜಿಗೆ ನಾನು ಹೋಗಿಲ್ಲ ಎನ್ನುವುದು ಕೇವಲ ಹೆಮ್ಮೆಯ ಮಾತು.* ಕವಿಕೃತಿಯಲ್ಲಿ ಅತ್ಯುತ್ತಮವಾದ ಭಾಗಗಳನ್ನು ಕಂಡು ಇವು ಸ್ಫೂರ್ತಿಯಿಂದ ರಚಿಸಿದವುಗಳಾಗಿವೆ ಎಂದು ನಾವು ಗುರುತಿಸಬಹುದಾದರೂ, ಸ್ಫೂರ್ತಿಯಿಂದ ರಚಿತವಾದ ಭಾಗಗಳೆಲ್ಲವೂ ಅತ್ಯುತ್ತಮವಾಗಿರುತ್ತವೆ ಎಂದು ಹೇಳಲು ಬರುವುದಿಲ್ಲ. ಇದೇ ಕಾರಣಕ್ಕಾಗಿ 'ಸ್ಫೂರ್ತಿ ತತ್ವ'ವನ್ನು ವಿಮರ್ಶೆಯ ಮೂಲಮಾನವನ್ನಾಗಿ ಮಾಡಿಕೊಳ್ಳಲು ಬರುವುದಿಲ್ಲ. ಏಕೆಂದರೆ ಒಂದು ಕೃತಿ ಸ್ಫೂರ್ತಿಯಿಂದ ರಚಿತವಾದದ್ದರಿಂದ ಉತ್ತಮ ಕೃತಿ, ಸ್ಫೂರ್ತಿಯಿಂದ ರಚಿತವಾಗದಿದ್ದರೆ ಉತ್ತಮ ಕೃತಿಯಲ್ಲ—ಎಂದು ಹೇಳುವುದು ಸಮರ್ಪಕವಾದ ವಿಮರ್ಶೆಯ ಸೂತ್ರವಾಗುವುದಿಲ್ಲ. ಕೆಲವರು ಸ್ಫೂರ್ತಿಯಿಂದಲೇ ನೇರವಾಗಿ ರಚಿಸಿರಬಹುದು; ಕೆಲವರು ಸ್ಫೂರ್ತಿಯಲ್ಲಿ ಹೊಳೆದದ್ದನ್ನು ದೀರ್ಘಕಾಲದ ಪರಿಭಾವನೆ ಪರಿಶ್ರಮಗಳಿಗೆ ಒಳಪಡಿಸಿ ರಚಿಸಿರಬಹುದು. ಈ ಎರಡರಲ್ಲಿ ಯಾವುದು ಹೆಚ್ಚು ಯಾವುದು ಕಡಮೆ ಎನ್ನುವುದು ಪ್ರಶ್ನೆಯೇ ಅಲ್ಲ. ಮೊದಲನೆಯದಾಗಿ ಅದು ಕಾವ್ಯವಾಗಿದೆಯೆ ಇಲ್ಲವೆ ಎನ್ನುವುದು ಮುಖ್ಯ. ಅದು ಕಾವ್ಯವಾಗಿದ್ದರೆ ತೀರಿತು.

---

19 ತೀ. ನಂ. ಶ್ರೀಕಂಠಯ್ಯ: ಭಾರತೀಯ ಕಾವ್ಯಮೀಮಾಂಸೆ, ಪು. ೧೯೦, ೧೯೧.

20 ಹರಿಶ್ಚಂದ್ರಕಾವ್ಯ: ೧–೨೪ [ಸಂ. ಎನ್. ಬಸವಾರಾಧ್ಯ ಮತ್ತು ಪಂಡಿತ ಎಸ್. ಬಸಪ್ಪ.]

* "ಅತಿಮಾತಿನ ಅಪೇಕ್ಷೆಯೇನೋ ನಾರಣಪ್ಪನಲ್ಲಿ ಒಂದು ಸಣ್ಣ ಕುಂದು. 'ಪದವಿಟ್ಟಳುಪದೊಂದಗ್ಗಳಿಕೆ' ಎಂದು ಕವಿ ತಾನೇ ಗರ್ವದಿಂದ ಘೋಷಿಸಿದ್ದಾನೆ. ಅಯ್ಯೋ! ಆ ಅಗ್ಗಳಿಕೆ ಬರಿಯ ಭ್ರಾಂತಿಯೆಂದು ಅವನಿಗೆ ತಿಳಿಯದು. ಪದವನ್ನೇ ಅಲ್ಲ, ಪಂಕ್ತಿಯನ್ನೇ ಅಲ್ಲ, ಪರಿಚ್ಛೇದವನ್ನೂ ತೊಡೆದುಹಾಕಿದ್ದರೆ ಅವನ ಖ್ಯಾತಿ ಇನ್ನೂ ಹೆಚ್ಚುತಿತ್ತು...."

ಎಸ್. ವಿ. ರಂಗಣ್ಣ: ಶೈಲಿ—ಭಾಗ ೧. ಪು. ೧೩೪.

ಸ್ಫೂರ್ತಿಯ ಪ್ರಕಾರಗಳು ಅನೇಕ. ಕವಿಗೆ ಸ್ಫೂರ್ತಿ ಏಕೆ ಬರುತ್ತದೆ, ಹೇಗೆ ಬರುತ್ತದೆ ಎನ್ನುವುದು ವಿವರಣೆಗೆ ಅಸಾಧ್ಯವಾದ ವಿಚಾರ. ಮನಸ್‌ಶಾಸ್ತ್ರಜ್ಞರಿಗೆ ಇದು ಸೊಗಸಾದ ವಸ್ತು. ಕೆಲವು ಕವಿಗಳ ಅನುಭವಗಳೂ ಇದಕ್ಕೆ ನಿದರ್ಶನವಾಗಿ ಉಲ್ಲೇಖಿಸಲ್ಪಟ್ಟಿವೆ: ಹೌಸ್‌ಮನ್ ಕವಿಗೆ ಅನಾರೋಗ್ಯವಾದ ಸಮಯದಲ್ಲಿ, ಅದರಲ್ಲೂ ಭೋಜನಾನಂತರ ಒಂದಷ್ಟು ಬೀರ್ ಕುಡಿದಾಗ ಸ್ಫೂರ್ತಿ ಬರುತ್ತಿತ್ತಂತೆ: ಟಾಸೋಗೆ ಅತಿ ದುಃಖವಾದಾಗ, ವರ್ಡ್ಸ್‌ವರ್ತನಿಗೆ ಭಯ-ವಿಸ್ಮಯಾನುಭವಗಳಲ್ಲಿ, ಕೋಲ್‌ರಿಜನಿಗೆ ಆನಂದದಲ್ಲಿ, ಕೃತಿನಿರ್ಮಾಣಕ್ಕೆ ಪ್ರಚೋದಕವಾದ ಸ್ಫೂರ್ತಿ ಬರುತಿತ್ತಂತೆ.[21] ಕೆಲವು ವೇಳೆ ಕನಸಿನಲ್ಲಿ ಬಂದು ನನಸಿನಲ್ಲಿ ಪ್ರಚೋದನೆ ನೀಡುವ ಸ್ವಪ್ನಸ್ಫೂರ್ತಿಯೂ ಉಂಟು. ಒಮ್ಮೊಮ್ಮೆ ಬಂದ ಸ್ಫೂರ್ತಿ ಇದ್ದಕ್ಕಿದ್ದಂತೆ ಬತ್ತಿಹೋಗಬಹುದು; ಆಗ ಕವಿ ಎಷ್ಟೋ ದಿನ ರಿಕ್ತಾವಸ್ಥೆಯಲ್ಲಿ ಕಾದುಕುಳಿತಾಗ ಎಂದೋ ಯಾವುದೋ ನಿಮಿತ್ತವಾಗಿ ಅದು ತಿರುಗಿಬರುವುದೂ ಉಂಟು. 'ರಾಮಾಯಣ ದರ್ಶನ'ವನ್ನು ಬರೆಯುವಾಗ ಶ್ರೀ ಕುವೆಂಪು ಅವರಿಗೆ ಒಂದು ಸಂದರ್ಭದಲ್ಲಿ ಆದ ಈ ಅನುಭವ ಸ್ವಾರಸ್ಯವಾಗಿದೆ: "ಮತ್ತೊಂದು ಸನ್ನಿವೇಶ. ಅದು 'ಕ್ಷುದ್ರ' ವಾದುದಾದರೂ ಅದರ ಪ್ರಚೋದನೆ ಬಹಳ ಪರಿಣಾಮಕಾರಿಯಾದುದು. ಒಮ್ಮೆ ನಾಲ್ಕಾರು ತಿಂಗಳು ಬರೆವಣಿಗೆಯನ್ನು ಮುಂದುವರಿಸಲಾಗಲಿಲ್ಲ. ಕಾದು ಕಾದು ಬೇಸತ್ತೆ, ಹಲವರಿದೆ, ಖೇದಗೊಂಡೆ. ಒಂದು ದಿನ ಬೆಳಗ್ಗೆ ಚಿಂತಾಮಗ್ನನಾಗಿ ಕುಳಿತಿರುವಾಗ ನನ್ನ ಮಗ ತೇಜಸ್ವಿ ಏನೋ ಕಾರಣದಿಂದ ಅಳುವುದಕ್ಕೆ ಆರಂಭಿಸಿದ. 'ಏಕೋ ಅಳುತ್ತೀಯೆ' ಎಂದವನೇ ನನ್ನ ಕೊಠಡಿಗೆ ನಡೆದೆ. ಸರಿ, 'ಏಕಳುವೆ ತೇಜಸ್ವಿ?'ಯಿಂದ 'ಅತ್ತಲಾ ಕಿಷ್ಕಿಂಧೆಯೊಳ್' ಎಂಬ ಸಂಚಿಕೆ ಆರಂಭವಾಗಿ ಕೊನೆಗೊಂಡಿತು. ನಮ್ಮ ಮನೆಯ ಮುಂದಣ ಮರದಲ್ಲಿ ಹಕ್ಕಿಯೊಂದು 'ಟುವ್ವಿ ಟುವ್ವಿ' ಎಂದು ಕರೆದುದೇ ಕಾರಣವಾಗಿ 'ಓ ಲಕ್ಷ್ಮಣಾ' ಸಂಚಿಕೆ ಆರಂಭವಾಯಿತು."[22] ಒಟ್ಟಿನಲ್ಲಿ ಸ್ಫೂರ್ತಿ ಯಾವ ಕಾರಣದಿಂದ ಬರುತ್ತದೆ ಎನ್ನುವುದು ಅನೂಹ್ಯವಾದ ಸಂಗತಿ. ಕೆಲವು ಕವಿಗಳಲ್ಲಿ ಒಂದು ವಯಸ್ಸಿನಲ್ಲಿದ್ದ ಸ್ಫೂರ್ತಿ ಬೇರೆ ಬೇರೆಯ ವಯೋಮಾನಗಳಲ್ಲಿ ಇಲ್ಲದೆ ಹೋಗಬಹುದು. ಮಿಲ್ಟನ್‌ಕವಿ ಇಪ್ಪತ್ತೈದು ವರ್ಷಗಳ ಕಾಲ ಏನನ್ನು ಬರೆಯಲಿಲ್ಲ; ವರ್ಡ್ಸ್‌ವರ್ತ್ ಮೊದಮೊದಲು ಬರೆದ ಆವೇಶದಿಂದ ಅನಂತರ ಬರೆಯಲಾಗಲಿಲ್ಲ; ಥಾಮಸ್ ಗ್ರೇ ಬರೆದದ್ದು ಒಂದೇ ಒಂದು ಸೊಗಸಾದ ಕವಿತೆಯನ್ನು. ಇವುಗಳಿಗೆಲ್ಲಾ ಕಾರಣವನ್ನು ಹೇಳಲಾಗುವುದಿಲ್ಲ. ಏಕೆಂದರೆ "ಅದು ಒಂದು ಚೈತನ್ಯ. ಅದು ಎಲ್ಲಿಂದ ಬರುವುದೋ ಏನೋ ನಮಗೆ

---

[21] C. M. Bowra: Inspiration and Poetry, P. 4.

[22] ಕೋ. ಚೆನ್ನಬಸಪ್ಪ [ಸಂಪಾದಕ]: ಶ್ರೀ ಕುವೆಂಪು ಸಂದರ್ಶನ, ಪು. ೨೭.

ತಿಳಿಯದು. ಅದು ನಮ್ಮ ಆಜ್ಞಾನುವರ್ತಿಯಾಗಿ ನುಡಿಯುವುದಲ್ಲ; ನುಡಿದರೂ ಅದು ನಮ್ಮ ಭಾಷೆಯಲ್ಲಿ ಅಲ್ಲ. ಅದು ನಮ್ಮ ಸೇವಕನಲ್ಲ, ನಮ್ಮ ಪ್ರಭು."[32]

—ಜಿ. ಎಸ್. ಶಿವರುದ್ರಪ್ಪ

[23]. A.C. Bradley: Oxford Lectures on Poetry, P. 27.

ಅದಿತಿಯಾಗುವ ಬಾರ

ದಿತಿಯೆನ್ನೆ ಸಾಂತ,
ಅದಿತಿಯು ಅನಂತ;
ದಿತಿಗೆ ಮಗು ದೈತ್ಯ,
ಅದಿತಿಗೆ ಆ-ದೈತ್ಯ;
ದಿತಿಯೆನಲವಿದ್ಯೆ,
ಅದಿತಿಯೇ ವಿದ್ಯೆ;
ದಿತಿಯು ಗಾಢಾಂಧತಮ,
ಅದಿತಿ ಜ್ಯೋತಿಯ ಧಾಮ;

ಇದು ಕೂಪಕೂರ್ಮ
ಇಲ್ಲಿಲ್ಲ ಭಾವ;
ಅದು ಬ್ರಹ್ಮಮರ್ಮ
ಅದಕ್ಕೆಲ್ಲಭಾವ?
"ವಾಸತೋ ವಿದ್ಯತೇ ಭಾವೋ
ನಾಭಾವೋ ವಿದ್ಯತೇ ಸತಃ"
ಇದು ಕರ್ಮಕಾಂಡ,
ಯಜ್ಞದಾಶೆಯ ಕುಂಡ;
ಅದು ಜ್ಞಾನಕಾಂಡ,
ಬತ್ತಿದಾಶೆಯ ಅಂಡ;[1]
ಇದು ಪುತ್ರಕಾಮ,
ಮೇಣ್ ಸ್ವರ್ಗಕಾಮ;
ಅದು ಸರ್ವ ಹೋಮ
ಆತ್ಮದಾರಾಮ

* * *

ದಿತಿಗು ಮೇಣದಿತಿಗು
ಸಾಂತಕ್ಕನಂತಕ್ಕು
ದೈತ್ಯನಿಗದೈತ್ಯನಿಗು
ಅವಿದ್ಯೆಗುಂ ವಿದ್ಯೆಗುಂ

[1] ಅಂಡ : ಹಿರಣ್ಯಗರ್ಭ (ಬ್ರಹ್ಮಾಂಡ). ಆಶೆಯಿಂದ ಜಗತ್ತುಗಳಾಗಿ ಒಡೆಯುತ್ತದೆ.

ವಿವಾಹಿತರನ್ನು ಕುರಿತು

ನಾನು ಬ್ರಹ್ಮಚಾರಿಯಾದುದರಿಂದ ವಿಶೇಷ ಸುಖಗಳನ್ನು ಕಳೆದುಕೊಂಡೆನೆಂದು ವಿವಾಹಿತರು ಭಾವಿಸಿದ್ದಾರೆ. ಬ್ರಹ್ಮಚಾರಿಯಾದ ನಾನು ವಿವಾಹಿತರ ದೌರ್ಬಲ್ಯಗಳನ್ನು ಲೆಕ್ಕ ಹಾಕಿದ್ದೇನೆ.

ಸಮಾಜ ವಿರುದ್ಧವಾದ ನನ್ನ ಈ ನಿರ್ಣಯಕ್ಕೆ ಗಂಡ ಹೆಂಡಿರಲ್ಲಿ ಬರುವ ವಿರಸ ಪ್ರಸಂಗಗಳು ಕಾರಣವಲ್ಲ; ಸಾಕಷ್ಟು ಇತರ ಪ್ರಬಲ ಕಾರಣಗಳಿವೆ. ಸಾಮಾನ್ಯವಾಗಿ ವಿವಾಹಿತರ ಮನೆಗೆ ನಾನು ಹೋದಾಗ ಅಲ್ಲಿ ಕಾಣುವ ಅತಿ ಪ್ರಣಯವೇ ನನ್ನ ಈ ನಿರ್ಣಯಕ್ಕೆ ಕಾರಣವಾಗಿದೆ.

ಅತಿಪ್ರಣಯವೂ ಅಲ್ಲ! ಅದು ನನ್ನ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವುದಿಲ್ಲ. ಅಲ್ಲದೆ, ಇತರರ ಪ್ರಣಯವು ನನ್ನನ್ನೇಕೆ ಗಾಸಿಗೊಳಿಸಬೇಕು? ನಲ್ಲನಲ್ಲೆಯರು ಏಕಾಂತವನ್ನು ಬಯಸುವುದೂ ಇತರರಿಂದ ದೂರವಿರಲು ಅಪೇಕ್ಷಿಸುವುದೂ ಸಹಜವಲ್ಲವೇ!

ನನ್ನ ದೂಷಣೆಯೆಂದರೆ, ಅವರು ನಾಚಿಕೆಯಿಲ್ಲದೆ ಅವಿವಾಹಿತನಾದ ನನ್ನಂತಹವನ ಮುಂದೆ ಮುಖವನ್ನಪ್ಪಳಿಸುವಂತೆ ಬಹಿರಂಗವಾಗಿಯೂ, ಅಪರೋಕ್ಷವಾಗಿಯೂ ತಮ್ಮ ಪ್ರಣಯವನ್ನು ಪ್ರದರ್ಶಿಸಿ, ನನ್ನಂತಹವನು ಈ ಭಾಗ್ಯಕ್ಕೆ ಅನರ್ಹನೆಂದು ತೋರುವುದೇ ಆಗಿದೆ. ಅವರ ಕೆಲವು ವರ್ತನೆಗಳು ನನಗೆ ಕ್ಲೇಶವನ್ನುಂಟುಮಾಡಲಾರವು. ಆದರೆ, ಬಹಿರಂಗವಾಗಿ ತೋರಿಸುವ ಅವರ ವರ್ತನೆಗಳು ಮನಸ್ಸಿಗೆ ನೋವನ್ನುಂಟುಮಾಡುತ್ತವೆ. ಅಷ್ಟು ಸುಂದರಳಲ್ಲದ, ಸಾಮಾನ್ಯ ಉಡುಪನ್ನು ಧರಿಸಿದ ಸ್ತ್ರೀಯನ್ನು ಕುರಿತು "ನೀನು ರೂಪವತಿಯೂ ಅಲ್ಲ, ಹಣವಂತಳೂ ಅಲ್ಲ, ಆದ್ದರಿಂದ ನಿನ್ನನ್ನು ಮದುವೆಯಾಗುವುದಿಲ್ಲ." ಎಂದು ಹೇಳಿದರೆ ಅಸಭ್ಯವರ್ತನೆಯಾದೀತು! ಅಂತಹ ವ್ಯಕ್ತಿಯನ್ನು ಹೊಡೆದೋಡಿಸಬಹುದು; ಅಂತಹ ಪ್ರಶ್ನೆಯನ್ನು ಕೇಳುವಾಗ ತನ್ನ ಮನಸ್ಸಿನ ಅಭಿಲಾಷೆಯನ್ನು ಸರಿಯಾಗಿ ತಿಳಿಯದಿರುವುದು ಅಕ್ಷಮ್ಯ. ಯುವತಿಯಾದವಳು ಪುರುಷನ ವರ್ತನೆಯಿಂದಲೇ ಅವನ ಹೃದಯವನ್ನು ಅರ್ಥಮಾಡಿಕೊಳ್ಳುತ್ತಾಳೆ; ಆದರೆ, ಯಾವ ವಿಚಾರವಂತ ಮಹಿಳೆಯೂ ಇದನ್ನೇ ಜಗಳಕ್ಕೆ ಕಾರಣವಾಗಿಟ್ಟುಕೊಳ್ಳುವುದಿಲ್ಲ. ಇದರಂತೆಯೇ ವಿವಾಹಿತರಾದವರು ಮಾತು ಹಾಗೂ ನೋಟಗಳಿಂದಲೆ, ನಾನು ಸುಖಿಯಲ್ಲವೆಂದು ವ್ಯಕ್ತಪಡಿಸಬಹುದು. ಆ ದಂಪತಿಗಳಲ್ಲಿ ಸ್ತ್ರೀಯು ನನ್ನನ್ನು ಮೆಚ್ಚದಿರುವುದರಿಂದಲೇ ನಾನು ಅಸುಖಿಯಾಗುವೆನೆಂದು ವ್ಯಕ್ತಪಡಿಸಬಹುದು. ಈ ಎರಡೂ ಅಸಭ್ಯವರ್ತನೆಗಳೇ ಸರಿ. ನಾನು ಸುಖಿಯಲ್ಲವೆಂಬುದನ್ನು ನಾನು ತಿಳಿದಿದ್ದೇನೆ. ಈ ರೀತಿ ಮತ್ತೆ ಮತ್ತೆ ನನ್ನನ್ನು ಈ ವಿಷಯವಾಗಿ ಜ್ಞಾಪಿಸುವುದು ಆವಶ್ಯಕವೆಂದು ನಾನು ತಿಳಿದಿಲ್ಲ.

ಜ್ಞಾನ ಮತ್ತು ಐಶ್ವರ್ಯಗಳ ಪ್ರದರ್ಶನ ನಾಚಿಕೆಯನ್ನುಂಟುಮಾಡುವ ವಿಚಾರ. ಇದಕ್ಕೂ ಸಮಾಧಾನ ಹೇಳಬಹುದು. ನನಗೆ ಅಪಮಾನ ಮಾಡಬೇಕೆಂಬ ಪ್ರಯತ್ನ ನನ್ನನ್ನು ಉತ್ತಮಗೊಳಿಸಲು ಸಾಧಕವಾಗಬಹುದು. ಶ್ರೀಮಂತರ ಗೃಹಗಳಲ್ಲಿ, ಚಿತ್ರ ಸಂಗ್ರಹಶಾಲೆಗಳಲ್ಲಿ, ಉದ್ಯಾನಗಳಲ್ಲಿ ನನಗೆ ತಾತ್ಕಾಲಿಕ ರಂಜನೆ ಸಿಗುತ್ತದೆ. ಆದರೆ, ದಾಂಪತ್ಯಜೀವನದ ಸೌಖ್ಯ ಪ್ರದರ್ಶನವು ಜ್ಞಾನೈಶ್ವರ್ಯಗಳಂತೆ ಸಮಾಧಾನವನ್ನುಂಟುಮಾಡಲಾರವು. ದಾಂಪತ್ಯಸೌಖ್ಯ ಪ್ರದರ್ಶನವು ಪ್ರತಿಫಲದೂರ ಹಾಗೂ ಪೂರ್ಣ ಅಪಮಾನಕರ.

ಮದುವೆಯು ವಿಶೇಷಾರ್ಥದಲ್ಲಿ ನಲ್ಲನಲ್ಲೆಯರ ಸರ್ವಮಾನ್ಯ ವಿಶೇಷ ಹಕ್ಕು, ಹಾಗೂ ನ್ಯಾಯಬದ್ಧ ವೈಖರಿ. ಆದರೆ, ನೆರೆಹೊರೆಯವರಿಗೂ ತಿಳಿಯದ ರೀತಿಯಲ್ಲಿ ಸರ್ವಮಾನ್ಯವನ್ನು ಪಡೆದ ನೂತನ ವಿವಾಹಿತರು ವರ್ತಿಸುತ್ತಾರೆ. ಈ ವಿವಾಹಿತ ಸರ್ವಮಾನ್ಯಾಧಿಕಾರವನ್ನು ಪಡೆದವರು ಕಣ್ಣು ಕೋರೈಸುವಂತೆ ತಮ್ಮ ಹಕ್ಕನ್ನು ಪ್ರದರ್ಶಿಸುತ್ತಾರೆ.

ನವದಂಪತಿಗಳಲ್ಲಿ ಕಾಣುವ ತೃಪ್ತಿ ಹಾಗೂ ಸಂತೋಷಗಳು ಅವರ ಮುಖದಲ್ಲಿಯೇ ವ್ಯಕ್ತವಾಗುತ್ತವೆ. ಅದರಲ್ಲಿಯೂ ಹೆಣ್ಣಿನ ಮುಖದಲ್ಲಿ ಕಾಣಿಸುವ ತೃಪ್ತಿ ಸಂತೋಷಗಳು ಇತರರಿಗೆ, ನನಗೆ, ನೋವನ್ನುಂಟುಮಾಡಿವೆ. ಹೆಣ್ಣಿನ ನೋಟ ಈ ಪ್ರಪಂಚದ ಬಂಧನದಿಂದ ಮುಕ್ತವಾಗಿರುವುದನ್ನು ಸೂಚಿಸುತ್ತದೆ. ಅವಿವಾಹಿತನ ಆಕಾಂಕ್ಷೆಗಳಿಗೆ ಯಾವ ಅವಕಾಶವೂ ಇಲ್ಲವೆಂಬುದನ್ನು ಸಾರುತ್ತದೆ ಅವಳ ನೋಟ! ನನ್ನ ಆಕಾಂಕ್ಷೆಗೆ ಅವಕಾಶವಿಲ್ಲವೆಂಬುದೇನೋ ನಿಜ. ನನ್ನ ಭಾವನೆಗಳೂ ಅತ್ತ ಹರಿಯಲಾರವೆಂಬುದೂ ದಿಟ. ಆದರೆ ಈ ಸತ್ಯವನ್ನು ಇಂಗಿತದಿಂದಲೇ ತಿಳಿಯಬೇಕು; ಅಭಿವ್ಯಕ್ತಗೊಳಿಸಬಾರದು.

ಈ ವಿವಾಹಿತರು, ಅವಿವಾಹಿತರ ಅಜ್ಞಾನವನ್ನು ಅವಲಂಬಿಸಿ ಅತ್ಯಭಿಮಾನಿಗಳಾಗಿ ವರ್ತಿಸುವುದು ಕಾರಣರಹಿತವಾಗಿದ್ದರೆ ಹೆಚ್ಚು ಅವಮಾನಕರ. ವಿವಾಹಿತ ಜೀವನದ ಸ್ವಾತಂತ್ರ್ಯವನ್ನು ಪಡೆಯದಿರುವ ನಾವು, ವಿವಾಹಿತರು ವಿವಾಹಿತ ಜೀವನದ ಮರ್ಮಗಳನ್ನು ಅರಿಯಬಲ್ಲರೆಂದು ಒಪ್ಪುತ್ತೇವೆ. ಆದರೆ, ಅವರ ದುರಹಂಕಾರ ಇಷ್ಟರಲ್ಲಿಯೇ ತೃಪ್ತವಾಗುವುದಿಲ್ಲ.

ಯಾರಾದರೊಬ್ಬ ಅವಿವಾಹಿತನು ವಿವಾಹಿತರ ಗೋಷ್ಠಿಯಲ್ಲಿ ಸಾಮಾನ್ಯ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಅವಿವಾಹಿತನು ಅನರ್ಹನೆಂದು ಒಮ್ಮೆಯೇ ಅವನ ಬಾಯಿ ಮುಚ್ಚಿಸುತ್ತಾರೆ. ಅಷ್ಟೇ ಅಲ್ಲ, ಮದುವೆಯಾಗಿ ಇನ್ನೂ ಹದಿನೈದು ದಿನಗಳಾಗದ ವಿವಾಹಿತ ತರುಣಿಯೊಬ್ಬಳು, ಮುತ್ತುಚಿಪ್ಪಿನ ಹುಳ (Oyster)ವು ಮುತ್ತನ್ನು ತಯಾರುಮಾಡುವ ವಿಧಾನವನ್ನು ನಾನು ವಿವರಿಸಿದಾಗ "ನಿನ್ನಂತಹ ಮುದಿ ಬ್ರಹ್ಮಚಾರಿಗೆ ಇಂತಹ ವಿಚಾರಗಳು ತಿಳಿಯುವುದು ಹೇಗೆ ಸಾಧ್ಯ?" ಎಂದು ನುಡಿದಳು.

ಇಂತಹ ವಿವಾಹಿತರು ತಂದೆತಾಯಿಯರಾದಾಗ ಪಡುವ ಹೆಮ್ಮೆ ವರ್ಣನಾತೀತ. ಮಕ್ಕಳ ಸಂಖ್ಯೆ ಹೆಚ್ಚಾಗಿರುವುದು ವಿಶೇಷ ಸಂಗತಿಯಲ್ಲ. ಬೀದಿ ಬೀದಿಗಳಲ್ಲಿಯೂ, ಗಲ್ಲಿ ಗಲ್ಲಿಗಳಲ್ಲಿಯೂ ಅವರು ತುಂಬಿರುತ್ತಾರೆ. ಬಡವರಿಗಂತೂ ಮಕ್ಕಳ ಕೊರತೆಯೇ ಇಲ್ಲ. ವಿವಾಹಿತರಿಗೆ ಕಡೆಯ ಪಕ್ಷ ಒಂದು ಮಗುವಿರುವುದು ಸಹಜ. ಎಷ್ಟೋ ಬಾರಿ ಈ ಮಕ್ಕಳು ದಾರಿಬಿಟ್ಟು ತಂದೆತಾಯಿಯರ ಅಭಿಲಾಷೆಗಳನ್ನು ಮಣ್ಣುಪಾಲು ಮಾಡುತ್ತಾರೆ. ದುರಾಚಾರಗಳಿಗೆ ಬಲಿಯಾಗಿ ಬಡತನ, ಅಪಮಾನಗಳಿಗೆ ತುತ್ತಾಗಿ ಕಡೆಗೆ ಗಲ್ಲಿನ ಶಿಕ್ಷೆಗೂ ಪಾತ್ರರಾಗುವುದುಂಟು! ಪರಿಸ್ಥಿತಿ ಹೀಗಿರುವಾಗ, ಅಂತಹ ಮಕ್ಕಳಲ್ಲಿ ಹೆಮ್ಮೆ ಪಡಬೇಕಾದ ವಿಚಾರವೇನೋ ನನಗೆ ತಿಳಿಯದು! ಮಕ್ಕಳೆಲ್ಲ ಅಮೃತಪುತ್ರರಾಗಿ ವರ್ಷಕ್ಕೊಮ್ಮೆ ಚಿರನೂತನವಾದರೆ ಆ ಹೆಮ್ಮೆಗೆ ಕಾರಣವಿದೆಯೆಂದು ಒಪ್ಪಿಕೊಳ್ಳಬಹುದು. ಆದರೆ, ಹಿಂದೆ ಹೇಳಿದಂತೆ ಮಕ್ಕಳಿರುವುದಾದರೆ ಹೇಗೆ ಒಪ್ಪುವುದು?

ಮಕ್ಕಳನ್ನು ಪಡೆದ ದಂಪತಿಗಳು ಮಕ್ಕಳಿಂದಲೇ ಹೆಮ್ಮೆಯೆಂದು ಭಾವಿಸುವುದನ್ನು ನಾನು ಟೀಕಿಸುವುದಿಲ್ಲ; ಆ ಹೆಮ್ಮೆಯನ್ನು ಕುರಿತು ಅವರೇ ಯೋಚಿಸಲಿ! ಆದರೆ, ನಾವು ಅವರ ಮಕ್ಕಳಿಗೋಸ್ಕರ ಧೂಪ ಗಂಧಾದಿಗಳ ಪೂಜೆಯಿಂದ ಭಕ್ತಿಯನ್ನು ಏಕೆ ತೋರಬೇಕೋ ನನಗೆ ಅರ್ಥವಾಗದು.

"ರಾಕ್ಷಸನ ಕೈಯಲ್ಲಿರುವ ಬಾಣಗಳಂತೆ ಮಕ್ಕಳೂ ಸಹ" ಎಂದು ಮಹಿಳೆಯರ ಪ್ರಾರ್ಥನಾ ಪುಸ್ತಕದಲ್ಲಿದೆ. "ಬಾಣಗಳಿಂದ ತುಂಬಿದ ಬತ್ತಳಿಕೆಯುಳ್ಳ ಮಾನವನೇ ಸುಖಿ" ಎಂದು ನಾನು ಹೇಳುತ್ತೇನೆ. ಆದರೆ, ಆಯುಧವಿಲ್ಲದ ನಮ್ಮ ಮೇಲೆ ಬಾಣಬಿಡದಿದ್ದರೆ ಸಾಕು! ಮಕ್ಕಳು ಬಾಣಗಳಾಗಿರಲಿ! ಆದರೆ, ನಮ್ಮನ್ನು ನೋಯಿಸದಿರಲಿ! ನಮ್ಮನ್ನು ತೊಂದರೆಗೊಳಿಸದಿರಲಿ! ಬಾಣಸದೃಶವಾದ ಮಕ್ಕಳಿಗೆ ಎರಡು ಕೊಕ್ಕೆಗಳಿರುತ್ತವೆ. ಒಂದಲ್ಲ ಒಂದು ನಮಗೆ ನಾಟಿಯೇ ನಾಟುತ್ತದೆ. ಉದಾಹರಣೆಗಾಗಿ, ಮಕ್ಕಳು ತುಂಬಿರುವ ಮನೆಯಲ್ಲಿ ಅವರನ್ನು ಗಮನಿಸದಿದ್ದರೆ ಮಕ್ಕಳ ದ್ವೇಷಿ, ಕೋಪಿಷ್ಠ, ಸಮಾಜಬಾಹಿರ—ಎಂಬ ಬಿರುದುಗಳಿಗೆ ಪಾತ್ರವಾಗಬೇಕಾಗುತ್ತದೆ. ಒಂದು ವೇಳೆ ಮಕ್ಕಳು ಮುದ್ದಾಗಿ ಒಳ್ಳೆಯ ನಡತೆಯುಳ್ಳವರಾಗಿದ್ದಾಗ ನೀವು ಅವರೊಡನೆ ಆಟಪಾಟ ವಿನೋದಗಳಲ್ಲಿ ಮಗ್ನರಾದರೆ ಆ ದೃಶ್ಯವನ್ನು ಕಂಡು ಸಹಿಸದ ತಂದೆತಾಯಿಯರು ಅದನ್ನೇ ನೆಪವಾಗಿಟ್ಟುಕೊಂಡು ಮಕ್ಕಳನ್ನು ಬೇರೆತ್ತಲೋ ಕಳುಹಿಸಿಬಿಡುತ್ತಾರೆ. ಹೀಗೆ ಒಂದಲ್ಲ ಒಂದು ಕೊಕ್ಕೆ ನಮಗೆ ನಾಟುವಂತೆ ವಿವಾಹಿತರು ಮಾಡುತ್ತಾರೆ.

ಅವರ ವರ್ತನೆ ಅಸೂಯೆಯಿಂದ ದೂರವಾಗಿದ್ದರೆ, ಅವರ ಮನಸ್ಸು ನೋಯದಿರಲೆಂದು ಅವರನ್ನು ಕ್ಷಮಿಸಬಹುದು. ತಂದೆತಾಯಿಯರಿಗೆ ಎಂಟು ಹತ್ತು ಮಕ್ಕಳಿದ್ದಾಗ ಅವರೆಲ್ಲರನ್ನೂ ಏಕಪ್ರಕಾರ ಪ್ರೀತಿಸಬೇಕೆಂದು ನಿರೀಕ್ಷಿಸುವುದು ಯುಕ್ತವಲ್ಲ.

"ನನ್ನನ್ನು ಪ್ರೀತಿಸು; ನನ್ನ ನಾಯಿಯನ್ನೂ ಪ್ರೀತಿಸು", ಎಂಬ ನಾಣ್ಣುಡಿ ನನಗೆ ತಿಳಿದಿದೆ. ಕಚ್ಚುವ ಅಥವಾ ಅಟ್ಟಿಸಿಕೊಂಡು ಬರುವ ನಾಯಿಯನ್ನು ಪ್ರೀತಿಸು ಎಂದು ಹೇಳುವುದು ವ್ಯವಹಾರಯೋಗ್ಯವಾಗಿ ಕಾಣುವುದಿಲ್ಲ. ನಾಯಿಯನ್ನೇ ಏಕೆ, ನನ್ನ ಸ್ನೇಹಿತನಿಗೆ ಸೇರಿದ ಜೀವರಹಿತವಾದ ಗಡಿಯಾರವನ್ನಾಗಲೀ, ಉಂಗುರವನ್ನಾಗಲೀ, ಮರವನ್ನಾಗಲೀ, ಸ್ಥಳವನ್ನಾಗಲೀ, ಕಡೆಗೆ ನಾವು ಪರಸ್ಪರ ಬೀಳ್ಕೊಟ್ಟ ಸ್ಥಳವನ್ನಾಗಲೀ ಪ್ರೀತಿಸಬಲ್ಲೆ. ಏಕೆಂದರೆ, ಅವನು ನನ್ನ ಪ್ರೀತಿಪಾತ್ರನಾದುದರಿಂದ; ಕಲ್ಪನೆಗನುಸಾರವಾಗಿ ಮಾತ್ರ ಅವುಗಳನ್ನು ಪ್ರೀತಿಸುವುದು. ಕೆಲವು ಮಕ್ಕಳು; ಸಹಜವಾಗಿ ಸ್ನೇಹಪರರಾಗಿರುತ್ತಾರೆ, ಮತ್ತೆ ಕೆಲವರು ಮುಖಹೇಡಿಗಳಾಗಿರುತ್ತಾರೆ.

ಅವರ ಸ್ವಭಾವಕ್ಕನುಗುಣವಾಗಿ ಅವರನ್ನು ನಾನು ಪ್ರೀತಿಸಬಹುದು ಅಥವಾ ಪ್ರೀತಿಸದಿರಬಹುದು. ಮಕ್ಕಳಲ್ಲಿರುವ ಮುಗ್ಧತೆಗಾಗಿಯೇ ಎಲ್ಲ ಮಕ್ಕಳನ್ನೂ ಪ್ರೀತಿಸಬೇಕೆಂದು ಹೇಳಬಹುದು. ಆ ಕಾರಣದಿಂದಲೇ ನಾನು ಅವರನ್ನು ಹೆಚ್ಚಾಗಿ ಪ್ರೀತಿಸುತ್ತಿರುವುದು. ಮುದ್ದುಮಗು ಸೃಷ್ಟಿಯಲ್ಲಿಯೇ ಅತ್ಯಂತ ಮುದ್ದಾದುದು. ಅಂತಹ ಮಗು ಸುಂದರಿಯಾದ ತಾಯಿಯನ್ನೂ ಮರೆಸಿಬಿಡುತ್ತದೆ. ದೈಹಿಕವಾದ ಸೌಂದರ್ಯದಿಂದ ಕೂಡಿದ ಮಗುವಿನ ವರ್ತನೆ ಬಂಧುರವಾಗಿರಬೇಕು. ಒಂದು ಹೂವು ಮತ್ತೊಂದು ಹೂವಿಗಿಂತ ಸೌಂದರ್ಯದಲ್ಲಿ ಅತಿಶಯವಾಗಿರುವುದಿಲ್ಲ. ಆದರೆ ಜಾಜಿಯ ಹೂವು ಸೌರಭದಲ್ಲಿಯೂ ಸೌಂದರ್ಯದಲ್ಲಿಯೂ ಇತರ ಹೂವುಗಳನ್ನು ಮೀರಿಸುತ್ತದೆಯಲ್ಲವೆ?

ಜೀವನದಲ್ಲಿ, ಹೆಂಗಸರು ಮಕ್ಕಳಲ್ಲಿ ವಿಶೇಷಗುಣಗಳನ್ನು ನಾನು ಅಪೇಕ್ಷಿಸುತ್ತೇನೆ. ಇಷ್ಟು ಮಾತ್ರವಲ್ಲ, ಸ್ತ್ರೀಯರ ನಿಕಟ ಪರಿಚಯವಾಗುವವರೆಗೆ ಅವರು ನಮ್ಮಲ್ಲಿ ಅಲಕ್ಷ್ಯಭಾವದಿಂದ ಇದ್ದಾರೆ ಎಂದು ಹೇಳುವುದು ಸಾಧ್ಯವಿಲ್ಲ. ಆದರೆ, ವಿವಾಹಕ್ಕೆ ಮೊದಲೇ ವಿವಾಹಿತ ಪುರುಷನ ಸ್ನೇಹಿತನಾಗಿದ್ದರೆ, ಒಂದು ವರ್ಷದಲ್ಲಿಯೇ ಸ್ನೇಹ ತಣ್ಣಗಾಗುವುದೋ ಒಡೆದುಹೋಗುವುದೋ ಆಗುತ್ತದೆ; ವಧುವಿನ ಸ್ನೇಹಿತನಾಗಿದ್ದರೆ ಹೀಗಾಗುವುದಿಲ್ಲ. ವಿವಾಹವಾದ ಬಳಿಕ ಮಾಡಿದ ಪುರುಷನ ಸ್ನೇಹ ಉಳಿದಿದೆ, ಮುಂದೆಯೂ ಉಳಿಯಬಹುದು. ಆದರೆ, ತಮ್ಮ ಪತಿಯೊಡನೆ ಮಾಡಿದ ವಿವಾಹಪೂರ್ವ ಸ್ನೇಹವನ್ನು ಸಾಮಾನ್ಯವಾಗಿ ಸ್ತ್ರೀಯರು ಸಹಿಸುವುದಿಲ್ಲ. ಹೊಸ ದೊರೆ ಪಟ್ಟಕ್ಕೆ ಬಂದಾಗ ಹಳೆಯ ನಾಣ್ಯಗಳು ಕರಗಿ ಟಂಕಸಾಲೆಯಲ್ಲಿ ಹೊಸನಾಣ್ಯಗಳಾಗುವಂತೆ, ವಿವಾಹಪೂರ್ವದ ಸ್ನೇಹ ಮುಂದುವರಿಯಲು ಸ್ತ್ರೀಯರ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಈ ಕಾರ್ಯ ಸುಲಭವಲ್ಲ.

ಸ್ತ್ರೀಯರು ನಿಮ್ಮನ್ನು ತಮ್ಮ ಪತಿಯಿಂದ ಬೇರ್ಪಡಿಸಲು ಸರ್ವಪ್ರಯತ್ನ ಮಾಡುತ್ತಾರೆ. ನೀವು ನುಡಿಯುವುದನ್ನು ಕೇಳಿ ನಸುನಗುತ್ತಾ ನೀವು ವಿಚಿತ್ರ ಮನುಷ್ಯರೆಂಬ ಭಾವನೆ ಮೂಡಿಸುತ್ತಾರೆ. ಇದನ್ನು ಸಾಧಿಸುವುದಕ್ಕಾಗಿ ವಿವಾಹಿತ

ಮಹಿಳೆಯರ ದೃಷ್ಟಿ ವಿಚಿತ್ರವಾಗುತ್ತದೆ. ನಿಮ್ಮ ವರ್ತನೆ ಮದುವೆಗೆ ಮೊದಲು ಯೋಗ್ಯವಾಗಿತ್ತು, ಅನಂತರ ಅಯೋಗ್ಯವಾಯಿತು—ಎಂದು ತಮ್ಮ ಗಂಡಂದಿರಿಗೆ ಮನದಟ್ಟು ಮಾಡಲು ಅವರು ಯತ್ನಿಸುತ್ತಾರೆ. ಇದನ್ನೆ ದೃಷ್ಟಿ ಪ್ರಭಾವ ಮಾರ್ಗ ವೆಂದು ಕರೆಯಬಹುದು. ನನ್ನ ಮೇಲೆ ಈ ಮಾರ್ಗವನ್ನು ಅನೇಕ ವೇಳೆ ಅವರು ಪ್ರಯೋಗಿಸಿದ್ದಾರೆ.

ಇನ್ನೊಂದು ಮಾರ್ಗವೆಂದರೆ, ವಿಡಂಬನ ಮಾರ್ಗ. ನಿಮ್ಮಲ್ಲಿ ತಮ್ಮ ಗಂಡಂದಿರು ಗೌರವವನ್ನಿಟ್ಟುಕೊಂಡಿರುವರೆಂದು ತಿಳಿದಾಗ, ನಿಮ್ಮಿಬ್ಬರ ಸ್ನೇಹ ನಿಕಟವೆಂದು ತಿಳಿದಾಗ, ಈ ಮಾರ್ಗವನ್ನು ಪ್ರಯೋಗಿಸುತ್ತಾರೆ. ಮೊದಲು ನೀವು ಹೇಳುವುದನ್ನು ಹೊಗಳುತ್ತ, ಕಡೆಗೆ ತಮ್ಮ ಗಂಡನ ಮನಸ್ಸಿನಲ್ಲಿ ಅಸಹನೆಯನ್ನು ಮೂಡಿಸಿ ನಿಮ್ಮಿಬ್ಬರಲ್ಲಿ ವಿರಸವನ್ನು ಹುಟ್ಟಿಸಿಬಿಡುತ್ತಾರೆ. ಇದೇ ವಿಡಂಬನ ಮಾರ್ಗ.

ಮೂರನೆಯ ಮಾರ್ಗವೊಂದಿದೆ! ಏನೂ ತಿಳಿಯದಿರುವವರಂತೆ ನಟಿಸಿ ಗಂಡನ ಮತ್ತು ನಿಮ್ಮ ಸ್ನೇಹಕ್ಕೆ ಆಶ್ಚರ್ಯ ಸೂಚಿಸುವುದು. ಇದೇ ಮೂರನೆಯದಾದ ಮುಗ್ಧಮಾರ್ಗ. ಗಂಡನೊಂದಿಗೆ ನಿಮ್ಮ ಸ್ನೇಹವು ಗಾಢವಾಗಿದ್ದಲ್ಲಿ "ನಿಮ್ಮ ಸ್ನೇಹಿತರ ಬುದ್ಧಿಚಾತುರ್ಯವು ಇಷ್ಟೇಯೇ ?" ಎಂದು ಹೇಳುತ್ತಾ ಗಂಡಂದಿರ ಮನಸ್ಸಿನಲ್ಲಿ ಅಸಮಾಧಾನ ಮೂಡಿಸುವುದಾಗಿದೆ ಈ ಮಾರ್ಗ. ನಿಮ್ಮಲ್ಲಿರುವ ಗುಣವಿಶೇಷ ಗಳಿಗಾಗಿ ಅವರ ಗಂಡಂದಿರು ಆಕರ್ಷಿತರಾದರೆ, ನಿಮ್ಮಲ್ಲಿ ತಪ್ಪು ಕಂಡಾಗ ತಮ್ಮ ಗಂಡಂದಿರಿಗೆ, " ನಿಮ್ಮ ಸ್ನೇಹಿತರ ಮಟ್ಟವು ಇಷ್ಟೇಯೆ ?" ಎಂದು ದೂಷಿಸುತ್ತಾರೆ. ನನ್ನ ಪರಿಚಯದ ಮಹಿಳೆಯೊಬ್ಬಳು ಅವಳ ವಿವಾಹಕ್ಕೆ ಮೊದಲು ನನ್ನ ಸ್ನೇಹಿತ ನಾದ ಅವಳ ಗಂಡನ ಮಾತುಗಳಿಂದಲೇ ನನ್ನ ವಿಷಯವಾಗಿ ಎಷ್ಟೋ ಒಳ್ಳೆಯ ಅಭಿಪ್ರಾಯಗಳನ್ನು ಇಟ್ಟುಕೊಂಡಿದ್ದಳೆಂದೂ ನನ್ನನ್ನು ಕಂಡಾಗ ಅವು ಸುಳ್ಳಾದು ವೆಂದೂ ನನಗೆ ತಿಳಿಸಿ ತೇಜೋಭಂಗಮಾಡಿದಳು. ಅವಳ ಅಭಿಪ್ರಾಯ ಸತ್ಯವೆಂದು ಒಪ್ಪಿಕೊಳ್ಳೋಣ. ಗಂಡನಿಂದ ಭಿನ್ನಪ್ರಕೃತಿಯ ಅವಳ ಸ್ನೇಹಿತನನ್ನು ಕುರಿತು ಅವಳು ಹೇಗೆ ಅಭಿಪ್ರಾಯವನ್ನು ರೂಪಿಸಿಕೊಂಡಳೆಂದು ಸಭ್ಯತೆಯ ದೃಷ್ಟಿಯಿಂದ ಅವಳನ್ನು ನಾನು ಪ್ರಶ್ನಿಸಲಿಲ್ಲ. ಏಕೆಂದರೆ ನನ್ನ ಸ್ನೇಹಿತನಲ್ಲಿಯೂ ನನ್ನಲ್ಲಿಯೂ ಅನೇಕ ಸಮಾನ ಗುಣಗಳಿವೆ; ನನ್ನ ಹಾಗೆಯೇ ಅವನೂ ಕುಳ್ಳ ; ನಿಜವಾಗಿ ನಾನು ಅವನಿಗಿಂತ ಸ್ವಲ್ಪ ಎತ್ತರವಾಗಿದ್ದೇನೆ; ಅವನ ಮುಖಭಾವಕ್ಕಿಂತ ನನ್ನ ಮುಖ ಭಾವದಲ್ಲಿಯೇ ಕ್ಷಾತ್ರಶಕ್ತಿಯ ಓಜಸ್ಸಿದೆ !

ವಿವಾಹಿತರಾದವರ ಮನೆಗೆ ಹೋದಾಗ ನಡೆದ ಅಪಮಾನ ಹಾಗೂ ನಾಚಿಕೆಯ ಪ್ರಸಂಗಗಳಲ್ಲಿ ಕೆಲವನ್ನು ನಿರೂಪಿಸಿದ್ದೇನೆ. ಎಲ್ಲವನ್ನೂ ವಿವರಿಸುವುದು ಸಾಧ್ಯವಿಲ್ಲ. ಕೆಲವು ವಿವಾಹಿತ ಮಹಿಳೆಯರು ತಮ್ಮ ಗಂಡಂದಿರನ್ನು ಕಾಣುವಂತೆ ನಮ್ಮನ್ನು ನೋಡುತ್ತಾರೆ. ಅಷ್ಟೇ ಅಲ್ಲ, ತಮ್ಮ ಗಂಡಂದಿರು ತಮ್ಮನ್ನು ಕಾಣುವಂತೆ ನಾವೂ ಅವರನ್ನು ಕಾಣಬೇಕೆಂದು ನಿರೀಕ್ಷಿಸುತ್ತಾರೆ. ಇದು ಸರಿಯಲ್ಲ. ನಿದರ್ಶನ

ಕ್ಕಾಗಿ ನನ್ನ ಪರಿಚಯದ ವಿವಾಹಿತ ಸ್ತ್ರೀಯೊಬ್ಬಳು ನನ್ನನ್ನು ರಾತ್ರಿಯ ಊಟಕ್ಕೆ ಆಹ್ವಾನಿಸಿ, ಅಡಿಗೆಯೆಲ್ಲಾ ತಣ್ಣಗಾಗುವವರೆಗೆ ತನ್ನ ಗಂಡನನ್ನು ನಿರೀಕ್ಷಿಸುತ್ತಾ ಮೂರು ಘಂಟೆಗಳ ಕಾಲ ನಾನು ಕಾಯುವಂತೆ ಮಾಡಿದಳು. ಇದು ಸಭ್ಯತೆಯ ಲಕ್ಷಣವೇ? ಸಂಕೋಚಪ್ರಕೃತಿಯನ್ನು ದೂರ ಮಾಡುವುದಕ್ಕಾಗಿಯೇ ಉಪಚಾರ ವಿರುವುದು. ಗಂಡನಿಗಾಗಿ ಕಾಯದೆ, ಅಡಿಗೆ ತಂಗಳಾಗದಂತೆ ನೋಡಿಕೊಂಡಿದ್ದರೆ, ಆ ಮಹಿಳೆ, ಯುಕ್ತವಾದುದನ್ನೇ ಮಾಡಿದಂತಾಗುತ್ತಿತ್ತು. ಸ್ತ್ರೀ ಸಹಜವಾದ ನಾಚಿಕೆ ಮತ್ತು ಮೃದುಸ್ವಭಾವವು ತಮ್ಮ ಗಂಡಂದಿರ ವಿಷಯದಲ್ಲಿ ಮಿತಿಮೀರದಂತೆ ವ್ಯಕ್ತಪಡಿಸುವುದೇ ಮಹಿಳೆಯರ ಸಭ್ಯತೆಯಾಗುತ್ತದೆ. ಮತ್ತೊಂದು ಸಲ ಒಬ್ಬ ಮಹಿಳೆ ನನ್ನನ್ನು ಭೋಜನಕ್ಕೆ ಆಹ್ವಾನಿಸಿ ನನಗೆ ಪ್ರಿಯವಾದ ಭಕ್ಷ್ಯವನ್ನು ಬೇಕೆಂದು ಹೇಳುತ್ತಿರುವಾಗಲೇ ಬೇರೆಡೆಗೆ ಕಳುಹಿಸಿ, ಅವಿವಾಹಿತನಿಗೆ ಯೋಗ್ಯ ವೆಂದು ನನಗೆ ಬೇಡವಾದ ಭಕ್ಷ್ಯ ಭೋಜ್ಯಗಳನ್ನು ಬಲವಂತವಾಗಿ ಬಡಿಸಿದಳು. ಈ ಇಬ್ಬರು ಮಹಿಳೆಯರನ್ನೂ ಕ್ಷಮಿಸುವುದಾದರೂ ಹೇಗೆ? ಈ ಇಬ್ಬರ ವರ್ತನೆಯೂ ನನಗೆ ಅಪಮಾನಕರ!

ನನಗೆ ಪರಿಚಿತರಾದ ವಿವಾಹಿತ ಮಹಿಳೆಯರ ವಿಚಾರವೆಲ್ಲವನ್ನೂ ನಿರೂಪಿಸಲು ನಾನಿಲ್ಲಿ ಹೊರಟಿಲ್ಲ. ಈಗಲಾದರೂ ಅವರು ತಮ್ಮ ಅಭಿಪ್ರಾಯ ಹಾಗೂ ವರ್ತನೆ ಗಳನ್ನು ತಿದ್ದಿಕೊಳ್ಳದಿದ್ದರೆ ನನ್ನ ಪ್ರಯತ್ನಗಳನ್ನು ಮುಂದುವರಿಸಬೇಕಾಗುತ್ತದೆ.

ಮೂಲ ಲೇಖಕ :
ಚಾರ್ಲ್ಸ್ ಲ್ಯಾಂಬ್

ಸರಳಾನುವಾದಕರು :
ಕೆ. ಕೃಷ್ಣಅಯಂಗಾರ್
ಮತ್ತು ಉ. ಕಾ. ಸುಬ್ಬರಾಯಾಚಾರ್

ನಯಸೇನ, ಕನ್ನಡದ ಒಬ್ಬ ಜಾನಪದ–ಚಂಪೂ ಕವಿ

೧

ಚಂಪೂ ಮತ್ತು ಜಾನಪದ ಕಾವ್ಯಗಳೆರಡೂ ಪರಸ್ಪರ ಭಿನ್ನಮಾತ್ರವಲ್ಲ, ಪರಸ್ಪರ ವಿರೋಧಿಗಳು, ರೀತಿಯಲ್ಲಿ ಉದ್ದೇಶದಲ್ಲಿ ಪರಿಣಾಮದಲ್ಲಿ ಎರಡು ಧ್ರುವಗಳಷ್ಟು ಅಂತರದಲ್ಲಿರುವುವು ಎಂಬ ಭಾವನೆ ನಮ್ಮಲ್ಲಿ ರೂಢಮೂಲವಾಗಿದ್ದರೆ ಆಶ್ಚರ್ಯವೇನಿಲ್ಲ. ಈ ಭಾವನೆಗೆ ಬಹುಮಟ್ಟಿಗೆ ಕಾರಣ ಕನ್ನಡ ಸಾಹಿತ್ಯದ ಆರಂಭದ ದೆಸೆಯ ಚಂಪೂ ಸಂಪ್ರದಾಯದಲ್ಲಿ ಮುಂದೆ ಹುಟ್ಟಿದ ಕಾವ್ಯಗಳು. ಚಂಪೂ ಎಂದರೆ ಗದ್ಯಪದ್ಯಾತ್ಮಕವಾದ ಕಾವ್ಯ ಎಂದು ಮಾತ್ರ ಅರ್ಥ.[1] ಚಂಪೂ ಕಾವ್ಯ ರಚನೆಯನ್ನು ಮಾಡಿದ ಕನ್ನಡ ಕವಿಗಳು ಸಂಸ್ಕೃತ ಸಾಹಿತ್ಯವನ್ನು ತಮ್ಮ ಆದರ್ಶವಾಗಿ ಸ್ವೀಕರಿಸಿದ್ದರಿಂದ, ತಮ್ಮ ಕಾವ್ಯಗಳು ವಿದ್ವಾಂಸರಲ್ಲಿ ಮಾನ್ಯವಾಗಬೇಕೆಂಬ ಅಭಿಲಾಷೆಯನ್ನಿಟ್ಟುಕೊಂಡದ್ದರಿಂದ, ಅವರ ಕಾಲದ ಜನರ ಭಾಷೆಗೂ ಕಾವ್ಯದ ಭಾಷೆಗೂ ಅಂತರವು ಹೆಚ್ಚಾಗಿದ್ದುದರಿಂದ ಅವರು ರಚಿಸಿದ ಚಂಪೂ ಕೃತಿಗಳು ಅನಿವಾರ್ಯವಾಗಿ ಕ್ಲಿಷ್ಟವಾಗಿಯೂ ಪೆಡಸಾಗಿಯೂ, ಕೆಲವೆಡೆ ವಾಸ್ತವತೆಗೆ ದೂರ ನಿಂತದ್ದರಿಂದ ಕೃತಕವಾಗಿಯೂ ಪರಿಣಮಿಸಿದುವು. ಜಾನಪದ ಕಾವ್ಯ ಎಂಬ ಒಂದು ರೀತಿಯ ಕಾವ್ಯಜಾತಿ ಪ್ರತ್ಯೇಕವಾಗಿ ಇಲ್ಲವಾದರೂ ರಗಳೆ, ಷಟ್ಪದಿ, ಸಾಂಗತ್ಯ ಇತ್ಯಾದಿಗಳನ್ನು ಜಾನಪದ ಕಾವ್ಯಗಳೆಂದೂ ದೇಶ್ಯಕಾವ್ಯಗಳೆಂದೂ ಕರೆಯಬಹುದು. ಇವುಗಳ ಭಾಷೆ ನಡುಗನ್ನಡ, ಆಡುಮಾತಿಗೆ ಹತ್ತಿರ; ಶೈಲಿ ಬಹು ಸರಳ. ವಿದ್ವಾಂಸರಿಗೆ ಮಾತ್ರವಲ್ಲದೆ ಸಾಮಾನ್ಯ ಜನತೆಗೂ ಅರ್ಥವಾಗಬೇಕು, ಪ್ರಿಯವಾಗಬೇಕು ಎಂಬ ಪ್ರಧಾನ ಉದ್ದೇಶದಿಂದ ರಚಿತವಾದ ಕಾವ್ಯಗಳಿವು.[2] ಹೀಗೆ ಚಂಪೂ ಕಾವ್ಯಗಳು ಜನತೆಗಲ್ಲ; ಜನತೆಯನ್ನು ಕಡೆಗಣಿಸಿದ ಕವಿಗಳಿಂದ ರಚಿತವಾದ ಕಾವ್ಯಗಳು ಎಂಬ ಭಾವನೆ ಇದ್ದರೆ ಆಶ್ಚರ್ಯವಿಲ್ಲ.

ಆದರೆ ಮೇಲಿನ ಹೇಳಿಕೆ ಸಂಪೂರ್ಣ ಸತ್ಯವಲ್ಲ. ಜನತೆಯನ್ನು ಗಮನದಲ್ಲಿರಿಸಿಕೊಂಡು ಕನ್ನಡದಲ್ಲಿ ಹುಟ್ಟಿದ ಮೊದಲ ಸಾಹಿತ್ಯವೆಂದರೆ ಹನ್ನೆರಡನೆಯ

---

1 "…. ಗದ್ಯಪದ್ಯಮಯೀ ಕಾಚಿಚ್ಚಂಪೂರಿತ್ಯಭಿಧೀಯತೇ"
(ಕಾವ್ಯಾದರ್ಶ, ೧.೩೧)

2 ಕೆಲವು ಷಟ್ಪದಿ ಕಾವ್ಯಗಳು ಚಂಪೂಕಾವ್ಯಗಳ ಮಾದರಿಯನ್ನನುಸರಿಸಿ ಪ್ರೌಢವಾದ ರೀತಿಯಲ್ಲಿ ರಚಿತವಾಗಿರುವುದುಂಟು. ಅವುಗಳಲ್ಲಿ ಅಷ್ಟಾದಶವರ್ಣನೆಗಳನ್ನೂ, ಶ್ಲೇಷೆ ವಿರೋಧಾಭಾಸ ಮುಂತಾದುವನ್ನೂ ತಂದುಹಾಕಿ, 'ವರ್ಣಕಕ್ಕಿಲ್ಲ ಲಕ್ಷಣಮೆಂಬ ಜನರ ನಾಣ್ಣುಡಿಯನಲ್ಲೆನಿ'ಸಲು ರಚಿತವಾದ ಹಲವು ಷಟ್ಪದಿ ಕಾವ್ಯಗಳಿವೆ.

ಶತಮಾನದ ಉತ್ತರಾರ್ಧದ ವಚನಸಾಹಿತ್ಯ. ಅಲ್ಲಿಯವರೆಗೆ ಕಾವ್ಯಗಳನ್ನು ರಚಿಸಿದ ಕವಿಗಳೆಲ್ಲರೂ ಚಂಪೂ ಕವಿಗಳು. ಆದರೂ ಇವರಲ್ಲಿ ಕೆಲವರಾದರೂ ಜನ ಸಾಮಾನ್ಯರ ಭಾಷೆಯ ಸೊಗಸನ್ನರಿತು ಅವರ ನುಡಿಗಟ್ಟುಗಳನ್ನೂ ಉಕ್ತಿ ವೈಚಿತ್ರ್ಯಗಳನ್ನೂ ಬಳಸಿಕೊಂಡು ತಮ್ಮ ಕಾವ್ಯಭಾಷೆಯು ಜನತೆಯ ಆಡು ಮಾತಿಗೆ ಹತ್ತಿರವಾಗಿರುವಂತೆ ನೋಡಿಕೊಂಡಿದ್ದಾರೆ. ಅವರು ಜನತೆಯನ್ನು ಲಕ್ಷ್ಯದಲ್ಲಿಟ್ಟುಕೊಳ್ಳದೆ ಕೇವಲ ವಿದ್ವಾಂಸರಿಗಾಗಿ ಮಾತ್ರ ಬರೆದರೆಂದು ಭಾವಿಸುವುದು ತಪ್ಪಾದೀತು. ಉದಾಹರಣೆಗೆ ಅಂತಹ ಕವಿಗಳಲ್ಲಿ ಅಗ್ರಗಣ್ಯನಾದ ಪಂಪನು ವಿದ್ವಾಂಸರ ಸೂಚನೆಯಂತೆ ತಾನು ಭಾರತವನ್ನು ಬರೆದಿರುವುದಾಗಿ ಹೇಳಿಕೊಂಡಿದ್ದರೂ,[3] ಅವನೇ ಇನ್ನೊಂದೆಡೆ ಹೇಳಿಕೊಂಡಿರುವಂತೆ ಅವನು 'ಪಂಪ ಭಾರತ'ದಲ್ಲಿ ಬಳಸಿರುವುದು 'ರಾಜದ್ರಾಜಕಮೆನಿಸಿದ ಸಾಜದ ಪುಲಿಗೆಱೆಯ ತಿರುಳ ಕನ್ನಡ'; ಅವನ ಉದ್ದೇಶವೋ 'ನಾಡೊವಜ'ನಾಗುವುದು (ಪಂಪಭಾರತ, ೧೪.೫೮,೬೨). ನಾಡ ಉಪಾಧ್ಯಾಯನಾಗಬಯಸಿದ, ಜನತೆಗೆ ಸಾರಾಸಾರವನ್ನು ಧರ್ಮಾಧರ್ಮವನ್ನು ಬೋಧಿಸಲು ಹಂಬಲಿಸಿದ ಪಂಪ ಕವಿಯು[4] ಜನತೆಯನ್ನು ಕಡೆಗಣಿಸಿ ಕಾವ್ಯವನ್ನು ರಚಿಸಿದನೆಂದು ಭಾವಿಸುವುದು ಅಷ್ಟಾಗಿ ಉಚಿತವಾಗ ಲಾರದು. ನಯಸೇನನೂ ಕೂಡ ಈ ದೃಷ್ಟಿಯಿಂದ ಪಂಪನನ್ನು ಹೋಲತಕ್ಕವನು. ಪಂಪನಲ್ಲಿ ಜಾನಪದ ಶೈಲಿ ತಕ್ಕಮಟ್ಟಿಗೆ ಗೋಚರವಾದರೂ ಅದು ಹೆಚ್ಚು ಪ್ರಮಾಣ ದಲ್ಲಿ ಕಾಣಿಸಿಕೊಳ್ಳುವುದು ನಯಸೇನನ 'ಧರ್ಮಾಮೃತ' ದಲ್ಲಿ. 'ಧರ್ಮಾಮೃತ' ಬಾಹ್ಯರೂಪದಲ್ಲಿ ಚಂಪೂಕಾವ್ಯ, ಅಂತಸ್ಸತ್ವದಲ್ಲಿ ಜಾನಪದ ಕಾವ್ಯ.

ನಯಸೇನನ ಕೃತಿರಚನೆಯ ಕಾಲ ಕ್ರಿ.ಶ. ೧೧೧೨. ಅವನು ಮುಳುಗುಂದ ದಲ್ಲಿ ಜೈನಸನ್ಯಾಸಿಯಾಗಿದ್ದು ನೂರಾರು ಜನರಿಗೆ ಧರ್ಮಬೋಧನೆಯನ್ನು ಮಾಡಿದನು.[5] ಕವಿಯು 'ರಾಜಪೂಜ್ಯ'ನೂ 'ಪರಮಜೈನಧರ್ಮಾಂಬರದಿನ

---

[3] ಕತೆ ಪಿರಿದಾದೊಡಂ ಕತೆಯ ಮೆಯ್ಗಿಡಲೀಯದೆ ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆ ಪೇೞ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇೞ್ವೊಡೆ ಪಂಪನೆ ಪೇೞ್ಗೆಮೆಂದು ಪಂ
ಡಿತರೆ ತಗುಳ್ದು ಬಿಚ್ಚಱಿಸೆ ಪೇೞಲೊಡರ್ಚಿದೆನೀ ಪ್ರಬಂಧಮಂ ||
(ಪಂಪಭಾರತ, ೧.೧೧)

[4] ಈ ಅವನ ಆದರ್ಶವು ಎಷ್ಟು ಫಲಿಸಿತು, ಅವನ ಪಂಪಭಾರತದಿಂದ ಉದಾತ್ತವಾದ ಸಾಮಾಜಿಕ ಮೌಲ್ಯಗಳು/ ಎಷ್ಟು ಪ್ರಸಾರಗೊಂಡುವು ಎಂಬ ವಿವರಣೆಗಳಿಗೆ, ನೋಡಿ— ಎಂ. ಚಿದಾನಂದಮೂರ್ತಿ: 'ಪಂಪಕವಿ ಮತ್ತು ಮೌಲ್ಯಪ್ರಸಾರ' (ಪ್ರಬುದ್ಧ ಕರ್ಣಾಟಕ, ೪೨.೧, ಪು. ೮೫–೯೯).

[5] ಮುಳುಗುಂದದೊಳಿರ್ದು ಮಹೋ | ಜ್ವಳ ಧರ್ಮಾಮೃತಮನರ್ತಿಯಿಂದಂ ಭವ್ಯಾ |
ವಳಿಗಱಿಪಿದಂ ಧರಿತ್ರೀ | ತಳಪೂಜ್ಯಂ ಸುಕವಿನಿಕರಪಿಕಮಾಕಂದಂ ||
(ಧರ್ಮಾಮೃತ, ೧೪.೧೬೮)

ಕರ'ನೂ 'ಸರಳಭವ್ಯಜನಬುಧಜನಚಿತ್ತಾನಂದಕರ'ನೂ ಆಗಿದ್ದನು. ಅವನಿಗಿದ್ದ ಬಿರುದುಗಳಲ್ಲಿ ಅವನಿಗೆ ಬಹು ಪ್ರಿಯವಾದದ್ದು 'ಸುಕವಿನಿಕರಪಿಕಮಾಕಂದ' ಎಂಬುದು. ಆಶ್ವಾಸಾಂತ್ಯದ ಗದ್ಯದಲ್ಲಿ ತನ್ನನ್ನು 'ನಿರುಪಮಸಹಜಕವಿಜನಪಯಃಪಯೋಧಿಹಿಮಕರ'ನೆಂದೂ 'ನುತಭಾವಯುತ'ನೆಂದೂ 'ದಿಗಂಬರ ದಾಸ'ನೆಂದೂ 'ನೂತ್ನಕವಿತಾವಿಳಾಸ'ನೆಂದೂ ಕರೆದುಕೊಂಡಿದ್ದಾನೆ. ಈ ವಿಶೇಷಣಗಳಲ್ಲಿ ಒಂದೆರಡು ಬಹು ಮುಖ್ಯವಾದುವು. ಅಲ್ಲಿಯವರೆಗೆ ಆಗಿಹೋದ 'ಸಹಜಕವಿ'ಗಳಲ್ಲಿ ನಯಸೇನನು ಅಗ್ರಗಣ್ಯ. ಅವನು ಹೊಸಮಾರ್ಗವನ್ನನುಸರಿಸಿರುವುದರಿಂದ 'ನೂತ್ನಕವಿತಾವಿಳಾಸ'ನೂ ಹೌದು. ಈ ಕೆಲವು ವಿಶೇಷಣಗಳ ಔಚಿತ್ಯವನ್ನರಿಯಬೇಕಾದರೆ ನಯಸೇನನಿಗೆ ಹಿನ್ನೆಲೆಯಾಗಿದ್ದ ಸಾಹಿತ್ಯ ಮತ್ತು ಧರ್ಮಗಳ ಪರಿಸ್ಥಿತಿಯನ್ನವಲೋಕಿಸಬೇಕು. ಹತ್ತನೇ ಶತಮಾನದ ಪಂಪಾದಿಗಳ ಕಾವ್ಯಗಳನ್ನೋದಿದರೆ ಅವರದು ಜೈನಧರ್ಮದ ಸಮೃದ್ಧಿಯ ಮತ್ತು ಏಳಿಗೆಯ ಕಾಲವೆಂಬ ಭಾವನೆ ಬರುತ್ತದೆ. ಪಾರಿಭಾಷಿಕವಾಗಿ ಹೇಳುವುದಾದರೆ ಅವರದು ಜೈನ ಧರ್ಮದ 'ಸುಷಮಕಾಲ'. ಹತ್ತನೇ ಶತಮಾನದ ಅಂತ್ಯದಲ್ಲಿ ಗಂಗರ ಮತ್ತು ರಾಷ್ಟ್ರಕೂಟರ ಮುಕ್ತಾಯದೊಡನೆ ಜೈನಧರ್ಮದ ಪ್ರಾಬಲ್ಯದ ಇಳಿಮುಖವೂ ಆರಂಭವಾಗಿ ಹನ್ನೊಂದನೆಯ ಶತಮಾನದಲ್ಲಿ ಅದರ ಸ್ಪಷ್ಟ ಕುರುಹುಗಳು ಕಾಣಿಸಿಕೊಳ್ಳುತ್ತವೆ. ಇದಕ್ಕೆ ಶಾಸನಾಧಾರಗಳೂ ಇವೆ. '"ತೊಲಗದೆ ಜೈನಮಾರ್ಗದೊಳ್ ನಿಶ್ಚಳರಪ್ಪುದು............" ಎಂಬಂತಹ ಉಕ್ತಿಗಳು ಶಾಸನಗಳಲ್ಲಿ[6] ಕಾಣಿಸಿಕೊಳ್ಳುವುದಲ್ಲದೆ, ಜೈನಧರ್ಮದಿಂದ ಇತರ ಮತಗಳಿಗೆ, ಅದರಲ್ಲೂ ಶೈವಧರ್ಮಕ್ಕೆ ಜನರು ಪರಿವರ್ತನೆ ಹೊಂದುತ್ತಿದ್ದರೆಂಬುದಕ್ಕೆ ಶಾಸನಾಧಾರಗಳಿವೆ.[7] ಹನ್ನೊಂದು ಹನ್ನೆರಡನೇ ಶತಮಾನಗಳು ಜೈನಧರ್ಮಕ್ಕೆ 'ದುಷ್ಷಮಕಾಲ'. ನಯಸೇನನೇ ಒಂದೆಡೆ ದುಷ್ಷಮಕಾಲವನ್ನು ವರ್ಣಿಸುತ್ತ 'ಎತ್ತಲುಂ ಮಿಸುಕದು ಜೈನಧರ್ಮದ ನೆಗಟ್ಚೆ ಕುಲಿಂಗಿಗಳುಂ ಕುದೈವಮುಂ ವಸುಧೆಯೊಳುರ್ವುಗುಂ' ಎಂದು ಹೇಳಿದ್ದಾನೆ.[8] ಅವನೇ ಇನ್ನೊಂದೆಡೆ 'ದುರಾಚಾರರಪ್ಪ ತಪೋಧನಲಿಂಗಿ'ಗಳನ್ನು ಖಂಡಿಸಿದ್ದಾನೆ. ಈ 'ಲಿಂಗಿ'ಗಳು ಇನ್ನಾರೂ ಅಲ್ಲ, ಬಹುಶಃ ಲಕುಲೀಶ—

---

[6] South Indian Inscriptions, IX, i. 117, 1055 A.D.

[7] Epigraphia Indica, XIX, P. 192, 1121 A.D.

[8] ಸಸಿ ಕಿಡುಗುಂ ತೃಣಂ ಬಹಳಮಕ್ಕುಮಸತ್ಯಮೆ ಪೆರ್ಚುಗುಂ ಶ್ರುತಂ
ಕುಸಿಗುಮನಿಷ್ಟಕಾರಿಗಳೆ ಬಾಳ್ವರುದಾರರೆ ಸಾವರೆತ್ತಲುಂ
ಮಿಸುಕದು ಜೈನಧರ್ಮದ ನೆಗಟ್ಚೆ ಕುಲಿಂಗಿಗಳುಂ ಕುದೈವಮುಂ
ವಸುಧೆಯೊಳುರ್ವುಗುಂ ನಿಮಿರ್ದ ದುಷ್ಷಮಕಾಲದೇಳ್ಗೆಯೊಳ್ ॥ (೧೪.೧೫೧)

ಪಾಶುಪತ ಶೈವರು.[9] ಇಂತಹ ಕಾಲದಲ್ಲಿ ಜೈನಧರ್ಮದಲ್ಲಿ ಶ್ರದ್ಧೆಯಿಲ್ಲದವರು ಅಥವಾ ಇದ್ದ ಶ್ರದ್ಧೆಯನ್ನು ಕಳೆದುಕೊಂಡವರು 'ಉಗ್ರನರಕಾಂಭೋರಾಶಿಯೊಳ್ ಬಿರ್ದು ಕೋಟಲೆಗೊಳ್ವರ್' ಎಂಬ ಅನುಕಂಪೆಯಿಂದಲೂ ಜೈನಧರ್ಮವು ಊರ್ಜಿತವಾಗಬೇಕೆಂಬ ಸಹಜಾಪೇಕ್ಷೆಯಿಂದಲೂ ನಯಸೇನನಂತಹ ಶಕ್ತರು ಮುಂದೆ ಬಂದು ಸಹಜ, ಸರಳ, ಸುಂದರ ಭಾಷೆಯಲ್ಲಿ ಜನತೆಗೆ ಕಥೆಗಳ ಮೂಲಕ ಜೈನಧರ್ಮದ ತಿರುಳನ್ನೂ[10] ಹೆಚ್ಚುಳವನ್ನೂ ತಿಳಿಸುವ ಅಗತ್ಯವು ಕಂಡುಬಂದಿತು. ಜೈನಧರ್ಮದ ದೃಷ್ಟಿಯಿಂದ ಹೇಳುವುದಾದರೆ, ನಯಸೇನನ 'ಧರ್ಮಾಮೃತ' ಆ ಯುಗದ ಅಗತ್ಯದ ಫಲ. "ಸಾಹಿತ್ಯ ಜನತೆಗಾಗಿ ಎಂಬ ಹೊಸಗನ್ನಡದ ಮೊದಲ ಕೋಳಿ ಕೂಗು ಅವನ ಕೃತಿಯಲ್ಲಿದೆ..............."[11] ಎಂಬ ವಿದ್ವಾಂಸರೊಬ್ಬರ ಉಕ್ತಿಯು ಸಾಧುವಾದುದು.

ಕನ್ನಡ ಸಾಹಿತ್ಯಚರಿತ್ರೆಯಲ್ಲಿ ನಯಸೇನನ ಸ್ಥಾನವು ಹಲವು ದೃಷ್ಟಿಗಳಿಂದ ವಿಶಿಷ್ಟವಾದುದು. ಅಲ್ಲಿಯವರೆಗೆ, ಪಂಪನಂತಹ ಒಬ್ಬಿಬ್ಬರು ಕವಿಗಳ ಕೃತಿಗಳನ್ನು ಬಿಟ್ಟರೆ ಮಾರ್ಗೀಶೈಲಿಯ ಪ್ರೌಢಕಾವ್ಯಗಳೆ ಹೆಚ್ಚಾಗಿ ಗೋಚರವಾಗುತ್ತವೆ. ಅವುಗಳಲ್ಲಿ ಹಿತಮಿತವಲ್ಲದ ಸಂಸ್ಕೃತ ಕನ್ನಡ ಪದಗಳ ಬೆರಕೆಯೂ ಸಂಸ್ಕೃತ ವ್ಯಾಮೋಹವೂ ಎದ್ದು ಕಾಣುವ ಅಂಶ. ಪಂಪನ 'ಆದಿಪುರಾಣ'ವೂ ಈ ಆಕ್ಷೇಪಣೆಗೆ ಅಪವಾದವಲ್ಲ. ಇಂತಹ ಸಂದರ್ಭದಲ್ಲಿ ಆ ಪ್ರವೃತ್ತಿಯನ್ನು ಪ್ರತಿಭಟಿಸಿ ಕನ್ನಡ ಕಾವ್ಯಗಳಲ್ಲಿ ಸಂಸ್ಕೃತದ ಸ್ಥಾನವೇನೆಂಬುದನ್ನು ಸೂಚಿಸಿ ಸಂಸ್ಕೃತ ಕನ್ನಡಗಳ ಹದವಾದ ಬೆರಕೆಗೆ ಮಾದರಿಯಾದ ಕಾವ್ಯವೊಂದನ್ನು ನಿರ್ಮಿಸಿದ ಶ್ರೇಯಸ್ಸು ನಯಸೇನನದು[12].

---

9. ಇವರ ವಿವರಗಳಿಗೆ, ನೋಡಿ—ಕೃಷ್ಣರಾಯ, ಕಪಟರಾಳ: ಕರ್ನಾಟಕ ಲಾಕುಳ ಶೈವರ ಇತಿಹಾಸ; T. V. Mahalingam: The Pāśupatas in South India (Journal of Indian History, XXVII).

10. ಜಿನಮತದೊಳೆನಿತು ಸಾರಮ| ದನಿತುಂ ಲೇಸಾಗಿ ತೋರ್ಪುದೀ ಕೃತಿಯೊಳದೆಂ|
ತೆನೆ ಕನ್ನಡಿಯೊಳಗೆ ಜಲ| ಕ್ಕನೆ ತೋರ್ಪವೊಲಿಭದ ರೂಪು ವಿಸ್ತರದಿಂದಂ ||
(ಧರ್ಮಾಮೃತ, ೧. ೫೫)

11. ರಂ. ಶ್ರೀ. ಮುಗಳಿ: ನಯಸೇನನ ಧರ್ಮಾಮೃತ (ತವನಿಧಿ, ಪು. ೮೭).

12. ಪೊಸಗನ್ನಡದಿಂ ವ್ಯಾವ| ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ|
ತಿಸಿ ಕೂಡಲಾರದಕ್ಕಟ| ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೇ ||
ಸಕ್ಕದಮಂ ಪೇೞ್ವೊಡೆ ನೆಱೆ| ಸಕ್ಕದಮಂ ಪೇೞ್ಗೆ ಸುದ್ದಗನ್ನಡದೊಳ್ತಂ|
ದಿಕ್ಕುವುದೇ ಸಕ್ಕದಮಂ|ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ||
(ಧರ್ಮಾಮೃತ, ೧. ೪೧-೨)

"ಕನ್ನಡಚಂಪು ವಿಷಯ, ವಿನ್ಯಾಸ ಎರಡರಲ್ಲಿ ಜನಸಂಮುಖವೂ ದೇಸಿ ಸಂಪನ್ನವೂ ಆದದ್ದು ಈ ಗ್ರಂಥದಲ್ಲಿಯೆ".[13] ಅವನ ಭಾಷೆ ಹಿಂದಿನ ಚಂಪೂ ಕಾವ್ಯಗಳಷ್ಟು ಪೆಡಸಲ್ಲ, ಮುಂದೆ ಬಂದ ವಚನ ರಗಳೆಗಳಷ್ಟು ಸರಳವಲ್ಲ. ಅವನ ಕಾವ್ಯದಲ್ಲಿ ಅವನ ಸಮಕಾಲೀನ ವ್ಯಾವಹಾರಿಕ ಭಾಷೆಯಾದ ನಡುಗನ್ನಡವು ಹಳಗನ್ನಡದ ಹಿಂದೆ ಸಂಕೋಚಪಟ್ಟುಕೊಂಡು ನಿಂತಿರುವಂತೆ ಭಾಸವಾಗುತ್ತದೆ. ನಯಸೇನನು ಮನಸ್ಸು ಮಾಡಿದ್ದರೆ, ಚಂಪೂ ಸಂಪ್ರದಾಯವನ್ನು ಬಿಟ್ಟು ಬೇರೊಂದು ಕಾವ್ಯಪ್ರಕಾರವನ್ನು ಆರಿಸಿಕೊಂಡು ಬರೆದಿದ್ದರೆ, ಅಥವಾ ಪದ್ಯವನ್ನು ಹಿಂದಿಕ್ಕಿ ಗದ್ಯದಲ್ಲಿಯೇ ಬರೆದಿದ್ದರೆ ಕನ್ನಡಕ್ಕೆ ಒಂದು ಸೊಗಸಾದ ಜಾನಪದ ಶೈಲಿಯ ಕೃತಿಯು ಲಭ್ಯವಾಗುತ್ತಿದ್ದಿತು. ಅವನು ಚಂಪೂ ಸಂಪ್ರದಾಯದ ಭದ್ರಮುಷ್ಟಿಗೆ ತಲೆಬಾಗಬೇಕಾಯಿತೆಂದು ಕಾಣುತ್ತದೆ.

ನಯಸೇನನ ಸಂಸ್ಕಾರವನ್ನೂ ಮನೋಭಾವವನ್ನೂ ಅನುಭವ ವೈವಿಧ್ಯವನ್ನೂ ಗಮನಿಸಿದಾಗ, ಅವನು ಅವನ ಕಾಲಕ್ಕಿಂತ ಐವತ್ತು ಅಥವಾ ನೂರು ವರ್ಷ ಈಚಿನವನಾಗಿದ್ದು ಕಾವ್ಯರಚನೆ ಮಾಡಿದ್ದರೆ ಅವನು ಚಂಪೂಕಾವ್ಯವನ್ನು ಪ್ರಾಯಶಃ ಬರೆಯುತ್ತಿದ್ದಿಲ್ಲ. ಅವನು ಯಾವ ಪ್ರಕಾರವನ್ನು ಆರಿಸಿಕೊಳ್ಳುತ್ತಿದ್ದ, ಹೇಗೆ ಬರೆಯುತ್ತಿದ್ದ ಎಂಬುದನ್ನು ಊಹಿಸುವುದು ಕಷ್ಟವಾದರೂ ವಚನಕಾರರ, ಹರಿಹರ ಮತ್ತು ರಾಘವಾಂಕರ ಪ್ರಭಾವದಿಂದ ಅವನ ಕಾವ್ಯಪಥ ಸ್ವಲ್ಪಮಟ್ಟಿಗಾದರೂ ಬೇರೆಯಾಗುತ್ತಿದ್ದಿತೆಂದು ಕಾಣುತ್ತದೆ. ನಯಸೇನನ ಪ್ರಭಾವವು ಮುಂದೆ ಬಂದ ಜೈನಕವಿಗಳ ಮೇಲೆ ಸ್ಪಷ್ಟವಾಗಿ ಆಗಿರುವುದು ಗೋಚರವಾಗುತ್ತದೆ.[14] ನಯಸೇನ

---

13. ರಂ. ಶ್ರೀ. ಮುಗಳಿ : ಕನ್ನಡ ಸಾಹಿತ್ಯಚರಿತ್ರೆ, ಪು. ೧೩೧–೨.

14 ಜನ್ನನ ಮೇಲೆ ನಯಸೇನನ ಸ್ಪಷ್ಟ ಪ್ರಭಾವವಿದೆ. ಅವನ 'ಮನಸಿಜನ ಮಾಯೆ ವಿಧಿವಿಳಸನದ ನೆರಂ ಬಡೆಯೆ ಕೊಂದು ಕೂಗದೆ ನರರಂ' (ಯಶೋಧರ ಚರಿತೆ, ೨.೬೧) ಎಂಬ ಉಕ್ತಿಗೆ ಮೂಲ ಬಹುಶಃ "....ನರರಂ ಝುಷಕೇತು ಕೊಂದುಕೂಗದೆ ಮಾಣಂ" ಎಂಬ ನಯಸೇನನ ಉಕ್ತಿ (ಧರ್ಮಾಮೃತಂ, ೧೩.೩೩).

'ಧರ್ಮಾಮೃತ'ದ ಹಲವು ಉಕ್ತಿಗಳಿಗೂ ಬಸವಣ್ಣನವರ ಹಲವು ಉಕ್ತಿಗಳಿಗೂ ಕೆಲವೆಡೆ ಸಾಮ್ಯವಿದೆ. "ಬೇವಿನ ಗಿಡುವಂ ತಂದಿ|ಟ್ಟಾವಿನ ನೊಱೆವಾಲನೆಱೆದು ನಡಪಿದೊಡಂ ಕೇಳ್| ಬೇವಿಂಗೆ ಕೈಪೆ ಪಿಂಗದು | ಭೂವಳಯದೊಳೆಂಬ ತೆಱದಿನ್...." (೪.೧೫೬) ಎಂಬ 'ಧರ್ಮಾಮೃತ'ದ ಪದ್ಯವು "ಬೇವಿನ ಬೀಜವ ಬಿತ್ತಿ ಬೆಲ್ಲದ ಕಟ್ಟೆಯ ಕಟ್ಟಿ ಆಕಳಹಾಲನೆಱೆದು ಜೇನುತುಪ್ಪ ಹೊಯ್ದರೆ ಸಿಹಿಯಾಗಬಲ್ಲುದೆ, ಕಹಿಯಾಗಲೊಲ್ಲದೆ...." ಎಂಬ ಬಸವಣ್ಣನವರ ವಚನವನ್ನು ಜ್ಞಾಪಿಸುತ್ತದೆ. ಹಾಗೆಯೇ 'ನೀರುಮಂ ನೇಣುಮಂ', 'ಬೆಲ್ಲದ ಮೋಹಕ್ಕೆ ಸುರಗಿಯ ಬಾಯ ಧಾರೆಯಂ ನೆಕ್ಕುವಂತಾನುಂ', 'ಪುಲ್ಲುಕಿರ್ಚಿನಂತೆ', 'ಕಳನೇಱಿದಂಕನಂತೆ ಸೂಲಮೇಱಿದ ಕಳ್ಳನಂತೆ' ಎಂಬ 'ಧರ್ಮಾಮೃತ'ದ ಉಕ್ತಿಗಳು ಬಸವಣ್ಣನವರ ಅನೇಕ ವಚನಗಳನ್ನು ನೆನಪಿಗೆ ತರುತ್ತವೆ. ಈ ಉಕ್ತಿಗಳು ಅಥವಾ ಭಾವಗಳು ಜನತೆಯ ಸ್ವತ್ತಾಗಿದ್ದು ಅವು ಆಯಾ ಕರ್ತೃವಿನ ಬರಹಗಳನ್ನು ಪ್ರವೇಶಿಸಿರಬಹುದು. ಒಬ್ಬರ ಪ್ರಭಾವ ಇನ್ನೊಬ್ಬರ ಮೇಲಾಗಿದೆ ಎಂಬ ತೀರ್ಮಾನಕ್ಕೆ ಬರುವಷ್ಟು ಪ್ರಬಲವಾಗಿಲ್ಲ ಈ ಸಾದೃಶ್ಯಗಳು.

ಸನ್ಯಾಸಿಯಾಗಿದ್ದರೂ ಅದ್ಭುತವಾದ ಲೋಕಾನುಭವವನ್ನೂ ಲೋಕಪರಿಜ್ಞಾನವನ್ನೂ ಬಲ್ಲ ವ್ಯಕ್ತಿಯಾಗಿದ್ದನು. ಜನಸಾಮಾನ್ಯರ ಆಡುನುಡಿಯನ್ನು ಅವನಷ್ಟು ಆತ್ಮೀಯವಾಗಿ ಬಲ್ಲ ಕವಿಗಳು ಕನ್ನಡದಲ್ಲಿ ಅತ್ಯಪೂರ್ವ.

ನಯಸೇನನು ಚಂಪೂ ರೀತಿಯಲ್ಲಿ ಬರೆಯಲು ಅವನ ಕಾಲದ ಸಂಪ್ರದಾಯವು ಎಷ್ಟು ಕಾರಣವೋ, ಕಾವ್ಯಪ್ರಪಂಚದಲ್ಲಿ ಅವನಿಗೆ ಗುರುವಾಗಿರುವ ಪಂಪನೂ ಅಷ್ಟೇ ಕಾರಣ. ತನ್ನ ಕಾವ್ಯಾರಂಭದಲ್ಲಿ ಇತರ ಕವಿಗಳ ಸಾಲಲ್ಲಿ ಪಂಪನನ್ನು ಹೊಗಳಿದ್ದರೂ[15] ಅವನು ಮನಸೋತದ್ದು ಇತರರಿಗಿಂತ ಹೆಚ್ಚಾಗಿ ಪಂಪನಿಗೆ. ಬಹುಶಃ ಅದಕ್ಕೆ ಕಾರಣ ಪಂಪನು ಶ್ರೇಷ್ಠಕವಿಯೆಂಬುದು ಮಾತ್ರವಲ್ಲ, ಇವನ ಮನೋಧರ್ಮಕ್ಕೆ ಬಹು ಹತ್ತಿರದ್ದು ಪಂಪನ ಮನೋಧರ್ಮ ಎಂಬುದೂ ಕಾರಣ. ಪಂಪನ ಉಕ್ತಿಗಳನ್ನು ಶೈಲಿಯ ಸೊಬಗನ್ನು ಕವಿ ಅರಿತೋ ಅರಿಯದೆಯೋ ಉತ್ಸಾಹದಿಂದ ಅನುಕರಿಸಿದ್ದಾನೆ, ಅನುಸರಿಸಿದ್ದಾನೆ. ಉದಾಹರಣೆಗೆ ಈ ಉಕ್ತಿಗಳನ್ನು ಗಮನಿಸಬಹುದು.

ನಯಸೇನ	ಪಂಪ
(ಅ) 'ಕರ್ಮನಿರ್ಜರೆಯನಂತಿಂತುಂತೆ ನಲ್ಬುರ್ಕುಮೇ' (೧·೫೪)	(ಅ) 'ಕರ್ಮನಿರ್ಜರೆಯನಂತಿಂತುಂತೆನಲ್ ಬರ್ಕುಮೇ' (ಆದಿಪುರಾಣ, ೧·೩೭)
(ಆ) 'ನಿಡಿಯರ್ಗ್ಗೆ ನಿಡಿಯರೊಳರ್.' (೪·೨೧೯)	(ಆ) 'ನಿಡಿಯರ್ಗಂ ನಿಡಿಯರೊಳರ್' (ಆದಿಪುರಾಣ, ೧೨·೧೦೪)
(ಇ) 'ಸುರಿದರ್ ಬಸಮಲ್ಲದ ಕಣ್ಣ ನೀರ್ಗಳಂ' (೧೦·೧೭೦)	(ಇ) 'ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ' (ಆದಿಪುರಾಣ, ೪·೫೬)
(ಈ) 'ಪತಿಗಂಜಿ ಬೆರ್ಚಿ ಬೆಸಗೈಯ್ಯದ' (೧೦·೭೩)	(ಈ) 'ಮನಮಱಿದಂಜಿ ಬೆರ್ಚಿ ಬೆಸಕೆಯ್' (ಆದಿಪುರಾಣ, ೪·೫೬)
(ಉ) 'ಕಟ್ಟಿದವರ್ಗೇಕೆ ಪಂಬಲಿಪುದೇಕೆ ಪಲುಂಬುವುದು..................ಬಟಿಲ್ವುದದೇಕೆ ನೋವುದೋ' (೧೦·೧೨೮)	(ಉ) "..........ಕಟ್ಟಿದವರ್ಗಟ್ಟುದು.... ಏಕೆ ಬಾಯಟುವುದಿದೇಕೆ ಚಿಂತಿಸುವುದೇಕೆ ಪಲುಂಬುವುದೇಕೆ ನೋವುದೋ" (ಪಂಪಭಾರತ, ೨·೨೭)

---

15 ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ ನಿರಂತರಂ ‖ (೧·೩೯)

ಇವರಲ್ಲಿ ಅಸಗನ ಕೃತಿಗಳು ದೊರಕಿದ್ದರೆ ಅವನ 'ದೇಸಿ'ಯ ಪ್ರಭಾವವೆಷ್ಟು ನಯಸೇನನ ದೇಸಿಯ ಮೇಲೆ ಎಂಬುದನ್ನು ನಿರ್ಧರಿಸಬಹುದಿತ್ತು. ಗಜಾಂಕುಶ, ಗುಣವರ್ಮರ ಕೃತಿಗಳೂ ನಮಗೆ ದೊರೆತಿಲ್ಲ. ಗುಣವರ್ಮನ 'ಶೂದ್ರಕ', 'ಹರಿವಂಶ' ಎಂಬ ಎರಡು ಕಾವ್ಯಗಳ ಬಿಡಿ ಪದ್ಯ ಗದ್ಯಗಳು 'ಕಾವ್ಯಸಾರ' ಇತ್ಯಾದಿ ಸಂಕಲನಗಳಲ್ಲಿ ದೊರೆಯುತ್ತವೆ.

ನಯಸೇನನ 'ಸಿರಿಯೊಳ್ ನಾರಾಯಣಂ ರಂಭೆಯೊಳಮರವರಾಧೀಶ್ವರಂ ಸೀತೆಯೊಳ್ ಭೂಧರವಂದ್ಯಂ ರಾಘವೇಶಂ ರತಿಯೊಳಮಳಚಿತ್ತೋದ್ಭವಂ . . . .' (೧೧.೨೨) ಎಂಬ ಪದ್ಯವು ಪಂಪನ ಪ್ರಸಿದ್ಧ ಪದ್ಯವಾದ 'ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ . . . . . .' (ಪಂಪಭಾರತ, ೧೪.೬೪) ಎಂಬ ಪದ್ಯವನ್ನು ನೆನಪಿಗೆ ತರುತ್ತದೆ. 'ಪಂದೆಯುಂ ಸ್ಥಾವಡರ್ದಂತಿರೆ', 'ನಮ್ಮ ಸೆಟ್ಟಿಯ ಮಾತೊಳ್ಳಿದುವು ಬಳ್ಳಂ ಕಿಱಿದು', 'ಕಯ್ಪಿಸೋರೆಯ ಮಿಡಿಯುಂ ಕುಡಿಯುಂ', 'ಕಡುಗಾಯ್ದುಂ ನೀರ್ ಮನೆಯಂ ಸುಡಲಱಿಗುಮೆ' ಮುಂತಾದ ಚಾಟೂಕ್ತಿಗಳು ಪಂಪನಲ್ಲಿಯೂ ಅಲ್ಪಸ್ವಲ್ಪ ವ್ಯತ್ಯಾಸಗಳೊಡನೆ ಸಿಗುತ್ತವೆ. ನಯಸೇನ ಇವುಗಳನ್ನು ಪಂಪನಿಂದ ಸ್ವೀಕರಿಸಿದ್ದಿರಬಹುದು, ಅಥವಾ ಜನರಲ್ಲಿ ಬಳಕೆಯಲ್ಲಿದ್ದ ಉಕ್ತಿಗಳನ್ನು ಇಬ್ಬರೂ ಸ್ವೀಕರಿಸಿರಬಹುದು. ಇವುಗಳನ್ನು ಬಿಟ್ಟರೂ ನಯಸೇನನ ಮೇಲೆ ಪಂಪನ ಪ್ರಭಾವದ ಮುದ್ರೆ ಸ್ಪಷ್ಟವಾಗಿ ಎದ್ದು ಕಾಣುತ್ತದೆ.[16] ಕವಿಗಳು ಇತರ ಕವಿಗಳಿಗಿಂತ ಹೆಚ್ಚಾಗಿ ತಮ್ಮ ಮನೋಧರ್ಮದ ಕವಿಗಳ ಕೃತಿಗಳಿಂದ ಹೆಚ್ಚು ಪ್ರಭಾವಿತರಾಗುತ್ತಾರೆ ಎಂಬುದು ಸಾಮಾನ್ಯ ಸಂಗತಿ. ಪಂಪನ ಲೋಕಪರಿಜ್ಞಾನ, ದೇಸಿ, ತಿಳಿಗನ್ನಡ ಇತ್ಯಾದಿಗಳಿಂದ ನಯಸೇನನು ಆಕರ್ಷಿತನಾಗಿದ್ದಿರಬಹುದು. ಬಹುಶಃ ನಯಸೇನನ ಮೇಲೆ ಪಂಪನ ಪ್ರಭಾವ ಇಷ್ಟು ಪ್ರಮಾಣದಲ್ಲಿ ಆಗಿರಲು ಇದು ಕಾರಣವಿರಬಹುದು. ದೇಸಿಯ ದೃಷ್ಟಿಯಿಂದ ಹೇಳುವುದಾದರೆ ನಯಸೇನ ಪಂಪನನ್ನು ಅನುಕರಿಸಿದ್ದಾನೆ ಮಾತ್ರವಲ್ಲ, ಅವನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದಾನೆ.

ಆದರೆ ಇಲ್ಲಿ ಒಂದು ಅಂಶ ಗಮನಾರ್ಹವಾಗಿದೆ. ಪಂಪನು ಸವ್ಯಸಾಚಿಯಿದ್ದಂತೆ. ಅವನಿಗೆ ಜನಜೀವನದ ಸೂಕ್ಷ್ಮಾನುಭವವೂ ರಾಜಕೀಯದ ಅನುಭವವೂ ಸಾಕಷ್ಟಿದ್ದುವು. ಪಟ್ಟಣದ, ಅರಮನೆಯ ಒಳಗಿನ ನಾಗರಿಕ ಜೀವನವು ಎಷ್ಟು ಗೊತ್ತಿದ್ದಿತೋ ಅಷ್ಟೇ ಲೋಕವ್ಯವಹಾರವೂ ಗೊತ್ತಿದ್ದಿತು. ನಯಸೇನನಿಗೆ ಲೋಕಾನುಭವ ಸಾಕಷ್ಟಿದೆ ; ರಾಜಕೀಯದ ಮತ್ತು ನಾಗರಿಕ ಜೀವನದ ಪರಿಚಯ

---

16. ನಯಸೇನನ ಮೇಲೆ ಪಂಪನ ಪ್ರಭಾವವಲ್ಲದೆ, ರನ್ನ ಮುಂತಾದ ಇತರ ಕವಿಗಳ ಪ್ರಭಾವವೂ ಇದೆ, ಆದರೆ ಪಂಪನಷ್ಟು ಅಲ್ಲ ಎಂದು ಮಾತ್ರ ಹೇಳಬಹುದು. ಉದಾಹರಣೆಗೆ ನಯಸೇನನ "ಒಡಲೆಂತುಂ ಕಿಡಲಿರ್ದುದು | ಕಿಡುವೊಡಲಂ ತವಿಸಿ ಕಿಡದ ಮುಕ್ತಿಶ್ರೀಯುಂ | ಪಡೆಯಲ್ಕೀ ಜಿನರೂಪಂ . . . ." (೪.೧೨೦) ಎಂಬ ಪದ್ಯವು ರನ್ನನ ಕೆಳಗಿನ ಪದ್ಯವನ್ನು ನೆನಪಿಗೆ ತರುತ್ತದೆ.

"ಒಡಲೊಡಮೆಯೆಂಬಿವೆರಡುಂ | ಕೆಡಲಿರ್ಪುವು ಕಿಡದ ಕಸವರಂ ಜಸಮದಱಿಂ|
ಕೆಡುವೊಡಲೊಡಮೆಯನೆಂದುಂ | ಕೆಡದೊಡಮೆಗೆ ಮಾಱುಗುಡುವುದಿಱಿವ ಬೆಡಂಗಾ ||
(ಗದಾಯುದ್ಧ, ೨.೬)

ಅಷ್ಟಾಗಿ ಇಲ್ಲವೆಂದು ಕಾಣುತ್ತದೆ. ಹೀಗಾಗಿ ಇವನಲ್ಲಿ ಪಂಪನ ದೇಸಿಯುಂಟು, ನಯವಿಲ್ಲ; ಸೂಕ್ಷ್ಮಾವಲೋಕನವುಂಟು, ಸೌಂದರ್ಯದೃಷ್ಟಿಯಿಲ್ಲ; ಅಚ್ಚಗನ್ನಡವುಂಟು, ತಿರುಳ್ಗನ್ನಡವಿಲ್ಲ.

೨

ಧಾರ್ಮಿಕ ಗುರುಗಳಲ್ಲಿ ಇಬ್ಬಗೆಯ ವ್ಯಕ್ತಿಗಳಿದ್ದಾರೆ. ತಮ್ಮ ಕಠೋರವಾದ ಸಾಧನೆಯಿಂದ ವೈಯಕ್ತಿಕವಾದ ಮೋಕ್ಷವನ್ನು ಸಂಪಾದಿಸುವವರು ಮೊದಲನೆಯ ವರ್ಗದವರು. ಇವರು ತಮ್ಮ ಸುತ್ತಮುತ್ತಣ ಪರಿಸರಣದಲ್ಲಿ ಬದುಕುವ ಜನರ ವಿಷಯದಲ್ಲಿ ಅನಾಸಕ್ತರು. ಆದರೆ ಇನ್ನು ಕೆಲವರು ತಮ್ಮ ವೈಯಕ್ತಿಕ ಉದ್ಧಾರದ ಜೊತೆಗೆ ಜನರನ್ನೂ ಮೇಲೆತ್ತಬೇಕೆಂದು ಪ್ರಯತ್ನಿಸುವವರು. ನಯಸೇನ ಈ ಎರಡನೆಯ ವರ್ಗಕ್ಕೆ ಸೇರಿದ್ದ ಜೈನಸನ್ಯಾಸಿ. ಕನ್ನಡ ಕಾವ್ಯಗಳಲ್ಲಿ ಸಂಸ್ಕೃತವನ್ನು ತಂದು ಪೇರಿಸಬಾರದು ಎಂಬ ಅವನ ಉಕ್ತಿಯಲ್ಲಿ ಕಾವ್ಯವು ಪಂಡಿತೇತರರಿಗೂ ಗ್ರಾಹ್ಯವಾಗಿರಬೇಕೆಂಬ ಸದಾಶಯವೂ ಇದೆ. ಅವನು ಕಾವ್ಯ ರಚನೆ ಮಾಡಿರುವುದು 'ಭವ್ಯ'ರಿಗಾಗಿ. ಜೈನಧರ್ಮದ ಮರ್ಮವನ್ನರಿಯದೆ ನರಕದಲ್ಲಿ ಬಿದ್ದುಹೋಗುತ್ತಿರುವ ಜನ ತನ್ನ ಕಾವ್ಯವನ್ನು ಓದಿ ಅಥವಾ ಕೇಳಿ ಸದ್ಗತಿಯನ್ನು ಪಡೆಯಲೆಂಬ ಮಹೋದ್ದೇಶದಿಂದ 'ಕನ್ನಡದಿನೊಪ್ಪಂಬೆತ್ತು ಜಾಣ್ಮಾತಿನಿಂ ಪಲವುಂ ದೇಸೆಯ ಸಂದುದಾಹರಣೆಯಿಂ' ಕಾವ್ಯವನ್ನು ಹೇಳಿದಂತೆ ಒಂದು ಕಡೆ ಹೇಳಿಕೊಂಡಿದ್ದಾನೆ.[17] (ತನ್ನ ಕಾವ್ಯವನ್ನು ಓದಿ 'ಬುಧ'ರು ಅಥವಾ ವಿದ್ವಾಂಸರೂ ಕೂಡ ತಲೆದೂಗಬೇಕೆಂಬ ಆ ಕಾಲದ ಎಲ್ಲ ಕವಿಗಳ ಸಹಜವಾದ ಆಸೆ ನಯಸೇನನಿಗೂ ಇದ್ದಿತು.) ತನ್ನ ಕಾವ್ಯವು 'ಸಕಲೈಕ ಜೀವಹಿತ'ವೆಂದು ಹೇಳಿಕೊಂಡಿದ್ದಾನೆ. ಹೀಗೆ ನಯಸೇನನ ದೃಷ್ಟಿ ಮತ್ತು ಉದ್ದೇಶಗಳು ಉದಾರವೂ ವಿಶಾಲವೂ ಆಗಿವೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ನಯಸೇನ ಸ್ವಭಾವತಃ ಜನಜೀವನದ ವಿಷಯದಲ್ಲಿ ಬಹುವಾದ ಆಸಕ್ತಿಯನ್ನು ಬೆಳಸಿಕೊಂಡಿದ್ದ ವ್ಯಕ್ತಿಯಾಗಿದ್ದನು. ಜೀವನವು ನಿಸ್ಸಾರವೆಂಬ ತೀರ್ಮಾನಕ್ಕೆ ಬರುವ ಮುನ್ನ ಜೀವನದ ಎಲ್ಲ ಮುಖಗಳನ್ನೂ ಕಂಡಿದ್ದನು. ಸಂಸಾರದ ವ್ಯಾಮೋಹವನ್ನು ತೊರೆದು ವೈರಾಗ್ಯವನ್ನು ತಾಳಿ ಬಾಳಿನ ವಿಷಯದಲ್ಲಿ ಅನಾಸಕ್ತಿಯನ್ನು ಬೆಳಸಿಕೊಂಡ ಜೈನಸನ್ಯಾಸಿಯಾಗಿದ್ದೂ ಜನತೆಯ ವಿಷಯದಲ್ಲಿ ಇಷ್ಟೊಂದು ಸೂಕ್ಷ್ಮಗ್ರಹಣ ಶಕ್ತಿಯನ್ನು ಬೆಳಸಿಕೊಂಡದ್ದು ಅಚ್ಚರಿಯೇ ಸರಿ. (ಈ ಜೀವನಾನುಭವ ಅವನು

17 ಪಲರುಂ ಧರ್ಮಮನೊಲ್ಲದುಗ್ರನರಕಾಂಭೋರಾಶಿಯೊಳ್ ಬಿರ್ದು ಕೋ
ಟಲೆಗೊಳ್ವರ್ಗಱಿವಂತು ಕನ್ನಡದಿನೊಪ್ಪಂಬೆತ್ತು ಜಾಣ್ಮಾತಿನಿಂ
ಪಲವುಂ ದೇಸೆಯ ಸಂದುದಾಹರಣೆಯಿಂ ಪೇಟ್ದಿಂ ಬುಧರ್ಕೊರ್ಮೆಯಿಂ
ತಲೆಯಂ ತೂಗುವಿನಂ ಜಿನೇಂದ್ರಮತಮಂ ವಾತ್ಸಲ್ಯರತ್ನಾಕರಂ ॥ (೧೪.೧೬೭)

ಸನ್ಯಾಸಿಯಾಗುವುದಕ್ಕಿಂತ ಮುಂಚೆಯೆ ಅವನಿಗೆ ಒದಗಿರಲೂ ಸಾಧ್ಯ.) ಕನ್ನಡ ಕವಿಗಳಲ್ಲಿ ಇವನಷ್ಟು ಸಾಮಾಜಿಕ ಪ್ರಜ್ಞೆ ಎಚ್ಚತ್ತಿರುವವರು ಕಡಿಮೆ ; ಸರ್ವಜ್ಞನಂತಹ ಕೆಲವರನ್ನು ಬಿಟ್ಟರೆ ಇಷ್ಟರಮಟ್ಟಿಗೆ ಸಮಕಾಲೀನ ಜೀವನದೊಡನೆ ಸಂಪರ್ಕವನ್ನು ಬೆಳಸಿಕೊಂಡ ಕವಿಗಳು ಅತ್ಯಪೂರ್ವ. ಅವನ ಕೃತಿ ಕನ್ನಡ ಸಾಹಿತ್ಯಕ್ಕೆ ಅಲಂಕಾರ ಪ್ರಾಯವಾಗಿರುವಂತೆ ಕರ್ಣಾಟಕದ ಸಾಮಾಜಿಕ ಅಧ್ಯಯನಕ್ಕೆ ಅಮೂಲ್ಯ ಸಾಮಗ್ರಿಯನ್ನು ಒದಗಿಸುತ್ತದೆ.[18] ಒಂದು ಕಾಲದ ಜನಜೀವನ ಇಷ್ಟರ ಮಟ್ಟಿಗೆ ಒಂದು ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವುದು ಕನ್ನಡದಲ್ಲಿ ಅತ್ಯಪೂರ್ವ.

ನಯಸೇನನು ಸಮಾಜವನ್ನು ಕಂಡಿರುವ ಬಗೆಯನ್ನು ಎರಡು ದೃಷ್ಟಿಯಿಂದ ನೋಡಬಹುದು. ಒಂದು—ತನ್ನ ಸುತ್ತಮುತ್ತಣ ಜನರ ಭಾಷೆಯ ವೈಶಿಷ್ಟ್ಯ, ವೈವಿಧ್ಯ, ಸೊಗಸು, ಚಾಟೂಕ್ತಿಗಳನ್ನು ತೆರೆದ ಕಿವಿಯಿಂದ ಕೇಳಿ, ಅನುಭವಿಸಿ, ಅವುಗಳನ್ನು ತನ್ನ ಚಂಪೂ ಕಾವ್ಯದಲ್ಲಿ ಬಳಸಿರುವ ರೀತಿ ; ಮತ್ತೊಂದು—ಜನ ಬಾಳಿ ಬದುಕುತ್ತಿದ್ದ ರೀತಿ, ಅವರ ಸಮಸ್ಯೆಗಳು, ಸಂಗತಿಗಳು, ಅವರ ಜೀವನದ ಸರಸ ವಿರಸ ವೈಪರೀತ್ಯ ಇತ್ಯಾದಿಗಳನ್ನು ಅಲ್ಲಲ್ಲಿ ತಂದಿರುವುದು.

ನುಡಿದರೆ ಗಾದೆ, ಚಾಟೂಕ್ತಿಗಳ ಸುರಿಮಳೆ ಕೆಲವರ ಸಂಭಾಷಣೆಯಲ್ಲಿ ಕಾಣುತ್ತದೆ. ನಯಸೇನ ಅಂತಹ ವ್ಯಕ್ತಿಗಳಲ್ಲೊಬ್ಬ. ಅವನ 'ಧರ್ಮಾಮೃತ'ವೊಂದು ಹಳೆಯ ಕನ್ನಡ ಗಾದೆಗಳ ಸಣ್ಣ ಕೋಶವೇ ಸರಿ. ಅವನು ಉದ್ಧರಿಸಿರುವ ಗಾದೆಗಳ ಸೊಗಸಿನ ಪ್ರಶ್ನೆ ಹಾಗಿರಲಿ, ಅವುಗಳ ಒಂದು ಪಟ್ಟಿಯೇ ನಮಗೆ ಆಶ್ಚರ್ಯವುಂಟುಮಾಡುತ್ತದೆ. "ಮೆಟ್ಟಿತ್ತಲತ್ತ ಚಪ್ಪಟಿ"; "ಪರದರೊಳ್ಮರುಳಿಲ್ಲ, ಸೂಳೆ ಸಾಧುವಲ್ಲ"; "ಮೋಹದಾಕೆ ಮೋತಿಯಾದಳ್"; "..................ಡೊಂಕೆಂಬ ನಾಯ ಬಾಲದ ತೆಱದಿಂ"; "ಮುನ್ನಂ ಬಂದ ಕಿವಿಯಿಂದಂ ಬೞಿಕಂ ಬಂದ ಕೋಡು ಕೂರಿತ್ತು"; "ಅಬ್ಬೆ ಬೇಟ್ಟುದವರೆಯ ಪಿಟ್ಟು"; "ನಮ್ಮ ಸೆಟ್ಟಿಯ ಮಾತೊಳ್ಳಿದುವು ಬಳ್ಳಂ ಕಿಱಿದು"; "ಕೊರಲ ಸತ್ವಮಿಲ್ಲದೊರಲಂ ನುಂಗಿದರ್"; "ಕಾಲೂರ್ಗೆ ಮೆಟಿಸು ಬೆಲ್ಲಂ"—ಇಂತಹ ನೂರಾರು ಗಾದೆಗಳ ಸಮೂಹವನ್ನೇ ಅಲ್ಲಿ ಕಾಣುತ್ತೇವೆ. ಈ ಗಾದೆಗಳಲ್ಲಿ ಈಗಲೂ ಹಲವು ಜೀವಂತವಾಗಿದ್ದು ಆಡುಮಾತಿನಲ್ಲಿ ಬಳಕೆಗೊಳ್ಳುವುದನ್ನು ಕಾಣಬಹುದು. ಅವನು ಹೇಳುವ ಗಾದೆಯಂತಹ ಮಾತುಗಳೆಲ್ಲವೂ ಗಾದೆಗಳಾಗಿದ್ದಿರಲಾರವು; ಎಷ್ಟೋ ಅವನ ಸ್ವಂತ ಸೃಷ್ಟಿಯಾಗಿದ್ದಿರಬಹುದು, ಮುಂದೆ ಗಾದೆಯ ಮಾತುಗಳಾಗಿ ಬಳಕೆಗೆ ಬಂದಿರಬಹುದು. ಗಾದೆಯ ಮಾತುಗಳನ್ನು ಸೃಷ್ಟಿಸುವ ಶಕ್ತಿ ಕನ್ನಡದಲ್ಲಿ ಎಲ್ಲೋ ಕೆಲವರಿಗೆ ಮಾತ್ರವುಂಟು. ನಯಸೇನ ಮತ್ತು ಸರ್ವಜ್ಞರು ಅಂತಹ ಕವಿಗಳು.

---

18 "ನಯಸೇನನ ಕಥೆಗಳಲ್ಲಿ ನಮ್ಮನ್ನು ಮೋಹಿಸುವ ಪ್ರಬಲವಾದ ಅಂಶವೆಂದರೆ ಅಲ್ಲಿ ದೊರೆಯುವ ಜನಜೀವನದ ಚಿತ್ರ"—ರಂ. ಶ್ರೀ. ಮುಗಳಿ : ನಯಸೇನನ ಧರ್ಮಾಮೃತ (ತವನಿಧಿ, ಪು. ೯೨).

ಜನರ ಆಡುಮಾತಿನ ಶೈಲಿಯಲ್ಲಿ ನಾವು ಕಾಣುವ ಹಾಗೆ ಒಂದು ಪದಕ್ಕೆ ಸೇರಿಕೊಂಡಂತೆ ಪ್ರಾಸಕ್ಕೆ ಹೊಂದಿಕೊಳ್ಳುವಂತೆ ಅರ್ಥವಿಲ್ಲದ ಪದಗಳನ್ನು ತರುವುದರಲ್ಲಿ ನಯಸೇನನಿಗೆ ಯಾವ ಸಂಕೋಚವೂ ಇಲ್ಲ. "............ಧರೆಯೊಳ್ ಖೇಚರಿಯಲ್ಲ ನಾಂ ಗೀಚರಿಯೆ"; "ಅಜ್ಜಂ ಪಜ್ಜಂ; "ಸುಖಮುಂ ಗಿಖಮುಂ"; "ಜವನುಂ ಗಿವನುಂ ಕರ್ಮಮುಂ ಗಿರ್ಮಮುಂ ಬಿದಿಯುಂ ಗಿದಿಯುಂ........" ಇತ್ಯಾದಿ ಉಕ್ತಿಗಳಿಂದ ಕಾವ್ಯದ ಜಾನಪದಗುಣವು ದ್ವಿಗುಣವಾಗುವುದಲ್ಲದೆ, ಕಾವ್ಯಭಾಷೆಯು ಜನಭಾಷೆಗೆ ಅಥವಾ ಆಡುನುಡಿಗೆ ಸಮೀಪವಾಗುತ್ತದೆ; ಸಾಮಾನ್ಯ ಓದುಗರಿಗೆ ಕಾವ್ಯದ ವಿಷಯದಲ್ಲಿ ಹೆಚ್ಚು ಆಪ್ತತೆಯೂ ಆಸಕ್ತಿಯೂ ಬೆಳೆಯುತ್ತದೆ. ವಚನಕಾರರನ್ನು ಬಿಟ್ಟರೆ ಅವರಿಗಿಂತ ಹಿಂದೆ ಇಷ್ಟರಮಟ್ಟಿಗೆ ಕಾವ್ಯಭಾಷೆಯು ಜನಭಾಷೆಗೆ ಸಮೀಪವಾಗಿ ನಿಂತಿರಲಿಲ್ಲ; ಚಂಪೂ ಕವಿಗಳಲ್ಲೆಲ್ಲಾ ಈ ಕೆಲಸವನ್ನು ಮಾಡಿದವನು ನಯಸೇನನೊಬ್ಬನೇ ಎಂದು ಕಾಣುತ್ತದೆ. ಅವನ ಗದ್ಯದಲ್ಲಿ, ಕೆಲವೆಡೆ ಪದ್ಯದಲ್ಲಿಯೂ ಸಹ, ಆಡುಮಾತಿನ ಲಯ (Speech-rhythm) ಗೋಚರವಾಗುತ್ತದೆ.

ಅವನ ಕಾಲದಲ್ಲಿ ಜನರು ಕ್ಷುದ್ರವಸ್ತುಗಳಿಗೋ ಅಮಂಗಳ ವಸ್ತುಗಳಿಗೋ ಒಳ್ಳೆಯ ಹೆಸರುಗಳನ್ನಿಡುತ್ತಿದ್ದ ಸಂಪ್ರದಾಯವನ್ನು ಕವಿ ಒಂದೆರಡು ಕಡೆ ಸೂಚಿಸಿದ್ದಾನೆ.[20] ಅಂಗಾರಕವಾರವನ್ನು ಮಂಗಳವಾರವೆಂದು, ವಾಂತಿಯನ್ನು ಮೈಲಾರ ಎಂದು, ಹೊಲೆಯರ ಆಡನ್ನು ಮಾಣಿಕದೇವಿ ಎಂದು, ತೊತ್ತನ್ನು ಪಿರಿಯದೇವಿ ಎಂದು, ಎಮ್ಮೆಯನ್ನು ಮಹಾದೇವಿ ಎಂದು, ಹಳೆಯ ಹೆಂಚನ್ನು ಮಂಗಳ ಎಂದು ಕರೆಯುತ್ತಿದ್ದ ವಿಚಿತ್ರಪದ್ಧತಿಯನ್ನು ನಯಸೇನ ಹೆಸರಿಸಿದ್ದಾನೆ.

'ಧರ್ಮಾಮೃತ'ದಲ್ಲಿ ಕನ್ನಡಿಗರ ಬದುಕಿನ ಅನೇಕ ಅಪೂರ್ವಸಂಗತಿಗಳು ಪರಿಚಯವಾಗುತ್ತವೆ. ದಂತವೈದ್ಯದಲ್ಲಿ ಪ್ರಾಚೀನ ಕನ್ನಡಿಗರು ನಿಷ್ಣಾತರಾಗಿದ್ದರೆಂದೂ ಕೃತಕದಂತಗಳನ್ನು ಬಳಸುತ್ತಿದ್ದರೆಂದೂ ಅವನ ಕಾವ್ಯದಿಂದ ತಿಳಿದುಬರುತ್ತದೆ ('ಕಟ್ಟಿದ ಪಲ್ಲಂತೆ' ಎಂಬ ಉಕ್ತಿಯನ್ನು ನೋಡಿ, ೮.೯೪). ನಿಕ್ಷೇಪವಿದ್ದೆಡೆ ಮರದ ಬಿಳಿಲು ಎರಗುತ್ತದೆ, ಅಮೇಧ್ಯದ ಮೇಲೆ ಉಗುಳಿದರೆ ಗಂಟಲನೋವು ಬರುತ್ತದೆ, ಬೇತಾಳನ ಬಸಿರು ಬೆನ್ನಿಗೆ ಹತ್ತಿರುತ್ತದೆ ಎಂಬ ಜನರ ನಂಬಿಕೆಗಳನ್ನು ಹೆಸರಿಸಿದ್ದಾನೆ (ಈಗಲೂ ಜನರಲ್ಲಿ ಈ ನಂಬಿಕೆಗಳು ಹೋಗಿಲ್ಲ). ಮದುವೆಯಾಗುವತನಕ ಹೆಣ್ಣಾಗಲಿ ಗಂಡಾಗಲಿ ಹಲ್ಲನ್ನು ಉಜ್ಜಕೂಡದು ಎಂಬ ಸಾಮಾಜಿಕ ನಿಯಮವನ್ನು, ಧಾತುವಾದವನ್ನು ನಂಬಿ ಜನರು ಕೈಯಲ್ಲಿದ್ದ ಹಣವನ್ನು ಕಳೆದುಕೊಳ್ಳುತ್ತಿದ್ದ ಅಂಶವನ್ನು ಸೂಚಿಸಿದ್ದಾನೆ. ತನ್ನ ಕಾಲದ ಅನೇಕ

---

[20] ಇದನ್ನು 'Euphemism' ಎಂದು ಭಾಷಾವಿಜ್ಞಾನದಲ್ಲಿ ಕರೆಯುತ್ತಾರೆ.

Euphemism—"The substitution of a word of more pleasant connotation for one of unpleasant or disagreeble connotation" Mario A. Pei and Frank Gaynor: Dictionary of Linguistics.

ದೇವತೆಗಳನ್ನು ಹೆಸರಿಸಿರುವುದಲ್ಲದೆ ತನ್ನ ಕಾಲದಲ್ಲಿ ಪ್ರಸಿದ್ಧವಾಗಿದ್ದ ಅನೇಕ ಜೈನ ದೇವಸ್ಥಾನಗಳನ್ನು ಕೊಡುತ್ತಾನೆ. 'ಪಗರಣ'(ಸಂ. ಪ್ರಕರಣ)ಗಳ ವಿಷಯದಲ್ಲಿ ಅವನು ಕೊಡುವ ತುಂಡು ವಿಷಯಗಳನ್ನು ಜೋಡಿಸಿಕೊಂಡು ಒಂದು ಚಿತ್ರವನ್ನು ಕಟ್ಟಿಕೊಳ್ಳಲು ಸಾಧ್ಯ. ಪಗರಣಗಳು ಜನರು ವಿನೋದಕ್ಕಾಗಿ ಹಾಕುತ್ತಿದ್ದ ವೇಷ ಗಳು. ಪಗರಣಗಳು ಮುಖ್ಯವಾಗಿ ಹಾಸ್ಯಪ್ರಧಾನವಾಗಿದ್ದುವು; ಅವುಗಳನ್ನು ಜನ ನೋಡಿ ನಲಿದು ಆನಂದಿಸುತ್ತಿದ್ದರು; ಹೊಲೆಯರು ಬಡಿಯುತ್ತಿದ್ದ ಪರೆ ಅಥವಾ ಹರೆಗಳಿಗನುಗುಣವಾಗಿ ಪಗರಣಿಗರು ಕುಣಿಯುತ್ತಿದ್ದರು, ಜನರು ನೋಡಿ ನಗುತ್ತಿದ್ದರು; ಈ ಕುಣಿತಗಳು ಶಾಸ್ತ್ರೀಯವಾದ ನರ್ತನಗಳಿಂದ ಬೇರೆ, ಏಕೆಂದರೆ ಅವುಗಳಿಗೆ ಶಾಸ್ತ್ರೋಕ್ತವಾದ ಲಕ್ಷಣವಿದೆಯೇ ಇಲ್ಲವೇ ಎಂಬುದನ್ನು ನೋಡುತ್ತಿರ ಲಿಲ್ಲ ('ಲಕ್ಷಣಮಂ ನೋಡರ್'). ಪಗರಣಗಳಲ್ಲಿ ವೈಪರೀತ್ಯವೇ ಹೆಚ್ಚಾ ಗಿದ್ದಿತು; ರಾಜನ ಆನೆಗಳ ವೇಷಗಳನ್ನು ಹಾಕುತ್ತಿದ್ದರು; ವೇಷಗಳನ್ನು ಹಾಕುವವರಲ್ಲಿ ಕೆಲವರು ಗಡ್ಡಮೀಸೆ ಮುಂಡೆಗಳನ್ನು ಬೋಳಿಸಿಕೊಳ್ಳುತ್ತಿದ್ದರು (ಗಂಡಸರೇ ಸ್ತ್ರೀಯರ ವೇಷಗಳನ್ನು ಧರಿಸುತ್ತಿದ್ದರೆಂಬುದು ಇದರಿಂದ ಸೂಚಿತ ವಾಗುತ್ತದೆ); ಒಮ್ಮೆ ವೇಷವನ್ನು ಹಾಕಿಕೊಂಡವರು ಮೂರು ನಾಲ್ಕು ದಿನಗಳ ವರೆಗೆ ಅದೇ ವೇಷದಲ್ಲಿದ್ದು ಬಿಡುತ್ತಿದ್ದರು ("ಮೂಱು ದಿನದ ಪಗರಣಕ್ಕೆ ಗಡ್ಡ ಮೀಸೆ ಮುಂಡೆಯುಂ ಬೋಳಿಸಿಕೊಳ್ವಂತೆ"). ಇಷ್ಟು 'ಧರ್ಮಾಮೃತ'ದಿಂದ ಪಗರಣಗಳಿಗೆ ಸಂಬಂಧಿಸಿದಂತೆ ತಿಳಿದು ಬರುವ ವಿಷಯಗಳು. 'ವಡ್ಡಾರಾಧನೆ'ಯ ಪ್ರಕಾರ[21] ಬಾದುಬ್ಬೆಯ ಹಬ್ಬದ ದಿನ ಪಗರಣಗಳಂತಹ ವಿನೋದಗಳು ನಡೆಯುತ್ತಿದ್ದುವು.

ಹೀಗೆ ಪಗರಣಗಳು ಶುದ್ಧನಾಟಕಗಳಾಗಿರಲಿಲ್ಲ; ಅವು ವಿನೋದಕ್ಕಾಗಿ ಜನರು ಹಾಕುತ್ತಿದ್ದ ವೇಷಗಳು. ವೇಷಧಾರಿಗಳಾದವರು ಹಗಲು ಹೊತ್ತು ಊರಿನ ಬೀದಿಗಳಲ್ಲಿ ತಮ್ಮ ಕುಣಿತ ಚೇಷ್ಟೆಗಳಿಂದ ಜನರನ್ನು ರಂಜಿಸುತ್ತಿದ್ದರು. ಸಮಾಜದ ಸಾಮಾನ್ಯ ವರ್ಗದ ಜನ ಅವುಗಳಲ್ಲಿ ಪಾಲುಗೊಳ್ಳುತ್ತಿದ್ದುದರಿಂದ ಅವು ಲಕ್ಷಣಬದ್ಧವಾಗಿರುತ್ತಿರಲಿಲ್ಲ. ಪಗರಣಗಳಲ್ಲಿ ವಾಚಿಕಾಂಶ ಅಥವಾ ಸಂಭಾಷ ಣಾಂಶವು ಇದ್ದಿತೇ ಇಲ್ಲವೇ ಎಂಬುದು ಧರ್ಮಾಮೃತದಿಂದ ತಿಳಿಯದು; ಅಥವಾ ವೇಷಗಳ ಮೂಲಕ ಕಥೆಯೊಂದನ್ನು ನಿರೂಪಿಸುತ್ತಿದ್ದರೇ ಇಲ್ಲವೇ ಎಂಬುದೂ ತಿಳಿಯದು. ವಾಚಿಕಾಂಶ ಮತ್ತು ಕಥಾಂಶಗಳು ಈ ಪರಗಣಗಳಲ್ಲಿ ಇದ್ದಿದ್ದರೆ ಕೆಳವರ್ಗದ ಜನರ ನಾಟಕಗಳ ಸ್ಥೂಲರೂಪದ ಪರಿಚಯವಾಗುತ್ತಿದ್ದಿತು. ಪಗರಣ ಗಳಲ್ಲಿ ವಾಚಿಕಾಂಶವು ಇದ್ದಂತೆ ಕವಿರಾಜಮಾರ್ಗಕಾರನು ತಿಳಿಸಿದರೂ[22] ಈ

---

[21] 'ವಡ್ಡಾರಾಧನೆ' (ಸಂ. ಡಿ. ಎಲ್. ನರಸಿಂಹಾಚಾರ್, ೧೯೪೯,), ಪು. ೧೧೩.

[22] ಪಗರಣಗಳಲ್ಲಿ ಶ್ರುತದುಷ್ಟ, ಅರ್ಥದುಷ್ಟ, ಕಲ್ಪನೋಕ್ತಿಕಷ್ಟ ಎಂಬುವು ದೋಷ ಗಳಾಗುವುದಿಲ್ಲವೆಂದೂ ಏಕೆಂದರೆ ಇವು ಜನರನ್ನು ನಗಿಸುತ್ತವೆಯೆಂದೂ ಕವಿರಾಜಮಾರ್ಗ ಕಾರನ ಹೇಳಿಕೆ (ಕವಿರಾಜಮಾರ್ಗ, ೧. ೬೮).

ವಿಷಯವಾಗಿ ಖಚಿತವಾಗಿ ಏನು ಹೇಳಲೂ ಸಾಧ್ಯವಿಲ್ಲ. ಪಗರಣಗಳು ಬಹುಮಟ್ಟಿಗೆ ಈಗಿನ ರಂಸಾನ್ ಹಬ್ಬದ ವೇಷಗಳನ್ನು ಹೋಲುತ್ತವೆ. ಪ್ರಕೃತ ಲೇಖಕನು ಬಾಲಕನಾಗಿದ್ದಾಗ 'ಹಗಲುವೇಷ'ದವರನ್ನು ನೋಡಿದ್ದ ನೆನಪಿದೆ. ಅವರು ರಾಜಮನೆತನದವರ ವೇಷಗಳನ್ನು ಹಾಕಿಕೊಂಡೋ ಅಥವಾ ಸರ್ಕಾರದ ಅಧಿಕಾರಿಗಳ ವೇಷವನ್ನು ಹಾಕಿಕೊಂಡೋ ಇದ್ದಕ್ಕಿದ್ದಂತೆ ಒಂದು ಊರನ್ನು ಪ್ರವೇಶಿಸಿ ಆ ಊರಿನ ಜನರನ್ನು ದಂಗುಬಡಿಸಿಬಿಡುತ್ತಿದ್ದರು; ತಮ್ಮ ಅಭಿನಯ, ನಟನೆ, ಸಂಭಾಷಣೆಗಳಿಂದ ಊರಿನ ಜನರನ್ನು ನಗಿಸುತ್ತಿದ್ದರು. ಪೌರಾಣಿಕ ಪಾತ್ರಗಳನ್ನೂ ಹಾಕುತ್ತಿದ್ದುದುಂಟು. ಪಗರಣಗಳು ಇಂತಹ ಹಗಲು ವೇಷಗಳಾಗಿದ್ದಿರಬಹುದು.

'ಧರ್ಮಾಮೃತ'ದಲ್ಲಿ ಬರದೇ ಇರುವ ಸಾಮಾಜಿಕ ವಿಷಯಗಳೇ ಇಲ್ಲ. ವ್ಯಾಪಾರ, ಯುದ್ಧ, ಯುದ್ಧದ ಆಯುಧಗಳು, ಒಂದು ಕೋಟೆಯನ್ನೋ ಒಂದು ರಾಜ್ಯವನ್ನೋ ಗೆಲ್ಲುವತನಕ ವ್ರತಗಳನ್ನು ತೊಡುತ್ತಿದ್ದ ಯೋಧರು, ರಾಜ್ಯದ ಅಧಿಕಾರಿಗಳು, ವೇಶ್ಯೆಯರು, ವ್ಯವಸಾಯ, ಚಿತ್ರ ಮುಂತಾದ ಕಲೆಗಳು, ಹನ್ನೆರಡು ಕೋಲಿನ ಹರಿಗೋಲು ಮತ್ತು ಒಂದು ಕೋಲಿನ ದೋಣಿ, ನಾನಾ ರೀತಿಯ ವೃಕ್ಷಗಳು, ಪ್ರಾಣಿಗಳು, ಅಡುಗೆಗಳು, ದಿವ್ಯ (ordeals) ಮುಂತಾದ ಪದ್ಧತಿಗಳು, ಕುಂಟರು, ಕುರುಡರು, ಸಮಾಜದ ನಾನಾ ಜಾತಿಗಳು, ಅವರ ವೃತ್ತಿಗಳು, ನಾನಾ ಧಾರ್ಮಿಕ ಸಂಪ್ರದಾಯಗಳು ಇತ್ಯಾದಿ ಇತ್ಯಾದಿ ಅನೇಕಾನೇಕ ವಿಷಯಗಳು ಇದರಲ್ಲಿ ದೊರಕುತ್ತವೆ. ಹಿಂದಾಗಲೇ ಹೇಳಿದಂತೆ 'ಧರ್ಮಾಮೃತ'ವು ಸಾಮಾಜಿಕ ಇತಿಹಾಸದ ವಿದ್ಯಾರ್ಥಿಗೆ ಒಂದು ದೊಡ್ಡ ಗಣಿಯಂತಿದೆ.

೩

ಸಂಸ್ಕೃತ ಕಾವ್ಯಗಳಲ್ಲಿ ಮಾಲೋಪಮೆಯು ಸಾಕಷ್ಟು ಪ್ರಸಿದ್ಧವಾದುದಾಗಿದೆ. ಮಮ್ಮಟನ ಪ್ರಕಾರ ಒಂದು ಉಪಮೇಯಕ್ಕೆ ಹಲವು ಉಪಮಾನಗಳನ್ನು ತರುವುದೇ ಮಾಲೋಪಮೆ.[23] ಅದು ಎರಡು ಬಗೆಯಾದುದು. 'ಸಾಧಾರಣ ಧರ್ಮವು ಅಭಿನ್ನವಾಗಿರುವ' ಮತ್ತು 'ಸಾಧಾರಣ ಧರ್ಮವು ಭಿನ್ನವಾಗಿರುವ ಅನೇಕ ಉಪಮಾನಗಳನ್ನು ಒಂದೇ ಉಪಮೇಯದ ವರ್ಣನೆಗಾಗಿ ಕಲ್ಪಿಸುವುದೇ ಮಾಲೋಪಮೆ'.[24] ಇದಕ್ಕೆ ಅವನು ಕ್ರಮವಾಗಿ ಕೊಡುವ ನಿದರ್ಶನಗಳಿವು—

ಅನಯೇನೇವ ರಾಜ್ಯಶ್ರೀರ್ದೈನ್ಯೇನೇವ ಮನಸ್ವಿತಾ
ಮಮ್ಲೌ ಸಾಥ ವಿಷಾದೇನ ಪದ್ಮಿನೀವ ಹಿಮಾಂಭಸಾ ॥

---

23 "ಏಕಸ್ಯೈವ ಬಹೂಪಮಾನೋಪಾದಾನೇ ಮಾಲೋಪಮಾ"
—ಕಾವ್ಯಪ್ರಕಾಶ, ೧೦ನೆಯ ಉಲ್ಲಾಸ.

24 ಕನ್ನಡ ಕಾವ್ಯಪ್ರಕಾಶ, ಸಂಪುಟ II (ಅನು. ಡಾ. ಕೆ. ಕೃಷ್ಣಮೂರ್ತಿ), ಪು. ೧೮೧.

(ದುರ್ನಯದಿಂದ ರಾಜ್ಯಶ್ರೀ, ದೈನ್ಯದಿಂದ ಅಭಿಮಾನ, ಹಿಮದ ಕಣಗಳಿಂದ ಪದ್ಮಿನಿಯು ಬಾಡಿದಂತೆ ಅವಳು ದುಃಖದಿಂದ ಬಾಡಿದಳು)

ಜ್ಯೋತ್ಸ್ನೇವ ನಯನಾನಂದಃ ಸುರೇವ ಮದಕಾರಣಮ್
ಪ್ರಭುತೇವ ಸಮಾಕೃಷ್ಟಸರ್ವಲೋಕಾ ನಿತಂಬಿನೀ ||

(ಆ ನಿತಂಬಿನಿಯು ಬೆಳದಿಂಗಳಂತೆ ನಯನಾನಂದಳು, ಸುರೆಯಂತೆ ಮದ ಕಾರಣಳು, ಪ್ರಭುತ್ವದಂತೆ ಸರ್ವಲೋಕಾಕರ್ಷಳು).

ಮಾಲೋಪಮೆಯ ಸರಳರೂಪವನ್ನು ವಾಲ್ಮೀಕಿ ರಾಮಾಯಣದಲ್ಲಿ ಹಲವೆಡೆ ಕಾಣಬಹುದು. ಕೆಳಗಿನದು ಒಂದು ಮಾಲೋಪಮೆ—

ಹಂಸೋ ಯಥಾ ರಾಜಪಂಜರಸ್ಥಃ ಸಿಂಹೋ ಯಥಾ ಮಂದರಕಂದರಸ್ಥಃ
ವೀರೋ ಯಥಾ ಗರ್ವಿತಕುಂಜರಸ್ಥಶ್ಚಂದ್ರೋಽಪಿ ಬಭ್ರಾಜ ತಥಾಂಬರಸ್ಥಃ || [25]

ದೀರ್ಘವಾದ ಮಾಲೋಪಮೆಗಳನ್ನು ನಾವು ಕಾಣಬೇಕಾದರೆ ಬಾಣನ 'ಕಾದಂಬರಿ'ಗೋ ದಂಡಿಯ 'ದಶಕುಮಾರ ಚರಿತೆ'ಗೋ ಹೋಗಬೇಕು.[26] ನಯಸೇನನ ಮಾಲೋಪಮೆಗಳಿಗೆ ಮೂಲಪ್ರೇರಣೆ ಬಹುಶಃ ಅಂತಹ ಗದ್ಯ ಕಾವ್ಯಗಳು.

ಕನ್ನಡ ಸಾಹಿತ್ಯದಲ್ಲಿ ನಯಸೇನನಿಗೆ ವಿಶಿಷ್ಟಸ್ಥಾನವು ದೊರಕಿರುವುದು ಅವನ ಕೃತಿಯಲ್ಲಿ ಕಂಡುಬರುವ ಮಾಲೋಪಮೆಗಳಿಂದಲೇ. ನಮಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಮಾಲೋಪಮೆಗಳನ್ನು ತಂದಿರುವವನು ಇವನೊಬ್ಬನೇ. ಇಡೀ ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಸಂಖ್ಯೆಯಲ್ಲಿ ಉಪಮೆಗಳನ್ನು ಬಳಸಿರುವ ಕವಿ ಯೆಂದರೆ ನಯಸೇನನೇ.[27] ಅವನಿಗೆ ಉಪಮೆಗಳು ಧಾರಾಳವಾಗಿ ಹೊಳೆಯುತ್ತವೆ. ಒಂದು ವಸ್ತುವನ್ನು ವಿವರಿಸಲು ಹೊರಟಾಗ ಅದಕ್ಕೆ ಸದೃಶವಾದ ಹತ್ತಾರು ಉಪಮೆಗಳು ಮಾಲೆಮಾಲೆಯಾಗಿ ಅವನ ಪ್ರತಿಭೆಯಲ್ಲಿ ಮಿಂಚುತ್ತವೆ; ಅವೆಲ್ಲವನ್ನೂ ಬಳಸದೆ ವಿಧಿಯೇ ಇಲ್ಲ ಅಥವಾ ಬಳಸದೆ ಸುಮ್ಮನಿರುವುದು ಅವನ ಕೈಯಲ್ಲಿಲ್ಲ. ಚಟುಲತೆ (Spontaneity) ಅವನ ಉಪಮಾ ಪ್ರತಿಭೆಯ ಗುಣ.

---

[25] ವಾಲ್ಮೀಕಿ ರಾಮಾಯಣ—ಸುಂದರಕಾಂಡ, V. ೪.

[26] "Nayasēna was a champion of the dēśi style and his method of piling simile upon simile is reminiscent of the stylistic craft of Bāna"—D. L. Narasimhachar: Old Kannada Literature (Karnataka Darshana, P. 109).

[27] ಆದರೂ 'ರೂಪಕಸಾಮ್ರಾಜ್ಯಚಕ್ರವರ್ತಿ'ಯಾದ ನಾರಣಪ್ಪನಿಗೂ 'ಉಪಮಾ ಲೋಲ'ನಾದ ಲಕ್ಷ್ಮೀಶನಿಗೂ ದೊರಕಿರುವ ಪ್ರಾಶಸ್ತ್ಯ ನಯಸೇನನಿಗೆ ದೊರಕಲಾರದು. ಅದಕ್ಕೆ ಕಾರಣ ಮುಂದೆ ಸ್ಪಷ್ಟವಾಗುತ್ತದೆ.

ಕೆಳಗೆ ನಿದರ್ಶನಪ್ರಾಯವಾಗಿ ಒಂದೆರಡು ಮಾಲೋಪಮೆಗಳನ್ನು ಕೊಡುತ್ತೇವೆ—

"ಆ ಸಮ್ಯಗ್ದರ್ಶನಮಿಲ್ಲದೆ ಮುಕ್ತಿಶ್ರೀಯಂ ಪಡೆವೆನೆಂಬಾತಂ ಕಣ್ಣಿಲ್ಲದೆ ಕಾಣ್ಬೆನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ, ಸತಿಯಿಲ್ಲದೆ ಸುತರಂ ಪಡೆವೆನೆಂಬ, ಮತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮಂ ಬರೆವೆನೆಂಬ, ನೀರಿಲ್ಲದೆ ಕೂಟ ನಡುವೆನೆಂಬ, ಅಂಬಿಲ್ಲದೆ ಬಿಲ್ವಿಡಿವೆನೆಂಬ, ತೂಬಿಲ್ಲದೆ ಕೆಱೆಯಂ ಕಟ್ಟುವೆನೆಂಬ, ಕಾಲಿಲ್ಲದೆ ಪರಿವೆನೆಂಬ, ಕೀಲಿಲ್ಲದೆ ಪಡಿದೆಱೆವೆನೆಂಬ, ಘೈತ್ರಮಿಲ್ಲದೆ ಸಮುದ್ರದೊಳ್ ಪೋಪೆನೆಂಬ, ಗೋತ್ರಮಱಿಯದೆ ಕೂಸುಗುಡುವೆನೆಂಬ, ಕಿವಿಯಿಲ್ಲದೆ ಕೇಳ್ವೆನೆಂಬ, ಸವಿಯಿಲ್ಲದುಣ್ಬೆನೆಂಬ, ಕೆಯ್ಯಿಲ್ಲದೆ ಬೇಲಿಯಿಕ್ಕುವೆನೆಂಬ, ಬಾಗಿಲಿಲ್ಲದೆ ಪೊಗುವೆನೆಂಬ, ಧನಮಿಲ್ಲದಧಿಕನೆಂಬ, ವಾಹನಮಿಲ್ಲದೇರುವೆನೆಂಬ, ನಾಲಗೆಯಿಲ್ಲದೆ ನುಡಿವೆನೆಂಬ, ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ" (೧. ೬೭).

ಸಮ್ಯಗ್‌ದರ್ಶನದ ಸಹಾಯವಿಲ್ಲದೆ ಮೋಕ್ಷವನ್ನು ಪಡೆಯುವೆನೆಂದು ಭಾವಿಸುವವನು ಎಂತಹ ಮೂರ್ಖನೆಂದು ಹೇಳುವಾಗ ಹತ್ತಾರು ರೀತಿಯ ಮೂರ್ಖರನ್ನು ಹೋಲಿಕೆಗಾಗಿ ತರುತ್ತಾನೆ. ಇಲ್ಲಿ ಹೋಲಿಕೆಯಿರುವುದು ಮೂರ್ಖತನದಲ್ಲಿ ಮಾತ್ರ ಎಂಬುದು ಗಮನಾರ್ಹ.

ಕೆಳಗಿನದು ಇನ್ನೂ ಒಂದು ಸೊಗಸಾದ ಮಾಲೋಪಮೆ. ಐಶ್ವರ್ಯದ ಆಸೆಗಾಗಿ ಕೆಲವು ದಿನ ಮಾತ್ರ ಜೈನಸನ್ಯಾಸಿಯಾಗಿರಲು ಒಪ್ಪಿಕೊಂಡ ವಸುಭೂತಿಯು ತಲೆಯ ಕೂದಲನ್ನು ಕೀಳಿಸಿಕೊಂಡು ಲೋಚುಮಾಡಿಸಿಕೊಂಡಾಗ, ನೋವನ್ನು ತಾಳಲಾರದೆ 'ಸುಂಟಿ ತಿಂದ ಕೋಡಗದಂತೆ' ಉಮ್ಮಳಿಸಿ ತಳವೆಳಗಾದ ಚಿತ್ರವನ್ನು ಕವಿ ಹೀಗೆ ಕೊಟ್ಟಿದ್ದಾನೆ—"ಕುದುರೆಯೇರ್ದ ಕುಱುಂಬನಂತೆ ನಡುಗುತ್ತುಂ, ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ, ಬಿನ್ನಪಂಗೆಯ್ವೊಕ್ಕಲಿಗನಂತೆ ಬಿಕ್ಕುತ್ತುಂ, ಸಾಕ್ಷಿಯಿಲ್ಲದೆ ಸಾಲಂಗೊಟ್ಟೊಕ್ಕಲಿಗನಂತೆ ಸುಯ್ಯುತ್ತುಂ, ಸಿಕ್ಕಿದ ಕಳ್ಳನಂತೆ ಪಲವಂ ನೆನೆಯುತ್ತುಂ, ಗ್ರಹಪೀಡಿತನಂತೆ ತೊನೆಯುತ್ತುಂ, ಪೇನುಳ್ಳನಂತೆ ತಲೆಯಂ ತುಱಿಸುತ್ತುಂ, ಕೞುಸತ್ತಾವಿನಂತೆ ಮಱುಗುತ್ತುಂ, ಸೂಲವೇಱಿದನಂತೆ ಕಾಲಂ ನೀಡುತ್ತುಂ, ಕೊಟ್ವಿಡೆಯದನಂತೆ ಬಂಬಲ್ವಾಡುತ್ತುಂ, ಮುಳ್ವೊಕ್ಕವನಂತೆ ಕುಸಿಯುತ್ತುಂ, ಸೂಲೆಯುಳ್ಳವನಂತೆ ಕವಿದು ಬೀೞುತ್ತುಂ, ಮೋನಂಗೊಂಡ ಚಪಳನಂತುಮ್ಮಳಿಸುತ್ತುಂ......" (೧.೧೪೪).

ಈ ಮಾಲೋಪಮೆಯಲ್ಲಿ ನಯಸೇನನ ಬಹು ಸೂಕ್ಷ್ಮ ಪರಿಶೀಲನ ಶಕ್ತಿ ವ್ಯಕ್ತವಾಗಿದೆ. ದೈಹಿಕ ಯಾತನೆಯನ್ನೇ ಕಂಡರಿಯದೆ ಸುಖವಾಗಿದ್ದ ವಸುಭೂತಿಯು ಅಂತಹ ಯಾತನೆಗೆ ಒಳಗಾದಾಗ ಅವನ ದೇಹವೂ ಮನಸ್ಸೂ ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಇಲ್ಲಿವೆ. ಅವನ ಒಂದೊಂದು ದೈಹಿಕ ಚಲನೆಗೂ ಮನಸ್ಸಿನಲ್ಲಿ

ಕೆಳಗೆ ನಿದರ್ಶನಪ್ರಾಯವಾಗಿ ಒಂದೆರಡು ಮಾಲೋಪಮೆಗಳನ್ನು ಕೊಡುತ್ತೇವೆ—

"ಆ ಸಮ್ಯಗ್ದರ್ಶನಮಿಲ್ಲದೆ ಮುಕ್ತಿಶ್ರೀಯಂ ಪಡೆವೆನೆಂಬಾತಂ ಕಣ್ಣಿಲ್ಲದೆ ಕಾಣ್ಬೆನೆಂಬ, ಮಣ್ಣಿಲ್ಲದೆ ಬೆಳೆವೆನೆಂಬ, ಸತಿಯಿಲ್ಲದೆ ಸುತರಂ ಪಡೆವೆನೆಂಬ, ಮತಿಯಿಲ್ಲದೆ ಪರದುಗೆಯ್ವೆನೆಂಬ, ಕೇರಿಲ್ಲದೆ ಚಿತ್ರಮಂ ಬರೆವೆನೆಂಬ, ನೀರಿಲ್ಲದೆ ಕೂಟಿ ನಡುವೆನೆಂಬ, ಅಂಬಿಲ್ಲದೆ ಬಿಲ್ವಿಡಿವೆನೆಂಬ, ತೂಬಿಲ್ಲದೆ ಕೆಱೆಯಂ ಕಟ್ಟುವೆನೆಂಬ, ಕಾಲಿಲ್ಲದೆ ಪರಿವೆನೆಂಬ, ಕೀಲಿಲ್ಲದೆ ಪಡಿದೆಱೆವೆನೆಂಬ, ಛೈತ್ರಮಿಲ್ಲದೆ ಸಮುದ್ರದೊಳ್ ಪೋಪೆನೆಂಬ, ಗೋತ್ರಮಱಿಯದೆ ಕೂಸುಗುಡುವೆನೆಂಬ, ಕಿವಿಯಿಲ್ಲದೆ ಕೇಳ್ವೆನೆಂಬ, ಸವಿಯಿಲ್ಲದುಣ್ಬೆನೆಂಬ, ಕೆಯ್ಯಿಲ್ಲದೆ ಬೇಲಿಯಿಕ್ಕುವೆನೆಂಬ, ಬಾಗಿಲಿಲ್ಲದೆ ಪೊಗುವೆನೆಂಬ, ಧನಮಿಲ್ಲದಧಿಕನೆಂಬ, ವಾಹನಮಿಲ್ಲದೇರುವೆನೆಂಬ, ನಾಲಗೆಯಿಲ್ಲದೆ ನುಡಿವೆನೆಂಬ, ಪಱುಗೋಲಿಲ್ಲದೆ ತೊಱೆಯಂ ಪಾಯ್ವೆನೆಂಬ ಪಚ್ಚಪಸಿಯೆಗ್ಗನಂ ಪೋಲ್ಕುಂ" (೧. ೬೭).

ಸಮ್ಯಗ್‌ದರ್ಶನದ ಸಹಾಯವಿಲ್ಲದೆ ಮೋಕ್ಷವನ್ನು ಪಡೆಯುವೆನೆಂದು ಭಾವಿಸುವವನು ಎಂತಹ ಮೂರ್ಖನೆಂದು ಹೇಳುವಾಗ ಹತ್ತಾರು ರೀತಿಯ ಮೂರ್ಖರನ್ನು ಹೋಲಿಕೆಗಾಗಿ ತರುತ್ತಾನೆ. ಇಲ್ಲಿ ಹೋಲಿಕೆಯಿರುವುದು ಮೂರ್ಖತನದಲ್ಲಿ ಮಾತ್ರ ಎಂಬುದು ಗಮನಾರ್ಹ.

ಕೆಳಗಿನದು ಇನ್ನೂ ಒಂದು ಸೊಗಸಾದ ಮಾಲೋಪಮೆ. ಐಶ್ವರ್ಯದ ಆಸೆಗಾಗಿ ಕೆಲವು ದಿನ ಮಾತ್ರ ಜೈನಸನ್ಯಾಸಿಯಾಗಿರಲು ಒಪ್ಪಿಕೊಂಡ ವಸುಭೂತಿಯು ತಲೆಯ ಕೂದಲನ್ನು ಕೀಳಿಸಿಕೊಂಡು ಲೋಚುಮಾಡಿಸಿಕೊಂಡಾಗ, ನೋವನ್ನು ತಾಳಲಾರದೆ 'ಸುಂಟಿ ತಿಂದ ಕೋಡಗದಂತೆ' ಉಮ್ಮಳಿಸಿ ತಳವೆಳಗಾದ ಚಿತ್ರವನ್ನು ಕವಿ ಹೀಗೆ ಕೊಟ್ಟಿದ್ದಾನೆ—"ಕುದುರೆಯೇರ್ದ ಕುಱುಂಬನಂತೆ ನಡುಗುತ್ತುಂ, ಪೆಣನಂ ಕಂಡ ಪಂದೆಯಂತೆ ಕಣ್ಣಂ ಮುಚ್ಚುತ್ತುಂ, ಬಿನ್ನಪಂಗೆಯ್ವೊಕ್ಕಲಿಗನಂತೆ ಬಿಕ್ಕುತ್ತುಂ, ಸಾಕ್ಷಿಯಿಲ್ಲದೆ ಸಾಲಂಗೊಟ್ಟೊಕ್ಕಲಿಗನಂತೆ ಸುಯ್ಯುತ್ತುಂ, ಸಿಕ್ಕಿದ ಕಳ್ಳನಂತೆ ಪಲವಂ ನೆನೆಯುತ್ತುಂ, ಗ್ರಹಪೀಡಿತನಂತೆ ತೊನೆಯುತ್ತುಂ, ಪೇನುಳ್ಳನಂತೆ ತಲೆಯಂ ತುಱಿಸುತ್ತುಂ, ಕಱುಸತ್ತಾವಿನಂತೆ ಮಱುಗುತ್ತುಂ, ಸೂಲವೇಱಿದನಂತೆ ಕಾಲಂ ನೀಡುತ್ತುಂ, ಕೊಟ್ವಿಡೆಯುದನಂತೆ ಬಂಬಲ್ವಾಡುತ್ತುಂ, ಮುಳ್ಳೊಕ್ಕವನಂತೆ ಕುಸಿಯುತ್ತುಂ, ಸೂಲೆಯುಳ್ಳವನಂತೆ ಕವಿದು ಬೀೞುತ್ತುಂ, ಮೋನಂಗೊಂಡ ಚಪಳನಂತುಮ್ಮಳಿಸುತ್ತುಂ......" (೧.೧೪೪).

ಈ ಮಾಲೋಪಮೆಯಲ್ಲಿ ನಯಸೇನನ ಬಹು ಸೂಕ್ಷ್ಮ ಪರಿಶೀಲನ ಶಕ್ತಿ ವ್ಯಕ್ತವಾಗಿದೆ. ದೈಹಿಕ ಯಾತನೆಯನ್ನೇ ಕಂಡರಿಯದೆ ಸುಖವಾಗಿದ್ದ ವಸುಭೂತಿಯು ಅಂತಹ ಯಾತನೆಗೆ ಒಳಗಾದಾಗ ಅವನ ದೇಹವೂ ಮನಸ್ಸೂ ವ್ಯಕ್ತಪಡಿಸಿದ ಪ್ರತಿಕ್ರಿಯೆಗಳು ಇಲ್ಲಿವೆ. ಅವನ ಒಂದೊಂದು ದೈಹಿಕ ಚಲನೆಗೂ ಮನಸ್ಸಿನಲ್ಲಿ

ಮೂಡಿದ ಒಂದೊಂದು ಭಾವಕ್ಕೂ ಒಂದೊಂದು ಉಪಮೆಯನ್ನು ಕೊಟ್ಟು ಅವನ ದೈಹಿಕ ಮತ್ತು ಮಾನಸಿಕ ಯಾತನೆಗಳು ಎದ್ದು ಕಾಣುವಂತೆ ಕವಿ ಮಾಡಿದ್ದಾನೆ. ಅದೇ ವಸುಭೂತಿಯು ಮುಂದೆ ಬಾಯಾರಿ ಬಸವಳಿದಾಗ ಅನುಭವಿಸಿದ ಕಷ್ಟ ವನ್ನೂ (೧.೧೭೦) ಇಷ್ಟೇ ಮಾರ್ಮಿಕವಾಗಿ ಕವಿ ಚಿತ್ರಿಸಿದ್ದಾನೆ.

ಸಾಮಾನ್ಯವಾಗಿ ಮಾಲೋಪಮೆಗಳಲ್ಲಿ ಕಂಡುಬರುವ ಉಪಮೆಗಳು ಬಹು ಸರಳ. ಅವು ಎಷ್ಟು ಸರಳವೆಂದರೆ ಆ ಮಾಲೆಗೆ ಇನ್ನೂ ಹಲವನ್ನು ವಾಚಕರು ಸೇರಿಸಬಹುದು; ಹಾಗೆ ಸೇರಿಸಿಯೂ ಇದ್ದಾರೆ. ಇದರಿಂದಲೇ 'ಧರ್ಮಾಮೃತ' ದಲ್ಲಿ ಪಾಠಾಂತರಗಳೂ ಅಧಿಕಪಾಠಗಳೂ ಗೋಚರವಾಗುವುದು. ಧರ್ಮಾ ಮೃತವು ಜನಪ್ರಿಯ ಕಾವ್ಯವಾಗಿದ್ದಿತೆಂಬುದಕ್ಕೆ ಇದು ಒಂದು ಪ್ರಮಾಣ.[28]

ಮಾಲೋಪಮೆಗಳಲ್ಲಿ ಬರುವ ಉಪಮೆಗಳು ಬಹುಪಾಲು ಅಂಶೋಪಮೆಗಳು, ಪೂರ್ಣೋಪಮೆಗಳಲ್ಲ. ಉಪಮಾನ ಉಪಮೇಯಗಳಿಗೆ ಯಾವುದೋ ಒಂದು ಅಂಶದಲ್ಲಿ ಮಾತ್ರ ಸಾದೃಶ್ಯವಿರುತ್ತದೆ. ಇನ್ನು ಕೆಲವು ಕಡೆ ವೈದೃಶ್ಯವೇ ಪ್ರಧಾನ ವಾಗಿರುವ 'ಉಪಮೆ'ಗಳನ್ನು ತಂದಿರುವುದೂ ಉಂಟು. ಉದಾಹರಣೆಗೆ— "ಋಷಿಯರ ಗುಣಮಂ ಪೇಟ್ವೊಡೆ—ಪಾದರಿಗೆಯ ದೂದವಿಯಂತೆ ಪೆಱರಂ ಸಂಕೇತಂಗೊಳಿಸದೆ, ಮನ್ನೆಯರಾಳಂತೆ ಕೋಳಿಂಗಾಸೆಗೆಯ್ಯದೆ, ಬಯಲ ನೀರಂತೆ ಮಾರ್ಗಂ ಬಿಟ್ಟು ನಡೆಯದೆ........ನೀರೊಳ್ಪೊಕ್ಕೆಣ್ಣೆಯಂತೆ ಪೆಱರ ದೋಷಮಂ ಪಳಪದೆ...." (೫.೯೯). ಋಷಿಗಳ ಗುಣವು ಹೇಗಿರುತ್ತದೆ ಎಂಬುದನ್ನಲ್ಲ ಇಲ್ಲಿ ಹೇಳುತ್ತಿರುವುದು, ಹೇಗಿರುವುದಿಲ್ಲ ಎಂಬುದನ್ನು ಹೇಳುವುದು ಈ ಉಪಮೆಗಳ ಉದ್ದೇಶ. ಕೆಲವೆಡೆ ಹ್ರಸ್ವವಾಗಿರುವ ಉಪಮೆಗಳ ಮಾಲೆ ಇದ್ದರೆ ಕೆಲವೆಡೆ ದೀರ್ಘವಾಗಿರುವ ಉಪಮೆಗಳ ಮಾಲೆಯನ್ನೇ ನೆಯ್ಯುತ್ತಾನೆ—" ಹಣತೆಯೊಳ್ ಕೂಡಿ ಬತ್ತಿಯಿಂದೆಣ್ಣೆಯಿಂದಂ ಬೆಂಕಿಯಿಂದಂ ಬೆಳಗಿಂದಂ ಸೊಡರೆಂತೊಪ್ಪುಗುಂ.... ರೂಪಿನೊಡಗೂಡಿ ವಸ್ತ್ರದಿಂ ತಿಳಕದಿಂ ತೊಡವಿಂ ಕಾಡಿಗೆಯಿಂ ಸ್ತ್ರೀಯೆಂತೊಪ್ಪುಗುಂ, ಬೆಳ್ದಿಂಗಳೊಡಗೂಡಿ ತಂಗಾಳಿಯಿಂದುಯ್ಯಲ್ಗಳಿಂ ವಿಲಾಸದಿಂ ತಿಳಿಗೊಳಂಗಳಿಂ ವಸಂತಮಾಸಮೆಂತೊಪ್ಪುಗುಮಂತೆ ಸಮ್ಯಕ್ತ್ವದೊಳ್ ಕೂಡಿ ಕೊಲ್ಲದ ಪುಸಿಯದ ಪಾದರಮಿಲ್ಲದ ವ್ರತಂಗಳಿಂದಂ ಶ್ರಾವಕನುಮೊಪ್ಪುವುದು." ಹೀಗೆ ಮಾಲೋಪಮೆ ಗಳಲ್ಲಿಯೂ ತಕ್ಕಮಟ್ಟಿನ ವೈವಿಧ್ಯವನ್ನು ತರಲು ಯತ್ನಿಸಿದ್ದಾನೆ.

ವಾಸ್ತವ ಸಂಗತಿಯೇನೆಂದರೆ ಕಾವ್ಯಾರಂಭದಲ್ಲಿ ನಾಲ್ಕಾರು ಮಾಲೋಪಮೆ

---

[28] ಎ. ಆರ್. ಕೃಷ್ಣಶಾಸ್ತ್ರೀ: ಧರ್ಮಾಮೃತ, II, ಮುನ್ನುಡಿ, ಪು. xii—"....ಈ ಗ್ರಂಥವು ಕುಮಾರವ್ಯಾಸಭಾರತ, ತೊರವೆಯ ರಾಮಾಯಣ ಮುಂತಾದ ಗ್ರಂಥಗಳಂತೆ ಜನ ಸಾಮಾನ್ಯರಂಜಕವಾಗಿದ್ದಂತೆ ತೋರುತ್ತದೆ. ಇವುಗಳಲ್ಲಿ ಕಂಡುಬರುವ ಪಾಠಭೇದಗಳೂ, ಅಧಿಕಪಾಠಗಳೂ, ಪ್ರಕ್ಷೇಪಗಳೂ ಈ ಗ್ರಂಥಗಳು ಜನರಲ್ಲಿ ಬಹಳವಾಗಿ ಬಳಕೆಯಲ್ಲಿದ್ದಿರ ಬೇಕೆಂಬುದಕ್ಕೆ ಸಾಕ್ಷಿಗಳಾಗಿವೆ."

ಗಳನ್ನು ಓದಿಯಾದ ಮೇಲೆ, ಅವುಗಳ ವಿಷಯದಲ್ಲಿ ನಮ್ಮ ವಿಸ್ಮಯವು ಸ್ತಬ್ಧಗೊಂಡ ಬಳಿಕ, ಅವುಗಳನ್ನು ಕುರಿತು ವಿಚಾರಮಾಡಲು ಮನಸ್ಸು ತೊಡಗುತ್ತದೆ. ಮೊಟ್ಟೆಗಳನ್ನು ಕಚ್ಚಿಕೊಂಡು ಗೂಡಿಂದ ಹೊರಹೊರಡುವ ಇರುವೆಗಳ ಸಾಲಂತೆ, ಮಳೆಗಾಲದಿಂದ ಹುತ್ತದಿಂದ ಮೇಲೇಳುವ ಚಿಟ್ಟೆಗಳ ಪರಂಪರೆಯಂತೆ ನಯಸೇನನ ಉಪಮೆಗಳು. ಅವು ಮಂತ್ರಗಾರನು ತನ್ನ ಬಾಯಿಂದ ಹೊರತೆಗೆಯುವ ಸಾಮಾನುಗಳ ಸಾಲಿನಂತೆ ನಮ್ಮನ್ನು ವಿಸ್ಮಯಗೊಳಿಸುತ್ತವೆ. ಆದರೂ ನಮ್ಮ ಮುಂದೆ ಏಳುವ ಪ್ರಶ್ನೆ ಇದು—ಈ ಉಪಮಾನಗಳು ಎಷ್ಟರಮಟ್ಟಿಗೆ ಉಚಿತ? ಕಾವ್ಯಕ್ಕೆ ಎಷ್ಟರಮಟ್ಟಿಗೆ ಹೊಂದಿಕೊಂಡಿವೆ? ಇಷ್ಟು ಉಪಮೆಗಳು ಆವಶ್ಯಕವೇ? ಕಲೆಯ ದೃಷ್ಟಿಯಿಂದ ಸಂಯಮವು ಆವಶ್ಯಕವಲ್ಲವೇ?

ಮೇಲಿನ ಪ್ರಶ್ನೆಗಳಿಗೆ ಉತ್ತರ ಕೊಡುವುದು ಕಷ್ಟವೇ. ಅಲ್ಲದೆ ಎಲ್ಲರ ಉತ್ತರಗಳೂ ಒಂದೇ ರೀತಿಯಾಗಿರುವುದಿಲ್ಲ. ನಯಸೇನ ಉಪಮೆಗಳ ದುಂದುಗಾರ. ಒಂದು ಕಟ್ಟುವ ಕಡೆ ಹತ್ತು ಕಟ್ಟುವುದು ಅವನ ಸ್ವಭಾವ. ಅವನು ವಾಚಾಳಿಯೂ ಹೌದು. ಕಾವ್ಯಪ್ರಪಂಚದಲ್ಲಿ ಮಿತವಲ್ಲದ್ದು ಹಿತವಾಗಿ ಪರಿಣಮಿಸುವುದು ಕಷ್ಟ.[29] ಪಂಪನ ದೇಸಿಯನ್ನೂ ಮೃದುವಚನವನ್ನೂ ಅನುಕರಿಸಿದ ಅನುಸರಿಸಿದ ಕವಿಯು ಅವನ 'ಹಿತಮಿತ' ವಚನವನ್ನೂ [30] ಅನುಕರಿಸಿದ್ದರೆ ಚನ್ನಾಗಿದ್ದಿತು ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಐಶ್ವರ್ಯ ಯಥೇಷ್ಟವಾಗಿದ್ದು ಹಣವನ್ನು ನಿರ್ಲಕ್ಷ್ಯದಿಂದ ಕಾಣುವ ಶ್ರೀಮಂತನೊಬ್ಬನು ಎತ್ತರದಲ್ಲಿ ನಿಂತುಕೊಂಡು ನಾಣ್ಯಗಳನ್ನು ಎರಚಿದಾಗ ಅವುಗಳು ಕೆಲವು ದಾನಕ್ಕೆ ನಿಜವಾಗಿಯೂ ಪಾತ್ರರಾಗಿರುವ ವ್ಯಕ್ತಿಗಳ ಕೈಗೆ ಬೀಳಲೂ ಬಹುದು. ಹಾಗೆ ಮಾಲೋಪಮೆಗಳಲ್ಲಿ ಕೆಲವು ಆಯಾ ಸನ್ನಿವೇಶಗಳಿಗುಚಿತವಾಗಿ ಪರಿಣಮಿಸಿ ಸಾರ್ಥಕ್ಯವನ್ನು ಪಡೆಯಬಹುದು.

---

[29] ಹರಿಹರ ಕುಮಾರವ್ಯಾಸರಂತಹ ಆವೇಶವೇ ಪ್ರಧಾನಗುಣವುಳ್ಳ ಕವಿಗಳಾದರೆ ಅವರಲ್ಲಿ ಸ್ವಲ್ಪ ಹೆಚ್ಚು ಮಾತುಗಳು ಬಂದರೂ ಅದು ಸಹ್ಯವೂ ಕ್ಷಮ್ಯವೂ ಆಗುವುದಲ್ಲದೆ ಒಮ್ಮೊಮ್ಮೆ ಭೂಷಣವೂ ಆವಶ್ಯಕವೂ ಆಗುತ್ತದೆ. ಅವರ ಹುಚ್ಚು ಆವೇಶ, ಉತ್ಸಾಹ, ಅದಮ್ಯವಾದ ಭಾವೋತ್ಕರ್ಷಗಳು ಅಭಿವ್ಯಕ್ತವಾಗಬೇಕಾದರೆ ಒಮ್ಮೊಮ್ಮೆ ಹೆಚ್ಚು ಮಾತುಗಳೇ ಬರಬೇಕಾಗುತ್ತದೆ. ಆದರೂ ಇವರಲ್ಲಿ ಮಾತುಗಳು ಹೆಚ್ಚು ಎಂಬ ಟೀಕೆಗಳು ವಿಮರ್ಶಕರಿಂದ ಬಂದಿರುವುದುಂಟು. ಉದಾಹರಣೆಗೆ, 'ಪದವಿಟ್ಟಳುಪದೊಂದಗ್ಗಳಿಕೆ' ಎಂಬ ಕುಮಾರವ್ಯಾಸನ ಉಕ್ತಿಯನ್ನು ವಿಮರ್ಶಿಸುತ್ತ, ಪ್ರೊ. ಎಸ್. ವಿ. ರಂಗಣ್ಣನವರು ಹೀಗೆ ಹೇಳುತ್ತಾರೆ— "....ಆ ಅಗ್ಗಳಿಕೆ ಬರಿಯ ಭ್ರಾಂತಿಯೆಂದು ಆವನಿಗೆ ತಿಳಿಯದು. ಪದವನ್ನೇ ಅಲ್ಲ, ಪಂಕ್ತಿಯನ್ನೇ ಅಲ್ಲ, ಪರಿಚ್ಛೇದವನ್ನೂ ತೊಡೆದುಹಾಕಿದ್ದರೆ ಅವನ ಖ್ಯಾತಿ ಇನ್ನೂ ಹೆಚ್ಚುತ್ತಿತ್ತು" (ಶೈಲಿ, I, ಪು. ೧೩೪).

[30] ಕದಲೀಗರ್ಭಶ್ಯಾಮಂ | ಮೃದುಕುಟಿಲಶಿರೋರುಹಂ ಸರೋರುಹವದನಂ |
ಮೃದುಮಧ್ಯಮ ತನು ಹಿತಮಿತ| ಮೃದುವಚನಂ ಲಲಿತ ಮಧುರ ಸುಂದರ ವೇಷಂ||
(ಆದಿಪುರಾಣ, ೧-೨೯).

ಉಪಮೆ ತನಗೆ ತಾನೇ ಸುಂದರವಾದುದಾದರೂ ವಾಸ್ತವವಾಗಿ ಅದಕ್ಕೆ ಪ್ರತ್ಯೇಕ ಅಸ್ತಿತ್ವವೇ ಇಲ್ಲ. ಅದು ತನ್ನ ಚೆಲುವನ್ನೂ ತಿರುಳನ್ನೂ ಉಪಮೇಯಕ್ಕೆ ಅರ್ಪಿಸಿಕೊಂಡು ಅದನ್ನು ಉಜ್ವಲವಾಗಿಸುವುದರಲ್ಲಿ ತನ್ನ ಸಾರ್ಥಕ್ಯವನ್ನು ಕಂಡುಕೊಳ್ಳಬೇಕು. ಅದು ಕಾವ್ಯದಿಂದ ಪ್ರತ್ಯೇಕಗೊಂಡು ನಿಲ್ಲಬಾರದು. ಆದರೂ ಒಮ್ಮೊಮ್ಮೆ ಒಂದು ಬಹು ಸುಂದರವಾದ ಉಪಮೆ ತನ್ನ ಕಾಂತಿಯಿಂದಲೇ ಸಹೃದಯನನ್ನು ಆಕರ್ಷಿಸಿ ಅವನ ಮನಸ್ಸಿನಲ್ಲಿ ತಾನೇ ತಾನಾಗಿ ಉಳಿಯಬಹುದು. ನಿಜವಾದ ಸಂಗತಿ ಹೀಗಿರುವುದರಿಂದ ಹತ್ತಾರು ಉಪಮೆಗಳು—ತೊಂಬತ್ತೊಂದು ಉಪಮೆಗಳಿರುವ ಒಂದು ಮಾಲೋಪಮೆಯಿದೆ (೫.೯೯)—ತಮ್ಮ ತಿರುಳನ್ನೆಲ್ಲ ಒಂದು ಉಪಮೇಯಕ್ಕೆ ಸಮರ್ಪಿಸುವಂತೆ ಮಾಡುವುದು ಕಷ್ಟ. ಒಂದು ಉಪಮೇಯವು ಅಷ್ಟು ಉಪಮಾನಗಳನ್ನು ತಡೆದುಕೊಳ್ಳುವುದೂ ಕಷ್ಟವೇ. ಒಂದು ಮಾಲೋಪಮೆಯ ಮೊದಲ ಮೂರು ನಾಲ್ಕು ಉಪಮೆಗಳನ್ನು ಓದುವ ಹೊತ್ತಿಗೆ ಉಪಮೇಯವು ಮರೆತುಹೋಗಿ, ಅಥವಾ ಮುಂದೆ ಬರಲಿರುವ ಉಪಮೇಯದ ಅಸ್ತಿತ್ವವು ನಮ್ಮ ಮನಸ್ಸಿನಿಂದ ಅಳಿಸಿಹೋಗಿ, ಉಪಮೆಗಳಿಗಿರುವ ಪರಸ್ಪರ ಸಾದೃಶ್ಯದ ಕಡೆಗೆ, ಉಪಮೆಗಳನ್ನು ಕೊಟ್ಟಿರುವ 'ಜಾಣ್ಮೆ'ಯ ಕಡೆಗೆ, ಉಪಮೆಗಳ ವಿನೂತನತೆಯ ಕಡೆಗೆ, ಅವುಗಳಲ್ಲಿ ಕಂಡುಬರುವ ಜನಜೀವನದ ಕಡೆಗೆ ಗಮನಹೋಗುತ್ತದೆ. ಹೀಗೆ ಮಾಲೋಪಮೆಯ ಆದಿಯಲ್ಲಿಯೋ ಅಂತ್ಯದಲ್ಲಿಯೋ ಬರುವ ಉಪಮೇಯವು ಹಲವು ಸಾರಿ ಪುಷ್ಟಗೊಳ್ಳದೆ ನಿರಲಂಕೃತವಾಗಿಯೇ ಉಳಿದುಬಿಡುವ ಸಂಭವವಿರುತ್ತದೆ. ಮಾಲೋಪಮೆಗಳು ಕಾವ್ಯದ ಒಟ್ಟು ಶರೀರಕ್ಕೆ ಹೊಂದಿಕೊಳ್ಳದೆ ಕಾವ್ಯದ ಮಧ್ಯೆ ಬೇರೆ ಬೇರೆ ಖಂಡಗಳಾಗಿ ನಿಂತಿರುವಂತೆ ಭಾಸವಾಗಲು ಬಹುಶಃ ಇದೇ ಕಾರಣ.

ಮಾಲೋಪಮೆಗೆ ಪ್ರತಿಯಾದುದು ಮಹೋಪಮೆ.[31] ಮಹೋಪಮೆಯು ಇಂಗ್ಲಿಷ್ ಕಾವ್ಯದಿಂದ ಆಧುನಿಕ ಕನ್ನಡ ಸಾಹಿತ್ಯವನ್ನು ಪ್ರವೇಶಿಸಿ ಶ್ರೀ ಕುವೆಂಪು ಅವರ 'ಚಿತ್ರಾಂಗದಾ', 'ರಾಮಾಯಣದರ್ಶನ' ಕಾವ್ಯಗಳಲ್ಲಿ ಪ್ರಯೋಗವಾಗಿದೆ. ಗಾತ್ರದಲ್ಲಿ ಮಾಲೋಪಮೆಯೂ ಮಹೋಪಮೆಯೂ ಒಂದೇ. ತುದಿಯಲ್ಲಿ ಬರುವ ಉಪಮೆಯ ಪುಷ್ಟಿಗಾಗಿ ಅದಕ್ಕೆ ಹಿಂದೆ ಹತ್ತಾರು ಸಾಲುಗಳು ಬಂದಿರುತ್ತವೆ. ಇಷ್ಟೇ ಮಾಲೋಪಮೆಗೂ ಮಹೋಪಮೆಗೂ ಸಾಮ್ಯ. ಆದರೆ ಅಂತಸ್ಸತ್ವದಲ್ಲಿ ಎರಡಕ್ಕೂ ಎಷ್ಟು ಅಂತರ! ಮಹೋಪಮೆಯ ಗಾತ್ರವು ದೊಡ್ಡದಾದರೂ ಇಡೀ ಅದು ಒಂದು ಉಪಮೆ. ಒಂದು ಚಿತ್ರವನ್ನೋ ಒಂದು ಪ್ರಸಂಗವನ್ನೋ ಬೆಳಸಿ ಅದರ ಭಾವಸಂಪತ್ತನ್ನು ವೃದ್ಧಿಪಡಿಸಿ—ಈ ಕಾರ್ಯದಲ್ಲಿ ಚಿಕ್ಕ ಚಿಕ್ಕ ಉಪಮೆ

---

[31] ಈ ಪದವನ್ನು ಕಟ್ಟಿ ಬಳಕೆಗೆ ತಂದವರು, ಕನ್ನಡದಲ್ಲಿ ಮೊತ್ತಮೊದಲು ಮಹೋಪಮೆಗಳನ್ನು ಬಳಸಿದವರು ಶ್ರೀ ಕುವೆಂಪು ಅವರು. ಮಹೋಪಮೆಯ ವಿವರಗಳಿಗೆ, ನೋಡಿ—ಕುವೆಂಪು: ಮಹೋಪಮೆ (ತಪೋನಂದನ, ಪು. ೫೫-೬೮).

ರೂಪಕಗಳನ್ನು ಕವಿ ಬಳಸಿರಬಹುದು—; ಹಾಗೆ ವೃದ್ಧಿಪಡಿಸಿದ ಭಾವಸಂಪತ್ತನ್ನು ಉಪಮೇಯಕ್ಕೆ 'ಜಲಕ್ಕನೆ ತಗುಳ್ಚಿ' (ಇದು ಶ್ರೀ ಕುವೆಂಪುರವರ ಉಕ್ತಿ) ಉಪಮೇಯದ ಭಾವಸಂಪತ್ತನ್ನು ವೃದ್ಧಿಪಡಿಸುವುದು ಮಹೋಪಮೆಯ ಗುರಿ. ಎಷ್ಟೋ ವೇಳೆ ಮಹೋಪಮೆಯಷ್ಟನ್ನೇ ಪ್ರತ್ಯೇಕಿಸಿದರೂ ಒಂದು ಪುಟ್ಟ ಕಾವ್ಯವಾಗಬಲ್ಲುದು. ಮಾಲೋಪಮೆಯಲ್ಲಾದರೋ ಹಲವು ಉಪಮೆಗಳು ಬರುವುದರಿಂದ ವಾಚಕನ ಗಮನವು ಹತ್ತು ಕಡೆಗೆ ಹರಿಯುತ್ತದೆ, ಸನ್ನಿವೇಶವು ನೀರುನೀರಾಗಿ ಬಿಡುತ್ತದೆ. ಮಹೋಪಮೆಯ ಸಾಂದ್ರತೆ, ರಸಪುಷ್ಟಿ, ಭವ್ಯತೆಗಳು ಮಾಲೋಪಮೆಗೆ ಬರಲಾರವು.

ಕನ್ನಡದಲ್ಲಿ ಮಾಲೋಪಮೆಗಳನ್ನು ಗಣನೀಯವಾಗಿ ಬಳಸಿರುವ ಏಕೈಕ ಕವಿ ನಯಸೇನನ ಮೇಲಿನ ಈ ವಿಮರ್ಶೆ ಸ್ವಲ್ಪ ಕಟುವಾಯಿತೆಂದು ಕಾಣುತ್ತದೆ. ಆದರೆ ಅವನ ಉಪಮಾ ಪ್ರತಿಭೆಯನ್ನೂ ಎಲ್ಲ ಮಾಲೋಪಮೆಗಳನ್ನೂ ನಾವು ಅಲ್ಲಗಳೆಯುತ್ತಿದ್ದೇವೆ ಎಂದು ಭಾವಿಸುವುದು ತಪ್ಪು. ಅವನು ಮಾಲೋಪಮೆಗಳಲ್ಲಿಯೂ ಇತರೆಡೆಗಳಲ್ಲಿಯೂ ಕೊಟ್ಟಿರುವ ಉಪಮೆಗಳ ಸೊಗಸನ್ನು, ಹೊಸತನವನ್ನು ಕುರಿತ ಚರ್ಚೆ ಮುಂದೆ ಬರುತ್ತದೆ. ಅವನ ಮಾಲೋಪಮೆಗಳೆಲ್ಲ ಬಹುಪಾಲು ಗದ್ಯದಲ್ಲಿದ್ದರೂ ಒಂದೆರಡೆಡೆ ಪದ್ಯಗಳಲ್ಲಿಯೂ ಬಂದಿರುವುದುಂಟು.[32] ಆದರೆ ಇವು ಅಷ್ಟು ಗಮನಾರ್ಹವಲ್ಲ. ಮಾಲೋಪಮೆಗಳಲ್ಲಿ ವ್ಯಕ್ತವಾಗಿರುವುದು ಅವನ ಜಾಣ್ಮೆಯಲ್ಲ, ಪ್ರತಿಭೆ. ಉಪಮೆ ಅಥವಾ ರೂಪಕ ನಯಸೇನನ ಸಹಜ ಭಾಷೆ.

ನಯಸೇನ ಒಬ್ಬ ಜಾನಪದ ಕವಿ ಎಂದು ಈ ಲೇಖನದ ಆರಂಭದಲ್ಲಿ ಸೂಚಿಸಿದ್ದೇವೆ. ಅವನ ಭಾಷೆಯ ಸೊಗಸಿಗೂ ಅವನ ದೇಸಿಯ ಚೆಲ್ವಿಗೂ ಬಹುಮಟ್ಟಿಗೆ ಕಾರಣ ಅವನು ತನ್ನ ಸುತ್ತಮುತ್ತಣ ಆಡುಮಾತನ್ನೂ ಅದರ ಉಕ್ತಿಗಳನ್ನೂ ಬಳಸಿರುವುದು. ಈ ಉಕ್ತಿಗಳೂ ಸಾಮಾಜಿಕ ಜೀವನದ ವಿವರಗಳೂ ಮುಖ್ಯವಾಗಿ ಕಾಣಿಸಿಕೊಂಡಿರುವುದು ಈ ಮಾಲೋಪಮೆಗಳಲ್ಲಿಯೇ. ಮಾಲೋಪಮೆಗಳ ಆಕರ್ಷಣೆಗೆ ಇದೂ ಒಂದು ಕಾರಣ.

೬

'ಧರ್ಮಾಮೃತ'ವು ಒಂದು ಕಥಾಮೃತವೂ ಹೌದು. ಹತ್ತನೇ ಶತಮಾನದ ಆರಂಭದಲ್ಲಿ ರಚಿತವಾಗಿರಬಹುದಾದ 'ವಡ್ಡಾರಾಧನೆ'ಯಲ್ಲಿ ಜೈನಧರ್ಮದ ಹೆಚ್ಚಳವನ್ನು ಸಾರುವ ಅನೇಕ ಕಥೆಗಳು ಗದ್ಯದಲ್ಲಿ ನಿರೂಪಿತವಾಗಿವೆ. ಆ ಕಥೆಗಳ

---

[32] ಉದಾಹರಣೆಗೆ ಈ ಪದ್ಯವನ್ನು (೧.೭೨) ನೋಡಬಹುದು.

ಭಟಸಂಘಕ್ಕದಟೆಂತುಟಂತೆ ಮುಖಾಂಭೋಜಕ್ಕೆ ಮೂಗೆಂತುಟಂ
ತುಟಿ ಬಿತ್ತಿಂಗೆಲೆಯೆಂತುಟಂತುಟಿ ಮಹಾಚೈತ್ರಕ್ಕೆ ಕೀಲೆಂತುಟಂ
ತುಟಿ ಕೈಗಂಗುಲಿಯೆಂತುಟಂತುಟಿ ಲಸದ್ದೀಪಕ್ಕೆ ಸಂದೆಣ್ಣೆಯೆಂ
ತುಟು ತಾನಂತುಟಿ ದರ್ಶನಂ ಸಕಲಧರ್ಮಕ್ಕಂ ಧರಾಚಕ್ರದೊಳ್ ॥

ಮೂಲ 'ಭಗವತೀ ಆರಾಧನಾ' ಎಂಬ ಗ್ರಂಥದ ಯಾವುದೋ ಪ್ರಾಕೃತ ವ್ಯಾಖ್ಯಾನ ವಿರಬಹುದೆಂದು ಡಾ|| ಎ. ಎನ್. ಉಪಾಧ್ಯೆ ಅವರು ಊಹಿಸಿದ್ದಾರೆ.[33] ನಯಸೇನನ ಕತೆಗಳಿಗೆ ಮೂಲ ಬಹುಶಃ ಒಂದು ಕಾವ್ಯವಲ್ಲ. "ಸಂಸ್ಕೃತದಲ್ಲಿ 'ಧರ್ಮಾಮೃತ'ವೆಂಬ ಒಂದು ಗ್ರಂಥವೇನೋ ಇದೆ. ಆದರೆ ಅದು ಹದಿಮೂರನೆಯ ಶತಮಾನದಲ್ಲಿದ್ದ ಆಶಾಧರನೆಂಬ ಕವಿ ಬರೆದದ್ದು."[34] ಬಹುಶಃ ನಯಸೇನನು ಬೇರೆ ಬೇರೆ ಮೂಲಗಳಿಂದ ಕಥೆಗಳನ್ನು ಆರಿಸಿಕೊಂಡು ತನ್ನ ಕಾವ್ಯದಲ್ಲಿ ಬಳಸಿದನೆಂದು ವಿದ್ವಾಂಸರು ಊಹಿಸಿದ್ದಾರೆ.[35]

ಕವಿಯ ಉದ್ದೇಶ ಕೇವಲ ಕಥಾನಿರೂಪಣೆಯಲ್ಲ. ಕಥೆಗಳ ಮೂಲಕ ಸಾಗಾರರು ಅಥವಾ ಗೃಹಸ್ಥರು ಅನುಸರಿಸಬೇಕಾದ ಸಮ್ಯಗ್ದರ್ಶನವನ್ನೂ ಅದರ ಎಂಟು ಅಂಗಗಳನ್ನೂ ಪಂಚಾಣುವ್ರತಗಳನ್ನೂ ನಿರೂಪಿಸುವುದು. ಇವುಗಳಲ್ಲಿ ಒಂದೊಂದನ್ನು ಅನುಷ್ಠಾನಕ್ಕೆ ತಂದು ಉತ್ತಮಗತಿಯನ್ನು ಪಡೆದ ಹದಿನಾಲ್ಕು ಜನ ಮಹನೀಯರ ಕಥೆಗಳು ಇಲ್ಲಿಯ ಹದಿನಾಲ್ಕು ಆಶ್ವಾಸಗಳಲ್ಲಿ ಬಂದಿವೆ. ಇದರ ಜೊತೆಗೆ ತನ್ನ ಕಾವ್ಯದಲ್ಲಿ 'ಜಿನಮತದೊಳೆನಿತು ಸಾರಮದನಿತುಂ' ತನ್ನ ಕೃತಿಯಲ್ಲಿ ಲೇಸಾಗಿ ಕಾಣಿಸಿಕೊಳ್ಳಬೇಕೆಂಬುದು ಕವಿಯ ಅಪೇಕ್ಷೆ. ಆದ್ದರಿಂದ ಅವಕಾಶ ಸಿಕ್ಕಾಗಲೆಲ್ಲ ಜೈನಧರ್ಮದ ಪ್ರಕ್ರಿಯೆಗಳನ್ನು ಸಾರಲು ಪ್ರಯತ್ನಿಸುತ್ತಾನೆ.

'ಧರ್ಮಾಮೃತದಲ್ಲಿ' ಬಂದಿರುವ ಕಥೆಗಳೆಲ್ಲವೂ ಸುಂದರವಾಗಿರದಿದ್ದರೂ ಅನೇಕ ಕಥೆಗಳು ಸ್ವಾರಸ್ಯವಾಗಿಯೂ ಸೊಗಸಾಗಿಯೂ ಇವೆ. ವಸುಭೂತಿಯ ಕಥೆಯಂತಹ ಕೆಲವು ಕಥೆಗಳ ನಿರೂಪಣೆಯಲ್ಲಂತೂ ಕವಿಯು ಹುಟ್ಟು ಕತೆಗಾರನಾಗಿ ಕಾಣಿಸಿಕೊಳ್ಳುತ್ತಾನೆ. ಪ್ರಜ್ಞಾಪೂರ್ವಕವಾಗಿ ಕತೆಯನ್ನು ಕಟ್ಟುವ, ಬೆಳೆಸುವ ಒಂದು ಕೌಶಲವು ಅಂತಹ ಕಡೆಗಳಲ್ಲಿ ವ್ಯಕ್ತವಾಗಿದೆ. ದಯಾಮಿತ್ರ ಸೆಟ್ಟಿಯ ಜೈನಧರ್ಮದಲ್ಲಿನ ನಿಷ್ಠೆಯೂ, ಅದನ್ನು ಕಂಡು ವೈದಿಕನಾದ ವಸುಭೂತಿಯು ಕನಿಕರಿಸುವುದೂ, ಹಣದ ಆಸೆಗಾಗಿ ಕೆಲವು ಕಾಲ ಜೈನಸನ್ಯಾಸಿಯಾಗಿರಲು ಒಪ್ಪಿಕೊಂಡ ವಸುಭೂತಿಯ ಕ್ಲೇಶಗಳೂ, ಕೊನೆಗೆ ವಸುಭೂತಿಯು ಜೈನಧರ್ಮದ ಶ್ರೇಷ್ಠತೆಯನ್ನು ಮನಗಂಡು ಜೈನನಾಗುವುದು—ಇವುಗಳ ನಿರೂಪಣೆಯಲ್ಲಿ ಕವಿಯ ಶ್ರೇಷ್ಠ ಕಥನ ಕೌಶಲವು ನಿರೂಪಿತವಾಗಿದೆ. ಇಲ್ಲಿ ಬರುವ ಜಿನೇಂದ್ರಭಕ್ತ ಸೆಟ್ಟಿಯ ಕಥೆ ಮತ್ತೊಂದು ಉತ್ತಮ ಕಥೆ. ಜೈನಸನ್ಯಾಸಿಯ ವೇಷದಲ್ಲಿ ಬಂದು ತನ್ನ ದೇವಸ್ಥಾನದಲ್ಲಿ ವಾಸಿಸುತ್ತ ಮುಕ್ಕೊಡೆಯಲ್ಲಿದ್ದ ರತ್ನವನ್ನು ಕದ್ದು ಭಟರ ಕೈಗೆ ಸಿಕ್ಕುಬಿದ್ದ ಸೂರ್ಪನೆಂಬ ಕಳ್ಳನನ್ನು ಕ್ಷಮಿಸಿ, ಅವನು ಕಳ್ಳನಲ್ಲ

---

[33] Introduction to Bṛhatkathākōśa, p. 66.

[34] ಜಿ. ವೆಂಕಟಸುಬ್ಬಯ್ಯ : ನಯಸೇನ, ಪು. ೯.

[35] ಅದೇ.

ವೆಂದೂ ತನಗೆ ಪೂಜನೀಯನಾದ ಗುರುವೆಂದೂ ಸುಳ್ಳು ಹೇಳಿ ಅವನನ್ನು ಭಟರಿಂದ ರಕ್ಷಿಸಿ ಮನಃಪರಿವರ್ತನೆಯನ್ನುಂಟುಮಾಡುವ ಜಿನೇಂದ್ರಭಕ್ತಸೆಟ್ಟಿಯ ಪಾತ್ರವನ್ನು ಕವಿ ಉದಾತ್ತವಾಗಿಸಿದ್ದಾನೆ. ಈ ಕಥೆಯು 'ಲೇ ಮಿಸರಬಲ್ಸ್' ಕಾದಂಬರಿಯ ಅಂತಹದೇ ಒಂದು ಘಟನೆಯನ್ನು ಹೋಲುತ್ತದೆ. ವೈದಿಕ ಸಂಪ್ರದಾಯದ ಅನೇಕ ಕಥೆಗಳು ಜೈನಧರ್ಮದಲ್ಲಿ ಅನೇಕ ಮಾರ್ಪಾಟುಗಳನ್ನು ಪಡೆಯುತ್ತವೆಯೆಂಬುದು ಎಲ್ಲರಿಗೂ ತಿಳಿದ ವಿಷಯವೇ. ಇಂತಹ ಎರಡು ಮೂರು ಕಥೆಗಳನ್ನು ಇಲ್ಲಿ ಕಾಣಬಹುದು. ಇಲ್ಲಿ ಬರುವ ಶ್ರೀದತ್ತ ಮತ್ತು ಧನಕೀರ್ತಿಕುಮಾರರ ಕಥೆಯು ಚಂದ್ರಹಾಸನ ಕಥೆಯನ್ನು[36] ಬಹುಮಟ್ಟಿಗೆ ಹೋಲುತ್ತದೆ. ಅಲ್ಲಿಯ ದುಷ್ಟಬುದ್ಧಿ ಇಲ್ಲಿಯ ಶ್ರೀದತ್ತ; ಅಲ್ಲಿಯ ಚಂದ್ರಹಾಸನೇ ಇಲ್ಲಿಯ ಧನಕೀರ್ತಿಕುಮಾರ. ಎರಡು ಕತೆಗಳಿಗೂ ಕೆಲವು ವಿವರಗಳಲ್ಲಿ ವ್ಯತ್ಯಾಸಗಳಿವೆ. ಉದಾಹರಣೆಗೆ ಇಲ್ಲಿ ಕಾಗದವನ್ನು ತಂದವನನ್ನು ಕೊಲ್ಲಬೇಕೆಂಬ ಶ್ರೀದತ್ತನ ಪತ್ರವನ್ನು ನಿದ್ರಿಸುತ್ತಿದ್ದ ಧನಕೀರ್ತಿಕುಮಾರನ ಮೈಮೇಲೆ ನೋಡಿ, ಅದನ್ನು ತಿದ್ದಿದವಳು ಶ್ರೀದತ್ತನ ಮಗಳಲ್ಲ, ಆ ಊರಿನ ಮೃಗಸೇನೆ ಎಂಬ ವೇಶ್ಯೆ. ಆದರೂ ಅದೇ ಕಥೆ ಉದ್ದಕ್ಕೂ ಇಲ್ಲಿ ಹರಿದು ಬಂದಿದೆ. ಧನಕೀರ್ತಿಕುಮಾರನನ್ನು ಕೊಲ್ಲಲು ಶ್ರೀದತ್ತನು ಮಾಡಿದ ಪ್ರಯತ್ನಗಳೆಲ್ಲವೂ ವ್ಯರ್ಥವಾಗುವುದು; ಅವನ ಮಗಳನ್ನೇ ಧನಕೀರ್ತಿಕುಮಾರನು ಕೈಹಿಡಿಯುವುದು; ಕೊನೆಗೆ ಶ್ರೀದತ್ತನ ಮಗನೂ ಶ್ರೀದತ್ತನೂ ಸಾವಿಗೆ ಈಡಾಗುವುದು—ಇವುಗಳ ನಿರೂಪಣೆಯಲ್ಲಿ ಕವಿಯ ಸರಳ ಶೈಲಿಯೂ ಕಲಾಭಿಜ್ಞತೆಯೂ ವ್ಯಕ್ತವಾಗಿವೆ. 'ಧರ್ಮಾಮೃತ'ದಲ್ಲಿ ಕಂಡುಬರುವ ದ್ರೋಣಾಚಾರ್ಯ ಮತ್ತು ಸುವೇಗರ ಕತೆಯು ದ್ರೋಣಾಚಾರ್ಯ ಮತ್ತು ಏಕಲವ್ಯರ ಕತೆಯನ್ನು ಸ್ವಲ್ಪವೇ ಸ್ವಲ್ಪ ಹೋಲುತ್ತಿದ್ದರೂ ಎರಡಕ್ಕೂ ಅರ್ಥಾತ್ ಸಂಬಂಧವಿಲ್ಲ. ದ್ರೋಣಾಚಾರ್ಯರ ಪ್ರತಿಮೆಯನ್ನಿಟ್ಟುಕೊಂಡು ಪೂಜಿಸುತ್ತಿದ್ದ ಸುವೇಗನು ಇಲ್ಲಿ ಕಳ್ಳರ ಯಜಮಾನ; ಪರಪತ್ನಿಗೆ ಆಸೆಪಟ್ಟು ಪ್ರಮಾಥಿಕುಮಾರನ ಮೇಲೆ ಬಿದ್ದವನು. ಹೀಗೆ ಮೂಲ ಕಥೆಯ ಉದಾತ್ತತೆಯಾಗಲಿ ಭವ್ಯತೆಯಾಗಲಿ ಇಲ್ಲಿ ಮರೆಯಾಗಿಹೋಗಿದೆ.

ಕಥಾನಿರೂಪಣೆಯ ಸಮಯದಲ್ಲಿ ನಯಸೇನನಿಗೆ ಮೂಲ ಕಥೆಯ ಮೇಲೆ ಸದಾ ದೃಷ್ಟಿಯಿದ್ದರೂ ಒಮ್ಮೊಮ್ಮೆ ವರ್ಣನೆಗಳ ಚಾಪಲ್ಯದಲ್ಲಿ ಕಥೆ ಮುಚ್ಚಿಹೋಗಿರುವುದುಂಟು. ಉದಾಹರಣೆಗೆ ನಾಲ್ಕನೆಯ ಆಶ್ವಾಸದಲ್ಲಿ ಬರುವ ಕಥೆ ಸ್ವಲ್ಪವಾದರೂ ಮಧ್ಯೆ ಬಂದಿರುವ ಸ್ತ್ರೀವರ್ಣನೆ, ಆಸ್ಥಾನದ ವರ್ಣನೆ, ಕುಷ್ಠ

---

[36] ಚಂದ್ರಹಾಸನ ಕಥೆಯು ಹಿಂದೂಗಳಲ್ಲಿ ಜೈನರಲ್ಲಿ ಬೌದ್ಧರಲ್ಲಿ ಮಾತ್ರವಲ್ಲ, ಯೂರೋಪಿನ ಬೇರೆ ಬೇರೆ ಜನಾಂಗಗಳಲ್ಲಿಯೂ ಬೇರೆ ಬೇರೆ ರೂಪಗಳಲ್ಲಿ ದೊರಕುತ್ತದೆ. ಬೇರೆ ಬೇರೆ ಧರ್ಮಗಳವರು ತಮ್ಮ ಧರ್ಮದ, ದೈವದ ಶ್ರೇಷ್ಠತೆಯನ್ನು ಪ್ರಚಾರಮಾಡಲು ಬಳಸಿಕೊಂಡಿದ್ದಾರೆ. ವಿವರಗಳಿಗೆ, ನೋಡಿ—ಕೆ. ವೆಂಕಟರಾಮಪ್ಪ: ಚಂದ್ರಹಾಸನ ಕಥೆ (ಸಂಭಾವನೆ, ಪು. ೨೪೧–೭).

ರೋಗಿಯಾದ ವೃದ್ಧ ತಪಸ್ವಿಯನ್ನು ಕಂಡ ಜನರ ಪ್ರತಿಕ್ರಿಯೆಯ ವರ್ಣನೆಗಳು ಸ್ವಲ್ಪ ಹೆಚ್ಚಾದುವೆಂದು ಕಾಣುತ್ತದೆ. ಆದರೂ ಈ ಕಥೆಯಲ್ಲಿ ಬರುವ ಒದ್ದಾಯನನ ದೊಡ್ಡತನ ಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ. ಕುಷ್ಠರೋಗಿಯಾದ ಸನ್ಯಾಸಿಯನ್ನು ಕಂಡು ಜೈನರೆಲ್ಲರೂ ಅಸಹ್ಯಪಟ್ಟುಕೊಂಡರೇ ಹೊರತು ಯಾರೂ ಅವನ ಬಳಿಗೆ ಬರಲಿಲ್ಲ, ಉಪಚರಿಸಲಿಲ್ಲ. ಒದ್ದಾಯನ ಮಹಾರಾಜನೂ ಅವನ ರಾಣಿಯೂ ರೋಗಿಯ ದುರ್ವಾಸನೆಯನ್ನೂ ಅಸಹ್ಯ ವಮನವನ್ನೂ ಸಹಿಸಿಕೊಂಡು ಉಪಚರಿಸುತ್ತಾರೆ. ಈ ಕಥೆಯಲ್ಲಿ ನಯಸೇನನು ಪ್ರಾಮಾಣಿಕರಲ್ಲದ ಜೈನರನ್ನು ವಿಡಂಬನೆಮಾಡಿ ಪರೋಪಕಾರವೊಂದೇ ಜೈನಧರ್ಮದ ತಿರುಳೆಂದು ಸಾರಿದ್ದಾನೆ.

೫

ನಯಸೇನನ ಶೈಲಿಯ ಸ್ವರೂಪವನ್ನರಿಯಬೇಕಾದರೆ ಅವನು ತನಗಿಂತ ಹಿಂದಿದ್ದ ಕವಿಗಳಲ್ಲಿ ಮೆಚ್ಚಿಕೊಂಡಿರುವ ಗುಣಗಳನ್ನೂ, ಉತ್ತಮಕಾವ್ಯದ ವಿಷಯ ದಲ್ಲಿ ವ್ಯಕ್ತಪಡಿಸಿರುವ ಅವನ ಅಭಿಪ್ರಾಯಗಳನ್ನೂ ತಿಳಿಯುವುದು ಆವಶ್ಯಕ. ಅವನು ಮೆಚ್ಚಿರುವ ಕಾವ್ಯಗುಣಗಳಲ್ಲಿ ಅಸಗನ[37] 'ದೇಸಿ'ಗೆ ಪ್ರಥಮಸ್ಥಾನವು ಸಂದಿರು ವುದು ಅರ್ಥಪೂರ್ಣವಾಗಿದೆ. ಇದಲ್ಲದೆ ಪೊನ್ನನ 'ಮಹೋನ್ನತಿವೆತ್ತ ಬೆಡಂಗ'ನ್ನೂ ಪಂಪನ 'ಅಸದೃಶಮಪ್ಪ ಅಪೂರ್ವರಸ'ವನ್ನೂ ಗಜಾಂಕುಶನ 'ಒಳ್ಪುವೆತ್ತು ರಂಜಿಸುವ ಸದರ್ಥದೃಷ್ಟಿ'ಯನ್ನೂ ಗುಣವರ್ಮನ ಜಾಣ್ಮೆಯನ್ನೂ ರನ್ನನ ಓಜೆಯನ್ನೂ ಮೆಚ್ಚಿಕೊಂಡಿದ್ದಾನೆ.[38] ಉತ್ತಮ ಕೃತಿಯಲ್ಲಿ ರಸಭಾವ, ಗಮಕ, ನಾಣ್ನುಡಿ, 'ದೇಸಿವೆತ್ತ ಪೊಸನುಡಿ'ಗಳು ಇರಬೇಕೆಂದು ಒತ್ತಿ ಹೇಳಿದ್ದಾನೆ.[39]

---

[37] ಅಸಗನ ಸಂಸ್ಕೃತ 'ಶಾಂತಿಪುರಾಣವನ್ನು' ಓದಿ ಪೊನ್ನನು 'ಶಾಂತಿಪುರಾಣ'ವನ್ನು ಬರೆದಿರಬಹುದೆಂದು ಡಾ॥ ಎ. ಎನ್. ಉಪಾಧ್ಯೆಯವರ ಊಹೆ (Asaga and his works, Karnataka Historical Quarterly, II, i). ಅವನ ಇನ್ನೊಂದು ಸಂಸ್ಕೃತ ಕಾವ್ಯ 'ವರ್ಧಮಾನ ಚರಿತೆ.' ಇವೆರಡೂ ಅಚ್ಚಾಗಿವೆ. ಅವನ ಕನ್ನಡ ಕಾವ್ಯಗಳಾವುವೂ ದೊರೆತಿಲ್ಲ. 'ಕರ್ಣಾಟಕುಮಾರಸಂಭವ' ಎಂಬ ಅವನ ಕಾವ್ಯದ ಹೆಸರು ಮಾತ್ರ ಜಯಕೀರ್ತಿಯ 'ಛಂದೋನುಶಾಸನ'ದಲ್ಲಿದೆ. ಸಂಸ್ಕೃತ 'ವರ್ಧಮಾನ ಚರಿತೆ'ಯ ಕಾಲ ಕ್ರಿ. ಶ. ೮೫೩. ವಿವರ ಗಳಿಗೆ ನೋಡಿ—ವೆಂ. ಬಿ. ಲೋಕಾಪೂರ: ಅಸಗನ ಕನ್ನಡ ಕುಮಾರಸಂಭವ (ಕನ್ನಡನುಡಿ, ಡಿಸೆಂಬರ್, ೧೯೫೨); ಅಸಗಕವಿಯ ಖ್ಯಾತಿ (ಪ್ರಬುದ್ಧ ಕರ್ಣಾಟಕ, ೩೭.೧).

[38] ಅಸಗನ ದೇಸಿ ಪೊನ್ನನ ಮಹೋನ್ನತಿವೆತ್ತ ಬೆಡಂಗು ಪಂಪನೊಂ
ದಸದೃಶಮಪ್ಪಪೂರ್ವರಸಮೆಯ್ದೆ ಗಜಾಂಕುಶನೊಳ್ಪುವೆತ್ತು ರಂ
ಜಿಸುವ ಸದರ್ಥದೃಷ್ಟಿ ಗುಣವರ್ಮನ ಜಾಣ್ ಕವಿರತ್ನನೋಜೆ ಶೋ
ಭಿಸೆ ನೆಲಸಿರ್ಕೆ ಧಾರಿಣಿ ಮನಂಗೊಳೆ ಮತ್ಕೃತಿಯೊಳ್ನಿರಂತರಂ॥ (೧.೩೯)

[39] ರಸಭಾವಂ ಗಮಕಂ ಕಾ| ಣಿಸೆ ನಾಣ್ನುಡಿ ದೇಸಿವೆತ್ತ ಪೊಸನುಡಿ ಮಾರ್ಗಂ|
ಕುಸುಱಿಯ ಬಗೆಯಿಂದಿನಿತಱಿೊ| ಳೆಸೆಯದ ಕೃತಿ ಕೃತಿಯೆ ಬಗೆದು ನೋಟ್ಟೊಡೆ ಜಗದೊಳ್॥ (೧.೪೦)

ಸಂಸ್ಕೃತ ಮತ್ತು ಕನ್ನಡಗಳನ್ನು ಔಚಿತ್ಯವರಿತು ಬಳಸಬೇಕೆಂಬ ಅವನ ಅಭಿಪ್ರಾಯಗಳನ್ನು ಹಿಂದೆಯೇ ನೋಡಿದ್ದೇವೆ.

ನಯಸೇನನು ಮೆಚ್ಚಿ ಕೊಂಡಾಡಿರುವ ಕವಿಗಳಲ್ಲಿ ಅಸಗ, ಗಜಾಂಕುಶರ ಕಾವ್ಯಗಳು ಈಗ ಉಪಲಬ್ಧವಿಲ್ಲ ; ಗುಣವರ್ಮನ ಎರಡು ಕೃತಿಗಳಾದ 'ಹರಿವಂಶ' ಮತ್ತು 'ಶೂದ್ರಕ'ಗಳ ಕೆಲವು ಪದ್ಯಗಳು ಮತ್ತು ಒಂದು ಗದ್ಯ ನಮಗೆ ದೊರೆಯುತ್ತವೆ. ಆದ್ದರಿಂದ ಆ ಕವಿಗಳಿಂದ ಈ ಕವಿಯು ಎಷ್ಟು ಉಪಕೃತನೋ, ಅವನು ಹೇಳುವ ಅವರ ಆಯಾ ಕಾವ್ಯಗುಣಗಳು ಅವರಲ್ಲಿದ್ದುದು ಎಷ್ಟರಮಟ್ಟಿಗೆ ನಿಜವೋ ತಿಳಿಯದು. ಪೊನ್ನನ 'ಮಹೋನ್ನತಿವೆತ್ತ ಬೆಡಂಗ'ನ್ನು ಕವಿ ಮೆಚ್ಚಿಕೊಂಡಿದ್ದಾನೆ, ನಿಜ. ಅವನ 'ಶಾಂತಿ ಪುರಾಣ'ವನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ–ಅವನ 'ಭುವನೈಕ ರಾಮಾಭ್ಯುದಯ' ಈಗ ದೊರೆಯುವುದಿಲ್ಲ–, ಪೊನ್ನನಲ್ಲಿ ಮಹೋನ್ನತಿಯಾಗಲಿ, ಬೆಡಗಾಗಲಿ ಅಷ್ಟು ದೊರೆಯುವುದಿಲ್ಲ.[40] ನಯಸೇನನಲ್ಲಿ ಅಂತಹ ಔನ್ನತ್ಯವು ಇಲ್ಲದಿದ್ದರೂ ಬೆಡಗು ಸಾಕಷ್ಟಿದೆ. ಪಂಪನ ಅಸದೃಶವಾದ ಅಪೂರ್ವರಸವು ಅಷ್ಟಾಗಿ ಇಲ್ಲಿ ಕಾಣಿಸದು. ರನ್ನನ ಓಜೆ ಎಂಬಲ್ಲಿ ಓಜೆ ಎಂಬ ಮಾತಿಗೆ ಅರ್ಥವೇನೋ ತಿಳಿಯದು. ಓಜೆ ಎಂದರೆ ಕ್ರಮ, ಔಚಿತ್ಯ ಎಂದರ್ಥ ಮಾಡಬಹುದು. ನಯಸೇನನಲ್ಲಿ ಈ ಗುಣಗಳು ತಕ್ಕ ಪ್ರಮಾಣದಲ್ಲಿದೆ.

ನಯಸೇನನ ಶೈಲಿಯನ್ನು ಸೂತ್ರಪ್ರಾಯವಾಗಿ ಹೇಳಬೇಕಾದರೆ—ಅದು ಸರಳ ಮತ್ತು ಚಟುಲ (**Simple and spontaneous**). ಸರಳತೆ ಮತ್ತು ಸಹಜತೆ ಅವನ ಆದರ್ಶವೆಂಬುದು ಆರಂಭದ ವಾಕ್ಯಗಳಿಂದಲೇ ತಿಳಿದುಬರುತ್ತದೆ.[41] ಎಲ್ಲರಿಗೂ ತಿಳಿಯುವಂತೆ ಕನ್ನಡದ ಜಾಣುಮಾತಿನಲ್ಲಿ ಹಲವು ದೇಸೆಯ ಉದಾಹರಣೆಗಳಿಂದ ನಿರೂಪಿಸುವುದು ಅವನ ಕಾವ್ಯೋದ್ದೇಶ. ಹೀಗಾಗಿ ಅವನ ಕಾವ್ಯದ ಭಾಷೆ ಸರಳ. ಭಾವದ ಜಟಿಲತೆಯಾಗಲಿ, ಭಾಷೆಯ ಕ್ಲಿಷ್ಟತೆಯಾಗಲಿ ಅವನಲ್ಲಿ ಬಹು ಅಪೂರ್ವ. ದೀರ್ಘಸಮಾಸಗಳಾಗಲಿ, ಶ್ಲೇಷೆ, ವಿರೋಧಾಭಾಸ ಮುಂತಾದ ಅಲಂಕಾರಗಳೂ ಇಲ್ಲವೇ ಇಲ್ಲವೆನ್ನಬಹುದು. ಕನ್ನಡದಲ್ಲಿ ಸಂಸ್ಕೃತದ ಅತಿಯಾದ ಪ್ರಯೋಗವನ್ನು ವಿರೋಧಿಸಿ ಅವೆರಡರ ಹಿತವಾದ ಬೆರಕೆಗೆ ನಿದರ್ಶನಪ್ರಾಯವಾದ ಕಾವ್ಯವನ್ನು

---

40 ಪೊನ್ನನು ಅನುಕರಣಪ್ರಿಯನಾದ ಪ್ರೌಢ ಕವಿ. ವಿವರಗಳಿಗೆ, ನೋಡಿ—ಡಿ. ಎಲ್. ನರಸಿಂಹಾಚಾರ್ : ಪೊನ್ನನೂ ಕಾಳಿದಾಸನೂ (ಪ್ರಬುದ್ಧ ಕರ್ಣಾಟಕ, ೧೨.೨).

41 ಮಱೆಯಿಲ್ಲದೆ ಪೊಯ್ಯಾರಿಂ| ಬೆಳೆಗುಮೆ ಧರೆ ಮಱುಗಿ ಕುದಿದು ಶಾಸ್ತ್ರದ ಬಲದಿಂ |
ದಳಿಪಿಂ ಪೇೞ್ವೊಡಮದು ಕೋ | ಮಳಮಕ್ಕುಮೆ ಸಹಜಮಿಲ್ಲದಾತನ ಕಬ್ಬಂ ||
ಉಪ್ಪಿಲ್ಲದೆ ಕೇಳೊಕ್ಕಳ | ತುಪ್ಪವನೆಱೆದುಣ್ಬೆನೆಂಬೊಡುಂಬುಣಿಸೇಂ ಸ್ವಾ |
ದಪ್ಪುದೆ ಸಹಜಂ ತನಗಿನಿ| ಸಪ್ಪೊಡಮಿಲ್ಲದನ ಕವಿತೆ ರುಚಿವಡೆದಪುದೇ || (೧.೪೯-೫೦)

ರಚಿಸಿದ ಶ್ರೇಯಸ್ಸು ನಯಸೇನನಿಗೆ ಸಲ್ಲಬೇಕು.[42] ನಯಸೇನನ ಸರಳ ಮತ್ತು ಸಹಜ ಶೈಲಿಗೆ ಉದಾಹರಣೆಯಾಗಿ ಕೆಲವು ಪದ್ಯಗಳನ್ನುದ್ಧರಿಸುತ್ತೇವೆ—

ಕಲಿತನದಿಂದಂ ಲೋಗರ್
ಪುಲಿಯಂ ಪಿಡಿದೊಡಮುದೇಂ ಬಿಡೆಂಬರ್ ತಾಮೊಂ
ದಿಲಿಯಂ ಪಿಡಿದೊಡಮದು ಪೆ
ರ್ಬುಲಿಯೆಂಬರ್ ದುರ್ಜನರ್ಗೆ ತಾನಿದು ಸಹಜಂ ‖ (೧. ೧೭೩)

ಕನ್ನಡಿಯಂ ತೋಱಿದೊಡ
ತ್ಯುನ್ನತ ಸಲ್ಲಕ್ಷಣಂಗೆ ಮುನಿಸಾಗದು ಮ
ತ್ತೆನ್ನದೆ ಮೂಕೊಱೆಯಂಗಾ
ಕನ್ನಡಿಯಂ ತೋಱೆ ಬಡಿವನಿಱಿವಂ ಕೊಲ್ವಂ ‖ (೪. ೩೧)

ತೆಂಗಿನ ಪೊಸನೇಣಿಂದಱು
ದಿಂಗಳ್ವರಮುಡಸಿ ಕಂಬಿಯಿಂ ಕಟ್ಟಿದೊಡಂ
ತಾಂ ಗಡ ಬಿಟ್ಟೊಡೆ ಮತ್ತಂ
ಪಿಂಗದು ಡೊಂಕೆಂಬ ನಾಯ ಬಾಲದ ತೆಱದಿಂ ‖ (೨. ೯೨)

ಮೊದಲೊಳ್ ಮುಳ್ಳಿನ ಮೊನೆಗಳ್
ಮೃದುವಪ್ಪುವು ಬೞಿಕೆ ಬೆಟ್ಟಿತಪ್ಪುವು ಖಳರುಂ
ಮೊದಲೊಳ್ ಗುಣಿಯೆನಿಸಿರ್ಪರ್
ತುದಿಯೊಳ್ ತಂತಮ್ಮ ಮಾಯೆಯಂ ಪ್ರಕಟಿಸುವರ್ ‖ (೮. ೧೦೬)

ಮೇಲಿನ ಪದ್ಯಗಳಿಂದ ನಾವು ಒಂದು ಪದ್ಯವನ್ನು ಗಮನಿಸಬಹುದು. ನಯಸೇನನ ಸರಳತೆ ನೀರಸತೆಯ ಮತ್ತೊಂದು ರೂಪವಲ್ಲ. ನೀರಸತೆ ಎಂಬುದು

---

[42] ನಯಸೇನನಿಗಿಂತ ಹಿಂದೆಯೇ, ಸುಮಾರು ಇನ್ನೂರೈವತ್ತು ವರ್ಷಗಳಿಗಿಂತ ಹಿಂದೆ ಇಂತಹ ಒಂದು ಪ್ರತಿಭಟನೆಯು ಕವಿರಾಜಮಾರ್ಗಕಾರನಿಂದ ಬಂದಿದ್ದಿತು.

ತಱಿಸಂದಾ ಸಕ್ಕದಮುಮು | ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ |
ಕುಱಿತು ಬೆರಸಿದೊಡೆ ವಿರಸಂ | ಮಱುಗುವ ಪಾಲ್ಗಳೆಯ ಪನಿಗಳಂ ಬೆರಸಿದವೋಲ್ ‖
(ಕವಿರಾಜಮಾರ್ಗ, ೧. ೫೮)

ಅಲ್ಲದೆ ಕವಿರಾಜಮಾರ್ಗಕಾರನ ಈ ಪ್ರತಿಭಟನೆಯು ಸಮಾಸಗಳಲ್ಲಿ ಕನ್ನಡ ಸಂಸ್ಕೃತಗಳನ್ನು ಬೆರಸುವ ವಿಷಯವನ್ನು ಕುರಿತದ್ದಕ್ಕೆ ಎಂಬುದು ಗಮನಾರ್ಹ. ಆದರೆ ಅವನೇ ಇನ್ನೊಂದೆಡೆ ಕನ್ನಡದ ಮಾತುಗಳಲ್ಲಿ ಸಂಸ್ಕೃತ ಪದಗಳು ಹವಣಾಗಿ ಬರಬೇಕು ಎಂಬ ಸೂಚನೆಯನ್ನು ಕೊಡುತ್ತಾನೆ—"........ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂಗುಡಿವಿಡಿಪಂತೆ ನೀಟ್ಪಿಸಿತು ವೇಟ್ಪುದು ನೀತಿನಿರಂತರ ಕ್ರಮಂ" (ಕವಿರಾಜಮಾರ್ಗ, ೧. ೧೪೯). ಇದನ್ನು ಮುಂದಿನ ಕವಿಗಳು ಅಷ್ಟಾಗಿ ಗಮನಿಸಲಿಲ್ಲವೆಂದೇ ಹೇಳಬೇಕು.

ನಯಸೇನನಿಗೆ ಅಪರಿಚಿತವಸ್ತು. ಕೆಲವೆಡೆಗಳಲ್ಲಿ ಜೈನಧರ್ಮದ ವಿವರಗಳ ಉದ್ಘೋಷಣೆ ಸ್ವಲ್ಪ ನೀರಸವಾಗಿದ್ದರೆ ಅದು ಅನಿವಾರ್ಯ. ಆದರೂ ಅನೇಕ ಕಡೆಗಳಲ್ಲಿ ನೀರಸ ವಿಷಯಗಳನ್ನು ಪ್ರಿಯವಾಗಿ ಹೇಳುವ ಪ್ರಯತ್ನವೂ ಇದೆ. (ನೋಡಿ–೧೪. ೧೦೪.)

ನಯಸೇನನ ಶೈಲಿಯ ಮತ್ತೊಂದು ಗುಣ ಅದರ ಚಟುಲತೆ (Spontaneity). ಅವನು ಪದಗಳಿಗಾಗಿ ಕಷ್ಟಪಟ್ಟಂತೆ ತಡಕಾಡಿದಂತೆ ಎಲ್ಲಿಯೂ ಕಾಣಿಸದು. ಎಲ್ಲಿ ಕ್ಲಿಷ್ಟವಾಗಿ ಆಡಂಬರ ಶೈಲಿಯಲ್ಲಿ ವಿದ್ವಜ್ಜನಪ್ರಿಯವಾಗುವ ರೀತಿಯಲ್ಲಿ ಬರೆಯ ಬೇಕೆಂಬ ಅಭಿಲಾಷೆ ಪ್ರಬಲವಾಗಿರುತ್ತದೆಯೋ, ಎಲ್ಲಿ ಶ್ಲೇಷೆ ಮುಂತಾದ ಉಕ್ತಿ ಚಮತ್ಕಾರಗಳನ್ನು ತರುವ ಪ್ರಯತ್ನವಿರುವುದೋ, ಎಲ್ಲಿ ಪ್ರತಿಭೆಯ ನ್ಯೂನತೆಯೇ ಅಧಿಕವಾಗಿರುವುದೋ ಅಲ್ಲಿ ಕವಿ ಪದಗಳಿಗೆ ಹುಡುಕಾಡುತ್ತಾನೆ, ತನಗಿಂತ ಹಿಂದಿನ ಪ್ರೌಢ ಕವಿಗಳ ಉಕ್ತಿಗಳನ್ನು ಸ್ಮರಿಸಿಕೊಂಡು ಅನುಕರಿಸಲು ಪ್ರಯತ್ನಿಸುತ್ತಾನೆ. ಆದರೆ ಈ ಎಲ್ಲ ತೊಂದರೆಗಳು ನಯಸೇನನಿಗಿಲ್ಲ. ಕನ್ನಡ ಭಾಷೆಯ ಚೆಲುವಿನಲ್ಲಿ ಅವನ ಮನಸ್ಸು ಮಿಂದಿದ್ದಿತು. ಅದರ ಸತ್ವದ ಹೃದಯ ಅವನ ಕೈವಶವಾಗಿದ್ದಿತು. ನಯಸೇನನಲ್ಲಿ ನಮ್ಮನ್ನು ಹೆಚ್ಚು ಆಕರ್ಷಿಸುವುದು ಅವನ ಭಾಷೆಯೇ ಹೊರತು ಭಾವಾವೇಶವಲ್ಲ. ಅವನಲ್ಲಿ ತೀವ್ರವಾದ ಭಾವಗಳಾಗಲಿ, ಉನ್ನತವಾದ ಭಾವನೆಗಳಾಗಲಿ, ಉತ್ಕಟ ಸನ್ನಿವೇಶಗಳಾಗಲಿ ಕಡಮೆಯೇ. ಆದರೂ ಅವನು ನಿರೂಪಿಸ ಬೇಕಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವನು ಬಳಸುವ ಭಾಷೆಯ ಚಟುಲತೆ, ಅದರ ಬೆಡಗು ಬಿನ್ನಾಣ ತಿರುವು ಮುರುವುಗಳು ಆಶ್ಚರ್ಯಕರ. ತನ್ನ ಕಾವ್ಯಭಾಷೆಯು ತನ್ನ ಕಾಲದ ಆಡುಮಾತಿನಿಂದ ಬಹುವಾಗಿ ಬೇರೆಯಾಗಿರ ಬೇಕೆಂಬ ಆಸೆಯಾಗಲಿ ಆದರ್ಶವಾಗಲಿ ಅವನಿಗೆ ಇದ್ದಂತೆ ತೋರದು. ಅವನ ಕಾವ್ಯ ಭಾಷೆಯು ಚಂಪೂ ಪ್ರಪಂಚದಲ್ಲಿ ಜಾನಪದ ಭಾಷೆಯು ಪಡೆದ ವಿಜಯದ ಸಂಕೇತವಾಗಿದೆ.

ದೇಸಿ ಮತ್ತು ಹೊಸತನಗಳು ಅವನ ಶೈಲಿಯ ಮತ್ತೊಂದು ಆಕರ್ಷಣೆ. ಅವನವರೆಗಿನ ಚಂಪೂಕಾವ್ಯಗಳಲ್ಲಿ ಪರಂಪರಾನುಗತವಾಗಿ ಪ್ರಸಿದ್ಧ ಕವಿ ಪ್ರಯೋಗಗಳ ಮೂಸೆಯಲ್ಲಿ ಸಿದ್ಧವಾದ ಉಕ್ತಿಗಳನ್ನೇ ಪ್ರತಿಮೆಗಳನ್ನೇ ಬಳಸಿ ಬಳಸಿ ಕವಿಗಳು ಕವಿಸಮಯ ಸಿದ್ಧರಾಗಿದ್ದರು. ಉಪಮೆಗಳನ್ನು ಆರಿಸಿ ತರಲು ಜನಜೀವನದ ತವನಿಧಿಯ ರತ್ನಸಂಪುಟಕ್ಕೆ ದಾಳಿಯಿಟ್ಟ ಪ್ರಥಮ ಶ್ರೇಯಸ್ಸು ನಯಸೇನನದು. ವಸುಭೂತಿಗೆ ತುಂಬಾ ಸಂತೋಷವಾದದ್ದು 'ಬೆಲೆವೆಣ್ ಪೆಣ್ಣಂ ಪೆತ್ತಂತಿರೆ' ಇದ್ದಿತು ಎಂಬ ಉಕ್ತಿಯಲ್ಲಿ; 'ಮಕ್ಕಳಂ ಪಡೆವೆನೆಂದು ಮರ್ದಂ ಕುಡಿದ ಮಱುದಿವಸಕ್ಕೆ ಗಂಡಂ ಸತ್ತನೆಂಬಂತೆ', 'ಎಡೆಯನರಸಾದೊಡೆ ಕೊಡೆಯ ಕಾವು ಮೇಗಾದುದೆಂಬಂತೆ', 'ಪಟಿವಾವಿಯ ನೀರಂತೆ ಕಣ್ಣೊಳಗಡಂಗಲುಂ', 'ಜೋಯಿಸನ ಮಗಳ್ ಪಸೆಯ ಮೇಲೆ ರಂಡೆಯಾದಳ್' ಮುಂತಾದ ಉಕ್ತಿ

ಗಳಲ್ಲಿ ನಾವು ಹೊಸತನವನ್ನೂ ನವ್ಯದೃಷ್ಟಿಯನ್ನೂ ಕಾಣಬಹುದು. ನಯಸೇನ ಒಬ್ಬ ನಗೆಗಾರನೂ ಹೌದು. ತನ್ನ ಕಾಲದ ಜನಜೀವನದ ಓರೆಕೋರೆಗಳನ್ನೂ ವಿಷಮತೆಗಳನ್ನೂ ಕಂಡು ನವುರಾಗಿ ನಕ್ಕಿದ್ದಾನೆ. ಈ ದೃಷ್ಟಿಯಿಂದ ನೋಡಿದರೆ ಇವನಲ್ಲಿ ಬ್ರಹ್ಮಶಿವನ ಹರಿತವಾಗಲಿ ಕಟುತ್ವವಾಗಲಿ ಕಾಣಿಸದು. ಉಳಿದ ಚಂಪೂ ಕವಿಗಳು ತಿರಸ್ಕಾರ ಅಸಡ್ಡೆಗಳಿಂದ ಕಾಣಬಹುದಾದ ಚಿತ್ರಗಳೂ, ತಂದರೆ ಎಲ್ಲಿ ಮೈಲಿಗೆಯಾಗುವುದೋ, ಎಲ್ಲಿ ಚಂಪೂ ಗಾಂಭೀರ್ಯಕ್ಕೆ ಭಂಗಬರುವುದೋ ಎಂದು ಅವರು ದೂರವಿಟ್ಟಿರುವ ಪದಗಳೂ ನಯಸೇನನಲ್ಲಿ ಯಥೇಷ್ಟ ಸ್ಥಾನವನ್ನು ಪಡೆದಿವೆ.

ನಯಸೇನನ ಶೈಲಿಯ ಜಾನಪದ ಗುಣವನ್ನು ಅವನ ಕಾವ್ಯದ ಉದ್ದಕ್ಕೂ ಕಾಣುವ ನಾವು ಅವನಲ್ಲಿ ಅಚ್ಚಗನ್ನಡದ ದೇಶೀಯ ವೃತ್ತಗಳಲ್ಲಿ ಒಂದನ್ನೂ ಕಾಣದೆ ನಿರಾಶರಾಗುತ್ತೇವೆ. ಪಂಪನಂತೂ ಸರಿಯೇ. ಅವನಲ್ಲಿ ತ್ರಿಪದಿ, ಪಿರಿಯಕ್ಕರ ಮುಂತಾದ ಕನ್ನಡವೃತ್ತಗಳ ಪ್ರಯೋಗಗಳು ಸಾಕಷ್ಟಿವೆ. ಪೊನ್ನ, ರನ್ನ, ಶಾಂತಿನಾಥ ರಂತಹ ಕವಿಗಳಲ್ಲಿಯೂ ಚಂದ್ರರಾಜ, ಚಾವುಂಡರಾಯ II ಮುಂತಾದ ಶಾಸ್ತ್ರ ಕವಿಗಳಲ್ಲಿಯೂ ತ್ರಿಪದಿ, ಷಟ್ಪದಿ, ಪಿರಿಯಕ್ಕರ, ಗೀತಿಕೆ ಮುಂತಾದ ವೃತ್ತಗಳನ್ನು ಕಾಣುತ್ತೇವೆ. ಹೀಗಿರುವಾಗ ನಯಸೇನನಲ್ಲಿ ಆ ವೃತ್ತಗಳನ್ನು ನಿರೀಕ್ಷಿಸುವುದು ಸಹಜವೇ. ಉಳಿದ ವೃತ್ತಗಳ ಮಾತಿರಲಿ, ಅವನ ಕಾಲದಲ್ಲಿ ಬಹು ಜನಪ್ರಿಯ ವಾಗಿದ್ದ,[43] ಮುಂದೆಯೂ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡು ಜಾನಪದ ಗೀತಗಳ ಪ್ರಧಾನವಾಹಕವಾದ ತ್ರಿಪದಿಗಳಲ್ಲಿ ಒಂದೂ ಇಲ್ಲಿ ಕಾಣಿಸದಿರುವುದು ಹೆಚ್ಚಿನ ಅಚ್ಚರಿಯ ಸಂಗತಿ.

ನಯಸೇನನ ಶೈಲಿಯ ಒಂದೆರಡು ಸಣ್ಣ ಕೊರತೆಗಳನ್ನು ಇಲ್ಲಿ ಸೂಚಿಸ ಬಹುದು. ನಯಸೇನ ಒಬ್ಬ ದೊಡ್ಡ ಮಾತುಗಾರ ಎಂಬ ಅಂಶವನ್ನು ಹಿಂದೆ ನೋಡಿದ್ದೇವೆ. ಮಾತಿನ ಮೋಡಿಗೆ ಒಲಿದಿರುವ ಅವನ ಗಮನ ಹೇಳುವುದನ್ನು ಸಂಕ್ಷಿಪ್ತವಾಗಿ ಧ್ವನಿಪೂರ್ಣವಾಗಿ ಹೇಳಬೇಕೆಂಬುದರ ಕಡೆ ಅಷ್ಟಾಗಿ ಹೋಗಿಲ್ಲ. ಒಂದು ಹೇಳುವ ಕಡೆ ಹತ್ತು ಹೇಳುವುದು ಅವನ ಸ್ವಭಾವ. ಓಜೋಗುಣದ ಅಭಾವ ಅವನಲ್ಲಿ ಕಾಣುವ ಮತ್ತೊಂದು ಕೊರತೆ. ಅವನ ಶೈಲಿ ಲಾಲಿತ್ಯದ ತಿಳಿಗೊಳದಲ್ಲಿ ಸಂಚರಿಸುವ ಮತ್ಸ್ಯವೇ ಹೊರತು ಓಜಸ್ಸಿನ ಸಮುದ್ರದಲ್ಲಿ ವಿಹರಿಸುವ ತಿಮಿಂಗಿಲ ವಲ್ಲ. ಅವನಲ್ಲಿ ಪಂಪನ ದೇಸಿಯಿದೆ, ಸಂಯಮವಿಲ್ಲ; ರನ್ನನು ಸರಸ್ವತಿಯ ಭಂಡಾರದ ಮುದ್ರೆಯೊಡೆದಂತೆ ಇವನೂ ಜಾನಪದ ಪದಭಂಡಾರವನ್ನು ಸೂರೆ ಗೈದಿದ್ದಾನೆ; ಆದರೆ ಅವನ ಓಜೋಗುಣವಿಲ್ಲ. ಹರಿಹರ ನಾರಣಪ್ಪರಂತೆ ಮಾತು ಗಾರಿಕೆಯಿದೆ, ಅವರ ಭಾವಾವೇಶವಿಲ್ಲ.

[43] ತ್ರಿಪದಿಯ ಜನಪ್ರಿಯತೆಗೆ ಆಧಾರ ಅದು ಹೆಚ್ಚು ಸಂಖ್ಯೆಯಲ್ಲಿ ಕಾವ್ಯಗಳಲ್ಲಿಯೂ ಶಾಸನಗಳಲ್ಲಿಯೂ ಕಾಣಿಸಿಕೊಳ್ಳುವುದು. ಶಾಸನಗಳಲ್ಲಿ ಕಂಡುಬರುವ ತ್ರಿಪದಿಗಳ ಪಟ್ಟಿಗೆ, ನೋಡಿ–ಪ್ರಬುದ್ಧ ಕರ್ಣಾಟಕ, ೪೩.೨, ಪು. ೯೯–೧೦೨.

ಹೀಗೆ ನಯಸೇನನನ್ನು ಪ್ರಥಮ ವರ್ಗದ ಕವಿಗಳಾದ ಪಂಪ, ರನ್ನ, ಹರಿಹರ, ಕುಮಾರವ್ಯಾಸರ ಸಾಲಲ್ಲಿ ನಿಲ್ಲಿಸುವುದು ಕಷ್ಟವಾದರೂ, ದ್ವಿತೀಯ ವರ್ಗದ ಶ್ರೇಷ್ಠ ಕವಿಗಳ ಸಾಲಲ್ಲಿ ಅವನು ಕಾಣಿಸಿಕೊಳ್ಳುತ್ತಾನೆ. ಅವನ ಕಾವ್ಯವನ್ನು ಕೇವಲ ಕಾವ್ಯಮೌಲ್ಯದಿಂದಲ್ಲದೆ ಇತರ ದೃಷ್ಟಿಗಳಿಂದ ನೋಡಿದರೂ ಹಲವಾರು ರೀತಿಗಳಲ್ಲಿ ಹಲವಾರು ಕಾರಣಗಳಿಗಾಗಿ ಇತರರಿಂದ, ಪ್ರಥಮ ವರ್ಗದ ಕವಿಗಳಿಂದಲೂ, ಭಿನ್ನನಾಗಿ ವಿಶಿಷ್ಟನಾಗಿ ಗಮನಾರ್ಹನಾಗಿ ನಿಲ್ಲುವ ಕವಿಯಾಗಿದ್ದಾನೆ.

—ಎಂ. ಚಿದಾನಂದ ಮೂರ್ತಿ

ಕಮ್ಮಟದ ಕಿಡಿಗಳು

ಕುಱುಂಬು

ಕೆಳೆಯನಾದ ಕರ್ಣನೊಡನೆ ದುರ್ಯೋಧನನು ತನ್ನ ತಂದೆ ಧೃತರಾಷ್ಟ್ರನನ್ನು ಕಟ್ಟೇಕಾಂತದಲ್ಲಿ ಕಂಡು, ಪಾಂಡವರ ಮೇಲಿರುವ ಕ್ರೋಧವನ್ನು ಕಾರುತ್ತಾನೆ. ಆ ಸನ್ನಿವೇಶದಲ್ಲಿ ತಂದೆಗೆ ಅರ್ಜುನನ ಪರಾಕ್ರಮವನ್ನು ಹೀಗೆ ವಿವರಿಸುವನು,

ಮಲೆತಲೆದೋಱಿದೆಂದುದನೆ ಕೊಟ್ಟುದಡಂಗಮಡಂಗಿ ಬಂದೊಡೊ
ಕ್ಕಲಿಗವೆಸರ್ಗೆ ಪೂಣ್ದುದು ಕುಱುಂಬು ತಱುಂಬದೆ ಮಿಕ್ಕ ಶತ್ರು ಮಂ|
ಡಲಿಕರೆ ಮಿತ್ರಮಂಡಳಿಕರಾದರನಾಕುಳಮಿಂದು ನಾಳೆ ಮಾ
ರ್ಮಲೆದರನಿಕ್ಕಿ ನಮ್ಮನೆಟೆದಿಕ್ಕುಗುಮೀ ನೆಲೆಯಿಂ ಗುಣಾರ್ಣವಂ ||[1]

"ಪಂಪಭಾರತ"ದಲ್ಲಿ ಇದೊಂದು ಸ್ವಾರಸ್ಯವಾದ ಪದ್ಯ, ಸರಿಯಾಗಿ ಅರ್ಥವಾಗದೆ ಸಂದೇಹಕ್ಕೆ ಎಡೆಗೊಟ್ಟಿರುವ ಒಂದು ತೊಡಕಿನ ಬಳ್ಳಿಯಾಗಿದೆ. ಈ ಪದ್ಯಕ್ಕೆ ಬೇರೆ ಯಾವ ಪಾಠಾಂತರಗಳೂ ಇಲ್ಲ. ಪದ್ಯದ ಮೊದಲಿನ ಎರಡು ಸಾಲುಗಳಲ್ಲಿ ಒಂದೆರಡು ಪದಗಳು ಸಿಕ್ಕುಸಿಕ್ಕಾಗಿರುವುದರಿಂದ ಹೆಕ್ಕಿ ನೋಡಬೇಕಾಗಿದೆ. ಆಚಾರ್ಯ ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಈ ಪದ್ಯದ ಮೊದಲಿನ ಸಾಲಿನಲ್ಲಿ ಬರುವ ಕ್ಲಿಷ್ಟತೆಯನ್ನು ಸಾಕಷ್ಟು ಹೋಗಲಾಡಿಸಿ, 'ಡಂಗ' ಪದದ ವಿವೇಚನೆಯನ್ನು ಆಧಾರಸಹಿತವಾಗಿ ನಡೆಸಿ ಅರ್ಥೈಸಿದ್ದಾರೆ.[2] ಅಲ್ಲದೆ ಅವರು ಆ ಸಾಲನ್ನು ಸ್ವಲ್ಪ ತಿದ್ದಿ,

"ಮೇಲೆ ತಲೆದೋಱಿದೆಂದುದನೆ ಕೊಟ್ಟುದು ಡಂಗಮಡಂಗಿಬಂದುದೊ,"

ಎಂದು ಅರ್ಥಕ್ಕೆ ಅನುಕೂಲವಾಗುವಂತೆ ಮಾರ್ಪಾಡನ್ನು ಸೂಚಿಸಿದ್ದಾರೆ. ಹಾಗೆ ಮಾಡುವುದರಿಂದ ಈ ಪದ್ಯದಲ್ಲಿರುವ ಸಂದೇಹ ಬಹುಪಾಲು ನಿವಾರಣೆಯಾಗಿದೆ. ಆದರೆ 'ಕುಱುಂಬು' ಪದದ ಅರ್ಥ ತೊಡಕಾಗಿಯೇ ನಿಂತಿದೆ. ಪಂಪನ ಪದ್ಯದ ಎರಡನೇ ಸಾಲಿನ ಈ 'ಕುಱುಂಬು' ಪದದ ಸಂದೇಹ ಇನ್ನೂ 'ತಱುಂಬಿ'ಲ್ಲವಾಗಿ ಅಂಥ ಒಂದು ಪ್ರಯತ್ನವನ್ನಿಲ್ಲಿ ನಡೆಸಿದೆ.

ಕುಱುಂಬು ಪದಕ್ಕೆ "ಪಂಪಭಾರತ"ದ ನಿಘಂಟುವಿನಲ್ಲಿ 'ಬೆಟ್ಟದವರು' ಎಂಬರ್ಥ ಹೇಳಿ, ಜೊತೆಗೆ ಪ್ರಶ್ನಾರ್ಥಕ ಚಿಹ್ನೆಯನ್ನೂ ಹಾಕಿ ಅನುಮಾನವನ್ನು ಹಾಗೇ ಉಳಿಸಿದ್ದಾರೆ. ಆ ಪದದ ಇತರ ಪ್ರಯೋಗಗಳನ್ನೂ ಅಲ್ಲಿ ಸೂಚಿಸಿಲ್ಲ.[3] ಪಂಪನೂ ಈ ಪದವನ್ನು ಇನ್ನೆಲ್ಲಿಯೂ ಬಳಸಿರುವಂತೆ ತಿಳಿದಿಲ್ಲ.

---

1. ವಿಕ್ರಮಾರ್ಜುನ ವಿಜಯ, ಆಶ್ವಾಸ ೨, ಪದ್ಯ ೯೦.

2. ಡಂಗಹಾಕು ಎಂದರೇನು?—ಎಂಬ ಲೇಖನ; ಡಿ. ಎಲ್. ಎನ್., 'ಶಬ್ದವಿಹಾರ' ಸಂಕಲನ ೧೯೫೬, ಪುಟಗಳು: ೭೧ ರಿಂದ ೭೬.

3. ಪಂಪಭಾರತದ ನಿಘಂಟು, ಕ. ಸಾ. ಪ–೧೯೩೧. ಪುಟ ೨೨.

ಕುಱುಂಬು, ಕಱುಂಬು–ಇವೆರಡೂ ಭಿನ್ನಾರ್ಥದ ಪ್ರತ್ಯೇಕ ಪದಗಳು. ಕೇಶಿರಾಜನು ಧಾತುಪ್ರಕರಣದಲ್ಲಿ ಕಱುಂಬು, ಅಸೂಯೇ (to envy) ಎಂದು ತಿಳಿಸಿದ್ದಾನೆ.[4] ಕಱುಪು ಎಂದರೆ ಅಸಹನೆ, (ಪ್ರಯೋಗ, ಪಂಪಭಾರತ, ೫-೫೦, ೯–೯೨). ಕಱುಪನ್ನು ಅನುಭವಿಸುವ ಕ್ರಿಯೆಯೇ ಕಱುತ್ತು (=ಮತ್ಸರಿಸಿ. ಪ್ರಯೋಗ, ವಿ. ವಿ. ೧೦–೪೪). ‑ಕಱುಪನ್ನು ಅನುಭವಿಸುವ ವ್ಯಕ್ತಿಯೇ ಕಱುಂಬ (ರ್). [ಪ್ರಯೋಗ ವಿ. ವಿಜಯ. ೬–೧೮, ೯–೧೦]. ಅಂದರೆ ಹೊಟ್ಟೆಕಿಚ್ಚು ಪಡುವವರು ಕಱುಂಬರ್. ಆದ್ದರಿಂದ ಕುಱುಂಬ ಪದಕ್ಕೂ ಕಱುಂಬು ಪದಕ್ಕೂ ಯಾವ ಸಂಬಂಧವೂ ಇದ್ದಂತೆ ತೋರುವುದಿಲ್ಲ. ಈ ಪದಗಳು ಉಚ್ಚಾರಣೆಯಲ್ಲಿ ಸಮೀಪವರ್ತಿಗಳಾಗಿ ತೋರಿದರೂ ಅರ್ಥದಲ್ಲಿ ಯಾವ ಬಾಂಧವ್ಯವೂ ಇಲ್ಲ.

ಕನ್ನಡದ ಅತ್ಯಂತ ಹಳೆಯ ಶಾಸನವಾದ ಹಲ್ಮಿಡಿ[5] ಶಾಸನದ ಹದಿನೈದನೆಯ ಸಾಲಿನಲ್ಲಿ 'ಕುಱುಮ್ಬಿಡಿವಿಟ್ಟಾರ್' ಎಂಬ ಪದವಿದೆ. ಅದು ಒಂದು ವಿಧದ ತೆರಿಗೆಯ ಹೆಸರೇ ಹೊರತು, ಪಂಪನ ಪ್ರಯೋಗಕ್ಕೆ ಸಂಬಂಧಪಟ್ಟದ್ದಲ್ಲವೆಂದು ಕಾಣುತ್ತದೆ.

ಕೇಶಿರಾಜನು ನಿತ್ಯಬಿಂದುವಿಗೆ ಉದಾಹರಣೆ ಕೊಡುವಾಗ ಕುಱುಂಬು ಪದವನ್ನೂ ಉದಾಹರಿಸಿದ್ದಾನೆ.[6] ಜೊತೆಗೆ ಶಬ್ದಾರ್ಥನಿರ್ಣಯ ಪ್ರಕರಣದಲ್ಲಿ "ಬಾಂಬನೆಂದು ಕುಱುಂಬಂ"[7]–ಎಂದೂ, "ಬಾಂಬರೆಂದುಂ, ಕೋವರೆಂದುಂ, ಕುಂಬಱರ್ ('ಕುಱುಂಬರ್' ಎಂಬುದು ಇನ್ನೊಂದು ಪಾಠಾಂತರ.)[8]—ಎಂದೂ ತಿಳಿಸಿದ್ದಾನೆ. 'ಕಬ್ಬಿಗರ ಕೈಪಿಡಿ'ಯಲ್ಲಿಯೂ ಇದರ ಪ್ರಯೋಗ ಸಿಗುತ್ತದೆ:–

ಪೆರನೆಂದು ಪಡೆಯನ್ನಿರದನೆಂದು ಕೊಂದವಂ
ನೆರದನೆನೆ ಜೋಲ್ದಗರವಸಗೊಂಡುದೆಂದೆನಲ್
ತೊರೆದುಬೆನೆಗರವರಿಸಿದರ್ಥಮಕ್ಕು ತೇರ್ಪನೆನೆ ಮೂರ್ಖೆಶಿಳಿದಂ |
ಪಿರಿತಿನಿಯೆನಲ್ಮರುಳ್ನಿಸ್ಸಂಕೆಯುಂದವ—
ಜ್ಞಿರೊಬ್ಬೆಯೆನಲ್ ಹುಳುಕು ಬಾಂಬರೆನೆ ಕೊವರಕುಂ
ಬರರಕ್ಕುದಡ್ರುಂಚಿಯಂದೆನಲ್ಪಾರೆಂದು ಸಿತಗಿಯರ್ಗಮರ್ದನಾಮುಂ ||[9]

---

4. ಶಬ್ದಮಣಿದರ್ಪಣ: ಧಾತುಪ್ರಕರಣ: ಮಂಗಳೂರು ಮುದ್ರಣ: ಪುಟ–೩೭೭. ಪದಸಂಖ್ಯೆ–೪೭೬.

5. ಅತ್ಯಂತ ಪ್ರಾಚೀನ ಕನ್ನಡ ಶಾಸನ: ಎಂ. ಎಚ್. ಕೃಷ್ಣ: ಪ್ರ. ಕ. ೨೦–೩.

6. ಶಬ್ದಮಣಿದರ್ಪಣ; ಪುಟ ೫೫ ಸಂಖ್ಯೆ–೧೫.

7. –ಅದೇ– ಪುಟ ೪೭೦, ಪದಸಂಖ್ಯೆ ೧೯೧.

8. –ಅದೇ– ಪುಟ ೪೬೯, ಪದಸಂಖ್ಯೆ ೧೫೩.

9. ಲಿಂಗಮಂತ್ರಿಪನೆಂಬ ಕವೀಶ್ವರನ 'ಕಬ್ಬಿಗರ ಕೈಪಿಡಿ'ಯ ಎರಡು ಮುದ್ರಣ ಪ್ರತಿಗಳಿವೆ. ಒಂದು ಕೇವಲ ಕವಿಕೃತ ಪದ್ಯಗಳ ಪ್ರತಿ, ಇನ್ನೊಂದು ಸಟೀಕಾಪ್ರತಿ. ಈ ಪದ್ಯ

ಈಗ ಕೇಶಿರಾಜನ ವಿವರಣೆಯನ್ನು ಇನ್ನೂ ಹಿಂಜಿ ನೋಡೋಣ. ಬಾಂಬರೆಂದುಂ, ಕೋವರೆಂದುಂ, ಕುಂಬಱರ್ (ಕುಱುಂಬರ್). ಬಾಂಬನೆಂದರೆ ಕುಂಬಾರ, ಕುಲಾಲ, ಕುರುಬ–ಎಂಬ ಅರ್ಥ ಉಂಟು.[10] 'ಬಾಂಬ' ಎಂಬ ಹೆಸರಿನ ಎರಡು ಪದಗಳಿವೆ. ಬಾಂಬ$_1$=(fr) ಬಾನ್, A Potter, ಕುವರ, ಕುಮ್ಬಱ, ಕುಱುಮ್ಬ, ಕೋವ, ಕುಱುಬ. ಬಾಂಬ$_2$=A Kuruba or Kurumba, ಕುಱುಬ, ಕುಱಿಗಾವ, ಕುಱಿಗೋವ, ಬಾಮ್ಬ.[11]

ಈ ಎರಡು ಪದಗಳಲ್ಲಿ 'ಬಾನ್' ಪದದಿಂದ ಬಂದ ಬಾಮ್ಬ ಪದವೇ ಕೇಶಿರಾಜನು ಶಬ್ದಾರ್ಥನಿರ್ಣಯ ಪ್ರಕರಣದಲ್ಲಿ ನಿರ್ದೇಶಿಸಿದ ಪದವಿರಬೇಕು.

'ಕೋವ' ಪದ ನೋಡೋಣ. ಕೋವ=A Potter ಎಂದು ಅರ್ಥ.[12] 'ಕೋವರ ಚಕ್ರಂ' ಎಂಬುದು ಕವಿನಾಗಚಂದ್ರನ ಪ್ರಯೋಗ.[13] ಕೋವರ ಪದಕ್ಕೆ 'ಕೊವರ' ಎಂದೂ ಚತುರಾಸ್ಯ ನಿಘಂಟುವಿನಲ್ಲಿದೆ:—

ಕೊವರಂ ಬಾಂಬಂ ಕುಂಬರ
ನವಗಡಿಸಿತವಗ್ರಹಾರ್ಥಮೆಳೆದಳಿರ್ವೆಸಱಿದು |
ತೊವರೆನೆ ಮುಯ್ಪೆನೆ ಮುಡುಹು
ಗ್ಗುವೆಸರ್ಬೆಕ್ಕಿಂಗೆ ನಾಮುಮೆಲೆ ಚತುರಾಸ್ಯ ‖ [14]

ಈ ಎಲ್ಲ ಅರ್ಥ ವಿವರಣೆಯಲ್ಲಿ 'ಕುಱುಂಬು' ಪದಕ್ಕೆ 'ಕುಂಬಾರ' ಎಂಬ ಅರ್ಥ ಹೊರಡುತ್ತದೆ. ಕುಂಬಾಱ (ರ), ಕುಂಬಱ (ರ) ಪದಗಳೆರಡೂ ಕುಂಭಕಾರದ ತದ್ಭವಗಳು. ಕುಂಬಾರನನ್ನು ಕುಲಾಲ ಎಂದೂ ಕರೆಯುತ್ತಾರೆ. ಕುಲಾಲ

ಎರಡರಲ್ಲೂ ಒಂದೇ ತೆರನಾಗಿ ಇರದೆ ಸ್ವಲ್ಪ ವ್ಯತ್ಯಾಸಗಳಿರುವುದರಿಂದ ಎರಡನ್ನೂ ಉದಾಹರಿಸುವುದು ಉಚಿತವೆಂದು ಕಾಣುತ್ತದೆ. ಮೇಲೆ ಕೊಟ್ಟಿರುವ ಪದ್ಯ ಸಟೀಕಾ ಕಬ್ಬಿಗರ ಕೈಪಿಡಿಯದು (೧೮೮೫ರ ಮುದ್ರಣ, ಪದ್ಯ ೯೦, ಪುಟ ೬೨): ಇನ್ನೊಂದು ಪದ್ಯ ಹೀಗಿದೆ,

ಪೆರನೆಂದು ಪೆಡೆಯಂ ನಿರವನೆಂದು ಕೊಂದವ
ನರನೆನಲ್ ಜೋಲ್ದಂ ಗರವಗೊಂಡುದೆಂದೆನೆ
ಲ್ಕೊರಿದುದೆನೆ ಗರವರಿದುದಕ್ಕರ್ಥಮುಕ್ಕು ತೆರ್ಪತ್ತನೆನೆ ಮೂರ್ಛೆತಿಳಿದಂ |
ಪಿರಿತಿನಿಯೆನಲ್ಮರುಳು ನಿಶ್ಶಂಕೆಯಂದದ
ಜ್ಞರೊಬ್ಬೆವೆನ್ನಲ್ಪುಳುಕು **ಬಾಂಬರೆನೆ ಕೊರವರೆರೆ**
ಬರೆನೆ ಕುರುಬರರ್ಕುಲೆಬಿಯರೆನಲ್ಪರೆಂದು ಸಿತಗಿಯರ್ಗಮರ್ದನಾಮುಂ ‖೯೦‖

10. ಸಿರಿಗನ್ನಡ ಅರ್ಥಕೋಶ, ಕಾರಂತರು, ಪುಟ ೩೮೦.
11. ಕಿಟಿಲ್ ಕೋಶ, ಪುಟ ೧೧೦೪.
12. —ಅದೇ—ಪುಟ ೫೦೦.
13. ಪಂಪರಾಮಾಯಣ, ೧೪–೧೭೮, ೧೪–೧೮೩.
14. ಚತುರಾಸ್ಯ ನಿಘಂಟು : ಕರ್ಣಾಟಕ ಕಾವ್ಯಮಂಜರಿ ಪ್ರಕಾಶನ: ೧೮೯೩–ಪುಟ ೬೧–೨೨. ಈ ಪದ್ಯದ ಮೊದಲಸಾಲಿನ '**ಕೊವರಂ ಬಾಂಬಂ**' ಎಂಬುದಕ್ಕೆ '**ಬಾಂಪಂ ಕುರುಂಬಂ**' ಎಂಬ ಪಾಠಾಂತರವೂ ಇದೆಯಾದರೂ ಅದು ಪದ್ಯದ ಪ್ರಾಸಕ್ಕೆ ಹೊಂದುವುದಿಲ್ಲ.

ಚಕ್ರಂ=ಕೋವರ ಚಕ್ರಂ=ಕುಂಬಾಱರ ತಿಗುರಿ (ತಿಗರಿ)=A Potters Wheel, ಕುಂಬಾಱುಮಾಳಿ = A Potters female, ಕುಂಬಾಱಗಿತ್ತಿ>ಕುಂಬಾಱತಿ. ಕುಂಬಾಱತನ>ಕುಂಬಾಱಿಕೆಯು ಅವನ ವೃತ್ತಿಯ ಹೆಸರು. 'ಮಾಡಲ್ ಪಟ್ಟುದು ಘಟಂ ಕುಮ್ಬಱನಿಂ' ಎಂಬುದು ಕೇಶಿರಾಜನ ಪ್ರಯೋಗ.[15] ಕುಂಭಕಾರ >ಕುಂಬಗಾಱ>ಕುಂಬಾಱ>ಕುಂಬಱ–ಆಗಿರಬೇಕು. ಇದೂ ಅಲ್ಲದೆ 'ಕಮ್ಮ, ಕುಮ್ಬ, ಶಬ್ದಂಗೆಳ್ಗೆಱಗಿರೆ 'ಗಾಱ' ಪ್ರತ್ಯಯದ 'ಗ' ಕಾರಕ್ಕೆ ಲೋಪಮುಕ್ಕುಂ' ಎಂದು ಹೇಳಿ, ಕುಮ್ಬಱಂ ಪದವನ್ನು ಕೇಶಿರಾಜನು ಉದಾಹರಿಸಿರುವನು.[16] ಅಲ್ಲದೆ ಕುಂಬಱರ್, ಕುಱುಂಬರ್–ಪದಗಳಿಗೆ ಕುಂಬಾರರು ಹಾಗು ಕುರುಬರು ಎಂಬ ಎರಡೂ ಅರ್ಥಗಳಿವೆಯೆಂಬುದನ್ನು ಸ್ಮರಿಸಿಕೊಳ್ಳಬಹುದು. ಆದರೆ ಈ ಯಾವ ಅರ್ಥವೂ ಪಂಪನ ಪ್ರಯೋಗಕ್ಕೆ (ಕುಱುಂಬು ಪದಕ್ಕೆ) ಅಷ್ಟು ಉಚಿತವಾಗಿ ಹೊಂದಿ ಕೊಳ್ಳುವುದಿಲ್ಲ. ಆದ್ದರಿಂದ ಇತರ ಸಮಂಜಸವಾದ ವಿವರಣೆಗಳೇನಾದರೂ ಇದ್ದರೆ ಹುಡುಕಬೇಕು.

ತಮಿಳಿನಲ್ಲಿ "**ಕೊಱವ**, ಕೋ" ಎಂಬ ಪದಗಳಿವೆ; A headman, King, ಹಿರಿಯ, ದೊರೆ–ಎಂಬುದು ಅರ್ಥ. ತಮಿಳು ಮಲೆಯಾಳ ಭಾಷೆಗಳಲ್ಲಿ '**ಕುಱು**' ಎಂಬ ಪದವಿದ್ದು a hill, ಬೆಟ್ಟ ಎಂಬ ಅರ್ಥವಿದೆ. ಮತ್ತು ತಮಿಳು, ಮಲೆಯಾಳ ದಲ್ಲಿ **ಕುಱುಪ್ಪು**–ಎಂಬ ಇನ್ನೊಂದು ಪದವೂ ಇದ್ದು a Chief, ಮುಖ್ಯಸ್ಥ ಎಂಬ ಅರ್ಥವನ್ನು ಹೊಂದಿದೆ. ಹಾಗೆಯೇ **ಕುಱುಂಬು**–ಎಂದರೆ A fort, ಕೋಟೆ; ಕುಱುಂಬ, ಎಂದರೆ a Caste of mountaineers (ಕೊಱಚ) ಎಂಬ ಅರ್ಥವೂ ಇದೆ. ಕುಱುಂಬ>ಕುಱುಬ=ಕೋಟೆಗೆ ಸೇರಿದ ವ್ಯಕ್ತಿ, A man belonging to a fort.[17] ಕುಱುಂಬಗಾಱನೆಂದರೆ ದರ್ಪಿಷ್ಠ, ಸಗರ್ವಿಯೂ ಹೌದು.

ಈ ಕುಱುಂಬನನ್ನು ಇನ್ನೂ ಎರಡು ಬೇರೆ ಹೆಸರುಗಳಿಂದ ಕರೆಯುತ್ತಿದ್ದಂತೆ ಕಾಣುತ್ತದೆ; ಅಡಂಗಾಯ್ತ ಹಾಗು ಕೊ(ೞ)ಟ್ಟವಳ—ಎಂದು. "ಕಬ್ಬಿಗರ ಕೈಪಿಡಿ"ಯ ಒಂದು ಪದ್ಯದಲ್ಲಿ ಇದರ ವಿವರಣೆ ಕಾಣುತ್ತದೆ:—

ಪಡೆವಳಂ ಸೇನಾಧಿಪತಿ ಪ್ರತಿಹಾರನೊ
ಳ್ಪಡಿಯರನೆನಿಪ್ಪನಾಮಂ ಸೆಜ್ಜೆವಳನುಮೆಂ
ದೊಡೆ ಸಜ್ಜೆವಾಗಿಲಾತನುಮದಂಗಾಯ್ತ ಕುಱುಂಬರೆನೆ **ಕೊಟ್ಟವಳರೂ**।
ಯಡೆಗನೆನೆ ಸಲ್ಲದುದುಯರವರೆನೆ ಬೇಡುವವ
ರೊಡನವಸಿಗನೆ ಪೆರರಂ ಕಾಡುವಾತನ
ಕ್ಕುಡರ್ದನಿರ್ಕುಟಿಕನೆನೆ ನೀರೆರೆವನಕ್ಕು ಕಿಳಾಳಿ ತಾಂ ಬಡೆಗನಕ್ಕುಂ॥[18]

---

15. ಶಬ್ದಮಣಿದರ್ಪಣ, ಪುಟ ೩೬೦.
16. —ಅದೇ— ಪುಟ ೨೮೧–೨೮೨, ಸೂತ್ರ, ೧೯೮.
17. ಕಿಟೆಲ್ ಕೋಶ, ಪುಟ ೪೪೮.
18. ಕಬ್ಬಿಗರ ಕೈಪಿಡಿ, ಪದ್ಯ ೩೬, ಪುಟ ೭.

ಅಂದರೆ ಅಡ(ದ)ಂಗಾಯ್ತ್, ಕುಱು(ರು)ಂಬ, ಕೊಟ್ಟವಳ—ಎಂದರೆ ಕೋಟೆಯವನು, ಕೋಟೆಯ ಹಿರಿಯ ಎಂಬ ಅರ್ಥ. ಅಡಂಗಾಯ್ತ್ ಪದಕ್ಕೆ A man belonging to a fort ಎಂಬರ್ಥವನ್ನು ಕಿಟೆಲ್ ಕೋಶದಲ್ಲೇ ನೋಡಬಹುದು.[19] ಇದಕ್ಕೆ ಪೋಷಕವಾಗಿ ತೋಟದ ಆರ್ಯನ "ಶಬ್ದಮಂಜರಿ"ಯಲ್ಲೂ ಈ ಪ್ರಯೋಗವನ್ನು ಕಾಣಬಹುದು ;

> ಪಡೆವಳನೆನಿಪ ಸೇನಾನಿ ಪ್ರತಿಹಾರಿ ತಾಂ
> ಪಡಿಯರನೆನಿಪ್ಪ ಗೋಳಾಯ್ಲನೆನೆ ರಾವುತಂ
> ಅಡಬಳಂ ಬಾಣಸಿಗನಕ್ಕು ಬಿಜ್ಜಣಿಗೆಯನೆ ಜಳಂಬಾಯ್ತನಕ್ಕು |
> **ಪೊಡವಿಯೊಳಡಂಗಾಯ್ತರಾ ಕುರುಂಬರೆನಿಪ್ಪ**
> **ನುಡಿ ಕೊಟ್ಟವಳರ್ಗೆ** ಪಚ್ಚಾಯ್ಲತಾನೆನಲು ಪ
> ಚ್ಚಡಿಸುವಂ ಪರಿಚಾರರ್ಗಚ್ಚಳಾಯ್ತರೆಂದೆಂಬ ನಾಮಂ ಸಲ್ವುದೂ ||[20]

'ಕಬ್ಬಿಗರ ಕೈಪಿಡಿ'ಯ ವಿವರಣೆಗೆ ಸರಿಯಾಗಿ 'ಶಬ್ದಮಂಜರಿ'ಯ ಪದಗಳೂ ಹೊಂದಿಕೊಂಡಿವೆ, ಅಡಂಗಾಯ್ತ್, ಕುರುಂಬ–ಕೊಟ್ಟವಳರಿಗಿರುವ ಹೆಸರುಗಳು. ಈ ಕೊಟ್ಟವಳನಿಗೆ ಕೊಟ್ಟಗಾಱನೆಂಬ ಹೆಸರೂ ಉಂಟು. ಕೊಟ್ಟಗಾಱ=A man belonging to a fort.[21] ಭೀಮಕವಿಯ ಈ ಪ್ರಯೋಗ ನೋಡಿ :

> ಉಟ್ಟ ಪಟ್ಟಾವಳಿಯ ಮೇಲಳ
> ವಟ್ಟು ಬದ್ದುಗೆದಾರದೊಂಗಲ
> ಕಟ್ಟ ಮೆರೆವ ಕಠಾರಿಗಳ ಹೊಂಗಟ್ಟುಗಳೊಳೆಸೆವ |
> ಇಟ್ಟ ಕಬ್ಬು ಕೋಲುಗಳ ಪಿಡಿ
> **ದಿಟ್ಟಣಿಸಿ ಬಹ ಕೊಟ್ಟಗಾರರ**
> ನೆಟ್ಟನೇಕಾಂಗಿಗಳನೆಲ್ಲರನೊಟ್ಟಯಿಸಿ ನಡೆದು ||[22]

ದಿವಂಗತ ಗಂಗಾಧರ ಮಡಿವಾಳೇಶ್ವರರ ನಿಘಂಟುವಿನಲ್ಲಿ, ಅಡಂಗಾಯ್ತರು=ಕೊಟ್ಟಗಾರರು, ಕೊಟ್ಟವಳರು=ಕೊಟ್ಟಗಾರರು–ಎಂಬ ಅರ್ಥ ಹೇಳಿ ಅವು ಹಳಗನ್ನಡ ನಾಮಪದಗಳೆಂದು ಸೂಚಿಸಿದ್ದಾರೆ.[23]

ದ್ರಾವಿಡ ಭಾಷಾಜ್ಞಾತಿ ಶಬ್ದಕೋಶದಲ್ಲಿ ಕುಱಿಂಪು, ಕುಱುಂಪರ್=petty chieftains, ಎಂದೂ ; ಕುಱಿಚ್ಚಿ=hill country, ಕುಱಿಚ್ಚಿಯನ್=a hill tribe ; ಕುಱುಂಪನ್=(ವೈನಾಡಿನ) ಪರ್ವತವಾಸಿಗಳು ; ಕುಱುಪ್ಪು=ಮುಖಂಡ

---

19 ಕಿಟೆಲ್ ನಿಘಂಟು, ಪುಟ ೩೧.

20 ಸಟೀಕಾ ಶಬ್ದಮಂಜರಿ, ೪೭ನೆಯ ಪದ್ಯ.

21 ಕಿಟೆಲ್ ಕೋಶ, ಪುಟ ೪೮೨.

22 ಬಸವಪುರಾಣ, ಸಂಧಿ ೬೧, ಪದ್ಯ ೨೭.

23 Sabda-Manjari, or, A Dictionary of the Kanarese Language: Gangadhar, Madwaleshvar, Vice-Principal, Training College, Dharwar, ೧೮೯೦, ಪುಟಗಳು ೫ ಮತ್ತು ೧೦೧.

ಕುಱುಂಬ=ಪರ್ವತಾವಾಸಿಗಳ ಕುಲ-ಎಂಬ ವಿವರಣೆ ಸಿಗುತ್ತದೆ.[24] ಅಲ್ಲದೆ ತೆಲುಗಿನಲ್ಲಿ 'ಕೋಱವ' ಎಂಬುದು ಪರ್ವತವಾಸಿಗಳ ಒಂದು ಗುಂಪಿಗೆ ಇರುವ ಹೆಸರೆಂದೂ, ತಮಿಳಿನಲ್ಲಿ 'ಕುಱುಂಪು' ಎಂದರೆ ಕೋಟೆ ಎಂಬ ಅರ್ಥವೂ, ಕುಱುಂಬ ಎಂದರೆ ಕೋಟೆಗೆ ಸೇರಿದ ವ್ಯಕ್ತಿಯೆಂದೂ ಅದೇ ಜ್ಞಾತಿಕೋಶ ತಿಳಿಸುತ್ತದೆ.[25] ಕುರುಂಬ=(ಕುರುಬ) ಮುಖಂಡ, ಕೋಟೆಯವ ಎಂಬ ಅರ್ಥವನ್ನು ಸಿರಿಗನ್ನಡ ಅರ್ಥಕೋಶ ತಿಳಿಸುತ್ತದೆ.[26]

ಈಗ ಈ ಎಲ್ಲ ವಿವರಣೆಯ ಬೆಳಕಿನಲ್ಲಿ ಪಂಪನು ಪ್ರಯೋಗಿಸಿರುವ ಪದದ ಅರ್ಥವನ್ನು ಊಹಿಸಬಹುದು. ಕುಱುಂಬ ಎಂದರೆ ಎತ್ತರದ ಜಾಗದಲ್ಲಿ, ಸಾಮಾನ್ಯವಾಗಿ ಬೆಟ್ಟಗುಡ್ಡಗಳಲ್ಲಿ ಕಟ್ಟಿದ ಕೋಟೆಯ ಮುಖಂಡವರ್ಗ. ಕೋಟೆಯ ರಕ್ಷೆಯಲ್ಲಿರುವುದರಿಂದ ಅವರನ್ನು ಸೋಲಿಸುವುದು ಅಷ್ಟೇನೂ ಸುಲಭವಲ್ಲ. ಅಂದಿನ ಸಮಾಜದಲ್ಲಿ ಕುಱುಂಬರು ಸಾಕಷ್ಟು ಪ್ರತಿಷ್ಠಿತರಿದ್ದು, ಹೆಚ್ಚು ಪ್ರಭಾವ ಶಾಲಿಗಳಾಗಿದ್ದಿರಬೇಕು. ರಾಜ್ಯದ ಆಗುಹೋಗುಗಳಲ್ಲಿ ಕುಱುಂಬರ ಪಾತ್ರವೂ ವಿಶೇಷವಿದ್ದಿರಬೇಕು. ಇವರ ವಿರೋಧವನ್ನು ಕಟ್ಟಿಕೊಂಡು ದೊರೆಯು ರಾಜ್ಯದ ಆಡಳಿತವನ್ನು ಸುಸೂತ್ರವಾಗಿ ನಡೆಸಲಾಗುತ್ತಿರಲಿಲ್ಲವಾಗಿ, ಕುಱುಂಬರ ಹಗೆತನಕ್ಕಿಂತಲೂ ಕೆಳೆತನವನ್ನೇ ರಾಜರು ಬಯಸುತ್ತಿದ್ದಿರಬೇಕು.

ಪಂಪನ ಪದ್ಯದ ಒಟ್ಟು ಅರ್ಥವನ್ನು ಈಗ ನೋಡಬಹುದು.

ಅರ್ಜುನನ ಸಾಹಸಕ್ಕೆ ಬೆದರಿದ ಪರ್ವತ ರಾಜರುಗಳು ಸೊಕ್ಕಿನಿಂದ ತಲೆ ಎತ್ತದೆ ತಲೆ ಮರೆಸಿಕೊಂಡು ಅವನು ಹೇಳಿದುದನ್ನೆಲ್ಲಾ ಕೊಟ್ಟರು; ಡಂಗಪಾಲಕರುಗಳೆಲ್ಲಾ ಮುದುರಿಕೊಂಡಂತೆ ಅಡಗಿಕೊಂಡು ಅರ್ಜುನನ ವಶವರ್ತಿಗಳಾದರು; ಅವರುಗಳೆಲ್ಲಾ ಅರ್ಜುನನಿಗೆ ಒಕ್ಕಲುತನಗೈಯಲು ಪ್ರತಿಜ್ಞಾಬದ್ಧರಾದರು; ಕೋಟೆಗಳ ಮುಖಂಡವರ್ಗವು (ಕುಱುಂಬ) ಅರ್ಜುನನನ್ನು ಅಡ್ಡಗಟ್ಟದೆ ಹೋಯಿತು; ಮಿಕ್ಕ ಶತ್ರುಮಂಡಳಿಕರೆಲ್ಲಾ ಮಿತ್ರಮಂಡಳಿಕರೇ ಆದರು; ತತ್ಫಲವಾಗಿ ಅರ್ಜುನನು ಅತಿ ಸುಲಭವಾಗಿ ಇಂದು ನಾಳೆಯಲ್ಲಿ ಪ್ರತಿಭಟಿಸುವವರನ್ನೆಲ್ಲಾ ಸದೆಬಡಿದು ನಮ್ಮನ್ನು ನಮ್ಮ ಜಾಗದಿಂದ ಕಿತ್ತು ಎಳೆದು ಅತ್ತ ಎಸೆಯುತ್ತಾನೆ— ಹೀಗೆ ಸುಯೋಧನನು ತನ್ನ ತಂದೆಯ ಎದುರಿನಲ್ಲಿ ಸಂಕಟವನ್ನು ತೋಡಿಕೊಳ್ಳುವ ಸಮಯದಲ್ಲೂ ಅರ್ಜುನನ ಸಾಹಸವನ್ನು ಮರೆತಿಲ್ಲವೆಂಬುದನ್ನು ಗಮನಿಸಬೇಕು.

ಕುಱುಂಬ ಪದದ ಅನ್ಯಪ್ರಯೋಗ ಅಪರೂಪ. ನನಗೆ ತಿಳಿದಮಟ್ಟಿಗೆ ಇನ್ನೊಬ್ಬ ಕವಿ ಈ ಪದವನ್ನು ಬಳಸಿದ್ದಾನೆ. ಶಾಂತಿನಾಥನು ತನ್ನ "ಸುಕುಮಾರ ಚರಿತೆ"ಯಲ್ಲಿ ಈ ಪದವನ್ನು ಪ್ರಯೋಗಿಸಿರುವ ಪದ್ಯ ಇದು :—

24 A Dravidian Etymological Dictionary—ಬರೊ ಮತ್ತು ಎಮಿನೊ ಪುಟ ೧೨೫, ಪದಸಂಖ್ಯೆ-೧೫೩೦.

25 ಅದೇ—ಪದಸಂಖ್ಯೆ ೧೫೪೨, ಪುಟ ೧೨೭.

26 ಸಿರಿಗನ್ನಡ ಅರ್ಥಕೋಶ-ಕಾರಂತ, ಪುಟ ೧೨೩.

ಮಲೆಪರ್ ಮಾಱಾಂಪರಿಲ್ಲ ಕ್ರಮದಿನದಟರಾಟಂದರಿಲ್ಲುರ್ಕಿ ಬೇಡ
ರ್ಚಲದಿಂ ಮಾರ್ಕೊಂಡರಿಲ್ಲೊಟ್ಟಜೆವೆರಸು ಕುಱುಂಬರ್ತಱುಂಬಿರ್ದ್ದರಿಲ್ಲೆ
ತ್ತಲುಮುದ್ದಂ ಬಂದು ದಳ್ಳೆಂದುರಿವ ರಿಪುಗಳಿಲ್ಲಳ್ಕಿ ಬಿರ್ಕ್ಕುತ್ಕ್ರ ಭೂಮಂ
ಡಳಮಾಜ್ಞಾಸಿದ್ಧಮಾದತ್ತತಿಬಳವಿಭುಗಂಭೋಧಿ ಪರ್ಯಂತಮಾಗಳ್ [27]

ಅತಿಬಳ ಮಹಾರಾಜನು ರಾಜ್ಯನಡೆಸುತ್ತಿರುವಾಗ ಅವನ ನಾಡು ಇದ್ದ ಸ್ಥಿತಿಯನ್ನು ಈ ಪದ್ಯದಲ್ಲಿ ಶಾಂತಿನಾಥನು ನಿರೂಪಿಸಿದ್ದಾನೆ. ಹೆಚ್ಚುಕಡಿಮೆ ಪಂಪನ ಹೆಜ್ಜೆಯ ಮೇಲೆ ಕಾವ್ಯ ನಿರೂಪಿಸಿಕೊಂಡು ಹೋಗಿರುವ ಶಾಂತಿನಾಥನು, "ವಿಕ್ರಮಾರ್ಜುನ ವಿಜಯ"ದಲ್ಲಿ ಬರುವ ರೀತಿಯಲ್ಲೇ "ಸುಕುಮಾರ ಚರಿತೆ"ಯ ಈ ಪದ್ಯದಲ್ಲೂ 'ಕುಱುಂಬರ್ ತಱುಂಬಿ' ಎಂಬ ಪದ ಪುಂಜವನ್ನು ಬಳಸಿದ್ದಾನೆ. 'ಕುಱುಂಬ' ಎಂಬ ಪದಕ್ಕೆ ಇಲ್ಲಿಯೂ 'ಕೋಟೆಯ ಮುಖಂಡವರ್ಗ'—ಎಂಬ ಅರ್ಥವೇ ಸಮಂಜಸವಾಗಿ ಹೊಂದಿಕೊಂಡಿರುವುದರಿಂದ, (ಬಹುಶಃ) ಅದೇ ಸರಿಯಾದ ಅರ್ಥವಿರಬೇಕು.

—ಹಂಪ. ನಾಗರಾಜಯ್ಯ

27. ಸುಕುಮಾರ ಚರಿತಂ: (ಸಂ.) ಪ್ರೊ|| ದೊ. ಲ. ನ. ಮತ್ತು ತ. ಸು. ಶಾ: ಆಶ್ವಾಸ ೧, ಪದ್ಯ ೮೦.

' ಸೂಕ್ತಿಸುಧಾರ್ಣವ 'ದಲ್ಲಿನ ಕೆಲವು ಪದ್ಯಗಳ ಆಕರಗಳು

ಹದಿಮೂರನೆಯ ಶತಮಾನದ ಪೂರ್ವಾರ್ಧದಲ್ಲಿದ್ದ ಮಲ್ಲಿಕಾರ್ಜುನ (ಸು. ೧೨೪೫)ನಿಂದ ಸಂಕಲಿತವಾದ 'ಸೂಕ್ತಿಸುಧಾರ್ಣವ' ಕನ್ನಡದ ಮೊದಲ ಸಂಕಲನ ಗ್ರಂಥ. ಈ ಕೃತಿಯಲ್ಲಿ ಕವಿ ತನ್ನ ಸಮಕಾಲೀನರಾದ ಮತ್ತು ಹಿಂದಿನ ಕವಿಗಳ ಪದ್ಯಗಳನ್ನು 'ಅಷ್ಟಾದಶವರ್ಣನೆ'ಗಳಿಗನುಗುಣವಾಗಿ ಸಂಗ್ರಹಿಸಿ ಉದ್ಧರಿಸಿದ್ದಾನೆ. ಆದರೆ ಮಲ್ಲಿಕಾರ್ಜುನ ತನ್ನ ಕೃತಿಯಲ್ಲಿನ ಉದ್ಧೃತ ಪದ್ಯಗಳ ಆಕರಗಳನ್ನು ತಿಳಿಸಿಲ್ಲ.

ಈತನನ್ನೇ ಅನುಸರಿಸಿದ ಅಭಿನವವಾದಿವಿದ್ಯಾನಂದ (ಸು. ೧೫ನೆಯ ಶ.) ತನ್ನ ' ಕಾವ್ಯಸಾರ 'ದಲ್ಲಿ ಉದ್ಧೃತ ಪದ್ಯಗಳ ಆಕರಗಳನ್ನು ತಿಳಿಸಿದ್ದಾನೆ. ಹೀಗೆ ಸೂಚಿಸಿರುವುದರಿಂದ ಅನುಪಲಬ್ಧವಾದ ಒಂದನೆಯ ಗುಣವರ್ಮನ 'ಶೂದ್ರಕ'ದ ಪದ್ಯಗಳನ್ನು ಗುರುತಿಸಿದುದಲ್ಲದೆ ಅದು ಚಂಪೂಕಾವ್ಯವೆಂದು ತಿಳಿಯಲು ಸಾಧ್ಯವಾದುದು ಸಾಹಿತ್ಯ ಚರಿತ್ರಾಭ್ಯಾಸಿಗಳಿಗೆಲ್ಲ ತಿಳಿದ ಸಂಗತಿಯೇ ಆಗಿದೆ. ಹೀಗೆ "ಸೂಕ್ತಿಸುಧಾರ್ಣವ"ದಲ್ಲಿ ಆಕರಗಳ ಉಲ್ಲೇಖವಿಲ್ಲದುದುದನ್ನು ಗಮನಿಸಿದ ಅದರ ಸಂಪಾದಕರಾದ ಶ್ರೀ ಎನ್. ಅನಂತರಂಗಾಚಾರ್ಯರು ಬಹು ಶ್ರಮ ವಹಿಸಿ ಸುಮಾರು ೧,೧೬೦ ಪದ್ಯಗಳಿಗೆ ಆಕರಗಳನ್ನು ಉಪಲಬ್ಧಕೃತಿಗಳಿಂದ ಗುರುತಿಸಿ ಕೊಟ್ಟಿದ್ದಾರೆ. ಶ್ರೀಮರ್ಾ ಡಿ. ಎಲ್. ನರಸಿಂಹಾಚಾರ್ಯರು ' ಶಬ್ದಮಣಿದರ್ಪಣ 'ದ ಪ್ರಯೋಗ ಸಂಪತ್ತಿನ ಬಗೆಗೆ ವಿವೇಚಿಸುತ್ತ ಕೇಶಿರಾಜ ' ಸೂಕ್ತಿಸುಧಾರ್ಣವ 'ದ ಪದ್ಯಗಳ ಭಾಗಗಳನ್ನು ಉದಾಹರಿಸಿರುವುದನ್ನು ತೋರಿಸಿಕೊಟ್ಟಿದ್ದಾರೆ. [ನೋಡಿ, ಪ್ರಸ್ತಾವನೆ, ಪುಟ xxvi (ಅ.ಟಿ. ೨೧) ಶಬ್ದಮಣಿದರ್ಪಣ—ಸಂ. ಡಿ. ಎಲ್. ನರಸಿಂಹಾಚಾರ್ ೧೯೫೯.] ಅಲ್ಲಿ ಅವರು ' ಇತ್ಯಾದಿ' ಎಂದು ನಿರ್ದೇಶಿಸಿದುದನ್ನು ಮುಂದುವರೆಸಿ ಸುಮಾರು ಹದಿನಾರು ಪದ್ಯಗಳಿಗೆ ' ಶಬ್ದಮಣಿದರ್ಪಣ 'ದ ಆಕರವನ್ನು ಇಲ್ಲಿ ತೋರಿಸಲಾಗಿದೆ.

ಶ್ರೀಮರ್ಾ ಎನ್. ಅನಂತರಂಗಾಚಾರ್ಯರು ಸೂಚಿಸದೆ ಇರುವ ಆಕರಗಳನ್ನು ಕಂಡುಹಿಡಿಯಲು ಪ್ರಯತ್ನಿಸಿದವರಲ್ಲಿ ಶ್ರೀಮರ್ಾ ಹಂ. ಪ. ನಾಗರಾಜಯ್ಯ ಅವರು ಗಮನಾರ್ಹರು. ಅವರು ' ಸೂಕ್ತಿಸುಧಾರ್ಣವ 'ದ ಚಂದ್ರೋದಯ ವರ್ಣನೆ(ಪದ್ಯ ೩೮೯)ಯಲ್ಲಿ ಬರುವ ಪದ್ಯಕ್ಕೆ ಮೂಲ ' ಶಾಂತಿಪುರಾಣ ' (೮-೧೦೫) ಎಂಬುದನ್ನು ಸೋದಾಹರಣವಾಗಿ ತೋರಿಸಿದ್ದಾರೆ (ನೋಡಿ ಪ್ರ. ಕ. ೪೫—೨).

'ಸೂಕ್ತಿಸುಧಾರ್ಣ'ವದ ಅನೇಕ ಪದ್ಯಗಳು ' ಕಾವ್ಯಸಾರ 'ದಲ್ಲಿ ದೊರೆಯುತ್ತವೆ. ಕಾವ್ಯಸಾರದ ನೆರವಿನಿಂದ " ಸೂಕ್ತಿಸುಧಾರ್ಣವ "ದ ಕೆಲವು ಪದ್ಯಗಳಿಗೆ ಆಕರಗಳನ್ನು ಕಂಡುಹಿಡಿಯಲಾಗಿದೆ. ಹೀಗೆ ಕಂಡುಹಿಡಿದ ಪದ್ಯಗಳು ಇಂತಿವೆ:—

(i) 'ಕಾವ್ಯಸಾರ'ದಲ್ಲಿ 'ಶೂದ್ರಕ'ದ ಪದ್ಯಗಳೆಂದು ಸೂಚಿಸಲಾಗಿರುವ 'ಸೂಕ್ತಿಸುಧಾರ್ಣವ'ದಲ್ಲಿರುವ ಪದ್ಯಗಳು.

ಸೂಕ್ತಿಸುಧಾರ್ಣವ		**ಕಾವ್ಯಸಾರ**	
ಆಶ್ವಾಸ	ಪದ್ಯಸಂಖ್ಯೆ	ಆಶ್ವಾಸ	ಪದ್ಯಸಂಖ್ಯೆ
೯	೩೯	೨೭	೬೯೪
೧೩	೬	೩೭	೯೬೬
೩	೧೪೪	೪೦	೧೦೪೪
೩	೧೩೦	೪೩	೧೧೧೩

(ii) "ಸೂಕ್ತಿಸುಧಾರ್ಣವ" ಮತ್ತು "ಶಬ್ದಮಣಿದರ್ಪಣ"ಗಳಿಗೆ ಸಂವಾದಿಯಾದ ಪದ್ಯಗಳು :—

ಸೂಕ್ತಿಸುಧಾರ್ಣವ		**ಶಬ್ದಮಣಿದರ್ಪಣ**	
ಆಶ್ವಾಸ	ಪದ್ಯಸಂಖ್ಯೆ	ಸೂತ್ರ	ಪ್ರಯೋಗ ಸಂಖ್ಯೆ
* ೧	೩೫	೧೧೯	೬
೩	೧೨	೭೯	೨೩
* ೩	೧೩	೭೭	೧೮
* ೩	೩೦	೧೨೦	೨
೩	೮೯	೧೧೪	೧ (ಪಾಠಾಂತರ)
೩	೯೪	೨೫೯	೨ (ಪಾಠಾಂತರ)
* ೩	೧೨೩	೮೨	೧೬
೩	೧೨೮	೮೨	೨
೩	೧೩೦	೭೯	೧೫
೩	೧೩೩	೩೧೩	೧
* ೪	೬	೭೭	೧೭
* ೪	೯	೭೪	೧
೪	೨೬	೧೨೯	೨
* ೪	೩೪	೭೮	೧೧
* ೪	೪೬	೭೭	೨೧
* ೪	೫೧	೭೯	೭
* ೪	೧೨೭	೧೩೪	೫ (ಪಾಠಾಂತರ)
೪	೧೩೧	೭೫	೨ (ಪಾಠಾಂತರ)

* ೫	೫	೨೫೫	೧ (ಪಾಠಾಂತರ)
೭	೨೭	೨೩೬	೧
೭	೫೫	೭೯	೩ (ಪಾಠಾಂತರ)
೮	೨೧೨	೧೨೯	೬
* ೮	೩೯೨	೧೦೭	೫
೮	೪೪೯	೬೫	೭ (?)
೧೦	೪೫	೨೩೨	೩ (ಪಾಠಾಂತರ)
೧೦	೮೦	೧೮	೧
* ೧೦	೧೪೮	೨೩೬	೨
* ೧೩	೬	೨೫೦	೬
೧೪	೯	೩೧೩	೨
* ೧೪	೭೫	೫೨	೨
* ೧೬	೫೩	೧೧೫	೧
೧೮	೧೪	೨೪೧	೩
* ೧೮	೧೪	೨೪೪	೧

[* ಈ ಗುರುತು ಶ್ರೀಮಾನ್ ಡಿ. ಎಲ್. ಎನ್. ಅವರು ಗುರುತಿಸಿದ ಪದ್ಯಗಳನ್ನು ಸೂಚಿಸುತ್ತದೆ.]

(iii) ಸೂಕ್ತಿಸುಧಾರ್ಣವ		ಕಾವ್ಯಸಾರ		ಜಗನ್ನಾಥ ವಿಜಯ	
೭	೨೦	೮	೩೩೫	೨	೬೬
೧೦	೧೯೧	೩೨	೮೦೪	೪	೯
೪	೧೬	೩	೯೩	೯	೮೬
೪	೧೪೧	೪	೧೨೭	೯	೯೧
೧೦	೭೮	೨೯	೭೨೬	೧೪	೪೦
೮	೪೩೧	೩೭	೯೮೬	೧೬	೧೨೫

(iv) ಸೂಕ್ತಿಸುಧಾರ್ಣವ		ಕಾವ್ಯಸಾರ		ಚಂದ್ರಪ್ರಭ ಪುರಾಣ	
೪	೧೨೬	೫	೨೦೩	೧	೧೩೪
೧೦	೧೭೬	೩೨	೮೧೩	೪	೪೩

(v) ಸೂಕ್ತಿಸುಧಾರ್ಣವ		ಗಿರಿಜಾ ಕಲ್ಯಾಣ	
೮	೨೫೨	೪	೧೦೧

(vi) ಸೂಕ್ತಿಸುಧಾರ್ಣವ		ಕಾವ್ಯಸಾರ		ಪುಷ್ಪದಂತ ಪುರಾಣ	
೭	೬೧	೬	೨೧೩	೪	೭೭

(vii) ಸೂಕ್ತಿಸುಧಾರ್ಣವ		ಕಾವ್ಯಸಾರ		ಅರ್ಧನೇಮಿ ಪುರಾಣ	
೧೦	೧೮೯	೩೨	೮೧೨	೮	೩

(viii) ಸೂಕ್ತಿಸುಧಾರ್ಣವ		ಕಾವ್ಯಸಾರ		ಲೀಲಾವತಿ	
೩	೨೧೮	—		೯	೫೧
೩	೨೩೬	—		೮	೩೮
೩	೨೩೮	—		೯	೫೦
೪	೧೪೩	—		೧೦	೪೦
೭	೫೧	೧೧	೩೫೧	೭	೬೩
೮	೧೯೧	—		೧೦	೩೦
೮	೨೭೧	—		೨	೨೧
೮	೨೭೬	೩೭	೯೫೩	೨	೨೨
೮	೪೦೬	—		೨	೩೬
೧೦	೨೬೨	೨೭	೬೮೯	೯	೧೭
೧೨	೨೫	—		೧೭	೧೧೯
೧೨	೩೮	೩೦	೭೬೪	೧೩	೧೩೨
೧೫	೪೬	೨೩	೫೫೭	೪	೫೫

ಇನ್ನೂ ಹೆಚ್ಚಿನ ವ್ಯಾಸಂಗ ನಡೆದರೆ ಉಪಲಬ್ಧ ಕೃತಿಗಳಿಂದ ಇನ್ನೂ ಕೆಲವು ಆಕರಗಳನ್ನು ಗುರುತಿಸಲು ಸಾಧ್ಯವಿರುವುದಾಗಿ ಕಾಣುತ್ತದೆ.

—ಎಸ್. ಶಿವಣ್ಣ

ಇಲ್ಲಿ ಬಳಸಿಕೊಂಡಿರುವ ಆಕರಗ್ರಂಥಗಳ ಪಟ್ಟಿ

ಅರ್ಧನೇಮಿ ಪುರಾಣ .... ಸಾಧನ ಸಾಹಿತ್ಯ ಮಂದಿರ, ಮೈಸೂರು.
ಕಾವ್ಯಸಾರ .... ಕಾವ್ಯಕಲಾನಿಧಿ ಗ್ರಂಥಮಾಲೆ
ಗಿರಿಜಾಕಲ್ಯಾಣ .... ಲಿಂಗಾಯಿತ ವಿದ್ಯಾಭಿವೃದ್ಧಿ ಸಂಸ್ಥೆ
ಚಂದ್ರಪ್ರಭ ಪುರಾಣ .... ಕಾವ್ಯಕಲಾನಿಧಿ ಗ್ರಂಥಮಾಲೆ
ಜಗನ್ನಾಥ ವಿಜಯ .... ಪ್ರಾಚ್ಯಕೋಶಾಗಾರ, ಮೈಸೂರು.
ಪುಷ್ಪದಂತ ಪುರಾಣ .... ಮದರಾಸು ವಿಶ್ವವಿದ್ಯಾನಿಲಯ
ಲೀಲಾವತಿ ..... ಕಾವ್ಯಕಲಾನಿಧಿ ಗ್ರಂಥಮಾಲೆ
ಶಬ್ದಮಣಿದರ್ಪಣ .... ಶಾರದಾ ಮಂದಿರ, ಮೈಸೂರು.

ಕಾವ್ಯಾವಲೋಕನ

ಸ್ವರ್ಗಸೋಪಾನ : ಲೇಖಕರು : ಶ್ರೀ ಸಮೇತನಹಳ್ಳಿ ರಾಮರಾಯರು ; ಪ್ರಕಾಶಕರು : ರಾಸಪ್ರಕಾಶನ; ಕಿರೀಟ ಅಷ್ಟದಳ; ಪುಟ ೧೨೩; ಬೆಲೆ : ಸಾಧಾರಣ ಪ್ರತಿ, ಎರಡು ರೂಪಾಯಿ ; ಕ್ಯಾಲಿಕೋ ಪ್ರತಿ ಮೂರು ರೂಪಾಯಿ.

ಭರತಖಂಡದ ಹಿರಿಯ ಸಂಸ್ಕೃತಿಯ ಮಹೋತ್ತುಂಗ ಶಿಖರಗಳಂತೆ ಬೆಳೆದು ನಿಂತಿರುವ ರಾಮಾಯಣ—ಮಹಾಭಾರತ ಕಥೆಗಳ ಹಿನ್ನೆಲೆಯನ್ನು ಹೊಂದಿರುವ ನಾಲ್ಕು ಸುಂದರ ಕಥೆಗಳು ಇಲ್ಲಿವೆ. ಕತೆಗಳ ಮೂಲ ಪುರಾಣಗಳಲ್ಲಿದ್ದರೂ ಅವು ಬಿಟ್ಟಿರುವ ಫಲ ಬೇರೆ. ಪುರಾಣದ ಹಳೆಯ ಕಥಾಭಿತ್ತಿಯ ಮೇಲೆ ಕತೆಗಾರರು ನೂತನವಾದ ಚಿತ್ರಗಳನ್ನು ಬಿಡಿಸಿದ್ದಾರೆ. ಹಿಂದಿನ ಆ ಮಹಾಪುರಾಣಗಳ ಪ್ರಧಾನ ವ್ಯಕ್ತಿಗಳನ್ನು ಲೇಖಕರು ನೋಡಿರುವ ರೀತಿಯಲ್ಲಿ ಹೊಸತನವಿದೆ. ಪಾತ್ರಗಳಿಗೆ ಮಾತ್ರ ಕತೆಗಾರರು ಆ ಮಹಾಕಾವ್ಯಗಳಿಗೆ ಋಣಿಯಾಗಿದ್ದಾರೆಯೇ ವಿನಾ ಸನ್ನಿವೇಶಗಳಿಗಲ್ಲ. ಇಲ್ಲಿ ಬಂದಿರುವ ಯಾವ ಸನ್ನಿವೇಶವೂ ಆ ಪುರಾಣಗಳಲ್ಲಿ ಈ ರೀತಿಯಲ್ಲಿ ಬಂದಿಲ್ಲ. ಹಿಂದಿನ ಆ ದಿವ್ಯ ಚೇತನಗಳ ಮೂಲ ವಿಗ್ರಹಕ್ಕಾಗಲಿ, ಉದಾತ್ತ ವ್ಯಕ್ತಿತ್ವಕ್ಕಾಗಲಿ ಕಿಂಚಿತ್ತೂ ಊನಬಾರದಂತೆ ಎಚ್ಚರಿಕೆ ವಹಿಸಿ ಲೇಖಕರು ಅಲ್ಲಿಯ ಮಧುರಭಾವಗಳನ್ನು ಹೊಸಸನ್ನಿವೇಶಗಳ ನೆರವಿನಿಂದ ಪೋಷಿಸಿದ್ದಾರೆ. ಮೂಲ ಪಾತ್ರಗಳ ಮೇಲೆ ಹೊಸ ದಿಕ್ಕಿನಿಂದ ಬೆಳಕು ಚೆಲ್ಲಿ ಅವು ನವಪ್ರಭೆಯಿಂದ ಮಿರುಮಿರನೆ ಮಿರುಗುವಂತೆ ಮಾಡಿದ್ದಾರೆ.

ಇಲ್ಲಿಯ ಕಥೆಗಳಲ್ಲೆಲ್ಲ ಅತ್ಯಂತ-ಸುಂದರವಾದ ಕಲಾಕೃತಿ 'ಸ್ವರ್ಗಸೋಪಾನ'. ಇದು ಪುಸ್ತಕದ ಅರ್ಧಕ್ಕಿಂತಲೂ ಹೆಚ್ಚು ಭಾಗದಲ್ಲಿ ಹರಡಿಕೊಂಡಿದೆ. ಶ್ರೀರಾಮ ಚಂದ್ರನ ಏಕಪತ್ನಿತ್ವವನ್ನು ಅಗ್ನಿಪರೀಕ್ಷೆಗೆ ಗುರಿಮಾಡಲು ಅವನ ದೇಹದ ಸ್ವರ್ಗೀಯ ಸೌಂದರ್ಯದಿಂದ ಆಕರ್ಷಿತಳಾದ ದೇವೇಂದ್ರನ ಅಣುಗಿ ಜ್ಯೋತ್ಸ್ನಾ ದೇವಿ ಪಂಚವಟಿಗೆ ಬಂದು, ದೇವಲೋಕದ ತನ್ನ ಎಲ್ಲ ಒನಪು—ಒಯ್ಯಾರಗಳಿಂದ ಅವನ ಹೃದಯವನ್ನು ಅಪಹರಿಸಲು ಪ್ರಯತ್ನಪಟ್ಟು, ನಿರಾಶಳಾಗಿ, ಕೊನೆಗೆ ಅವನ ಆ ಸದ್ಗುಣಮಣಿಯ ಕಾಂತಿಯನ್ನು ಲೋಕಕ್ಕೆಲ್ಲ ಚೆಲ್ಲಿ ತಂಪನ್ನುಂಟು ಮಾಡಿದ ಕತೆ ಇಲ್ಲಿ ಕುಡಿಯೊಡೆದಿದೆ. ಕಥೆ ಅತ್ಯಂತ ಕಲಾತ್ಮಕವಾಗಿದೆ. ವಾಲ್ಮೀಕಿ ರಾಮಾಯಣದ ಶ್ರೀರಾಮ, ಲಕ್ಷ್ಮಣ, ಸೀತೆಯರಿಗಿಂತಲೂ ಇಲ್ಲಿ ಸೀತಾರಾಮಲಕ್ಷ್ಮಣರು ನಮ್ಮ ಆದರಾಭಿಮಾನಗಳಿಗೆ ಹೆಚ್ಚು ಪಾತ್ರರಾಗುತ್ತಾರೆ. ಅವರ ಬಾಯಿಂದ ಬರುವ ಒಂದೊಂದು ಮಾತೂ ನಮ್ಮ ಹಿರಿಯ ಸಂಸ್ಕೃತಿಯ ಸಾರಸರ್ವಸ್ವದ ಪ್ರತೀಕವಾಗಿವೆ; ಅವರ ಸುಸಂಸ್ಕೃತ ಹೃದಯದ ಕಂಪನ್ನು ಹೊರಸೂಸುತ್ತಿವೆ; ಮಾನವನ ಜೀವಿತದ ಸರ್ವಶ್ರೇಷ್ಠ ಆದರ್ಶವನ್ನು ಸಾರುತ್ತಿವೆ.

ಭೋಗ ವಿಲಾಸಗಳಿಗೆ ಮೀಸಲಾದ ದೇವಲೋಕದ ಸುರಸುಂದರಿಯರ

ಜೀವನದ ರೀತಿ ನೀತಿಗಳ ಚಿತ್ರಣ ಇಲ್ಲಿ ಅನುಪಮವಾಗಿ ಬಂದಿದೆ. ಅಲ್ಲಿಯ ಪರಿಸರಣದ ಚಿತ್ರಣವೂ ಮನೋಹರವಾಗಿದೆ. ಉದಾತ್ತ ಶೃಂಗಾರ ರಚನೆಯಲ್ಲಿ ಸಮೇತನಹಳ್ಳಿ ರಾಮರಾಯರು ಅದ್ವಿತೀಯರು. ಅಶ್ಲೀಲತೆಯ ಅಂಚನ್ನೂ ಸೋಂಕದ ದಿವ್ಯಮನೋಹರ ಶೃಂಗಾರ ಚಿತ್ರವನ್ನು ಅವರು ತುಂಬ ನೈಪುಣ್ಯದಿಂದ ಕೊಟ್ಟಿದ್ದಾರೆ. ಉದಾತ್ತ ಪಾತ್ರಚಿತ್ರಣ, ಉತ್ತಮ ಸನ್ನಿವೇಶ ರಚನೆ, ಹೃದ್ಯವಾದ ಶೈಲಿ—ಇವೇ ಮೊದಲಾದುವು ಕಥೆಯ ಸೊಗಸನ್ನು ಬಹುಮಟ್ಟಿಗೆ ಹೆಚ್ಚಿಸಿವೆ. ಅಂತೂ 'ಸ್ವರ್ಗಸೋಪಾನ' ಓದುಗರಿಗೆ ರಸದೌತಣವನ್ನುಂಟುಮಾಡುವ ಸುಂದರ ಕಲಾಕೃತಿ.

'ಬದುಕಿಗೊಂದು ಬೆಳಕು'—ಇದೂ ಕೂಡ ರಾಮಾಯಣಕ್ಕೆ ಸಂಬಂಧಪಟ್ಟ ಕಥೆ. ಶ್ರೀರಾಮಚಂದ್ರನ ಬಾಳಿಗೆ ಸೀತೆ ಹಾಗೂ ಲವ–ಕುಶರು ಬೆಳಕಾಗಿ ಪರಿಣಮಿಸಿದ ಕತೆ ಇಲ್ಲಿ ಮನಮೋಹಕವಾಗಿ ನಿರೂಪಿತವಾಗಿದೆ. ಶ್ರೀರಾಮಚಂದ್ರ ಅಶ್ವಮೇಧಯಾಗವನ್ನು ಪ್ರಾರಂಭಮಾಡಿದಾಗ ಕಾಡುಪಾಲಾದ ಸೀತಾದೇವಿಯನ್ನು ನೋಡುವ ತವಕ ಜನಕಮಹರ್ಷಿಗೆ ಹೆಚ್ಚಾಗಿ ಅವನು ವಾಲ್ಮೀಕಿಯಾಶ್ರಮಕ್ಕೆ ಹೋಗುತ್ತಾನೆ. ಆಗ ಸೀತೆಯ ಸಡಗರ ಹೇಳತೀರದು. ಅತಿ ಸಂಭ್ರಮದಿಂದ ಅವಳು ತಂದೆಯನ್ನು ಸ್ವಾಗತಿಸುತ್ತಾಳೆ. ಲವ–ಕುಶರ ಸಂತೋಷಕ್ಕಂತೂ ಪಾರವೇ ಇಲ್ಲ. ಕುತೂಹಲದಿಂದ ಅವರು ನೂರಾರು ಪ್ರಶ್ನೆಗಳನ್ನು ಕೇಳಿ ಅಜ್ಜನನ್ನು ಪೀಡಿಸುತ್ತಾರೆ. ಅದೇ ದಿನ ಸಂಜೆ ಯೂಪಸ್ತಂಭಕ್ಕೆಂದು ಅರಣ್ಯಕ್ಕೆ ಹೋದ ಅವರು ಶ್ರೀರಾಮನ ಯಾಗದ ಕುದುರೆಯನ್ನು ನೋಡಿ, ಹಿಡಿದುಕಟ್ಟಿ, ಘೋರಯುದ್ಧವನ್ನೆಸಗಿ, ಶ್ರೀರಾಮನ ಕಡೆಯವರೆಲ್ಲ ಕಂಠಗತಪ್ರಾಣರಾಗುವಂತೆ ಮಾಡುತ್ತಾರೆ. ವಾಲ್ಮೀಕಿ ಮಹರ್ಷಿಯ ಕೃಪೆಯಿಂದ ಅವರೆಲ್ಲ ಬದುಕಿಬಂದು ಸೀತೆಯನ್ನು ಅಯೋಧ್ಯೆಗೆ ಕರೆದೊಯ್ಯುತ್ತಾರೆ—ಇದು ಕಥಾವಸ್ತು. ಕಥೆಯು ಹಳೆಯದಾದರೂ ಅದನ್ನು ಹೇಳುವ ರೀತಿಯಲ್ಲಿ ನವೀನತೆಯಿದೆ. ಇಲ್ಲಿ ಸೀತೆಯದೇ ಪ್ರಧಾನಪಾತ್ರ; ಅವಳೇ ಓದುಗರ ಮನಸೆಳೆಯುವ ವ್ಯಕ್ತಿ. ಅವಳು ತನ್ನ ಆದರ್ಶಗುಣಗಳಿಂದ, ಉದಾತ್ತ ಮನೋಭಾವದಿಂದ ಲೋಕಪೂಜ್ಯಳಾಗಿದ್ದಾಳೆ.

'ಸ್ವರ್ಗಸೋಪಾನ', 'ಬದುಕಿಗೊಂದು ಬೆಳಕು' ರಾಮಾಯಣಕ್ಕೆ ಸಂಬಂಧಪಟ್ಟ ಕತೆಗಳಾದರೆ 'ಭಾರತದ ಬೇರೊಂದು ತಿರುವು', 'ವ್ಯಾಸರ ವಾಸುದೇವ' ಮಹಾಭಾರತಕ್ಕೆ ಸಂಬಂಧಿಸಿದ ಕತೆಗಳು.

'ಭಾರತದ ಬೇರೊಂದು ತಿರುವು'—ಮಹಾಭಾರತದ ಕೊನೆಯ ಘಟ್ಟದ ಘಟನೆಯನ್ನು ಕುರಿತಾದ ಕಥೆ. ಆದರೂ ವಿಚಾರ ಪ್ರಚೋದಕವಾದ ಕಥೆ. ಇದರಲ್ಲಿ ಭಾರತದ ಕಥೆಯನ್ನು ಲೇಖಕರು ಒಂದು ಹೊಸ ದೃಷ್ಟಿಯಿಂದ ಪರಿಭಾವಿಸಿದ್ದಾರೆ. ಇಲ್ಲಿ ಕುರುಕ್ಷೇತ್ರ ಯುದ್ಧವೇ ನಡೆಯುವುದಿಲ್ಲ. ಜೀವಹತ್ಯೆ, ರಕ್ತಪಾತ—ಯಾವುದೂ ನಡೆಯುವುದಿಲ್ಲ. ದೂತನಾಗಿ ಹಸ್ತಿನಾವತಿಗೆ ಬಂದ ಕೃಷ್ಣ

ಕರ್ಣನ ಕಿವಿಯಲ್ಲಿ ಅವನ ಜನನದ ವಿಷಬೀಜವನ್ನು ಬಿತ್ತಿಹೋಗುತ್ತಾನೆ. ಅವನು ಪಾಂಡವರ ಹಿರಿಯಣ್ಣನೆಂಬುದನ್ನು ತಿಳಿದ ಸುಯೋಧನ ಆ ತನ್ನ ಪ್ರಾಣ ಸ್ನೇಹಿತನಿಗೆ ಸಾಮ್ರಾಜ್ಯ ಪದವಿಯನ್ನು ಧಾರೆಯೆರೆದುಕೊಡಲು ನಿಂತ ನಿಲುವಿನಲ್ಲೇ ನಿರ್ಧರಿಸುತ್ತಾನೆ. ಆ ನಿರ್ಧಾರ ಎಲ್ಲರಿಗೂ ಪ್ರಿಯವಾಗಿ ಕರ್ಣ ಸಾಮ್ರಾಟ ಪದವಿಯನ್ನಲಂಕರಿಸುತ್ತಾನೆ. ದುರ್ಯೋಧನನ ಉದಾರಬುದ್ಧಿಯಿಂದ ಕೌರವ-ಪಾಂಡವರಿಬ್ಬರ ಹಿತವೂ ಸಾಧಿತವಾಗುತ್ತದೆ.

ಇಲ್ಲಿಯ ದುರ್ಯೋಧನ ಮೂರ್ಖನಲ್ಲ, "ಪಾಟಿಸುವೆನೊಯ್ಯನೆ ಮುಳ್ಳೊಳಿ ಮುಳ್ಳಂ" ಎಂದು ಪಾಂಡವನಿಂದಲೇ ಪಾಂಡವರನ್ನು ನಿರ್ನಾಮಗೊಳಿಸುತ್ತೇನೆ ಎಂದು ಹೇಳುವ ನೀಚನಲ್ಲ. ಅಷ್ಟಕ್ಕೂ ಕರ್ಣನ ಜನನದ ವಿಚಾರ ಅವನಿಗೆ ತಿಳಿದಿರುವುದೇ ಇಲ್ಲ. ಅವನಿಗೆ ಆಗಿನ ರಾಜಕಾರಣ ಅಪಾರ ತಲೆನೋವು ತಂದಿತ್ತು. ಯಾವೊಬ್ಬ ಹುಡುಗನನ್ನು ಬೇಕಾದರೂ ಸಿಂಹಾಸನದ ಮೇಲೆ ಕುಳ್ಳಿರಿಸಿ ತೃಪ್ತಿಯ ನಿಟ್ಟುಸಿರನ್ನು ಬಿಡಲು ಅವನು ಸಿದ್ಧನಾಗಿದ್ದ. ಆ ಸಮಯಕ್ಕೆ ಸರಿಯಾಗಿ ಕರ್ಣನು ಪಾಂಡವರ ಹಿರಿಯನೆಂಬುದನ್ನು ತಿಳಿದು ದುರ್ಯೋಧನನಿಗೆ ಅಪರಿಮಿತ ಆನಂದವಾಯಿತು. ಕೂಡಲೆ ಅವನು ತನ್ನ ಆತ್ಮೀಯ ಗೆಳೆಯನಿಗೆ ಪಟ್ಟಕಟ್ಟಿ ಸಂತೋಷಪಟ್ಟ.

ಕರ್ಣನನ್ನು ಪ್ರಭುವನ್ನಾಗಿ ಮಾಡಿಕೊಂಡು ಕೌರವ-ಪಾಂಡವರು ಸಹಬಾಳ್ವೆಯನ್ನು ನಡೆಸುವುದು ಪಾಂಡವರಿಗೆಲ್ಲ ಒಪ್ಪಿಗೆಯಾದರೂ ಭೀಮ-ದ್ರೌಪದಿಯರಿಗೆ ಒಪ್ಪಿಗೆಯಾಗಲಿಲ್ಲ. ಅವರಿಬ್ಬರನ್ನು ಕೃಷ್ಣ-ವಿದುರರು ಬಹಳ ಕಷ್ಟಪಟ್ಟು ಒಪ್ಪಿಸಬೇಕಾಯಿತು.

ಮಹಾಭಾರತದ ಯುದ್ಧವೇ ನಡೆಯಲಿಲ್ಲವೆಂಬಂತೆ ಪರಿಭಾವಿಸುವುದು ಹೊಸತೇನಲ್ಲ. ಭಾಸಾದಿಕವಿಗಳು ಬಹಳ ಹಿಂದೆಯೇ ಹಾಗೆ ಪರಿಭಾವಿಸಿದ್ದಾರೆ. ಆದರೆ ಕರ್ಣನಿಗೆ ಪ್ರಭುತ್ವವನ್ನೊಪ್ಪಿಸಿ ಸಕ್ಕರೆಯ ಸಂಬಂಧವನ್ನು ಕೌರವ-ಪಾಂಡವರಿಬ್ಬರೂ ಉಳಿಸಿಕೊಂಡರು ಎಂಬ ಭಾವನೆ ಮಾತ್ರ ಹೊಸತು. ಆ ದೃಷ್ಟಿಯಿಂದ ಈ ಕತೆಗೆ ಒಂದು ನವೀನ ರೂಪ ಬಂದಿದೆ.

ಇಲ್ಲಿ ಯುದ್ಧ ಯಾರಿಗೂ ಬೇಕಿಲ್ಲ. ಸಮರಪಿಶಾಚಿಯನ್ನು, ಆ ಮಹಾಮಾರಿಯನ್ನು ಆಹ್ವಾನಿಸುವ ಕೀಳುಮಟ್ಟಕ್ಕೆ ಪಾಂಡವರಲ್ಲ, ಕೌರವರು ಕೂಡ ಇಳಿಯಲಿಲ್ಲ. "ಧರ್ಮದ ಉತ್ಥಾನಕ್ಕೆ ರಕ್ತಪಾತ ಆವಶ್ಯವೇನಲ್ಲ" ಎಂಬುದು ವ್ಯಾಸಮಹರ್ಷಿಯ ತಾರಕಮಂತ್ರ.

ಅಂತೂ ಇಲ್ಲಿನ ಪಾತ್ರಗಳ ಮನೋಭಾವ ಭಿನ್ನವಾದುದು. ಇಲ್ಲಿ ಭಾರತದ ಕತೆ ಬೇರೊಂದು ದಿಕ್ಕಿಗೆ ತಿರುಗಿ ಸುಖ-ಶಾಂತಿಗಳನ್ನು ಅರಸುತ್ತ ಹೊರಟಿದೆ. ಇಲ್ಲಿಯ ಪಾತ್ರಗಳೆಲ್ಲ ಅದಕ್ಕನುರೂಪವಾಗಿ ಮೈತಳೆದಿವೆ.

ವ್ಯಾಸಮಹರ್ಷಿಗಳ ಕಲ್ಪನೆಯಲ್ಲಿ ಶ್ರೀಕೃಷ್ಣನೆಂಥವನು ಎಂಬುದನ್ನು

ಸಾರುವ ಕಥೆ 'ವ್ಯಾಸರ ವಾಸುದೇವ'. ಇದು ಕುರುಕ್ಷೇತ್ರ ಯುದ್ಧ ನಡೆದ ಮೇಲಿನ ಕಥೆಯನ್ನು ವಸ್ತುವಾಗಿ ಸ್ವೀಕರಿಸಿರುವ ಕಥೆ. ಕೌರವರ ಕಡೆ ಸರ್ವ ನಾಶವಾಗಿದೆ. ಎಲ್ಲಿ ನೋಡಿದರೂ ಗೋಳೀ ಗೋಳು. ಸುಯೋಧನನಿಗಾಗಿ ಮರುಗಲು ಉಳಿದಿರುವವನು ಬಲರಾಮನೊಬ್ಬನೇ. ತನ್ನ ಪ್ರಾಣವಾದ ಪಾಂಡವರನ್ನು ಸಂತವಿಟ್ಟು ಶ್ರೀಕೃಷ್ಣ ದ್ವಾರಕೆಗೆ ಬಂದು ಅಣ್ಣ ಬಲರಾಮನನ್ನು ಸಮಾಧಾನಪಡಿಸಿ ಮಾತಾಪಿತೃಗಳನ್ನು ಸಂತೋಷಪಡಿಸುತ್ತಾನೆ.

ಬಲರಾಮನಿಗೆ ದುರ್ಯೋಧನನಿಗಾದ ಅನ್ಯಾಯವನ್ನು ಸಹಿಸಲಾಗಲಿಲ್ಲ. ಪಾಂಡವರು ಧರ್ಮದ ಹೆಸರಿನಲ್ಲಿ ನಡೆಸಿದ ಅತ್ಯಾಚಾರ ಅವನನ್ನು ಕೆರಳಿಸಿತ್ತು. ಶಿಷ್ಯವಾತ್ಸಲ್ಯದಿಂದ ಅವನು ಕೆರಳಿ ಕೆಂಡವಾಗಿ ಭೀಷ್ಮ, ದ್ರೋಣ, ಕರ್ಣ, ದುರ್ಯೋಧನರನ್ನು ವಧಿಸುವಾಗ ತೋರಿಸಿದ ಪಾಂಡವರ ಧರ್ಮಬಾಹಿರ ವರ್ತನೆಯನ್ನು ಖಂಡಿಸಿದಾಗ ವ್ಯಾಸಮಹರ್ಷಿಗಳು ಪಾಂಡವರ ವರ್ತನೆ ಹೇಗೆ ಧರ್ಮಪರವಾದುದು ಎಂಬುದನ್ನು ವಿವರಿಸಿ ಹೇಳಿ ಬಲರಾಮನನ್ನು ಸಮಾಧಾನಪಡಿಸುತ್ತಾರೆ.

ಕುರುಕ್ಷೇತ್ರ ಯುದ್ಧದಿಂದಾದ ಪ್ರಾಣಹಾನಿಯನ್ನು ಶ್ರೀಕೃಷ್ಣ ತಪ್ಪಿಸಲು ಸಾಧ್ಯವಿರಲಿಲ್ಲವೇ? ಭೀಷ್ಮ, ದ್ರೋಣ, ಕರ್ಣ, ದುರ್ಯೋಧನರನ್ನು ಕೊಲ್ಲುವಾಗ ಪಾಂಡವರು ಅಧರ್ಮದ ಹಾದಿಯನ್ನು ತುಳಿದರೇ ಹೇಗೆ?—ಎಂಬ ಪ್ರಶ್ನೆಗಳಿಗೆ ಉತ್ತರಕೊಡುವುದಕ್ಕಾಗಿ ರಚಿತವಾಗಿದೆ ಈ ಕಥೆ. ಪೂರ್ಣ ದೃಷ್ಟಿಯಿಂದ ನೋಡಿದಾಗ ಶ್ರೀಕೃಷ್ಣನ ನಡತೆ ಧರ್ಮಪರವಾದುದು. ಅವನ ಮೇಲೆ ಹೊರಿಸಿದ ಆರೋಪಗಳೆಲ್ಲ ಸುಳ್ಳಿನ ಬೊಂತೆಗಳು ಎಂಬುದನ್ನು ಸಾಧಿಸಲು ಲೇಖಕರು ಶ್ರಮಿಸಿ ಸಫಲರಾಗಿದ್ದಾರೆ. 'ವ್ಯಾಸರ ವಾಸುದೇವ'—ಒಂದು ಸುಂದರವಾದ ಹಾಗು ವಿಚಾರಪೂರ್ಣ ಕಥೆ.

ಅಂತೂ "ಸ್ವರ್ಗಸೋಪಾನ" ಅತ್ಯಂತ ಅಮೂಲ್ಯವಾದ ಹಾಗು ರಸಭರಿತವಾದ ಕಥಾಸಂಕಲನ.

—ಕೆ. ನಾಗೇಂದ್ರಪ್ಪ

ಕನ್ನಡ ಸಣ್ಣ ಕಥೆಗಳು : ಸಂಪಾದಕರು : ಶ್ರೀ ಎಲ್. ಎಸ್. ಶೇಷಗಿರಿರಾಯರು ; ಪ್ರಕಾಶಕರು : ಸಾಹಿತ್ಯ ಅಕಾದೆಮಿಯ ಪರವಾಗಿ ದಿ ಓರಿಯಂಟಲ್ ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು ; ಪುಟಗಳು : ಡೆಮ್ಮಿ XXX+೩೧೮ ; ಬೆಲೆ : ರೂ. ೪–೫೦.

ಕನ್ನಡದಲ್ಲಿ ಸಣ್ಣಕಥೆಯ ಚರಿತ್ರೆಯನ್ನು ರೇಖಿಸುವ ಪ್ರಾತಿನಿಧಿಕ ಸ್ವರೂಪದ ಸಂಕಲನಗಳು (Anthologies) ಇತ್ತೀಚೆಗೆ ಎರಡು ಮಾತ್ರ ಬಂದಿದ್ದುವು : ಒಂದು, ಶ್ರೀ ದೇ. ಜ. ಗೌ. ಅವರು ಸಂಪಾದಿಸಿದ 'ಹೊಸಗನ್ನಡ ಕಥಾಸಂಕಲನ';

ಮತ್ತೊಂದು, ಶ್ರೀ ಕೆ. ನರಸಿಂಹಮೂರ್ತಿಯವರು ಸಂಪಾದಿಸಿದ 'ಅತ್ಯುತ್ತಮ ಸಣ್ಣಕಥೆಗಳು' (ಇದರ ದ್ವಿತೀಯ ಸಂಪುಟ ಮಾತ್ರ ಪ್ರಕಟವಾಗಿದೆ). ಇವುಗಳಲ್ಲಿ, ಮೊದಲನೆಯದರ ವ್ಯಾಪ್ತಿ ಕಡಮೆ, ಎರಡನೆಯದರ ವ್ಯಾಪ್ತಿ ಹೆಚ್ಚು. ಇದೀಗ ಸಾಹಿತ್ಯ ಅಕಾದೆಮಿಗಾಗಿ ಶ್ರೀ ಶೇಷಗಿರಿರಾಯರು ಸಿದ್ಧಗೊಳಿಸಿರುವ ಈ ಸಂಗ್ರಹ ಮೇಲಿನ ಎರಡು ಸಂಕಲನಗಳಿಗೂ ನಡುವೆಯಿದ್ದು, ಕನ್ನಡ ಸಣ್ಣಕಥೆ ನಡೆದು ಬಂದ ದಾರಿಯನ್ನು ಸ್ಥೂಲವಾಗಿ ಪರಿಚಯಮಾಡಿಕೊಡುವುದಾಗಿದೆ. ಇದು ಸ್ವಾಗತಯೋಗ್ಯವೆಂದು ಬೇರೆ ಹೇಳಬೇಕಾಗಿಲ್ಲ.

ಕನ್ನಡ ಸಣ್ಣಕಥೆ ಸುಮಾರು ಮೂರು ದಶಕಗಳ ಮೂರ್ತಿಯಾದರೂ ಅದು ಮಾಡಿರುವ ಸಾಧನೆ ಸಣ್ಣದಲ್ಲ. ಇದುವರೆಗೆ ಮೂರು ನಾಲ್ಕು ಪೀಳಿಗೆಯ ಬರಹಗಾರರು ಅದಕ್ಕೆ ನೀರೆರೆದು ಬೆಳೆಸಿ, ಆ ಕ್ಷೇತ್ರವನ್ನು ಸರ್ವತೋಮುಖವಾಗಿ ವಿಸ್ತರಿಸಿದ್ದಾರೆ. ಶ್ರೀನಿವಾಸರಿಂದ ಸದಾಶಿವರ ತನಕ ಹಲವಾರು ಘಟ್ಟಗಳನ್ನು ಹಾದು ಬೆಳೆದುಬಂದಿರುವ ಈ ಕಲಾಪ್ರಕಾರ ಬಹು ವರ್ಣರಂಜಿತವಾಗಿ ವೈವಿಧ್ಯ ಶ್ರೀಮಂತವಾಗಿ ನೆಲೆಗೊಂಡಿದೆ. ಈ ಶ್ರೀಮಂತಿಕೆಗೊಂದು ತೋರ್‌ಬೆರಳು 'ಕನ್ನಡ ಸಣ್ಣಕಥೆಗಳು' ಎಂಬ ಈ ಹೊತ್ತಗೆ.

ಇಲ್ಲಿ ಇಪ್ಪತ್ತೆರಡು ಸಣ್ಣಕಥೆಗಳು ಮಾಲೆಗೊಂಡಿವೆ; ಶ್ರೀನಿವಾಸ, ಆನಂದ ಕಂದ, ಕುವೆಂಪು, ಗೊರೂರು, ಭಾರತೀಪ್ರಿಯ, ಕಟ್ಟೀಮನಿ, ಚದುರಂಗ, ರಾಮಚಂದ್ರಶರ್ಮ, ಸದಾಶಿವ–ಹೀಗೆ ಹಳೆಯ, ಹೊಸ ತಲೆಮಾರುಗಳ ಇಪ್ಪತ್ತೆರಡು ಮಂದಿ ಕಥೆಗಾರರು ಇಲ್ಲಿ ಕಾಣಿಸಿಕೊಂಡಿದ್ದಾರೆ. ಈ ಕಥೆಗಳನ್ನೆಲ್ಲ ಓದಿದಾಗ, ಕನ್ನಡ ಸಣ್ಣಕಥೆಯಲ್ಲಿ ನಡೆದಿರುವ ಪ್ರಯೋಗಗಳು, ಪಡೆದಿರುವ ಸಿದ್ಧಿ ಎಷ್ಟೆಂಬುದು ವೇದ್ಯವಾಗುತ್ತದೆ; ಪಾತ್ರನಿರ್ಮಿತಿಯಲ್ಲಿ, ತಂತ್ರದಲ್ಲಿ, ದರ್ಶನದಲ್ಲಿ, ಭಾಷೆಯಲ್ಲಿ ಎಷ್ಟೊಂದು ವೈವಿಧ್ಯ ವೈಶಿಷ್ಟ್ಯಗಳನ್ನು ಕನ್ನಡ ಕಥೆ ಮೆರೆದಿದೆಯೆಂಬುದು ಅರಿವಿಗೆ ನಿಲುಕುತ್ತದೆ. ವಿವಿಧ ವರ್ಗಗಳ ಬದುಕು, ಆ ಬದುಕಿನ ಹತ್ತಾರು ಮುಖಗಳು, ಅವುಗಳ ಸಮಸ್ಯೆಗಳು, ಸಾಮಾಜಿಕ ಅನಿಷ್ಟಗಳು, ಮನಸ್ಸಿನ ಹಲವು ಸ್ತರಗಳು, ಜೀವನದ ಸರಳ ಸಂಕೀರ್ಣ ಅನುಭವಗಳು—ಇವುಗಳನ್ನೆಲ್ಲ ಕನ್ನಡ ಕಥೆಗಾರರು ಕಲಾತ್ಮಕವಾಗಿ ಚಿತ್ರಿಸಲು ನಿರಂತರವಾಗಿ ಶ್ರಮಿಸಿದ್ದಾರೆ.

ಎಲ್ಲಕ್ಕಿಂತ ಹೆಚ್ಚಾಗಿ ವ್ಯಕ್ತಿಪ್ರಜ್ಞೆಯ ತಳಕ್ಕೆ ಪಾತಾಳಗರುಡ ಹಾಕುವ ಸಾಹಸ ಮಾಡಿ ನಮ್ಮವರು ಗೆದ್ದಿದ್ದಾರೆ. ಈ ಸಾಹಸ ಇತ್ತೀಚಿನ ಪ್ರವೃತ್ತಿ ಯೆಂದೇನೂ ತಿಳಿಯಬೇಕಾಗಿಲ್ಲ; ಕುವೆಂಪುರವರ 'ಮೀನಾಕ್ಷಿಯ ಮನೆಯ ಮೇಷ್ಟರು', ಆನಂದಕಂದರ 'ನೀನು ಪುಟ್ಟನ ತಾಯಿ'—ಇಂತಹ ಕಥೆಗಳನ್ನು ನೋಡಿದಾಗ ಅದು ಸ್ವಲ್ಪಮಟ್ಟಿಗಾದರೂ ಹಿಂದೆಯೇ ಕಾಣಿಸಿಕೊಂಡಿತ್ತೆಂಬುದು ತಿಳಿಯದಿರದು. ಹರಯದ ಪ್ರಣಯಭಾವಗಳನ್ನು ಸೊಗಸಾಗಿ ವಿಶ್ಲೇಷಿಸುವ ಕುವೆಂಪುರವರ ರೊಮ್ಯಾಂಟಿಕ್-ವಾಸ್ತವಿಕ ರೀತಿಯಾಗಲಿ, ಮಗುವಿನ ಮನಸ್ಸನ್ನು

ಕ್ಷ-ಕಿರಣಗಳಲ್ಲಿ ನೋಡಿರುವ ಆನಂದಕಂದರ ಪ್ರಯತ್ನವಾಗಲಿ ಇತ್ತೀಚಿನ 'ಸೆರಗಿನ ಕೆಂಡ'ದಂತಹ ಪರಿಪಕ್ವ ಕೃತಿಗಳಿಗೆ ಮುನ್ಸೂಚನೆಯಾಗಿದ್ದುವು ಎನ್ನಬಹುದು. ಹಿಂದಿನ ಪೀಳಿಗೆಯ ಕಥೆಗಳು ತಂತ್ರದ ಜಟಿಲತೆಗೆ ಶರಣುಹೋಗದೆ ಸರಳವಾಗಿ ತಮ್ಮ ಉದ್ದೇಶವನ್ನು ಸಾಧಿಸಿರುವುದು ಸೋಜಿಗದ ಸಂಗತಿ. ಕಥೆಯೊಂದನ್ನು ಬರಿಯ ಸಂಭಾಷಣೆಯಲ್ಲಿ ಅನನ್ಯವಾಗಿ ನಿರ್ವಹಿಸಿರುವ ಶ್ರೀಪತಿಯವರ 'ಗುರುಗಳ ಮಹಿಮೆ'ಯಲ್ಲಿ ತಂತ್ರವಿಲ್ಲ ಎನ್ನಲಾದೀತೆ?

ಮೇಲೆ ಹೆಸರಿಸಿದವಲ್ಲದೆ, ಇನ್ನೂ ಅನೇಕ ಸತ್ವಶಾಲಿ ಕಥೆಗಳು ಈ ಸಂಕಲನದಲ್ಲಿ ಬಂದಿವೆ. ಶ್ರೀನಿವಾಸರ ಸಂಸ್ಕೃತಿ ದರ್ಶನ ('ಮಸುಮತ್ತಿ'), ಗೊರೂರರ ಹಾಸ್ಯ ('ಕಮ್ಮಾರ ವೀರಭದ್ರಾಚಾರಿ'), ಭಾರತೀಪ್ರಿಯರ ಏಕಾಗ್ರಕಲೆ ('ಮೋಚಿ'), ಕಟ್ಟೀಮನಿ, ನಿರಂಜನ ಮತ್ತು ಚದುರಂಗರು ಕೊಡುವ ಬಡತನದ ಪರಿಣಾಮುಗಳ ಧ್ವನಿಪೂರ್ಣ ಚಿತ್ರಗಳು ('ಬೂಟ್ ಪಾಲಿಶ್', 'ಕೊನೆಯ ಗಿರಾಕಿ', 'ತುಚೀಪ್ ತುದಾಂಡ್ . . . .'), ಬಾಗಲೋಡಿ ದೇವರಾಯರ ವಿಡಂಬನ ಸಾಮರ್ಥ್ಯ ('ಸತ್ಯಮೇವ ಜಯತೇ'), ನಾಗರಿಕ ಜೀವನದ ಸಂಕೀರ್ಣತೆಯನ್ನು ಚಿತ್ರಿಸುವ ವ್ಯಾಸರಾಯಬಲ್ಲಾಳರ ಕೌಶಲ ('ಭಾವಬಂಧನ'), ರಾಮಚಂದ್ರಶರ್ಮ, ನರೇಂದ್ರಬಾಬು ಮೊದಲಾದವರ ಮನೋವಿಶ್ಲೇಷಣೆ ('ಸೆರಗಿನ ಕೆಂಡ', 'ರೇವು', 'ನಲ್ಲಿಯಲ್ಲಿ ನೀರು ಬಂತು')—ಇವೆಲ್ಲ ಕನ್ನಡ ಸಣ್ಣಕಥೆಗೆ ಹೊಳಪುಕೊಟ್ಟಿರುವ ಅಂಶಗಳು. ಈ ಪ್ರಕಾರ-ಇತರ ಪ್ರಕಾರಗಳಂತೆಯೊ ಅಂತೆ-ಕನ್ನಡದಲ್ಲಿ ತನ್ನ ಪರಮ ಸಿದ್ಧಿಯನ್ನು ಮುಟ್ಟಿದೆಯೆಂದು ಹೇಳಲು ಬಾರದಿದ್ದರೂ, ನಮ್ಮ ಕಥೆಗಾರರು ತಮ್ಮ ಆವರಣದ ಪರಿಮಿತಿಗಳಲ್ಲಿ ಚಿರಂತನವಾದ ಹಲವು ಕತೆಗಳನ್ನು ಸೃಷ್ಟಿಸಿದ್ದಾರೆ ಎನ್ನಲು ಅಡ್ಡಿಯಿಲ್ಲ. ಜೀವನಾನುಭವ, ಪದಾರ್ಥವನ್ನು ಸಾಹಿತ್ಯವಾಗಿ ಮಾರ್ಪಡಿಸುವ ಕಲಾಕೌಶಲ, ಸೂಕ್ಷ್ಮಾನುಭವ ನಿರೂಪಣೆಗೆ ತಕ್ಕ ಭಾಷಾ ಪ್ರಭುತ್ವ-ಪರಿಪೂರ್ಣವಾಗಿಯಲ್ಲದಿದ್ದರೂ ಗಮನಾರ್ಹವಾಗಿ ಕನ್ನಡ ಸಣ್ಣ ಕಥೆಗಳಲ್ಲಿ ವ್ಯಕ್ತವಾಗಿವೆ.

'ಪ್ರಸ್ತಾವನೆ'ಯಲ್ಲಿ ಸಂಪಾದಕರು ಸಂಕಲಿತ ಕಥೆಗಳ ಮತ್ತು ಆಯಾ ಕಥೆಗಾರರ ಬಗ್ಗೆ ಹಿತಮಿತವಾದ, ಉತ್ಪ್ರೇಕ್ಷೆಯಿಲ್ಲದ ವಿಮರ್ಶೆಯನ್ನು ನೀಡಿದ್ದಾರೆ. ಕಡೆಯಲ್ಲಿ ಕಥೆಗಾರರ ಪರಿಚಯವಿದೆ. ಒಂದೇ ಒಂದು ಸಂದೇಹವೇನೆಂದರೆ, ಕೆಲವು ಕಥೆಗಳು ಆಯಾ ಲೇಖಕರ ಅತ್ಯುತ್ತಮ ಕಥೆಗಳಲ್ಲವೇನೊ ಎಂಬುದು (ಉದಾ: 'ಮಸುಮತ್ತಿ'). ಇದು ಅಭಿರುಚಿಯ ಪ್ರಶ್ನೆಯಾಗಬಹುದು. ಸಣ್ಣ ಕಥೆಯ ಸ್ವರೂಪವನ್ನು ಕುರಿತು ವಿಶದವಾಗಿ ನಾಲ್ಕಾರು ಮಾತು ಹೇಳಿದ್ದರೆ 'ಪ್ರಸ್ತಾವನೆ' ತುಂಬಿಕೊಳ್ಳುತ್ತಿತ್ತು ಎನಿಸುತ್ತದೆ.

ಒಟ್ಟಿನಲ್ಲಿ ತೃಪ್ತಿಕರವಾದ ಸಂಕಲನ; ಸಂಗ್ರಹಯೋಗ್ಯವಾದುದು.

—ಸಿ. ಪಿ. ಕೆ.

ಸೆಳೆತಕ್ಕೆ ಸಿಕ್ಕು ಮೂಕನಾಗಿ ಕುಸಿಯುತ್ತಾನೆ. ಸೂರ್ಯಕಾಂತನ ಪರವಾಗಿ ಅವನ ಪ್ರಾಣಮಿತ್ರ ರಸಕೋಶ ಒಗಟುಹಾಕಲೊಪ್ಪಿ ಮೊದಲ ಹತ್ತೊಂಬತ್ತು ದಿವಸ ಪ್ರತಿ ದಿನವೂ ಒಂದೊಂದು ಕತೆಯನ್ನು ಹೇಳಿ ಅದರ ಮೂಲಕ ಒಂದೊಂದು ಒಗಟನ್ನು ಹಾಕುತ್ತಾನೆ. ಅನಂಗರಾಗ ತನ್ನ ತೀಕ್ಷ್ಣಮತಿಯಿಂದ ಆ ಪ್ರಶ್ನೆಗಳಿಗೆ ಸುಲಭ ವಾಗಿ ಉತ್ತರ ಹೇಳಿ ಅವರನ್ನು ನಿರಾಶೆಯ ಕೂಪಕ್ಕೆ ತಳ್ಳಿ ರಾಜನ ಹೃದಯವನ್ನು ಸೂರೆಗೊಂಡು ಹೋಗುತ್ತಾಳೆ. ಇಪ್ಪತ್ತನೆಯ ದಿನ ಸೂರ್ಯಕಾಂತ ಸರಸ್ವತಿಯ ಕೃಪಾಪ್ರಸಾದ ಪಡೆದು ಜಾಣ್ಮೆಯಿಂದ ಪ್ರಶ್ನೆ ಹಾಕಿ, ಅವಳನ್ನು ಸೋಲಿಸಿ ಅವಳ ಕೈಹಿಡಿದು ಕೃತಾರ್ಥನಾಗುತ್ತಾನೆ.

ರಾಜಕುಮಾರಿ ಅನಂಗರಾಗ ಮಹಾಬುದ್ಧಿವಂತೆ. ಕಥೆಯ ಭಂಡಾರವನ್ನೇ ತನ್ನ ಎದೆಯಲ್ಲಿ ತುಂಬಿಕೊಂಡಂತಿರುವ ರಸಭರಿತವಾದ ಕಥೆ ಹೇಳುವುದರಲ್ಲಿ ರಸಕೋಶ ನಿಪುಣ. ಇವರಿಬ್ಬರ ಬುದ್ಧಿವಂತಿಕೆಯ ಮಧ್ಯೆ ನಡೆಯುವ ಸ್ಪರ್ಧೆ ಮನಮೋಹಕ.

ಇಲ್ಲಿ ಬರುವ ಪ್ರತಿಯೊಂದು ಕಥೆಯೂ ಸುಂದರವಾಗಿದೆ, ಸ್ವಾರಸ್ಯವಾಗಿದೆ. ಕಥೆಯಿಂದ ಕಥೆಗೆ ಕ್ರಿಯಾಸಂಬಂಧವಿಲ್ಲದಿದ್ದರೂ, ಒಂದೊಂದು ಕತೆಯೂ ಪ್ರತ್ಯೇಕ ವಾದ ಬಿಡಿಮುತ್ತಿನಂತಿದ್ದರೂ ಸ್ವಾರಸ್ಯತಂತು ಹರಿದುಹೋಗಿಲ್ಲ. ಪ್ರತಿನಿತ್ಯವೂ ರಾಜಕುಮಾರಿ ದಿವ್ಯಾಲಂಕೃತಳಾಗಿ ಸಿಂಹಾಸನದಮೇಲೆ ಕುಳಿತುಕೊಳ್ಳುವ ಚಿತ್ರ, ನಿರಾಶನಾದ ರಾಜ ವಿರಹದಿಂದ ಕಾಲಕಳೆಯುವ ಚಿತ್ರ ಅನುಪಮವಾಗಿದ್ದು ವೈವಿಧ್ಯಪೂರ್ಣವಾಗಿದೆ. ರಾಜಕುಮಾರಿ ತೊಟ್ಟಿರುವ ವೇಷಭೂಷಣಗಳ ವರ್ಣನೆ ಯಲ್ಲಿ, ರಾಜನು ಅನುದಿನವೂ ಆಡುವ ನೋವಿನ ಮಾತುಗಳಲ್ಲಿ ಸೊಗಸಿದೆ—ಹೊಸ ತನವಿದೆ—ರುಚಿಯಿದೆ. ರಾಜ ಹಾಗೂ ರಾಜಕುಮಾರಿಯರ ಅನುದಿನದ ಭೇಟಿ ಬೇಸರ ತರುವಂತಿರದೆ ಸ್ವಾರಸ್ಯವನ್ನು ಹೆಚ್ಚಿಸುವಂತಿವೆ.

ಕೆಲವು ಕಥೆಗಳ ಕೊನೆಯಲ್ಲಿ ಉದಾತ್ತತತ್ವ, ಆದರ್ಶ ನೀತಿ, ಲೋಕೋತ್ತರ ವಾದ ನಡೆವಳಿಕೆಗಳ ಸೂಚನೆಯಿದೆ. ಜೀವನದ ಮಹಾಮೌಲ್ಯಗಳನ್ನು ರಸವತ್ತಾದ ಕಥೆಗಳ ನೆರವಿನಿಂದ ಹೇಳುವ ಇಲ್ಲಿನ ಚಾತುರ್ಯ ಪ್ರಶಂಸನೀಯವಾಗಿದೆ. ಕೇವಲ ನೀತಿಬೋಧೆಯನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಕತೆಗಳನ್ನು ನೀರಸ ಗೊಳಿಸಿಲ್ಲ. ಕೆಲವು ಕಥೆಗಳು ಮಾನವನ ಬುದ್ಧಿಚಮತ್ಕಾರದ ಪರಮಸೀಮೆಯನ್ನು ಸೂಚಿಸುವಂತಿವೆ; ವಿಚಾರಪೂರ್ಣ ಲೌಕಿಕವರ್ತನೆಗೆ ತೋರ್‌ಬೆರಳಾಗಿವೆ.

ಕಥೆಗಳ ಧಾಟಿ, ಧೋರಣೆ ಮೇಲುನೋಟಕ್ಕೆ ಅಡುಗೂಳಜ್ಜಿಯ ಕಥೆಗಳನ್ನು ಹೋಲುವಂತಿದ್ದರೂ ಅವು ಬೆಳೆದ ಬುದ್ಧಿಯ ಪ್ರೌಢರ ಕುತೂಹಲವನ್ನು ಕೆರಳಿಸಿ ಅವರಿಗೆ ಆನಂದವನ್ನುಂಟುಮಾಡಲು ಸಮರ್ಥವಾಗಿವೆ. ಕೆಲವು ಕಡೆ ಮಾನವನ ಜೀವನ, ಸ್ತ್ರೀಯರ ವರ್ತನೆ—ಇವುಗಳ ಬಗ್ಗೆ ಬರುವ ಅಭಿಪ್ರಾಯಗಳು ಅತ್ಯಮೂಲ್ಯ ವಾಗಿವೆ. "ಶಶಿಲೇಖಾ" ಅತ್ಯಂತ ಸೊಗಸಾಗಿರುವ ಕಥೆ.

"ನೀಲನೇತ್ರೆ" ಮತ್ತೊಂದು ಸುಂದರವಾದ ಕಥೆ. ಇದೂ ಕೂಡ ಪ್ರೇಮದ ಕತೆ. ಶಿವಾಂಶ ಸಂಭೂತನಾದ ಮಹಾಪರಾಕ್ರಮಿಯಾದ ರಾಜ ರುದ್ರಾಲಕ ಯಾವ ಸ್ತ್ರೀಯ ದಾಸನಾಗುವುದಕ್ಕಿಷ್ಟವಿಲ್ಲದೆ ಅವಿವಾಹಿತನಾಗುಳಿಯುತ್ತಾನೆ. ಆದರೆ ವಿಧಿವಿಲಾಸದಿಂದ ಕಾಡಿಗೆ ಬೇಟೆಯಾಡಲು ಹೋಗಿ, ಒಬ್ಬ ಅಪ್ಸರ ಕನ್ಯೆಯಲ್ಲಿ ಅನುರಕ್ತನಾಗಿ, ಅವಳನ್ನು ಕರೆತಂದು ವಿವಾಹವಾಗಿ, ಅವಳಿಂದ ಅಗಲದೆ ಇರುತ್ತಾನೆ. ಒಮ್ಮೆ ಅವನು ಯುದ್ಧಕ್ಕೆ ಹೋದಾಗ ಅವಳು ಸತ್ತುಹೋಗುತ್ತಾಳೆ. ಸುದ್ದಿ ತಿಳಿದು ರಾಜ ಹುಚ್ಚನಂತಾಗುತ್ತಾನೆ. ಬಹಳ ಗೋಳಾಡಿ ಕಡೆಗೆ ಜೀವಚ್ಛವದಂತೆ ನೀರಸವಾದ ಬಾಳನ್ನು ನಡೆಸುತ್ತಾನೆ. ಕೊನೆಗೆ ಈಶ್ವರನ ಅನುಗ್ರಹದಿಂದ ಕನಸಿನಲ್ಲಿ ತನ್ನ ಪ್ರಿಯತಮೆಯೊಡನೆ ಕೂಡಿ ಸುಖಪಡುತ್ತಾನೆ. ಇದು "ನೀಲನೇತ್ರೆ"ಯ ಕಥೆ.

ಬೇಟೆಗೆ ಹೋದ ರುದ್ರಾಲಕ ತಟ್ಟನೆ ಆ ಸುರಸುಂದರಿಯನ್ನು ಕಾಣುವುದು, ಪುರುಷರ ಮುಖವನ್ನೇ ನೋಡದ ಆ ಮುಗ್ಧಮನೋಹರಿಯೊಡನೆ ಸರಸ ಸಂಭಾಷಣೆಯಲ್ಲಿ ತೊಡಗುವುದು, ಅವಳ ಅನುಪಮಸೌಂದರ್ಯಕ್ಕೂ ನಿಷ್ಕಲ್ಮಷ ಮನೋಭಾವಕ್ಕೂ ಮಾರುಹೋಗಿ ಪ್ರೀತಿಯಲ್ಲಿ ಕರಗುತ್ತಿರುವಾಗ ಅವಳು ಚಿಟ್ಟನೆ ಚೀರಿ ತಾನು ಬೇರೊಬ್ಬನಿಗೆ ಸಮರ್ಪಿತಳೆಂದು ಹೇಳುವುದು, ಆ ಬೇರೊಬ್ಬನು ತಾನೇ ಎಂದು ತಿಳಿದರೂ ರುದ್ರಾಲಕ ಅವಳನ್ನು ಪರೀಕ್ಷಿಸುವುದು, ಕಡೆಗೆ ವಿಷಯ ಗೊತ್ತಾದಾಗ ಅಳಿಚುಂಬಿತೆ ತನ್ನ ಸರ್ವಸ್ವವನ್ನು ಅವನಲ್ಲಿ ಸಮರ್ಪಿಸಿಕೊಳ್ಳುವುದು—ಇವು ತುಂಬ ಸುಂದರವಾಗಿ ನಿರೂಪಿತವಾಗಿರುವ ರಸಘಟ್ಟಗಳು.

ಈ ಕತೆಯ ಸಂವಿಧಾನ "ಶಶಿಲೇಖಾ" ಕಥೆಯ ಸಂವಿಧಾನದಷ್ಟು ಸರಳವಾಗಿಲ್ಲ. ಆದರೂ ಹೆಚ್ಚು ಕಲಾತ್ಮಕವಾಗಿದೆ. ಮೊದಲ ಕತೆಗಿಂತಲೂ ಈ ಕತೆಯಲ್ಲಿ ಅಲೌಕಿಕತೆ ಹೆಚ್ಚು. ಕಥೆಯ ಸ್ವಾರಸ್ಯ ಎಲ್ಲೂ ಕೆಟ್ಟಿಲ್ಲ. ಶೃಂಗಾರಚಿತ್ರಗಳನ್ನು ಬಹಳ ಮೋಹಕವಾಗಿ ಬಿಡಿಸುತ್ತಾರೆ ಕತೆಗಾರರು. ಕತೆಯನ್ನು ಹೇಳುವ ರೀತಿ ಸೊಗಸಾಗಿದೆ. ಶೈಲಿ ಸರಳವಾಗಿದೆ, ಆಕರ್ಷಕವಾಗಿದೆ. ಅಂತೂ ಇದು ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ.

—ಕೆ. ನಾಗೇಂದ್ರಪ್ಪ

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ : ಲೇಖಕರು : ಶ್ರೀ. "ಶ್ರೀ" ಅವರು ; ಪ್ರಕಾಶಕರು : ಕಾವ್ಯಾಲಯ, ಮೈಸೂರು ; ಕಿರೀಟ ಅಷ್ಟದಳ ; ಪು. xxxii+೩೫೯ ; ಸಾದಾ ಪ್ರತಿ ರೂ. ೫ ; ಕ್ಯಾಲಿಕೊ ಪ್ರತಿ ರೂ. ೭.

ಆಧುನಿಕ ಕನ್ನಡದ ಆಚಾರ್ಯರೆನ್ನಿಸಿದ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಭಾಷಣಗಳು, ಲೇಖನಗಳು, ಮುನ್ನುಡಿಗಳು ಮತ್ತು ಗ್ರಂಥವಿಮರ್ಶೆಗಳನ್ನು ಬಿಡಿ ಬಿಡಿಯಾಗಿ ಪ್ರಕಟಿಸಿ, ಕನ್ನಡಿಗರಿಗೆ ಕಾಣಿಕೆಯನ್ನಾಗಿ ನೀಡಿದ

ಮೈಸೂರಿನ ಕಾವ್ಯಾಲಯದವರು ಇದೀಗ "ಶ್ರೀ" ಅವರ ಎಲ್ಲ ಬರೆಹಗಳನ್ನೂ ಒಂದೇ ಸಂಪುಟದಲ್ಲಿ ಕೂಡಿಸಿಕೊಟ್ಟಿರುತ್ತಾರೆ. ಈ ಗ್ರಂಥದಲ್ಲಿ "ಶ್ರೀ" ಅವರ ಒಟ್ಟು ೫೩ ಬರೆಹಗಳಿವೆ. ಪುಸ್ತಕಕ್ಕೆ ತಿಲಕವಿಟ್ಟಂತೆ ಶ್ರೀ ಎಸ್. ವಿ. ರಂಗಣ್ಣನವರ "ಶ್ರೀ" ಅವರ ವ್ಯಕ್ತಿತ್ವದ ಪರಿಚಯಾತ್ಮಕ ಲೇಖನವಿದೆ.

ಪ್ರಕೃತ ಗ್ರಂಥವು ಈಗಾಗಲೇ ಎರಡು ಬಾರಿ ಮುದ್ರಣವಾಗಿದ್ದು, ಇದು ಮೂರನೆಯ ಮುದ್ರಣವಾಗಿರುವುದರಿಂದ ಕೃತಿಯನ್ನು ಸವಿಸ್ತಾರವಾಗಿ ಪರಿಚಯ ಮಾಡಿಕೊಡಬೇಕಾದ ಅಗತ್ಯ ಹೆಚ್ಚಾಗಿಲ್ಲ. ಶ್ರೀ "ಶ್ರೀ" ಅವರನ್ನು ಕಂಡು, ಅವರ ನುಡಿಯನ್ನು ಕೇಳಿ, ಅವರ ವ್ಯಕ್ತಿತ್ವದ ಪ್ರಭಾವವನ್ನು ಮೆಚ್ಚಿಕೊಂಡವರಿಗೆ ಈ ಕೃತಿಯ ಒಂದೊಂದು ಪುಟವೂ ಆ ಗುರುವರ್ಯರ ಸವಿನೆನಪನ್ನು ಮತ್ತೊಮ್ಮೆ ಉಂಟುಮಾಡದೆ ಇರದು.

ಇತರರು ಈ ರಚನೆಗಳನ್ನು ವ್ಯಾಸಂಗಮಾಡಲು ತೊಡಗಿದಾಗ, "ಶ್ರೀ" ಅವರಲ್ಲಿ ಪ್ರಾಚೀನ ಕಾವ್ಯಗಳಲ್ಲಿನ ಆಸಕ್ತಿಯೂ ನೂತನ ಸಾಹಿತ್ಯಸೃಷ್ಟಿಗಾಗಿ ಮಿಡಿಯುವ ಹೃದಯದ ಹಂಬಲವೂ ಹೇಗೆ ಸರಿಸಮನಾಗಿ ಸಮನ್ವಯಗೊಂಡಿವೆ ಯೆಂಬುದು ವಿದಿತವಾಗುತ್ತದೆ. "ಶ್ರೀ" ಅವರ ಒಂದೊಂದು ಭಾಷಣವೂ ಒಂದೊಂದು ರಸಘಟ್ಟಿ. ಹಳೆಯ ಸಾಹಿತ್ಯದ ತಿರುಳನ್ನು ಎತ್ತಿ ತೋರಿಸುವ ಅವರ ವಾದಸರಣಿ, ಲೋಪದೋಷಗಳನ್ನು ನಿರ್ಭಯವಾಗಿ ನಿರೂಪಿಸುವ ಅವರ ಕೆಚ್ಚು, ಹೊಸ ಹೊಸ ಪ್ರಕಾರಗಳ ಕಡೆಗೆ ನಮ್ಮ ಮನಸ್ಸನ್ನು ಸೆಳೆಯುವ ಅವರ ಮಾತಿನ ಮೋಡಿ, ತುಂಬು ಹೊನಲಿನಂತೆ ಪ್ರವಹಿಸುವ ಅವರ ಕನ್ನಡ ಗದ್ಯದ ನಿರರ್ಗಳವಾದ ವಾಕ್ಯವಿಲಾಸ ಇವೇ ಮೊದಲಾದ ಅವರ "ಕಂಠಶ್ರೀ"ಯ ಅಗ್ಗಳಿಕೆಯನ್ನು ಯಾರಾದರೂ ಸುಲಭವಾಗಿ ಮನಗಾಣಬಹುದು. ಶ್ರೀಯುತರ ಜೀವನ ವ್ಯಾಸಂಗ ಪೂರ್ಣವಾದುದಷ್ಟೇ ಅಲ್ಲದೆ, ಒಂದು ಜನತೆಯನ್ನೇ ಎಚ್ಚರಿಸುವಂತಹ ಕ್ರಿಯಾ ಶಕ್ತಿಯನ್ನು ಉಳ್ಳದ್ದೂ ಹೌದು. ಕನ್ನಡ ನುಡಿ, ಕನ್ನಡ ನಾಡು ಮತ್ತು ಕನ್ನಡ ಜನದ ಏಳಿಗೆಗಾಗಿ ಅವರು ಕೈಕೊಂಡ ಕಾರ್ಯಗಳು ಒಂದಲ್ಲ, ಎರಡಲ್ಲ ; ಹಲ ವಾರಿವೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಶ್ರಮಿಸಿದ್ದಾರೆ; ಕನ್ನಡ ನಾಡಿನ ಮೂಲೆ ಮೂಲೆಗಳಿಗೂ ಹೋಗಿ ಕನ್ನಡಿಗರನ್ನು ಎಚ್ಚರಿಸಿ ಬಂದಿದ್ದಾರೆ; ಕನ್ನಡ ನಾಡಿನ ಏಕೀಕರಣಕ್ಕಾಗಿ ಹಗಲಿರುಳೂ ಹಂಬಲಿಸಿ, ಅದಕ್ಕಾಗಿ ಸಂಕಲ್ಪತೊಟ್ಟು ದುಡಿದಿದ್ದಾರೆ. ಇಂಗ್ಲಿಷ್ ಬಲ್ಲವರ ಅನಾದರಣೆಗೆ ಗುರಿಯಾಗಿದ್ದ ಕನ್ನಡ ಭಾಷೆಗೆ ಇಂಗ್ಲಿಷ್ ಸಾಹಿತ್ಯದ ಸವಿ ಸೊಬಗಗಳನ್ನು ನೀಡಿ, ಎಲ್ಲರ ಆದರಕ್ಕೂ ಪಾತ್ರ ವಾಗುವಂತೆ ತಾವೇ ಮಾರ್ಗದರ್ಶಕರಾಗಿದ್ದಾರೆ. ಸಂಸ್ಕೃತದ ಅತಿಪ್ರಭಾವವನ್ನು ನಿವಾರಿಸಿ, ಕನ್ನಡ ನುಡಿಯ ಜಾಯಮಾನವನ್ನು ನಾನಾ ಹಂತಗಳಲ್ಲಿ ಗುರುತಿಸಿ ತೋರಿರುತ್ತಾರೆ. "ಶ್ರೀ" ಅವರ ಭಾಷಣಗಳಲ್ಲಿ ವಿಚಾರ, ಪ್ರಚಾರಗಳು ಹಾಸು ಹೊಕ್ಕಾಗಿ ಹೆಣೆದುಕೊಂಡು ಬಂದಿವೆ. ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ

ಭಾಷಣವೇ ಆಗಲಿ, ಸ್ವಾಗತಾಧ್ಯಕ್ಷರ ಪ್ರಾಸ್ತಾವಿಕ ಭಾಷಣವೇ ಆಗಲಿ, ಕಡೆಗೆ ಒಂದು ವಂದನಾರ್ಪಣೆಯೇ ಆಗಿರಲಿ, ಅದರಲ್ಲಿ ಅವರ ಕನ್ನಡದ ಅಭಿಮಾನ, ಕನ್ನಡದ ವಿದ್ವತ್ತುಗಳು ತಾನೇ ತಾನಾಗಿ ಮಿಂಚಿನಂತೆ ಕಾಂತಿಯುಕ್ತವಾಗಿ ಕಂಡು ಬರುವುದನ್ನು ಇಂದಿನವರೂ ಕಾಣಬಹುದು.

"ಶ್ರೀ" ಅವರು ಸಾಹಿತ್ಯದ ಶಾಸ್ತ್ರೀಯ ಭಾಗವನ್ನೂ, ಸೌಂದರ್ಯ ದೃಷ್ಟಿಯನ್ನೂ ಎಲ್ಲರಿಗೂ ರುಚಿಸುವಂತೆ ಪರಿಚಯ ಮಾಡಿಕೊಡಲು ಶಕ್ತರಾಗಿದ್ದರು. ಪ್ರಕೃತ ಸಂಕಲನದಲ್ಲಿ ಕಂಡುಬರುವ "ಪೂರ್ವದ ಹಳಗನ್ನಡ ಮತ್ತು ತಮಿಳು: ಕನ್ನಡ ಮೊದಲೊ ತಮಿಳು ಮೊದಲೊ?" ಎಂಬ ರಚನೆಯನ್ನು ಓದಿದವರಿಗೆ ಅವರ ಭಾಷಾವಿಜ್ಞಾನದ ಆಳ ಮತ್ತು ವ್ಯಾಪ್ತಿಗಳೇನು ಎನ್ನುವುದರ ಅರಿವಾಗುತ್ತದೆ. ಕನ್ನಡದ ಕೆಲವು ಶಬ್ದರೂಪಗಳು ತಮಿಳಿನ ಶಬ್ದರೂಪಗಳಿಗಿಂತಲೂ ಪ್ರಾಚೀನವಾದುವು ಎಂಬ ಹೇಳಿಕೆಯೇ ಅಂದಿನ ವಿದ್ವಾಂಸರಿಗೆ (ಈ ಭಾಷಣವನ್ನು ೧೯೪೦ರಲ್ಲಿ ತಿರುಪತಿಯಲ್ಲಿ ಸೇರಿದ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದಲ್ಲಿ ಮಾಡಿದ್ದು.) ಕಣ್ತೆರೆಯುವಂತೆ ಮಾಡಿದ್ದರೆ ಆಶ್ಚರ್ಯವೇನಿಲ್ಲ. ದ್ರಾವಿಡ ಭಾಷೆಗಳಲ್ಲಿ ತಮಿಳು ಹಳೆಯದಾದರೂ, ಪೂರ್ವ ದ್ರಾವಿಡದ ಹಳೆಯುಳಿಕೆಗಳು ಒಂದೇ ಭಾಷೆಗೆ ಮಾತ್ರವೇ ಸೀಮಿತವಾಗದೆ, ಅದಕ್ಕೆ ಸೇರಿದ ಇತರ ಭಾಷೆಗಳಲ್ಲಿಯೂ ಸಾಕಾದಷ್ಟು ಇರಬಹುದು ಎಂಬ ಇಂದಿನ ವಿದ್ವಾಂಸರ ತೀರ್ಮಾನಕ್ಕೆ "ಶ್ರೀ" ಅವರ ಈ ವಿಚಾರ ದೃಷ್ಟಿ ಒಂದು ಕೈಗಂಬದಂತಿದೆಯೆಂದು ಹೇಳಬಹುದು. ಶ್ರೀಯುತರು ಪೂರ್ವದ ಹಳಗನ್ನಡದ ಪುನರ್ರಚನೆಯನ್ನು ಮಾಡಿರುವ ಕ್ರಮವೇ ಆಗಲಿ, ಕನ್ನಡ ತಮಿಳುಗಳ ಸಂಪರ್ಕ, ಸಂಬಂಧಗಳನ್ನು ಕುರಿತು ಮಾಡಿರುವ ಸಂಶೋಧನೆಯೇ ಆಗಲಿ, ಭಾಷಾ ವಿಜ್ಞಾನಿಗಳಿಗೆ ನೂತನ ಪ್ರಚೋದನೆಯನ್ನು ಉಂಟುಮಾಡುವಂಥವು.

ಪ್ರಕೃತ ಸಂಪುಟದಲ್ಲಿನ ಎರಡನೆಯ ಭಾಗದಲ್ಲಿ "ಶ್ರೀ" ಅವರ ಮುನ್ನುಡಿಗಳ ಸೂಕ್ತ ಭಾಗಗಳನ್ನು ಸಂಪಾದಕರು ಬಹು ಜಾಣ್ಮೆಯಿಂದ ಆರಿಸಿಕೊಟ್ಟಿರುತ್ತಾರೆ. "ಶ್ರೀ" ಅವರು ರನ್ನನ ರಸಘಟ್ಟಗಳನ್ನೂ, ಅಭಿನವ ಪಂಪನ ಉದಾತ್ತತೆಯನ್ನೂ, ಕುಮಾರವ್ಯಾಸನ ಕೃಷ್ಣಭಕ್ತಿಯನ್ನೂ, ಪಂಪನ ಅದ್ವಿತೀಯತೆಯನ್ನೂ, ಕನ್ನಡಿಗರಿಗೆ ಅತ್ಯಪೂರ್ವವಾದ ರೀತಿಯಲ್ಲಿ ಮಾಡಿಕೊಟ್ಟಿರುತ್ತಾರೆ. "ಹಳೆಯದೆಲ್ಲ ಹೊನ್ನು ಹೊಸತೆಲ್ಲ ಮಣ್ಣು" ಎನ್ನುವ ಸಂಪ್ರದಾಯಕ್ಕೆ ಅವರು ಸೇರಿದವರಲ್ಲ. "ಜಳ್ಳನ್ನು ತೂರಿ ಕಾಳನ್ನು ಆಯ್ದುಕೊಳ್ಳಿ" ಎಂದು ಎಚ್ಚರಿಕೆಯನ್ನು ನೀಡಿದವರು ಅವರು. ತರುಣ ಕವಿಗಳನ್ನು ಹುರಿದುಂಬಿಸಿ ಹೊಸ ಹಾಡನ್ನು ಕಲಿಸಿಕೊಟ್ಟಂತೆಯೇ, ಆಧುನಿಕ ದೃಷ್ಟಿಯನ್ನುಳ್ಳ ಹೊಸ ವಿದ್ವಾಂಸರ ಪೀಳಿಗೆಯೊಂದನ್ನು ನಿರ್ಮಿಸಿ, ಅವರ ಮೂಲಕ ನಮ್ಮ ಪ್ರಾಚೀನ ಕಾವ್ಯಗಳ ಸಾರವನ್ನು ಸಂಗ್ರಹಿಸಿಕೊಟ್ಟ ಧೀಮಂತರೂ ಹೌದು. ಅವರು ಬರೆದಿರುವ ಒಂದೊಂದು ಮುನ್ನುಡಿಯೂ ಕನ್ನಡದ ಮುನ್ನಡೆಯ ಒಂದೊಂದು ಸಂಕೇತವೆಂದು ಹೇಳಿದರೆ ತಪ್ಪಾಗದು. ಪ್ರಕೃತ

ಸಂಕಲನದ ಸಂಪಾದಕರು, ಉಪಚಾರೋಕ್ತಿ ಹಾಗೂ ನುಸುಳಿ ಬರುವ ಉದ್ಗಾರಗಳನ್ನು ಬಿಟ್ಟು, ಉಪಯುಕ್ತವಾದ ಭಾಗಗಳನ್ನೇ ಆರಿಸಿಕೊಟ್ಟಿರುವುದರಿಂದ ಈ ವಿಭಾಗದ ಸಂಕಲನವು ಓದುವವರಿಗೆ ಈ ಬಗ್ಗೆ ತುಂಬ ನೆರವಾಗಿದೆ.

ಮೂರನೆಯ ವಿಭಾಗದಲ್ಲಿ "ಶ್ರೀ" ಅವರ ಕೆಲವು ಇಂಗ್ಲಿಷ್ ಬರೆಹಗಳನ್ನೂ ಸೇರಿಸಿಕೊಟ್ಟಿರುವುದು ಒಂದು ದೃಷ್ಟಿಯಿಂದ ಸ್ವಾಗತಾರ್ಹವಾಗಿದೆ. ಏಕೆಂದರೆ, "ಶ್ರೀ" ಅವರು ನಾಗಚಂದ್ರನ ರಾವಣನನ್ನು ಕುರಿತು ವಿಚಾರಮಾಡಿದ ಇಂಗ್ಲಿಷ್ ಲೇಖನ ವಿದ್ವತ್ ಸಮೂಹಕ್ಕೆ ಒಂದು ಅಪೂರ್ವವಾದ ರಸದ ಔತಣ. ಅದರ ಸವಿಯನ್ನು ಕನ್ನಡಿಗರು, "ಅಭಿನವ ಪಂಪ" ಎಂಬ ಪ್ರಶಸ್ತಿ ಗ್ರಂಥಕ್ಕೆ ಅವರು ಬರೆದಿರುವ ಮುನ್ನುಡಿಯಲ್ಲಿ ಪಡೆದರೂ, ಅದಕ್ಕೂ ಪೂರ್ವಭಾವಿಯಾಗಿ ಬಂದ ಈ ಇಂಗ್ಲಿಷ್ ಲೇಖನ ಐತಿಹಾಸಿಕ ಮಹತ್ವವುಳ್ಳದ್ದಾಗಿದೆ. ಇಂತೆಯೇ "ಕವಿರಾಜಮಾರ್ಗ"ವನ್ನು ಕುರಿತು ಬರೆದಿರುವ ಅವರ ಮತ್ತೊಂದು ಬರೆಹವೂ ವಿಚಾರಪೂರ್ಣವಾಗಿದೆ.

ಆಧುನಿಕ ಕನ್ನಡ ಸಾಹಿತ್ಯದ ಹೆಬ್ಬಾಗಿಲಿನಲ್ಲಿ ಸರ್ವದಾ ನಮ್ಮನ್ನು ಎದುರುಗೊಳ್ಳುವ ಆಚಾರ್ಯಪುರುಷರಾದ "ಶ್ರೀ" ಅವರ ವ್ಯಕ್ತಿತ್ವದ ಪರಿಚಯವನ್ನು ಮಾಡಿಕೊಡುವ ಶ್ರೀ ಎಸ್. ವಿ. ರಂಗಣ್ಣನವರ "ಪೀಠಿಕೆ"ಯಂತೂ—"ಶ್ರೀ" ಅವರ ವಾಗ್ವಿಲಾಸದಂತೆಯೇ—ರಸಪೂರ್ಣವಾಗಿದೆ. "ಶ್ರೀ" ಅವರ ಮಾತುಗಳನ್ನೇ ಮಧ್ಯೆ ಮಧ್ಯೆ, ಉದಾಹರಿಸಿ, ಆ ಗುರುವರ್ಯರ ಶಕ್ತಿ ಸಾಮರ್ಥ್ಯಗಳನ್ನು ಎಳೆ ಎಳೆಯಾಗಿ ಬಿಡಿಸಿ ಪ್ರತಿಪಾದಿಸಿರುವ ಭಕ್ತಿಪೂರ್ವಕವಾದ ಶಿಷ್ಯ ಶ್ರೇಷ್ಠರೊಬ್ಬರ ಈ ನುಡಿಗಳೂ ಕನ್ನಡದ ಗದ್ಯಸಾಹಿತ್ಯದ ಪ್ರಗತಿಯನ್ನು ಸಾರಿ ಹೇಳುವಂತಿವೆ. ಇಲ್ಲಿನ ಚಿತ್ರಣದಲ್ಲಿ ಅಭಿಮಾನವಿದೆ; ಅಂತರಂಗವನ್ನು ಒಳಹೊಕ್ಕು ನೋಡುವ ಸೂಕ್ಷ್ಮ ದೃಷ್ಟಿಯಿದೆ. ಒಪ್ಪಿದ್ದನ್ನು ಮೆಚ್ಚಿ ಹೇಳುವ ಸವಿನುಡಿಯಿದೆ; ಒಪ್ಪಿಗೆಯಾಗದೆ ಹೋದುದನ್ನು ಹಿಕ್ಕಿ ತೋರಿಸುವ ನಿಷ್ಪಕ್ಷಪಾತವಾದ ಕೆಚ್ಚಿನ ನುಡಿಯೂ ಇದೆ. "ಶ್ರೀ" ಅವರ ಬರೆವಣಿಗೆಯನ್ನು, ಆ ಮೂಲಕ ಅವರ ಆದರ್ಶವನ್ನು ಇಂದಿನ ಗಣ್ಯ ವಿದ್ವಾಂಸರೊಬ್ಬರು ವಿಚಾರಮಾಡಿ, ವಿಶ್ಲೇಷಿಸಿ, ನಮ್ಮ ಮುಂದೆ ಇಟ್ಟಿರುವ ಈ ಪರಿಚಯಾತ್ಮಕ ಲೇಖನ ನಮ್ಮೆಲ್ಲರಿಗೂ ಒಂದು ಅನುಗ್ರಹವೇ ಸರಿ. "ಶ್ರೀ" ಅವರ ವಾಣಿಯನ್ನು ಮರೆಯದಂತೆ, ಅವರ ಸೇವೆ, ಸಂಕಲ್ಪಗಳನ್ನು ಮುಂದುವರಿಸುವಂತೆ, ಅವರು ಆಡಿದ ಮಾತು, ಬರೆದ ಬರೆವಣಿಗೆಗಳನ್ನು ಇಷ್ಟು ಅಚ್ಚುಕಟ್ಟಾಗಿ ಸಂಗ್ರಹಿಸಿ, ಸಂಪಾದಿಸಿ, ಪ್ರಕಟಿಸಿರುವ ಶ್ರೀ ಕೂಡಲಿ ಚಿದಂಬರಂ ಅವರಿಗೆ ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇವೆ. ಈ ಸಂಕಲನ ಗ್ರಂಥವು ಪ್ರತಿಯೊಬ್ಬ ಕನ್ನಡಿಗನಿಗೂ ಸರ್ವದಾ ಸ್ಫೂರ್ತಿದಾಯಕವಾಗಿ ಮೆರೆಯಲಿ; ಕನ್ನಡಕ್ಕೆ ಕೀರ್ತಿಕಲಶವಾಗಿ ಬೆಳಗಲಿ.

—ಗುಂಡಮರಾಜು

ಪುನರಾಲೋಕನ

ಸಿದ್ಧರಾಮನ ವೀರಶೈವತ್ವ

೧೯೪೧ರಲ್ಲಿ ಅಚ್ಚಾಗಿ ಪ್ರಕಟವಾದ ರಾಘವಾಂಕ ಕೃತ 'ಸಿದ್ಧರಾಮ ಚಾರಿತ್ರ'ದ ಮುನ್ನುಡಿಯಲ್ಲಿ 'ಒಂದು ಸಮಸ್ಯೆ' ಎಂಬ ಭಾಗದಲ್ಲಿ ಸಿದ್ಧರಾಮನು ಶೈವನೇ ಅಥವಾ ವೀರಶೈವನೇ ಎಂಬ ವಿಷಯವನ್ನು ಚರ್ಚೆ ಮಾಡಲಾಗಿತ್ತು. ಆಗ ನನಗೆ ದೊರೆತಿದ್ದ ಆಧಾರಗಳಿಂದ, ಎರಡಕ್ಕೂ ಪೋಷಕವಾದ ಮತ್ತು ವಿರುದ್ಧವಾದ ಅಂಶಗಳಿಂದ, ಸಿದ್ಧರಾಮನು ಬಹುಶಃ ಶೈವನಾಗಿದ್ದನೆಂದೂ "ಶೂನ್ಯಸಂಪಾದನೆ" ರಚಿತವಾದ ಕಾಲದಲ್ಲಿ ಆತನಿಗೆ ವೀರಶೈವತ್ವ ಸಂಪ್ರಾಪ್ತವಾಗಿದ್ದಿರಬಹುದೆಂದೂ ತಾತ್ಕಾಲಿಕವಾದ ಒಂದು ತೀರ್ಮಾನಕ್ಕೆ ಬಂದಿದ್ದೆನು. ಇದಾಗಿ ಇಪ್ಪತ್ತೆರಡು ವರ್ಷಗಳಾಯಿತು. ಅನೇಕ ಜನ ವಿದ್ವಾಂಸರು ನನ್ನ ತಾತ್ಕಾಲಿಕ ತೀರ್ಮಾನವನ್ನು ಖಂಡಿಸಿ ತೆಗಳಿ ಬರೆದಿದ್ದಾರೆ. ಹೊಸ ಆಧಾರಗಳನ್ನೇನಾದರೂ ಅವರು ನನಗೆ ತೋರಿಸಿದ್ದರೆ ಅದನ್ನು ಅನುಸರಿಸಿ ನನ್ನ ತೀರ್ಮಾನವನ್ನು ವಿಮರ್ಶೆ ಮಾಡುವುದಕ್ಕೆ ನನಗೆ ಅವಕಾಶವಾಗುತ್ತಿತ್ತು. ಊಹೆಗಳು, ಯುಕ್ತಿವಾದಗಳು, ನಂಬಿಕೆಗಳು, ಕುದೃಷ್ಟಿಯಾರೋಪಗಳು ಮುಂತಾದುವೆಲ್ಲ ಬಂದುವು; ಸಾಲದೆಂಬಂತೆ ಪ್ರತಿಭಟನಾ ಸಭೆಗಳು ನಡೆದು ನೋವನ್ನುಂಟುಮಾಡುವ ಠರಾವುಗಳೂ ಸ್ವೀಕೃತವಾದುವು. ತಿಳಿಯದವರ ವಿಷಯ ಹಾಗಿರಲಿ; ವಿಶ್ವವಿದ್ಯಾನಿಲಯಗಳಲ್ಲಿ ಓದಿ ಉದಾರ ವಿದ್ಯಾಭ್ಯಾಸವನ್ನು ಪಡೆದ ಮಹನೀಯರೂ ವಿದ್ವಾಂಸರೂ ವಿದ್ವತ್ತಿನ ದೃಷ್ಟಿಯಿಂದ ಈ ವಿಷಯವನ್ನು ನೋಡದೆ ಸಾಮಾನ್ಯರಂತೆ ನಡೆದುಕೊಂಡದ್ದು ತೀವ್ರ ವಿಷಾದಕರ. ಈಗ ನನ್ನ ಸ್ನೇಹಿತರಾದ ಡಾ॥ ತಿಪ್ಪೇರುದ್ರಸ್ವಾಮಿಗಳು ಪ್ರಕಟಿಸಿರುವ ತಮ್ಮ "ಶೂನ್ಯತತ್ವ ವಿಕಾಸ ಮತ್ತು ಶೂನ್ಯಸಂಪಾದನೆ" ಎಂಬ ಗ್ರಂಥದಲ್ಲಿ ಈ ವಿಷಯವನ್ನು ಮರಳಿ ಚರ್ಚಿಸಿದ್ದಾರೆ. ಅವರ ಆವೇಶವೂ ಧರ್ಮಾಭಿಮಾನವೂ ಹಾಗಿರಲಿ; ಅದಕ್ಕೆ ನನ್ನ ಮೆಚ್ಚುಗೆ ಇರಲಿ. ಹೊಸದಾಗಿ ಅವರು ಏನನ್ನಾದರೂ ಹೇಳಿದ್ದಾರೋ ಎಂದು ಕುತೂಹಲದಿಂದ ನೋಡಿದೆ; ನೂತನ ವಿಷಯ ಯಾವುದೂ ನನಗೆ ಸಿಕ್ಕಲಿಲ್ಲ. ಬರಿಯ 'ಸಮರ್ಥನೆ'ಗಳಿಂದ ಸತ್ಯಾಂಶ ಹೊರಬೀಳಲಾರದು. ಸೌಜನ್ಯವಿಲ್ಲದ ದೃಷ್ಟಿಗೆ ಸತ್ಯ ಕಾಣುವ ಸಂಭವ ಕಡಮೆ. ಈಗ ನನಗೆ ದೊರೆತಿರುವ ಹೊಸ ಆಧಾರವನ್ನು ಇಲ್ಲಿ ಸೂಚಿಸಬಯಸುತ್ತೇನೆ.

ಕೆಲವು ತಿಂಗಳುಗಳ ಹಿಂದೆ ನನ್ನ ಸ್ನೇಹಿತರಾದ ಎಸ್. ನಾರಾಯಣಶೆಟ್ಟಿ, ಎಂ.ಎ. ಅವರು ನನ್ನ ಗಮನಕ್ಕೆ ಸಕಲೇಶ ಮಾದರಸನ ವಚನವೊಂದನ್ನು ತಂದು ನಿಮ್ಮ ವಾದಕ್ಕೆ ಪೋಷಕವಾದ ಅಂಶ ಅದರಲ್ಲಿದೆಯೆಂದು ಹೇಳಿದರು. ಬೇರೆ ವಿಷಯದಲ್ಲಿ ವ್ಯಾಪೃತವಾದ ನನ್ನ ಮನಸ್ಸಿಗೆ ವಿಷಯವನ್ನು ಸಾವಕಾಶವಾಗಿ ನೋಡೋಣವೆನ್ನಿಸಿತು. ಆ ವಚನ ಕೆಳಗೆ ಕಂಡಂತೆ ಇದೆ. (ಸಕಲೇಶ ಮಾದರಸನ ವಚನಗಳು: ಸಂ. ರಾ॥ ಬ॥ ಹಳಕಟ್ಟಿಯವರು, ನಂ. ೭೫):

"ಪುರುಷಮೃಗ ಬಂದು ನಿಂದಲ್ಲಿ ಜನ್ನ ಜಯವಾಗದೆ ಧರ್ಮಂಗೆ? ಲಿಂಗ ಜಂಗಮಭಕ್ತಿ ಪ್ರಜ್ವಲಿಸದೆ ಸಿರಿಯಾಳಂಗೆ? ಪ್ರಸಾದವ ಬಿಬ್ಬಿ ಬಾಚಯ್ಯ ಮೆರೆಯುತ ಬಪ್ಪಲ್ಲಿ ಅರಿಯದೆ ನಿಂದಿಸಿದಡೆ ಹರಿದು ಹತ್ತದೇ ಉರಿಯನಾಲಿಗೆ ಗ್ರಾಮದಿ? ಹರನಿತ್ತ ನಿರೂಪವಿಡಿಸಿದ ಮಾರ್ಗದಲ್ಲಿ ಮಾರಾರಿಯ ಶರಣರು ಬಂದು ನಿಂದಲ್ಲಿ ಅರ್ಧಗೃಹಂಗಳುಳಿಯವೆ? ಸದ್ಯೋಜಾತನ ಶರಣ ಧರೆಯಲುರಿಯನಾಲಿಗೆ ಅಂಗಣವ ಮೆಟ್ಟಲಾಗದೆಂದಡೆ ಉರಿಯ ಜ್ವಾಲೆಯ ಬಿಟ್ಟಡೆ ಪರಿಹರವಾಗದೆ ಕುಂಚಿಗೆಯ ತುದಿಯಲ್ಲಿ? ಪರಮನೊಲಿದ ಶರಣರು ಸ್ವತಂತ್ರ ಮಹಿಮರು. ಅದೆಂತೆಂದಡೆ, **ಅವರೆಂದಂತೆ ಅಹುದೆನ್ನಲು ಅಂಗದ ಮೇಲೆ ಲಿಂಗಪ್ರತಿಷ್ಠೆಯಾಗದೇ ಶಿವಯೋಗಿ ಸಿದ್ಧರಾಮಯ್ಯಂಗೆ?** ಸಕಲದುರಿತಂಗಳು ಬಿಟ್ಟೋಡುತಿದ್ದವು, ಸಕಳೇಶ್ವರ ದೇವಾ ನಿಮ್ಮ ಶರಣನ ದೇವತ್ವಕ್ಕಂಜಿ."

ಈ ವಚನದಲ್ಲಿ ಹಲವು ಪ್ರಶ್ನಾತ್ಮಕ ವಾಕ್ಯಗಳಿವೆ; ಅವುಗಳಿಗೆ ಉತ್ತರ ಪ್ರತಿಷೇಧಾತ್ಮಕವಲ್ಲ, ಅಂಗೀಕಾರಾತ್ಮಕ. ಪುರುಷಾಮೃಗದ ಬರವಿನಿಂದ ಧರ್ಮರಾಜನಿಗೆ ಅನುಕೂಲವಾಯಿತು; ಸಿರಿಯಾಳನ ಭಕ್ತಿ ಪ್ರಜ್ವಲಿಸಿತು; ಬಿಬ್ಬಿ ಬಾಚಯ್ಯ ಶರಣಪ್ರಸಾದವನ್ನು ನಿಂದಿಸಿದ ವಿಪ್ರರ ಊರನ್ನು ಸುಟ್ಟ; ಶಿವನ ಬೆಸದಿಂದ ಬಂದ ಶರಣರಿಂದ ಅರ್ಧಗೃಹಗಳು (?) ಉಳಿದುಕೊಂಡುವು; ಸಿದ್ಧರಾಮನು ಹಣೆಗಣ್ಣಿನಿಂದ ಚಿಮ್ಮಿಸಿದ ಉರಿಯನ್ನು ಅಮುಗಿದೇವನು ಕುಂಚಿಗೆಯ ತುಷಾರದಿಂದ ನಂದಿಸಿದನು; ಶಿವಶರಣರು ಹೇಳಿದಂತೆ ಸಿದ್ಧರಾಮನು ಕೇಳಿದ್ದರಿಂದ ಅವನ ಅಂಗದ ಮೇಲೆ ಲಿಂಗಪ್ರತಿಷ್ಠೆಯಾಯಿತು; ಶರಣರ ದೇವತ್ವಕ್ಕೆ ಪಾಪಗಳು ಹೆದರಿ ಓಡಿದುವು—ಎಂದು ಈ ವಚನದ ಸಾಮಾನ್ಯ ಅಭಿಪ್ರಾಯ.

ಈ ವಚನ ನನ್ನ ವಾದಕ್ಕೆ ಸಮರ್ಥನೆಯನ್ನುಂಟುಮಾಡುವ ಬದಲು ವ್ಯತಿರಿಕ್ತವಾಗಿರುವುದು ಸಂತೋಷದ ವಿಷಯ. ಬಸವಣ್ಣ, ಅಲ್ಲಮ, ಬಿಬ್ಬಿಬಾಚಯ್ಯ, ಸಿದ್ಧರಾಮ ಮುಂತಾದವರ ಸಮಕಾಲಿಕನಾಗಿದ್ದ ಸಕಲೇಶ ಮಾದರಸನ ಮಾತುಗಳು ವಿಶ್ವಸನೀಯವೆಂದು ಬೇರೆ ಹೇಳಬೇಕಾಗಿಲ್ಲ. ಅಲ್ಲಮ ಮುಂತಾದ ಶಿವಶರಣರ ಉಪದೇಶವನ್ನು ಸಿದ್ಧರಾಮ ಕೇಳಿ ತನ್ನ ಅಂಗೀಕಾರವನ್ನು ವ್ಯಕ್ತಪಡಿಸಿದ್ದರಿಂದ ಆತನಿಗೆ ಲಿಂಗದೀಕ್ಷೆಯಾಯಿತೆಂಬುದು ಇಲ್ಲಿ ವಿಶದವಾಗಿದೆ. ಆದ್ದರಿಂದ ಸಿದ್ಧರಾಮನ ವೀರಶೈವತ್ವದ ವಿಷಯದಲ್ಲಿ ಇನ್ನು ಸಂದೇಹಕ್ಕೆ ಅವಕಾಶವಿಲ್ಲ.

ಮೈಸೂರು
೧೨-೧೧-೬೩

—ಡಿ. ಎಲ್. ನರಸಿಂಹಾಚಾರ್

ಸಂಪಾದಕೀಯ

ಆಡಳಿತ ಭಾಷೆಯಾಗಿ ಕನ್ನಡಕ್ಕೆ ಅಂಗೀಕಾರ

ಕನ್ನಡ ನಾಡಿನ ರಚನೆಯಾಗಿ ಏಳು ವರ್ಷಗಳಾಗುತ್ತ ಬಂದರೂ ಕನ್ನಡಕ್ಕೆ ಸಲ್ಲಬೇಕಾದ ಹಲಕೆಲವು ಮನ್ನಣೆಗಳು ಇನ್ನೂ ಹಾಗೆಯೇ ಹಿಂದುಳಿದಿವೆ. ಅವುಗಳಲ್ಲಿ ಕನ್ನಡವನ್ನು ಆಡಳಿತದ ಭಾಷೆಯನ್ನಾಗಿ ಅಂಗೀಕರಿಸಲು ನಮ್ಮ ಸರ್ಕಾರದವರು ಈವರೆಗೆ ನಿರ್ಣಯಿಸದೆ ಇದ್ದುದೂ ಒಂದು. ಆದರೆ, ಮೇಲಿಂದ ಮೇಲೆ ಜನಗಳ ಒತ್ತಾಯ ಬಂದ ತರುವಾಯ, ಇತ್ತೀಚೆಗೆ ೧೯೬೩ನೆಯ ಸೆಪ್ಟೆಂಬರ್ ತಿಂಗಳಿನಲ್ಲಿ ಸಮಾವೇಶವಾಗಿದ್ದ ಮೈಸೂರು ವಿಧಾನಸಭೆಯಲ್ಲಿ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಅಂಗೀಕರಿಸುವ ಮಸೂದೆಯನ್ನು ಬಹುಮತದಿಂದ ಒಪ್ಪಲಾಯಿತು ಎಂಬ ಸುದ್ದಿ ಪ್ರತಿಯೊಬ್ಬ ಕನ್ನಡಿಗನಿಗೂ ಆನಂದವನ್ನು ಉಂಟುಮಾಡುವುದೇ ಸರಿ. ಅನಗತ್ಯವಾಗಿ ಅನ್ಯಭಾಷೆಗಳಿಗೆ ಪುರಸ್ಕಾರವಿತ್ತು ನಮ್ಮ ಜನತೆಯ ಆಸೆ ಅಭಿಲಾಷೆಗಳನ್ನು ಕಡೆಗಣಿಸುವ ಕಾಲವಿದಲ್ಲ. ಸರ್ಕಾರದ ಆಗುಹೋಗುಗಳನ್ನು ಕನ್ನಡವನ್ನು ಬಲ್ಲ ಪ್ರತಿಯೊಬ್ಬ ಪ್ರಜೆಯೂ ನೇರವಾಗಿ ತಿಳಿಯುವ ಸೌಕರ್ಯವಿರಬೇಕಾದುದು ಸಹಜವೇ ಸರಿ. ಇದಕ್ಕೆ ಮೊದಲು, ಕೆಲವು ಇಲಾಖೆಗಳಲ್ಲಿ ಹಾಗೂ ಕೆಲವು ಪ್ರದೇಶಗಳಲ್ಲಿ ಸರ್ಕಾರದ ವ್ಯವಹಾರಗಳನ್ನು ಕನ್ನಡದಲ್ಲಿ ಪರೀಕ್ಷಾರ್ಥವಾಗಿ ಪ್ರಯೋಗಿಸಿ ನೋಡಿ, ಆ ಬಳಿಕ ಈಗ ಒಟ್ಟು ನಾಡಿನಲ್ಲಿಯೇ ಇದನ್ನು ಬಳಕೆಗೆ ತರಲು ನಿಶ್ಚಯಿಸಿರುವುದು ಪ್ರಶಂಸನೀಯವಾದುದು. ಇಂಥ ಉಪಯುಕ್ತವಾದ ನಿರ್ಣಯವನ್ನು ಕೈಕೊಂಡದ್ದಕ್ಕಾಗಿ ಸರ್ಕಾರದವರನ್ನೂ, ಅವರ ಆ ನಿಲುವಿಗೆ ಬೆಂಬಲವಿತ್ತು ಹೃತ್ಪೂರ್ವಕವಾಗಿ ಸಹಕರಿಸಿದ ವಿಧಾನಸಭೆಯ ಮಾನ್ಯ ಸದಸ್ಯರುಗಳನ್ನೂ ನಾವು ಅಭಿನಂದಿಸುತ್ತೇವೆ.

ಇಂಥ ನಿರ್ಣಯವನ್ನು ಕೈಕೊಳ್ಳುವುದು ಎಷ್ಟು ಮುಖ್ಯವೋ ಅದನ್ನು ಯಶಸ್ವಿಯಾಗಿ ಕಾರ್ಯಗತಮಾಡುವುದೂ ಅಷ್ಟೇ ಮುಖ್ಯವಾದುದು. ಇಂದು ಸರ್ಕಾರದಲ್ಲಿ ಬಳಕೆಯಾಗುತ್ತಿರುವ ಕನ್ನಡದಲ್ಲಿ, ಸರ್ಕಾರದವರು ಆಗಿಂದಾಗ್ಗೆ ಪ್ರಕಟಿಸುತ್ತಿರುವ ಪ್ರಕಟನೆಗಳಲ್ಲಿ, ಇಂಗ್ಲಿಷ್ ಪ್ರಕಟನೆಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಸಂದರ್ಭಗಳಲ್ಲಿ ಹಿಂದಿನಿಂದಲೂ ಉಪಯೋಗಿಸುತ್ತ ಬಂದಿರುವ ಎಷ್ಟೋ ಶಬ್ದಗಳು ಕನ್ನಡಕ್ಕೆ ಹೊರತಾಗಿರುವುದುಂಟು. ಅರ್ಜಿ, ಆಖೈರು, ಹುಕುಂಬಮೋಜೀಬ್, ಇಸ್ತಿಹಾರ್ನಾಮೆ, ದಸ್ತಾವೇಜು, ದುರಸ್ತಿ, ಕಾಮುಗಾರಿ, ಗೈರುಹಾಜರಿ, ಮೊಕರೂರ್, ಚೌತರ್ಫ್, ಜಾಮಿನು, ಬಂದೋಬಸ್ತು ಇವೇ ಮೊದಲಾದ ಕೆಲವು ಕುತೂಹಲಕಾರಿಯಾದ ಶಬ್ದಗಳು ಕೇಳಿಬರುತ್ತವೆ. ಇವುಗಳನ್ನು ಮುಂದೆಯೂ ಹೇಗೆ ಸಮನ್ವಯಗೊಳಿಸಿಕೊಳ್ಳಬೇಕು,

ಭಾಷಾಂತರ ಮಾಡುವ ಸಂದರ್ಭಗಳಲ್ಲಿ ಹೊಸ ಶಬ್ದಗಳ ಸ್ವರೂಪ ಹೇಗಿರಬೇಕು, ಕನ್ನಡ ನಾಡಿನ ಆದ್ಯಂತವೂ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಲು ಈ ಕ್ಷೇತ್ರದಲ್ಲಿ ಕೈಕೊಳ್ಳಬೇಕಾದ ಸಾಧನೋಪಾಯಗಳು ಯಾವುವು ಎಂಬ ಹಲವಾರು ಪ್ರಮುಖವಾದ ಅಂಶಗಳನ್ನು ತೆರೆದ ಹೃದಯದಿಂದ ವಿಚಾರ ಮಾಡಬೇಕಾಗುತ್ತದೆ. ಇದಕ್ಕಾಗಿ ಸರ್ಕಾರದವರು ಆಡಳಿತವರ್ಗದ ಮುಖ್ಯ ಅಧಿಕಾರಿಗಳೂ, ಕನ್ನಡ ಭಾಷಾಂತರ ಕಾರ್ಯದಲ್ಲಿ ನಿಷ್ಣಾತರೂ, ಕನ್ನಡ ಭಾಷೆಯಲ್ಲಿ ಪ್ರವೀಣರೂ ಆದವರನ್ನು ಒಳಗೊಂಡ ಒಂದು ಸಮಿತಿಯನ್ನು ನಿಯೋಜಿಸಿ, ಆ ಮೂಲಕ ಸಾಧ್ಯವಾದರೆ, ಆಡಳಿತ ಕನ್ನಡದ ಶಬ್ದಕೋಶ ವೊಂದನ್ನು ಸಿದ್ಧಪಡಿಸುವುದು ಅತ್ಯಗತ್ಯ.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಸ್ವೀಕರಿಸಿದ ಮೇಲೆ, ಕನ್ನಡ ''ಟೈಪ್‌ರೈಟರ್''ಗಳ ಬಳಕೆ ಹೆಚ್ಚಾಗುವುದನ್ನು ನಾವು ನಿರೀಕ್ಷಿಸಬಹುದು. ಹೀಗೆಯೇ ಕನ್ನಡ ಶೀಘ್ರಲಿಪಿಯನ್ನು ಕಲಿತವರೂ ಹೆಚ್ಚು ಹೆಚ್ಚಾಗಿ ಬೇಕಾಗು ತ್ತಾರೆ. ಈ ಎಲ್ಲ ಆವಶ್ಯಕತೆಗಳ ಕಡೆಗೂ ಸರ್ಕಾರದವರು ಸೂಕ್ತವಾದ ಗಮನವ ನ್ನಿತ್ತು ಕನ್ನಡಕ್ಕೆ ಸರ್ಕಾರದ ಮಟ್ಟದಲ್ಲಿ ಸಲ್ಲಬೇಕಾದ ಮನ್ನಣೆಯನ್ನು ದೊರಕಿಸಿ ಕೊಟ್ಟು ಕನ್ನಡಿಗರ ಆಶಯವನ್ನು ಬಹು ಯಶಸ್ವಿಯಾಗಿ ನೆರವೇರಿಸುತ್ತಾರೆಂದು ನಾವು ನಂಬಿದ್ದೇವೆ.

ಉನ್ನತ ವಿದ್ಯಾಭ್ಯಾಸದಲ್ಲಿ ಕನ್ನಡ ಮಾಧ್ಯಮ, ಕನ್ನಡ ನಾಡಿನ ಸಂಸ್ಕೃತಿಗೆ ತಕ್ಕುದಾದ ರಾಜ್ಯದ ನಾಮಕರಣ ಇವೇ ಮೊದಲಾದ ಇತರ ವಿಚಾರಗಳನ್ನೂ ನಮ್ಮ ಪ್ರತಿನಿಧಿಗಳು ಯಾವ ರೀತಿಯಲ್ಲಿ ವಿಧಾನಸಭೆಯಲ್ಲಿ ನಿರ್ಣಯಿಸುತ್ತಾ ರೆಂಬುದನ್ನು ಕನ್ನಡ ಜನತೆ ಕುತೂಹಲದಿಂದ ಎದುರುನೋಡುತ್ತಿದೆಯೆಂದು ಮತ್ತೊಮ್ಮೆ ಹೇಳಬಯಸುತ್ತೇವೆ. ಸಮಸ್ತ ಕನ್ನಡಿಗರ ಏಳಿಗೆಗೆ ತವರುಮನೆಯಾದ ಕನ್ನಡ ನಾಡಿಗಾಗಲಿ, ಹೃದಯದ ಆಶೋತ್ತರಗಳನ್ನು ಮಿಡಿಯುವ ಕನ್ನಡ ನುಡಿಗಾಗಲಿ ರಾಜಕೀಯದ ರಂಗನ್ನೋ, ಜಾತಿ ಮತಗಳ ಸೋಂಕನ್ನೋ ತಂದು ಬೆರಸದೆ, ಕನ್ನಡಿಗರ ಔದಾರ್ಯಕ್ಕೆ ತಕ್ಕಂತೆ ಇಂಥ ವಿಷಯಗಳನ್ನು ವಿಶಾಲವಾದ ಹೃದಯದಿಂದ ನಮ್ಮ ಹಿರಿಯರು ವಿಚಾರಮಾಡಿ ಬೇಗ ನಿರ್ಣಯಿಸುತ್ತಾರೆಂದು ನಾವು ನಂಬಿದ್ದೇವೆ. ಹರಿದು ಹಂಚಿದ್ದ ನಾಡು ಒಂದಾದರೂ, ಚೆದರಿದ್ದ ಕನ್ನಡಿಗರು ಇನ್ನೂ ಒಂದಾಗಲು ಸಾಧ್ಯವಾಗಿಲ್ಲ. ಎಂದಿಗೆ ಈ ಗುರಿ ಈಡೇರು ತ್ತದೆಯೋ ಅಂದಿಗೆ ನಾವು ಆಚರಿಸುವ ಕನ್ನಡ ರಾಜ್ಯೋತ್ಸವ ಸಾರ್ಥಕವಾಗುತ್ತದೆ. ಆ ಶುಭದಿವಸ ಬೇಗ ಬರಲಿ ಎಂದು ಹಾರೈಸುತ್ತೇವೆ.

ಕಣ್ಮರೆಯಾದ ಕನ್ನಡಿಗರು

ಕಳೆದ ಮೂರು ತಿಂಗಳುಗಳಲ್ಲಿ ಕನ್ನಡಿಗರು ತಮ್ಮ ವಿಶ್ವಾಸಪಾತ್ರರಾದ ಕೆಲವು ಲೇಖಕರನ್ನು ಕಳೆದುಕೊಳ್ಳಬೇಕಾಯಿತು. ವಯಸ್ಸಿನಲ್ಲಿ ತೀರ ಚಿಕ್ಕವ

ರಾಗಿದ್ದರೂ, ತಮ್ಮ ಪ್ರತಿಭೆಯಿಂದ ಕನ್ನಡಿಗರ ಮನ್ನಣೆಯನ್ನು ಗಳಿಸಿದ್ದ "ತ್ರಿವೇಣಿ" ಅವರು ೨೯–೭–೧೯೬೩ರಂದು ಮೈಸೂರಿನಲ್ಲಿ ನಿಧನರಾದುದು ಕನ್ನಡಿಗರ ದುರ್ದೈವವೇ ಸರಿ. ಕೇವಲ ಸುಮಾರು ಹತ್ತು ವರ್ಷಗಳ ಅವಧಿಯಲ್ಲಿ ಇಪ್ಪತ್ತು ಕಾದಂಬರಿಗಳನ್ನೂ, ಮೂರು ಕಥಾಸಂಕಲನಗಳನ್ನೂ ಪ್ರಕಟಿಸುವುದೆಂದರೆ ಕನ್ನಡದ ಹೆಣ್ಣು ಮಕ್ಕಳಿಗೆ ಹಾಗೂ ಒಟ್ಟು ಕನ್ನಡಿಗರಿಗೆ ಒಂದು ಸಾಹಸದ ಕೆಲಸವೆನ್ನಲು ಅಡ್ಡಿಯಿಲ್ಲ. ಮೈಸೂರಿನ ಶ್ರೀಮತಿ ಅನಸೂಯ ಶಂಕರ್ ಅವರು ದೈವಿಕವಾಗಿ ಪ್ರತಿಭಾನ್ವಿತವಾದ ಕುಟುಂಬಕ್ಕೆ ಸೇರಿದವರು. ದಿವಂಗತ "ಶ್ರೀ" ಅವರ ಮನೆತನಕ್ಕೆ ಸೇರಿದ ಈಕೆಯ ಬಳಗದ ಇತರರೂ ಇಂದು ಕನ್ನಡದ ಪ್ರಗತಿಗಾಗಿ ಸಾಕಾದಷ್ಟು ಶ್ರಮಿಸುತ್ತಿದ್ದಾರೆ. ಕನ್ನಡ ಕತೆಗಾರ್ತಿಯರಲ್ಲಿ ಒಬ್ಬರಾದ ಶ್ರೀಮತಿ ವಾಣಿ, ಇತರ ಲೇಖಕಿಯರಾದ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಮತ್ತು ಶ್ರೀಮತಿ ಆರ್ಯಾಂಬಾ ಪಟ್ಟಾಭಿ ಮೊದಲಾದವರು "ತ್ರಿವೇಣಿ" ಅವರ ಬಂಧುಗಳೆಂದು ತಿಳಿದುಬರುತ್ತದೆ. ಶ್ರೀಮತಿ "ತ್ರಿವೇಣಿ" ಯವರ ಪತಿ ಶ್ರೀ ಎಸ್. ಎನ್. ಶಂಕರ್ ಅವರೂ ಇಂಗ್ಲಿಷ್ ಭಾಷೆಯ ಅಧ್ಯಾಪಕರಾದುದರಿಂದ, ಸಾಹಿತ್ಯದ ಅಭಿರುಚಿ ಈ ಸಂಸಾರಕ್ಕೆ ಸ್ವಾಭಾವಿಕವಾಗಿಯೇ ಹೊಂದಿಕೊಂಡು ಬಂದ ಒಂದು ಗುಣವೆನ್ನಬಹುದು. ಹದವಾದ ನೆಲದಲ್ಲಿ ಮಳೆನೀರಿನಿಂದ ಮೊಳಕೆ ಮೂಡಿಬಂದಂತೆ, ಸಂಸ್ಕೃತಿಸಂಪನ್ನವಾದ ಮನೆತನದಲ್ಲಿ ಪ್ರತಿಭೆಯ ಕುಡಿ, ಒಂದಕ್ಕೆ ಎರಡಾಗಿ ಚಿಗುರಿ ಫಲಬಿಡುವುದು ನೈಸರ್ಗಿಕವಾದುದೇ ಸರಿ. ಜೀವನದ ಹಲವಾರು ಮುಖಗಳನ್ನು ಚಿತ್ರಿಸುವ "ತ್ರಿವೇಣಿ" ಅವರ ಕಾದಂಬರಿಗಳಲ್ಲಿ "ಬೆಕ್ಕಿನ ಕಣ್ಣು" ಎಂಬ ಕೃತಿ ಅತ್ಯಂತ ಮೆಚ್ಚುಗೆಯನ್ನು ಪಡೆದಿರುವುದುಂಟು. ಇವರ ನಿರೂಪಣೆಯಲ್ಲಿ ವಿದಿತವಾಗುವ ಮಾನಸಿಕ ವ್ಯಾಪಾರದ ಸಿಕ್ಕು ಸಮಸ್ಯೆಗಳು ಕನ್ನಡದ ಬರವಣಿಗೆಯಲ್ಲಿ ಬಹು ವಿರಳ. ಇದಲ್ಲದೆ ಹೆಣ್ಣಿನ ಹಂಬಲ, ದಾರುಣ ಜೀವನಗಳನ್ನು ಎಳೆಎಳೆಯಾಗಿ ಬಿಡಿಸಿ ತೋರಿಸುವ ನೈಪುಣ್ಯವೂ ಅಸದಳವಾದುದು. ಶ್ರೀಮತಿಯವರ "ಅವಳ ಮನೆ" ಕಾದಂಬರಿಗೂ, "ಸಮಸ್ಯೆಯ ಮಗು" ಎಂಬ ಕಥಾಸಂಕಲನಕ್ಕೂ ಮೈಸೂರು ಸರ್ಕಾರದವರು ಬಹುಮಾನವಿತ್ತು ಪುರಸ್ಕರಿಸಿದ್ದರು. ಕನ್ನಡ ಲೇಖಕಿಯರಲ್ಲಿ ತಮ್ಮದೇ ಆದ ಒಂದು ವ್ಯಕ್ತಿತ್ವವನ್ನು ಬೆಳೆಸಿಕೊಂಡು ಪ್ರವರ್ಧಮಾನಕ್ಕೆ ಬರುತ್ತಿದ್ದ ಶ್ರೀಮತಿ "ತ್ರಿವೇಣಿ"ಯವರು ಬಹು ಬೇಗ ನಮ್ಮನ್ನು ಅಗಲಿದುದು ನಮ್ಮೆಲ್ಲರ ದುರದೃಷ್ಟವೇ ಸರಿ. ಶ್ರೀಮತಿಯವರ ಸಂತತವಾದ ಪರಿಶ್ರಮದಿಂದ ಕನ್ನಡಿಗರ ಭಾಗ್ಯದಂತೆ ಲಭಿಸಿರುವ ಕೃತಿಗಳಿಂದ ಇತರ ಹೆಣ್ಣು ಮಕ್ಕಳೂ ಸ್ಫೂರ್ತಿಗೊಂಡು, ಅದೇ ಮಾರ್ಗದಲ್ಲಿ ಮುಂದೆ ನಡೆದರೆ, "ತ್ರಿವೇಣಿ" ಅವರ ಚೇತನಕ್ಕೆ ತಮ್ಮ ಅಪಾರವಾದ ಕೃತಜ್ಞತೆಯನ್ನು ಸಲ್ಲಿಸಿದಂತಾದೀತು. ಭಗವಂತನು ಶ್ರೀಮತಿ "ತ್ರಿವೇಣಿ" ಅವರ ಆತ್ಮಕ್ಕೆ ಶಾಂತಿಯನ್ನೂ, ಅವರ ಬಂಧು ಮಿತ್ರರಿಗೆ ಈ ವಿಯೋಗವನ್ನು ಸಹಿಸುವ ಶಕ್ತಿಯನ್ನೂ ದಯಪಾಲಿಸಲೆಂದು ಬೇಡುತ್ತೇವೆ.

ಪುಸ್ತಕ ವ್ಯಾಪಾರ ಮತ್ತು ಕೃತಿರಚನೆಗಳನ್ನು ಒಟ್ಟಿಗೆ ಕೈಕೊಂಡು ನಿರ್ವಹಿಸುತ್ತಿದ್ದ ಶ್ರೀಮಾನ್ ದ. ಬಾ. ಕುಲಕರ್ಣಿ ಅವರು ೧೧-೮-೧೯೬೩ರಲ್ಲಿ ಹೃದಯ ಸ್ತಂಭನದಿಂದ ಧಾರವಾಡದಲ್ಲಿ ನಿಧನರಾದರೆಂಬ ವಾರ್ತೆ ಕನ್ನಡಿಗರಿಗೆ ಬರಸಿಡಿಲಿನ ಆಘಾತವೇ ಸರಿ. ಸುಖದುಃಖಗಳನ್ನು ತಮ್ಮ ಸವಿನಗೆಯಿಂದ ಸಮಾನವಾಗಿ ಕಾಣುತ್ತಿದ್ದ ಈ ತರುಣರು ವ್ಯಕ್ತಿಪರಿಚಯಗಳನ್ನು ಬರೆಯುವುದರಲ್ಲಿ ತುಂಬಾ ಕುಶಲರಾಗಿದ್ದರು. ಕೊಡಗಿನ ಕತೆಗಾರ್ತಿಯಾಗಿದ್ದ ಗೌರಮ್ಮನ ವ್ಯಕ್ತಿಚಿತ್ರಣದಿಂದ ಕನ್ನಡಿಗರ ಗಮನವನ್ನು ಸೆಳೆದ ಈ ತರುಣ ಲೇಖಕರು ಅನಂತರ ಅನೇಕ ಕಥೆ, ಕಾದಂಬರಿ ಮತ್ತು ಲಘುಪ್ರಬಂಧಗಳನ್ನು ಬರೆದಿರುತ್ತಾರೆ. ಬರೆಹದೊಂದಿಗೆ, ಪುಸ್ತಕ ವ್ಯಾಪಾರ, ಪ್ರಕಾಶನವನ್ನೂ ಕೈಕೊಂಡು ಕನ್ನಡದ ಪ್ರಗತಿಗಾಗಿ ಹಗಲಿರುಳೂ ಶ್ರಮಿಸುತ್ತಿದ್ದರು. "ಲಲಿತಸಾಹಿತ್ಯಮಾಲೆ"ಯ ಸಂಪಾದಕರಾಗಿ ಇತರ ಲೇಖಕರ ಕೃತಿಗಳನ್ನು ಬೆಳಕಿಗೆ ತರುವುದರಲ್ಲಿ ನೆರವಾಗಿದ್ದಾರೆ. ಕನ್ನಡಕ್ಕಾಗಿ ದುಡಿಯುವ ಯಾರನ್ನೇ ಆಗಲಿ ಅವರು ಅತ್ಯಂತ ಅಭಿಮಾನದಿಂದ ಕಾಣುತ್ತಿದ್ದರು. ಅವರ ಸರಳತೆ ಸೌಜನ್ಯಗಳನ್ನು ಯಾರೂ ಮರೆಯುವಂತಿಲ್ಲ. ಊರಿಂದ ಊರಿಗೆ ಪ್ರವಾಸಮಾಡಿ, ಕನ್ನಡ ಪುಸ್ತಕಗಳನ್ನು ಮಾರಿ, ತಮ್ಮ ಜೀವನವನ್ನು ಬಹು ಸಾಹಸದಿಂದ ನಿರ್ವಹಿಸುತ್ತಿದ್ದ ತರುಣರು ಇವರು. ಇಂಥ ನಿಷ್ಠರಾದ ಕನ್ನಡ ಬಂಧುಗಳೊಬ್ಬರು ತಮ್ಮ ಮಧ್ಯವಯಸ್ಸಿನಲ್ಲಿ ನಮ್ಮನ್ನು ಅಗಲಿಹೋದುದು ದುಃಖಕರವಾದ ಸಂಗತಿ. ಪರಮಾತ್ಮನು ಅವರ ಆತ್ಮಕ್ಕೆ ಶಾಂತಿಯನ್ನೂ, ಅವರನ್ನೇ ಆಶ್ರಯಿಸಿದ್ದ ಸಂಸಾರಕ್ಕೂ, ಸಂಬಂಧಿಗಳಿಗೂ, ಸ್ನೇಹಿತರಿಗೂ ಸ್ಥೈರ್ಯವನ್ನೂ ಅನುಗ್ರಹಿಸಲೆಂದು ಬೇಡುತ್ತೇವೆ.

ಕನ್ನಡ ಲೇಖಕರಲ್ಲಿ ಹಿರಿಯ ತಲೆಮಾರಿನವರಲ್ಲಿ ಒಬ್ಬರಾದ ಶ್ರೀಮಾನ್ ಎಂ. ಗೋವಿಂದ ಪೈ ಅವರು ೬-೯-೧೯೬೩ರಂದು ಮಂಗಳೂರಿನಲ್ಲಿ ದೈವಾಧೀನರಾದರೆಂಬ ವೃತ್ತಾಂತವನ್ನು ಕೇಳಿ ಮರುಗದ ಕನ್ನಡಿಗರಾರುಂಟು? ಎಂಬತ್ತೊಂದು ವರ್ಷಗಳವರೆಗೆ ಬಾಳಿದ ಈ ಹಿರಿಯರು ಕನ್ನಡಕ್ಕಾಗಿ ದುಡಿದಿರುವ ರೀತಿ ನೀತಿಗಳು ಅತ್ಯಪೂರ್ವವಾದುವು. ಶ್ರೀಮಂತ ಮನೆತನದಲ್ಲಿ ಹುಟ್ಟಿದ ಶ್ರೀಮಾನ್ ಗೋವಿಂದ ಪೈಗಳವರು ಚಿಕ್ಕವಯಸ್ಸಿನಲ್ಲಿಯೇ ಅನಿರೀಕ್ಷಿತವಾದ ಸಂಕಟಗಳನ್ನು ಅನುಭವಿಸಬೇಕಾಯಿತು. ಸಂಸಾರದ ಕಷ್ಟಕ್ಕೆ ಸಿಕ್ಕಿಬಿದ್ದು ವ್ಯಾಸಂಗವನ್ನು ಅರ್ಧದಲ್ಲಿಯೇ ಬಿಡಬೇಕಾಯಿತು. ಕೈಹಿಡಿದ ಮಡದಿಯನ್ನು ತಾರುಣ್ಯದಲ್ಲಿಯೇ ಕಳೆದುಕೊಂಡರು. ಮೇಲಿಂದ ಮೇಲೆ ವಿಘ್ನಗಳು ಬಂದು ಒದಗಿದರೂ, ಶ್ರೀ ಗೋವಿಂದ ಪೈ ಅವರು ಜಗ್ಗದೆ, ಕುಗ್ಗದೆ, ತಮ್ಮ ಬದುಕನ್ನು ಸಾಹಿತ್ಯದ ಅಧ್ಯಯನ, ಕೃತಿರಚನೆಗಳಿಗೆ ಮೀಸಲಿಟ್ಟು, ಕನ್ನಡವ್ರತವನ್ನು ಕೈಕೊಂಡು ಮಂಜೇಶ್ವರದಲ್ಲಿ ನೆಲಸಿದರು. ಅಲ್ಲಿ ಅವರು ತಪಸ್ವಿಗಳಂತೆ ತಮ್ಮ ಕೆಲಸಕಾರ್ಯಗಳಲ್ಲಿ ನಿರತರಾದರು. ಶ್ರೀಯುತರು ಊರನ್ನು ಬಿಟ್ಟು ಅತ್ತಿತ್ತ ಅಲೆದಾಡುತ್ತಿದ್ದುದೇ ಬಹು ಅಪರೂಪ.

ಅವರನ್ನು ಹತ್ತಿರದಿಂದ ಕಂಡವರಿಗೆ, ಅವರ ಆದರ, ಆತಿಥ್ಯಗಳನ್ನು ಸವಿದವರಿಗೆ, ಅವರೊಂದಿಗೆ ಪತ್ರವ್ಯವಹಾರ ನಡೆಸಿದವರಿಗೆ ಅವರ ಮನಸ್ಸು ಎಂಥ ಅಪರಂಜಿ ಎಂಬುದು ಸ್ವವಿದಿತವಾಗುತ್ತಿತ್ತು. ಶ್ರೀಮಾನ್ ಗೋವಿಂದ ಪೈಗಳವರ ಕೃತಿಗಳ ಕೀರ್ತಿ ಒಂದು ಪಾಲಾದರೆ, ಅವರ ವ್ಯಕ್ತಿತ್ವದ ಹಿರಿಮೆ ಅದಕ್ಕಿಂತಲೂ ಬಹುಪಾಲು ಮಿಗಿಲಾಗಿತ್ತು.

ಶ್ರೀಮಾನ್ ಗೋವಿಂದ ಪೈಗಳವರು ಕವಿಗಳಾಗಿ ಅನೇಕ ಕೃತಿಗಳನ್ನು ರಚಿಸಿರುವುದಲ್ಲದೆ, ಬಹು ಭಾಷಾಪರಿಣತರಾಗಿ, ಅತಿ ವಿರಳ ಪಂಕ್ತಿಗೆ ಸೇರಿದ ಸುಪ್ರಸಿದ್ಧ ಸಂಶೋಧಕರಾಗಿದ್ದರು. "ಗಿಳಿವಿಂಡು", "ಗೋಲ್ಗೊಥಾ", "ವೈಶಾಖಿ" ಮೊದಲಾದುವು ಅವರ ಕಾವ್ಯರಚನಾ ಪ್ರತಿಭೆಯನ್ನು ಸಾರಿ ಹೇಳಿದರೆ, "ಹೆಬ್ಬೆರಳು", "ಚಿತ್ರಭಾನು" ಎಂಬುವು ಅವರ ನಾಟಕರಚನೆಯ ವೈಶಿಷ್ಟ್ಯವನ್ನು ವ್ಯಕ್ತಪಡಿಸುತ್ತವೆ. "ಗಿಳಿವಿಂಡಿ"ನ ಕವಿತೆಗಳಲ್ಲಿ ಕಾಣುವ ಚಿತ್ತವೃತ್ತಿಯ ವಿವಿಧ ವಿಲಾಸಗಳು ಒಂದು ತೆರನಾದರೆ, "ಗೋಲ್ಗೊಥಾ"ದಲ್ಲಿ ಅವರು ಕಡೆದು ನಿಲ್ಲಿಸಿರುವ ಏಸುಕ್ರಿಸ್ತನ ಶಿಲ್ಪ ಕನ್ನಡ ಪ್ರಪಂಚಕ್ಕೇ ನಿತ್ಯನೂತನ ವಾದುದು. "ವೈಶಾಖಿ"ಯಲ್ಲಿ ಒಡಮೂಡಿರುವ ಭಗವಾನ್ ಬುದ್ಧನ ತುಂಬು ಬಾಳಿನ ದಿವ್ಯಸಂದೇಶ ನಿತ್ಯಸ್ಮರಣೀಯವಾದುದು. ಏಕಲವ್ಯನ ಗುರುಭಕ್ತಿ, ವೀರಯುವಕನ ಬಲಿದಾನಗಳಿಗಾಗಿ ಅವರ ಹೃದಯ ಪರಿತಪಿಸಿ ನಾಟಕರೂಪದಲ್ಲಿ ಅವು ಮೈವೆತ್ತು ಬಂದಿವೆ.

ಶ್ರೀಮಾನ್ ಗೋವಿಂದ ಪೈಗಳವರ ಸೃಷ್ಟಿಸಾಮರ್ಥ್ಯದೊಂದಿಗೆ ಸ್ಪರ್ಧೆ ಹೂಡಿ, ಅದಕ್ಕೂ ಒಂದು ಕೈಮಿಗಿಲೆನ್ನುವಂತೆ ಅವರ ಸಂಶೋಧನ ಶಕ್ತಿ ಕನ್ನಡ ವಿದ್ವತ್ ಪ್ರಪಂಚದಲ್ಲಿ ಮನೆಮಾತಾಗಿದೆ. ಕನ್ನಡ ಕವಿಗಳ ಕಾಲ, ದೇಶ ಮತ್ತು ಮತಗಳ ಪ್ರಸ್ತಾಪ ಬಂದಕೂಡಲೆ ಶ್ರೀಮಾನ್ ಗೋವಿಂದ ಪೈಗಳ ಅಭಿಪ್ರಾಯವೇನು ಎಂದು ಮನಸ್ಸು ಆ ಕಡೆ ಹರಿಯುತ್ತದೆ. ಕನ್ನಡ ಭಾಷೆಯ ಪ್ರಾಚೀನತೆ, ಸಾಹಿತ್ಯದ ಪ್ರಾಚೀನತೆ, ನಾಟಕಗಳ ಪ್ರಾಚೀನತೆ ಮತ್ತು ಹಿರಿತನ, ರನ್ನನ ಕೃತಿಗಳ ಸಂಖ್ಯೆ ಮತ್ತು ಸ್ವರೂಪ, ಬಸವಣ್ಣನವರ ಐತಿಹಾಸಿಕ ವಿಚಾರಗಳು, ಲಕ್ಷ್ಮೀಶನ ಕಾಲ ದೇಶಾದಿಗಳು, ಪಂಪನ ಪೂರ್ವೋತ್ತರಗಳು, ಕನ್ನಡ ನಾಡಿಗೆ ಜೈನರ ಆಗಮನ— ಇವೇ ಮೊದಲಾದ ಚರ್ಚಾಸ್ಪದ ವಿಚಾರಗಳ ಸಮಸ್ಯೆಗಳನ್ನು ಬಿಡಿಸಿ ಹೇಳುವುದ ರಲ್ಲಿ ಶ್ರೀಯುತರ ಲೇಖನಿಗೆ ಬಿಡುವೂ ಇಲ್ಲ; ಬೇಸರವೂ ಇಲ್ಲ. ಅವರ ಸಂಶೋಧನ ಪ್ರಬಂಧಗಳಲ್ಲಿ ಕಂಡುಬರುವ ವಿಷಯಸಂಗ್ರಹಕ್ಕೆ ಇತಿಮಿತಿಗಳಿಲ್ಲ. ಬಹು ಶ್ರುತರಾದ್ದರಿಂದ, ದೇಶದ ನಾನಾ ಮೂಲೆಗಳ, ನಾನಾ ಭಾಷೆಗಳ, ಗ್ರಂಥಗಳಲ್ಲಿಯೋ ಶಾಸನಗಳಲ್ಲಿಯೋ ಹುದುಗಿದ್ದ ಅಸಂಖ್ಯಾತ ವಿಷಯಗಳನ್ನು ಲೀಲಾಜಾಲವಾಗಿ ತಂದು ರಾಶಿರಾಶಿ ಹಾಕುತ್ತಿದ್ದರು. ಸಂಶೋಧನ ವಿಧಾನದಷ್ಟೇ ಜಟಿಲವಾದುದು ಅವರ ಶೈಲಿ. ಯಾವ ಲೇಖನವನ್ನೂ ಒಂದು ಬಾರಿ ಓದಿ ಅರ್ಥವಾಯಿತು ಎಂದು

ಧೈರ್ಯದಿಂದ ಹೇಳುವಂತಿಲ್ಲ. ವಿಪುಲವಾದ ಆ ವಿಷಯಸಾಮಗ್ರಿ, ಗಹನವಾದ ಆ ವಿಚಾರಧಾರೆ, ನೀಳವಾದ ಆ ವಾಕ್ಯಸರಣಿ, ಅಪೂರ್ವವಾದ ಆ ಇತ್ಯರ್ಥಗಳು ಮೊದಲಾದುವುಗಳನ್ನು ಪುನಃ ಪುನಃ ಓದಿ, ಪರಿಶೀಲಿಸಿ, ಪರಿಶ್ರಮದಿಂದ ತಿಳಿದು ಕೊಳ್ಳಬೇಕು. ತುಂಬುಪಾಂಡಿತ್ಯದಿಂದ ಕೂಡಿರುವ ಈ ರಚನೆಗಳಲ್ಲಿ ಕೆಲವು ಮಾತ್ರ ಈಗ ಪುಸ್ತಕರೂಪದಲ್ಲಿ ಲಭಿಸುತ್ತವೆ. ಬೇರೆ ಬೇರೆ ಪತ್ರಿಕೆಗಳಲ್ಲಿ ಚೆದರಿ ಹೋಗಿರುವುವೇ ಹೆಚ್ಚು. ಅವರ ಲೇಖನಗಳೆಲ್ಲವೂ ಒಂದೇ ಸಂಪುಟದಲ್ಲಿ ಅಚ್ಚಾಗಿ ಬರುವುದು ಅತ್ಯಗತ್ಯ. ಈ ಕಾರ್ಯವನ್ನು ಈಗಾಗಲೇ ಮಾನ್ಯ ಪ್ರಕಾಶಕರೊಬ್ಬರು ಕೈಕೊಂಡಿದ್ದಾರೆಂಬುದಾಗಿ ತಿಳಿದುಬರುತ್ತದೆ. ಈ ಲೇಖನ ಸಂಪುಟ ಬೇಗನೆ ಬೆಳಕಿಗೆ ಬರಲೆಂದು ಹಾರೈಸುತ್ತೇವೆ.

ಶ್ರೀಮಾನ್ ಗೋವಿಂದ ಪೈಗಳವರು ಕೀರ್ತಿ ಪ್ರತಿಷ್ಠೆಗಳಿಗಾಗಲಿ, ಹಣ ಕಾಸುಗಳಿಗಾಗಲಿ ಎಂದೂ ಹಾತೊರೆದವರಲ್ಲ. ಅವರ ಅವಿರತವಾದ ಈ ಕನ್ನಡ ಸೇವೆ ಕನ್ನಡಿಗರ ಗಮನಕ್ಕೆ ಸಕಾಲದಲ್ಲಿ ಬಂದು, ಈ ಹಿರಿಯರಿಗೆ ತಕ್ಕ ಪುರಸ್ಕಾರ ದೊರೆತಿರುವುದು ತೃಪ್ತಿಕರವಾದ ವಿಚಾರವೇ ಸರಿ. ಅವರ ಕವಿತಾ ಸಾಮರ್ಥ್ಯವನ್ನು ಮೆಚ್ಚಿಕೊಂಡು, ಮದರಾಸಿನ ಸರ್ಕಾರದವರು ಅವರಿಗೆ ರಾಷ್ಟ್ರಕವಿಯ ಪ್ರಶಸ್ತಿಯನ್ನು ಸಲ್ಲಿಸಿದ ಸಂಗತಿ ಸ್ತುತ್ಯಾರ್ಹವಾದುದು. ಮುಂಬಯಿಯಲ್ಲಿ ನಡೆದ ಮೂವತ್ತು ನಾಲ್ಕನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ ಅವರನ್ನು ಅಧ್ಯಕ್ಷರನ್ನಾಗಿ ಆರಿಸಿ, ಒಟ್ಟು ಕನ್ನಡನಾಡೇ ಅವರನ್ನು ಗೌರವಿಸಿದ ಸಂದರ್ಭವೂ ಪ್ರಶಂಸಾರ್ಹವಾದುದು. ಇಂಥ ನೈಜ ವಿದ್ವಾಂಸರ ವಿದ್ಯಾಭಿಮಾನಕ್ಕೆ ಮೆಚ್ಚಿ ಅವರಿಗೆ ಗೌರವ ಡಾಕ್ಟರೇಟ್ ಪದವಿಯನ್ನು ಸಲ್ಲಿಸಬೇಕೆಂದು ಕನ್ನಡ ನಾಡಿನ ವಿಶ್ವವಿದ್ಯಾಲಯದವರ ಪರಿಶೀಲನೆ ಯಲ್ಲಿದೆಯೆಂದು ಕೇಳಿಬರುತ್ತಿತ್ತು. ಆ ಕಾರ್ಯವು ಕರಗತವಾಗಿದ್ದಿದ್ದರೆ ಚೆನ್ನಾಗಿ ರುತ್ತಿತ್ತು. ಆದರೆ, ಅಷ್ಟರಲ್ಲಿಯೇ ಈ ಹಿರಿಯರು ನಮ್ಮೆಲ್ಲರನ್ನೂ ಅಗಲಿ ಹೋದದ್ದು ನಮ್ಮ ದುರ್ದೈವವೇ ಸರಿ. ಶ್ರೀ ಗೋವಿಂದ ಪೈಗಳವರು ಸಲ್ಲಿಸಿರುವ ಸೇವೆ ಚಿರಕಾಲವೂ ಕನ್ನಡಿಗರ ಬೊಕ್ಕಸದಲ್ಲಿ ಉಳಿಯುವಂಥಾದ್ದು. ಅವರು ಕಲಿಸಿದ ಹಾಡು, ಅವರು ತೋರಿರುವ ಹೊಸ ಹೊಸ ವಿಚಾರಗಳು ಕನ್ನಡಕ್ಕೆ ಹಿರಿಯ ಕೊಡುಗೆಗಳಾಗಿವೆ. ಶ್ರೀಮಾನ್ ಗೋವಿಂದ ಪೈಗಳವರ ಬಾಳು ಕೈಕೊಂಡ ಕೆಲಸದಲ್ಲಿ ಕೃತಾರ್ಥತೆಯನ್ನು ಗಳಿಸಿ ಧನ್ಯವಾಗಿದೆ. ಅವರ ಆತ್ಮಕ್ಕೆ ಶಾಂತಿ ಲಭಿಸಲೆಂದು ಭಗವಂತನಲ್ಲಿ ಬೇಡಿ, ಆ ಹಿರಿಯರ ನಿಸ್ವಾರ್ಥವಾದ ಬದುಕು ನಮ್ಮೆಲ್ಲರಿಗೂ ಧ್ರುವತಾರೆಯಂತೆ ಎಂದೆಂದಿಗೂ ಮಾರ್ಗದರ್ಶಕವಾಗಿ ಬೆಳಗಲೆಂದು ಆಶಿಸುತ್ತೇವೆ.

ಡಾ|| ಸಿ. ಕುನ್ಹನ್ ರಾಜ ಎಂ.ಎ., ಡಿ. ಫಿಲ್ (ಆಕ್ಸನ್), ಅವರ ನಿಧನ

ಭಾರತದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರಲ್ಲಿ ಒಬ್ಬರಾದ ಡಾ|| ಸಿ. ಕುನ್ಹನ್ ರಾಜಾ ಅವರು ೨೧–೧೦–೧೯೬೩ ರಂದು ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು

ದುಃಖವಾಗುತ್ತದೆ. ಶ್ರೀಯುತರು ಕೇರಳದ ರಾಜಮನೆತನಕ್ಕೆ ಸೇರಿದ ಗಣ್ಯ ಪುರುಷರು. ಅವರು ಮದರಾಸು, ಆಕ್ಸ್‌ಫರ್ಡ್, ಹೈಡಲ್‌ಬರ್ಗ್ ಮತ್ತು ಮಾರ್ಬರ್ಗ್ ವಿಶ್ವವಿದ್ಯಾನಿಲಯಗಳಲ್ಲಿ ತಮ್ಮ ಅಧ್ಯಯನವನ್ನು ನಡೆಸಿ ಸಂಸ್ಕೃತದಲ್ಲಿ ಅಪಾರವಾದ ಪಾಂಡಿತ್ಯವನ್ನು ಗಳಿಸಿದ್ದರು. ಮದರಾಸು ವಿಶ್ವವಿದ್ಯಾನಿಲಯದಲ್ಲಿ ಸುಮಾರು ೨೩ ವರ್ಷಗಳ ಕಾಲ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ಅಡಿಯಾರ್ ಪುಸ್ತಕ ಭಂಡಾರದ ಸುವ್ಯವಸ್ಥೆಗೆ ಶ್ರೀಯುತರು ಬಹುಮಟ್ಟಿಗೆ ಶ್ರಮಿಸಿರುತ್ತಾರೆ. ಅವರು ಸಲ್ಲಿಸಿದ ಅಮೋಘವಾದ ಸೇವೆಗಾಗಿ ಆ ಸಂಸ್ಥೆಯವರು ಶ್ರೀಯುತರ ಹೆಸರಿನಲ್ಲಿ ೧೯೪೬ರಲ್ಲಿ ಒಂದು ಸಂಭಾವನೆಯ ಸಂಪುಟವನ್ನು ಪ್ರಕಟಿಸಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿರುತ್ತಾರೆ. ಅನಂತರ ಇರಾನಿನ ಟೆಹರಾನ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಕೆಲವು ಕಾಲ ಆಂಧ್ರ ವಿಶ್ವವಿದ್ಯಾನಿಲಯದಲ್ಲಿಯೂ ಪ್ರಾಧ್ಯಾಪಕರಾಗಿದ್ದರು. ಹೀಗೆ ಸ್ವದೇಶ ಮತ್ತು ವಿದೇಶಗಳಲ್ಲಿ ಅಪಾರವಾದ ಮನ್ನಣೆಯನ್ನು ಸಂಪಾದಿಸಿ ಸಂಸ್ಕೃತ ವಿದ್ವತ ಪ್ರಪಂಚದಲ್ಲಿ ಒಳ್ಳೆಯ ಹೆಸರನ್ನು ಪಡೆದಿದ್ದರು. ಹಸ್ತಲಿಖಿತಪ್ರತಿಗಳ ಸಂರಕ್ಷಣೆ, ಸಂಕಲನಗಳಲ್ಲಿ ಶ್ರೀಯುತರಿಗೆ ವಿಶೇಷವಾದ ಆಸಕ್ತಿಯಿತ್ತು. ಶ್ರೀಯುತರು ವೇದಗಳನ್ನು ಕುರಿತು ಬರೆದಿರುವ ತಮ್ಮ ಉದ್ಗ್ರಂಥಗಳಿಂದಲೂ ವಿದ್ವತ್ಪೂರ್ಣವಾದ ತಮ್ಮ ಹಲವಾರು ಲೇಖನಗಳಿಂದಲೂ, ಟಿಪ್ಪಣಿ ಮತ್ತು ಕೃತಿವಿಮರ್ಶೆಗಳ ಮೂಲಕವೂ ವಿದ್ವಜ್ಜನರ ಪ್ರಶಂಸೆಗೆ ಪಾತ್ರರಾಗಿದ್ದರು. ಶ್ರೀಯುತರಿಗೆ ಗ್ರೀಕ್, ಲ್ಯಾಟಿನ್, ಫ್ರೆಂಚ್, ಜರ್ಮನ್, ಅವೆಸ್ತ, ಪ್ರಾಕೃತ ಮತ್ತು ಪಾಳಿಭಾಷೆಗಳ ಪರಿಚಯವಿತ್ತು. ಭಗವಂತನು ಶ್ರೀಯುತರ ಆತ್ಮಕ್ಕೆ ಶಾಂತಿಯನ್ನು ನೀಡಲೆಂದು ಕೋರುತ್ತೇವೆ: ಇಂಥ ಮಾನ್ಯರನ್ನು ಕಳೆದುಕೊಂಡ ಅವರ ಬಂಧುಮಿತ್ರರಿಗೆಲ್ಲ ನಮ್ಮ ಸಹಾನುಭೂತಿಯನ್ನು ಈ ಮೂಲಕ ಸಲ್ಲಿಸಬಯಸುತ್ತೇವೆ.

ಸಾದರ ಸ್ವೀಕಾರ

೧. **ನೊರೆ** (ಕಾದಂಬರಿ) : ಲೇಖಕರು : ಶ್ರೀ ಶೇಷನಾರಾಯಣ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ; ಕಿರೀಟ ಅಷ್ಟದಳ; ಪು. ೨೪೪; ಬೆಲೆ : ರೂ. ೨–೫೦.

೨. **ಮುನಿಯ ಮೆರವಣಿಗೆ** (ಶಿಶು ಸಾಹಿತ್ಯ) : ಲೇಖಕರು : ಶ್ರೀ ಜಿ. ಎಂ. ಹನಸೋಗೆ; ಪ್ರಕಾಶಕರು; ಭಾರತೀ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು–೪; ಕಿರೀಟ, ಅಷ್ಟದಳ; ಪು. ೩೨; ಬೆಲೆ : ನ.ಪೈ. ೫೦.

೩. **ಮಣ್ಣಿನ ಮೂರ್ತಿಗಳು** (ಚಿತ್ರಗಳು) : ಮೂಲಲೇಖಕರು : ಶ್ರೀ ರಾಮಕೃಷ್ಣ ಬೇನಿಪುರಿ; ಅನುವಾದಕರು : ಶ್ರೀ ಎಸ್. ಕೃಷ್ಣ; ಪ್ರಕಾಶಕರು : ಸಮಾಜ ಪುಸ್ತಕಾಲಯ, ಧಾರವಾಡ; ಕಿರೀಟ ಅಷ್ಟದಳ; ಪು. ೧೫೦; ಬೆಲೆ : ರೂ. ೨–೫೦.

೪. **ಸತ್ಯಾಗ್ರಹ** (ಕಿರುಕಾದಂಬರಿ) : ಮೂಲ ಲೇಖಕರು : ಶ್ರೀ ಪ್ರೇಮಚಂದ್; ಅನುವಾದಕರು : ಶ್ರೀ ಹೆಚ್. ಎನ್. ವಿಶ್ವನಾಥ್; ಪ್ರಕಾಶಕರು : ಜನತಾ ಪುಸ್ತಕಾಲಯ, ತುಮಕೂರು; ಕಿರೀಟ ಅಷ್ಟದಳ; ಪು. viii+ ೨೩; ಬೆಲೆ : ನ.ಪೈ. ೫೦.

೫. **ದತ್ತಪುತ್ರ** (ಕಥಾ ಸಂಕಲನ) : ಲೇಖಕರು : ಶ್ರೀ ಎನ್. ನಾರಾಯಣ ಬಲ್ಲಾಳ; ಪ್ರಕಾಶಕರು : ರೇಖಾ ಪ್ರಕಾಶನ, ತೆಂಕಪೇಟೆ, ಉಡುಪಿ, ದ. ಕನ್ನಡ; ಕಿರೀಟ ಅಷ್ಟದಳ; ಬೆಲೆ : ರೂ. ೧.

೬. **ಸೀಳುನಾಯಿ** (ಕಥಾಸಂಕಲನ) : ಲೇಖಕರು : ಶ್ರೀ ಶೇಷನಾರಾಯಣ; ಪ್ರಕಾಶಕರು : ಕಾವೇರಿ ಪ್ರಕಾಶನ, ಚಾಮುಂಡಿಪುರಂ, ಮೈಸೂರು ೪; ಕಿರೀಟ ಅಷ್ಟದಳ; ಪು. ೧೮೩; ಬೆಲೆ : ಸಾದಾಪ್ರತಿ, ರೂ. ೨–೫೦; ಕ್ಯಾಲಿಕೊ, ರೂ. ೪-೫೦.

೭. **ಪತಿತ ಪಾವನ** (ಮಾಸಪತ್ರಿಕೆ) : ಲೇಖಕರು : ಶ್ರೀ ಕೃ. ಪ. ಜೋಶಿ, ಮಿಶ್ರಿಕೋಟಿ; ಪ್ರಕಾಶಕರು : ಆಶಾಪ್ರೆಸ್, ರಾಧಾಕೃಷ್ಣ ಗಲ್ಲಿ, ಹುಬ್ಬಳ್ಳಿ; ಕಿರೀಟ ಅಷ್ಟದಳ; ಪು. ೧೦; ಬೆಲೆ : ನ.ಪೈ. ೧೦.

೮. **ವೀರಭೂಮಿ** (ಮಾಸಪತ್ರಿಕೆ) : ಸಂಪಾದಕರು : ಶ್ರೀ ಎಸ್. ವೆಂಕಟರಾಜ; ಪ್ರಕಾಶನ : ಮೆಜಿಸ್ಟಿಕ್ ಪ್ರೆಸ್, ಉಡುಪಿ, ದ. ಕ.; ವಾರ್ಷಿಕಚಂದಾ : ರೂ. ೪; ಬಿಡಿ ಸಂಚಿಕೆ : ನ.ಪೈ. ೩೦.

೯. **ಕೈಲಾಸ** (ಮಾಸಪತ್ರಿಕೆ) : ಸಂಪುಟ ೧; ಸಂಚಿಕೆ ೧; ಸಂಪಾದಕರು : ಶ್ರೀ ಎನ್. ಎಸ್. ಸೀತಾರಾಮಶಾಸ್ತ್ರಿ; ಸಹಸಂಪಾದಕರು : ಶ್ರೀ ಎಸ್. ವೆಂಕಟರಾವ್; ಪ್ರಕಾಶಕರು : ಶ್ರೀ ಎಂ. ವಿ. ರಾಮಕೃಷ್ಣಯ್ಯ, ತಾಯಿನಾಡು ಮುದ್ರಣಾಲಯ, ೨೨, ಕಬ್ಬನ್‌ರಸ್ತೆ, ಬೆಂಗಳೂರು ೧; ವಾರ್ಷಿಕ ಚಂದಾ : ಅಂಚೆ ಮೂಲಕ : ರೂ. ೯; ಬಿಡಿ ಸಂಚಿಕೆ : ನ.ಪೈ. ೭೫.

೧೦. *Vādirāja's Yaśodhara arita :* Edited by : Dr. K. Krishnamoorthy, M.A., B.T., Ph.D.; Published by Karnatak University, Dharwar; Demi Octavo; PP. 233; Price : Rs. 5.

‘ಪ್ರಬುದ್ಧ ಕರ್ಣಾಟಕ’

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಪತ್ರಿಕೆ

‘ಪ್ರಬುದ್ಧ ಕರ್ಣಾಟಕ’ವು ಚೈತ್ರ, ಆಷಾಡ, ಆಶ್ವಯುಜ, ಪುಷ್ಯಮಾಸಗಳಲ್ಲಿ ಆಯಾ ತಿಂಗಳ ಹುಣ್ಣಿಮೆಯ ಹೊತ್ತಿಗೆ ವರ್ಷಕ್ಕೆ ನಾಲ್ಕು ಸಲ ಹೊರಡುತ್ತದೆ.

ವಾರ್ಷಿಕ ಚಂದಾ (ಅಂಚೆ ವೆಚ್ಚ ಸೇರಿ)		ರೂ. ನ.ಪೈ.
ವಾಚನಾಲಯ ಮುಂತಾದ ಸಂಸ್ಥೆಗಳಿಗೆ	....	೫.೦೦
ಸಾಮಾನ್ಯ ಚಂದಾದಾರರಿಗೆ	....	೪.೦೦
ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ ಮಾತ್ರ	....	೩.೦೦

ಸಂಚಿಕೆಗಳನ್ನು ರಿಜಿಸ್ಟರ್ಡ್ ಮೂಲಕ ತರಿಸಿಕೊಳ್ಳಬೇಕೆನ್ನುವವರು ಚಂದಾ ಹಣದ ಜೊತೆಗೆ ಎರಡು ರೂಪಾಯಿ ಕಳುಹಿಸಬೇಕು.

ಚಂದಾ ಹಣವನ್ನೂ ಅದರ ವಿಚಾರವಾಗಿ ಪತ್ರಗಳನ್ನೂ **“ಡೈರೆಕ್ಟರ್, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಆಕಾಶವಾಣಿ ಕಟ್ಟಡ, ವಿ. ವಿ. ಮೊಹಲ್ಲ, ಮೈಸೂರು-೨”** ಎಂಬ ವಿಳಾಸಕ್ಕೆ ಕಳುಹಿಸಬೇಕು. ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಅವರಿಗಾಗಲಿ, ಪ್ರಬುದ್ಧ ಕರ್ಣಾಟಕದ ಸಂಪಾದಕರಿಗಾಗಲಿ ಕಳುಹಿಸಬಾರದು. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಚಂದಾ ಹಣವನ್ನು ತಮ್ಮ ತಮ್ಮ ಕಾಲೇಜಿನ ಅಕೌಂಟ್ಸ್ ಅಧಿಕಾರಿಗಳಿಗೆ ಮುಂಗಡವಾಗಿ ಸಲ್ಲಿಸಿ, ಪಡೆದ ರಸೀತಿಯನ್ನು ತಮ್ಮ ವಿಳಾಸದೊಂದಿಗೆ ಕಳುಹಿಸಿಕೊಡಬೇಕು. ಕಾಲೇಜುಗಳ ಅಧ್ಯಾಪಕವರ್ಗದವರೂ ಇದೇ ರೀತಿ ಮಾಡಬಹುದು. ವಿದ್ಯಾರ್ಥಿಗಳು ತಾವು ವಿದ್ಯಾರ್ಥಿಗಳೆಂಬ ಬಗ್ಗೆ ತಮ್ಮ ಪಾಠಶಾಲೆಯ ಮುಖ್ಯೋಪಾಧ್ಯಾಯರಿಂದ ಒಂದು ಪ್ರಮಾಣಪತ್ರವನ್ನು ಪಡೆದು, ಅದನ್ನು ಚಂದಾ ಹಣದೊಡನೆ ಕಳುಹಿಸಬೇಕು. ಚಂದಾದಾರರು ತಮ್ಮ ಚಂದಾ ಹಣವನ್ನು ಸರ್ಕಾರಿ ಖಜಾನೆಯಲ್ಲಿ ‘ಯೂನಿವರ್ಸಿಟಿ ಫಂಡ್’ಗೆ ಕಟ್ಟಿ, ಖಜಾನೆ ರಸೀತಿಯನ್ನು ತಮ್ಮ ವಿಳಾಸದೊಡನೆ ಕಳುಹಿಸಬಹುದು.

‘ಪ್ರಬುದ್ಧ ಕರ್ಣಾಟಕ’ದ ೩೩, ೩೪, ೩೫ನೆಯ ಸಂಪುಟಗಳು ನಮ್ಮಲ್ಲಿ ಸಿಕ್ಕುತ್ತವೆ. ಇವುಗಳನ್ನು ಸಂಚಿಕೆ ಒಂದಕ್ಕೆ ೬ ಆಣೆ ಅಥವಾ ೩೭ ನಯೆ ಪೈಸೆಯಂತೆ ರಿಯಾಯಿತಿ ದರದಲ್ಲಿ ಪಡೆಯಬಹುದು. ಅಂಚೆಯ ಮೂಲಕ ತರಿಸಿಕೊಳ್ಳುವವರು ಸಂಪುಟ ಒಂದಕ್ಕೆ ಎಂಬತ್ತೊಂದು ನಯೆ ಪೈಸೆ, ಸಾಮಾನ್ಯ ಸಂಚಿಕೆ ಒಂದಕ್ಕೆ ನಲವತ್ತನಾಲ್ಕು ನಯೆ ಪೈಸೆ, ಎರಡು ಸಂಚಿಕೆಗಳನ್ನು ಒಳಗೊಂಡ ಸಂಚಿಕೆಗೆ ಐವತ್ತಾರು ನಯೆ ಪೈಸೆ ಅಂಚೆ ವೆಚ್ಚವನ್ನು ಕಳುಹಿಸಬೇಕು.

‘ಪ್ರಬುದ್ಧ ಕರ್ಣಾಟಕ’ದಲ್ಲಿ ಪ್ರಕಟನೆಗೆ ಲೇಖನಗಳನ್ನೂ, ವಿಮರ್ಶೆಗೆ ಗ್ರಂಥಗಳನ್ನೂ, ವಿನಿಮಯಕ್ಕೆ ಪತ್ರಿಕೆಗಳನ್ನೂ ಪ್ರಬುದ್ಧ ಕರ್ಣಾಟಕದ ಸಂಪಾದಕ (ಪ್ರಸಾರಾಂಗ, ಆಕಾಶವಾಣಿ ಕಟ್ಟಡ, ವಿ. ವಿ. ಮೊಹಲ್ಲ, ಮೈಸೂರು-೨)ರಿಗೆ ಕಳುಹಿಸಬೇಕು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕಮಾಲೆ

೧ ಖಗೋಳಶಾಸ್ತ್ರ ಪ್ರವೇಶ: ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೨ ಸಮಾಜದ ರೋಗರುಜಿನಗಳು: ಜಿ. ಹನುಮಂತರಾವ್, ಎಂ.ಎ.
೩ ತೆರಿಗೆ: ಬಿ. ಆರ್. ಸುಬ್ಬರಾವ್, ಎಂ.ಎ.
೪ ನವರತ್ನಗಳು: ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೫ ನಮ್ಮ ಹಳ್ಳಿಗಳು: ಜಿ. ಎನ್. ಕೃಷ್ಣಮೂರ್ತಿ, ಎಂ.ಎ.
೬ ಕುಮಾರವ್ಯಾಸ: ಎಸ್. ವಿ. ರಂಗಣ್ಣ, ಎಂ.ಎ.
೭ ಹಂಪೆಯ ಹರಿಹರ: ಡಿ. ಎಲ್. ನರಸಿಂಹಾಚಾರ್, ಎಂ.ಎ.
೮ ಕನ್ನಡ ಸಾಹಿತ್ಯ: ಕೆ. ವೆಂಕಟರಾಮಪ್ಪ, ಎಂ.ಎ.
೯ ವಿದ್ಯುಚ್ಛಕ್ತಿಯ ವೈಭವ: ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೧೦ ಪಂಪ: ಟಿ. ಎನ್. ಶ್ರೀಕಂಠಯ್ಯ, ಎಂ.ಎ.
೧೧ ಪ್ರಾಣಿಜೀವನ: ಎ. ನಾರಾಯಣರಾವ್, ಎಂ.ಎಸ್‌ಸಿ.
೧೨ ಕನಸುಗಳು: ಡಾ॥ ಎನ್. ಎಸ್. ನಾರಾಯಣಶಾಸ್ತ್ರೀ, ಎಂ.ಎ., ಡಿ.ಲಿಟ್.
೧೩ ಮದುವೆ: ಎನ್. ಕಸ್ತೂರಿ, ಎಂ.ಎ., ಬಿ.ಎಲ್.
೧೪ ನಮ್ಮ ಆರ್ಥಿಕದೃಷ್ಟಿ: ಎಸ್. ಗೋಪಾಲಸ್ವಾಮಿ, ಎಂ.ಎ.
೧೫ ವಾಯುಗುಣ: ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೧೬ ಬೆಳಕು: ಟಿ. ಎಸ್. ಸುಬ್ಬರಾಯ, ಎಂ.ಎಸ್‌ಸಿ.
೧೭ ಕರ್ಣಾಟಕ ಕಾದಂಬರಿ: ವಿ. ಸೀತಾರಾಮಯ್ಯ, ಎಂ.ಎ.
೧೮ ಕಾಳಿದಾಸನ ಕಾವ್ಯಗಳು ಎಸ್. ರಾಮಚಂದ್ರರಾವ್, ಎಂ.ಎ.
೧೯ ಇಂಗ್ಲೆಂಡಿನ ರಾಜಕೀಯ ಬೆಳವಣಿಗೆ: ಪಿ. ಜಿ. ಸತ್ಯಗಿರಿನಾಥನ್, ಎಂ.ಎ.
೨೦ ಕಣ್ಣು ಮತ್ತು ಅದರ ರಕ್ಷಣೆ: ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೨೧ ಸಾರ್ವಜನಿಕ ವೆಚ್ಚ: ಡಾ॥ ಎಂ. ಎಚ್. ಗೋಪಾಲ್, ಎಂ.ಎ., ಪಿಎಚ್.ಡಿ.
೨೨ ಶಿಶುವಿಹಾರಗಳು: ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.
೨೩ ಸಂಖ್ಯೋದ್ಯಾನ: ಬಿ. ಸೀತಾರಾಮಶಾಸ್ತ್ರೀ, ಎಂ.ಎ.
೨೪ ವಿಡಂಬನ: ಎಸ್. ವಿ. ರಂಗಣ್ಣ, ಎಂ.ಎ.
೨೫ ಎಲ್ಲೋರ ಮತ್ತು ಅಜಂತಾ: ಡಾ॥ ಎಂ. ಎಚ್. ಕೃಷ್ಣ, ಎಂ.ಎ., ಡಿ.ಲಿಟ್.
೨೬ ಸಾರಜನಕದ ಮಹತ್ವ: ಎಚ್. ಸುಬ್ಬಾಜೋಯಿಸ್, ಎಂ.ಎಸ್‌ಸಿ.
೨೭ ಭಾಸ: ಡಾ॥ ಎಚ್. ಎಲ್. ಹರಿಯಪ್ಪ, ಎಂ.ಎ., ಪಿಎಚ್.ಡಿ.
೨೮ ಪಾಶ್ಚಾತ್ಯ ರಾಜಕೀಯ ತತ್ವಗಳು: ಎಂ. ಯಾಮುನಾಚಾರ್ಯ. ಎಂ.ಎ.
೨೯ ಸರ್ವಜ್ಞ ಕವಿ: ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ.

೩೦ ರಕ್ತ: ಡಿ. ಶಾಮಣ್ಣ, ಬಿ.ಎ., ಎಂ.ಬಿ., ಬಿ.ಎಸ್.
೩೧ ಇಂಗ್ಲಿಷ್ ಪ್ರಬಂಧಗಳು: ಎಸ್. ಮಂಜುನಾಥ್, ಎಂ.ಎ.
೩೨ ಅಕ್ಕಮಹಾದೇವಿ: ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
೩೩ ಗಣಿತಶಾಸ್ತ್ರದ ಸ್ವರೂಪ: ಡಾ|| ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ.ಎಸ್‌ಸಿ.
೩೪ ಋಗ್ವೇದ: ಎಂ. ಎ. ಕೃಷ್ಣಸ್ವಾಮಿ, ಎಂ.ಎ.
೩೫ ಕುಮಾರವ್ಯಾಸ ವಾಣಿ: ಎಸ್. ವಿ. ರಂಗಣ್ಣ, ಎಂ.ಎ.
೩೬ ಆಳ್ವಾರುಗಳು: ಎಂ. ಯಾಮುನಾಚಾರ್ಯ, ಎಂ.ಎ.
೩೭ ಹಿಂದೂ ಮುಸ್ಲಿಂ ಮೈತ್ರಿಯನ್ನು ಬೆಳಸಿದ ರಾಜರು:
ವಿ. ರಾಘವೇಂದ್ರರಾವ್, ಎಂ.ಎ., ಬಿ.ಟಿ.
೩೮ ಸುಭಾಷಿತ ಸಂಗ್ರಹಗಳು: ಎಂ. ಪಿ. ಲಕ್ಷ್ಮೀನರಸಿಂಹಶಾಸ್ತ್ರೀ, ಎಂ.ಎ.
೩೯ ಮಕ್ಕಳ ಭಾವಜೀವನ: ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.
೪೦ ಸಹಕಾರ: ಎಸ್. ಗೋಪಾಲಸ್ವಾಮಿ, ಎಂ.ಎ.
೪೧ ನಯಸೇನ: ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
೪೨ ಕೌಟಿಲ್ಯ: ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.
೪೩ ತೆಲುಗು ಚಾಟುಪದ್ಯಗಳು: ಕೆ. ವೆಂಕಟರಾಮಪ್ಪ, ಎಂ.ಎ.
೪೪ ಮುನಿಸಿಪಾಲಿಟಿಗಳು: ಎಚ್. ಕೃಷ್ಣರಾವ್, ಎಂ.ಎ.
೪೫ ಲಕ್ಷ್ಮೀಶ: ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.
೪೬ ರುಚಿ: ಎಸ್. ವಿ. ರಂಗಣ್ಣ, ಎಂ.ಎ.
೪೭ ಕೀಟಗಳು: ಡಿ. ಎಸ್. ವೀರಯ್ಯ, ಎಂ.ಎಸ್‌ಸಿ.
೪೮ ಅಲೆಗಳು: ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೯ ಮುದ್ರಣ: ಟಿ. ಎಸ್. ಶಾಮರಾವ್, ಎಂ.ಎ.
೫೦ ಐವರು ಭೌತವೈಜ್ಞಾನಿಕರು: ಬಿ. ಎ. ಕೃಷ್ಣಸ್ವಾಮಿರಾವ್, ಎಂ.ಎಸ್‌ಸಿ.
೫೧ ಕೃತಕ ರೇಷ್ಮೆ: ಎಂ. ಷಡಕ್ಷರಸ್ವಾಮಿ, ಎಂ.ಎಸ್‌ಸಿ.
೫೨ ಚೀನರ ಇತಿಹಾಸ ಮತ್ತು ನಾಗರಿಕತೆ: ಎಸ್. ವೆಂಕಟದೇಶಿಕಾಚಾರ್, ಎಂ.ಎ.
೫೩ ಯುದ್ಧಕಾಲದ ಆರ್ಥಿಕ ಸಮಸ್ಯೆಗಳು: ಎಸ್. ಲಕ್ಷ್ಮೀನರಸಿಂಹನ್, ಎಂ.ಎ.
೫೪ ಆಹಾರ: ಜಿ. ಆರ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೫ ಇಬ್ಸನ್ನಿನ ಕೆಲವು ನಾಟಕಗಳು: ಎಸ್. ಮಂಜುನಾಥ್, ಎಂ.ಎ.
೫೬ ಶಬ್ದಪ್ರಪಂಚ: ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.
೫೭ ಪ್ರಜಾಭಿಪ್ರಾಯ: ಟಿ. ಎಸ್. ರಾಜಗೋಪಾಲ ಅಯ್ಯಂಗಾರ್,
ಎಂ.ಎ., ಎಲ್‌ಎಲ್.ಬಿ.
೫೮ ಕಲ್ಲಿದ್ದಲು: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೫೯ ಜನಪದಮುಕ್ತಕಗಳು: ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.
೬೦ ಹಾಲು: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೬೧ ಭಾವಗೀತೆ: ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.

೬೨ ಭಾರತದಲ್ಲಿ ಪ್ರಜಾಪ್ರಭುತ್ವ: ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್‌ಎಲ್.ಬಿ.

೬೩ ಆರೋಗ್ಯ ಸಾಧನೆ: ಮೋಟಗಾನಹಳ್ಳಿ ಮಹದೇವಶಾಸ್ತ್ರೀ, ಎಲ್.ಎ.ಎಂ.ಎಸ್.

೬೪-೬೫ ಆಧುನಿಕ ಭಾರತದಲ್ಲಿ ನೃತ್ಯಕಲೆ: ಯು. ಎಸ್. ಕೃಷ್ಣರಾವ್, ಎಂ.ಎಸ್‌ಸಿ. ಮತ್ತು ಚಂದ್ರಭಾಗಾದೇವಿ

ಬೆಲೆ: ಸಾದಾ ೫೦ ನಯೆ ಪೈಸೆ, ಉತ್ತಮ ೭೫ ನಯೆ ಪೈಸೆ.

೬೬ ಚುನಾವಣೆಗಳು: ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)

೬೭ ಮೀನಿನಿಂದ ಮಾನವನೆಡೆಗೆ: ಎಚ್. ಬಿ. ದೇವರಾಜ ಸರ್ಕಾರ್, ಎಂ.ಎಸ್‌ಸಿ.

೬೮ ಕ್ಷಯ: ಡಾ|| ಎಸ್. ಟಿ. ಪುಟ್ಟಣ್ಣ, ಬಿ.ಎಸ್‌ಸಿ., ಎಂ.ಬಿ., ಬಿ.ಎಸ್., ಡಿ.ಟಿ.ಎಂ.ಎಸ್. (ಲಂಡನ್)

೬೯ ಶಿಲ್ಪಿಯ ಪಾತ್ರ: ಬಿ. ಎಲ್. ಸಿ. ರಾಜನ್, ಬಿ.ಇ.

೭೦ ಪರತಂತ್ರಜೀವಿಗಳು ಮತ್ತು ಪರತಂತ್ರಜೀವನ: ಎಚ್. ಬಿ. ದೇವರಾಜ ಸರ್ಕಾರ್, ಎಂ.ಎಸ್‌ಸಿ.

೭೧ ಮಾನವ ಹಕ್ಕುಗಳು: ಹೆಚ್. ಎಂ. ಸದಾಶಿವಯ್ಯ, ಎಂ.ಎ., ಎಲ್‌ಎಲ್.ಬಿ.

೭೨ ವಿನೋದಗಣಿತ: ವಿ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್

೭೩ ಸಾಬೂನು: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.

೭೪ ಉಷ್ಣಯಂತ್ರಗಳ ಪರಿಚಯ: ಕೆ. ವಿ. ಸುಬ್ಬರಾಯ, ಬಿ.ಎಸ್‌ಸಿ., ಬಿ.ಇ.

೭೫ ಬಟ್ಟೆಗಳ ವೈಜ್ಞಾನಿಕ ಪರೀಕ್ಷೆ: ನಾಗಭೂಷಣ್, ಬಿ.ಎಸ್‌ಸಿ., ಎಫ್.ಟಿ.ಐ.

೭೬ ಮಹಾಭಾರತ: ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಪಿಎಚ್.ಡಿ.

೭೭ ಜೇನು: ಡಿ. ಎಸ್. ಮುರಿಗಪ್ಪ ಶ್ರೇಷ್ಠಿ, ಬಿ.ಎಸ್‌ಸಿ. (ಅಗ್ರಿ.)

೭೮ ಮಾನವಶಾಸ್ತ್ರ: ಡಾ|| ಕೆ. ಎನ್. ವೆಂಕಟರಾಯಪ್ಪ, ಎಂ.ಎ., ಪಿಎಚ್.ಡಿ.

೭೯ ಅಥರ್ವವೇದ: ಸಿ. ಜಿ. ಪುರುಷೋತ್ತಮ, ಎಂ.ಎ.

೮೦ ನೇಮಿಚಂದ್ರ: ಎನ್. ಅನಂತರಂಗಾಚಾರ್, ಎಂ.ಎ., ಬಿ.ಟಿ.

೮೧-೮೨ ಹಾಸ್ಯ: ಎಸ್. ವಿ. ರಂಗಣ್ಣ, ಎಂ.ಎ.

ಬೆಲೆ: ಸಾದಾ ೫೦ ನಯೆ ಪೈಸೆ, ಉತ್ತಮ ೭೫ ನಯೆ ಪೈಸೆ.

೮೩ ಶ್ರೀನಾಥ: ಕೆ. ವೆಂಕಟರಾಮಪ್ಪ, ಎಂ.ಎ.

೮೪ ಷಡಕ್ಷರದೇವ: ದೇ. ಜವರೇಗೌಡ, ಎಂ.ಎ.

೮೫ ಚಿತ್ರಾಂಗದಾ: ಯು. ಕೆ. ಸುಬ್ಬರಾಯಾಚಾರ್, ಎಂ.ಎ.

೮೬ ಸಂಚಿಯ ಹೊನ್ನಮ್ಮ: ಎಚ್. ಎಂ. ಶಂಕರನಾರಾಯಣರಾವ್, ಎಂ.ಎ.

೮೭ ವಾಲ್ಮೀಕಿ ರಾಮಾಯಣ: ಯು. ಕೆ. ಸುಬ್ಬರಾಯಾಚಾರ್, ಎಂ.ಎ.

೮೮ ಜಪಾನರ ಇತಿಹಾಸ ಮತ್ತು ನಾಗರಿಕತೆ: ಕೆ. ಪದ್ಮಾವತಮ್ಮ, ಎಂ.ಎ., ಬಿ.ಎಡ್.

೮೯ ಕ್ರಿಶ್ಚಿಯನ್ ಕ್ಯಾಲೆಂಡರ್: ಬಿ. ಸೀತಾರಾಮಶಾಸ್ತ್ರೀ, ಎಂ.ಎ.

೯೦ ಆಲ್‌ಫ್ರೆಡ್ ನೊಬೆಲ್: ಎಸ್. ಸುಬ್ರಹ್ಮಣ್ಯ, ಬಿ.ಎಸ್‌ಸಿ., ಬಿ.ಎಡ್.

೯೧ ಗೃಹರಚನಾವಿಧಿ: ಕೆ. ಎಸ್. ಸದಾನಂದ, ಬಿ.ಇ.
೯೨ ಹಿಂದೂಧರ್ಮಸಾರ: ಸ್ವಾಮಿ ಸೋಮನಾಥಾನಂದ
೯೩ ಪ್ರಜಾಪ್ರಭುತ್ವದಲ್ಲಿ ರಾಜಕೀಯಪಕ್ಷಗಳು—ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ.ಎ., ಎಲ್ಎಲ್.ಬಿ.
೯೪ ದಾರಿತಪ್ಪಿದ ಮಕ್ಕಳು: ಎನ್. ಎಸ್. ಶಾಂತಮ್ಮ, ಎಂ.ಎ.
೯೫ ಮಹಾಕವಿ ಬಾಣ: ಟಿ. ಎಸ್. ಕೃಷ್ಣಮೂರ್ತಿ, ಎಂ.ಎ.
೯೬ ಪ್ರೇರಣೆ: ಕೆ. ನಾಗರಾಜಶಾಸ್ತ್ರಿ, ಎಂ.ಎ.
೯೭ ಪ್ರಾಣಿಗಳ ರಚನಾ ಕೌಶಲ: ಹೆಚ್. ಬಿ. ದೇವರಾಜ ಸರ್ಕಾರ್, ಎಂ.ಎಸ್‌ಸಿ.
೯೮ ಭಾರತೀಯ ರಾಷ್ಟ್ರೀಯತೆಯ ವಿಕಾಸ: ಎ. ಎಸ್. ನಂಜುಂಡಸ್ವಾಮಿ, ಬಿ.ಎ., ಬಿ.ಟಿ.
೯೯ ಶ್ರೀಹರ್ಷ: ಸಿ. ಅನಂತಾಚಾರ್
೧೦೦ ಪ್ರಸಾರಾಂಗ: ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್.
೧೦೧ ಷಟ್ಸ್ಥಲಸಿದ್ಧಾಂತ: ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೦೨ ಶಕ್ತಿವಿಶಿಷ್ಟಾದ್ವೈತವೇದಾಂತ: ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೦೩ ಉಪನಿಷತ್ ಪರಿಚಯ: ಸೋಮನಾಥಾನಂದ
೧೦೪ ತುಳಸೀದಾಸ: ಡಾ|| ಹಿರಣ್ಮಯ, ಎಂ.ಎ., ಪಿಎಚ್.ಡಿ.
೧೦೫ ಸಿಹಿಮೂತ್ರರೋಗ: ಡಾ|| ಎ. ನಾರಾಯಣಪ್ಪ, ಎಂ.ಬಿ., ಬಿ.ಎಸ್.
೧೦೬ ಭಾರತದಲ್ಲಿ ವಿಮೆ: ಕೆ. ಗೋಪಾಲ್, ಎಂ.ಎ., ಬಿ.ಟಿ., ಡಿಪ್–ಇನ್–ಕಾಂ., ಎಫ್.ಸಿ.ಐ.ಐ. (ಲಂಡನ್)
೧೦೭ ಸಕ್ಕರೆ: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೦೮ ಕಲಾಯ್ಡ್ ವಿಜ್ಞಾನ: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೦೯ ಎಕ್ಸ್–ಕಿರಣಗಳು: ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ.
೧೧೦ ವೇಮನ: ಕೆ. ವೆಂಕಟರಾಮಪ್ಪ, ಎಂ.ಎ.
೧೧೧ ವಾಯುಮಂಡಲ: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.
೧೧೨ ಅಂತರಿಕ್ಷಯಾನ—ವೈ. ವಿ. ಇಂದಿರಾಬಾಯಿ, ಎಂ.ಎಸ್‌ಸಿ.
೧೧೩ ಹತ್ತಿ: ಕೆ. ಎಸ್. ಲಕ್ಷ್ಮಣರಾವ್, ಎಂ.ಎಸ್‌ಸಿ.,
೧೧೪ ಕನ್ನಡದಲ್ಲಿ ಅನುಭಾವ ಸಾಹಿತ್ಯ: ಡಾ|| ತಿಪ್ಪೇರುದ್ರಸ್ವಾಮಿ, ಎಂ.ಎ., ಪಿಎಚ್.ಡಿ.
೧೧೫ ಅಲ್ಲಮಪ್ರಭು: ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೧೬ ಕಾಳಿದಾಸನ ನಾಟಕಗಳು: ಡಾ|| ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ.
೧೧೭ ಅಣ್ಣನ ಆದರ್ಶ: ಡಾ|| ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.
೧೧೮ ನಮ್ಮ ನ್ಯಾಯಾಂಗ: ಆರ್. ಗುರುರಾಜ, ಬಿ.ಎ. (ಆನರ್ಸ್), ಎಂ.ಕಾಂ., ಬಿ.ಎಲ್.

೧೧೯ ಸ್ವಾಮಿ ವಿವೇಕಾನಂದ : ಸೋಮನಾಥಾನಂದ

೧೨೦ ಗರ್ಭಿಣಿ ಮತ್ತು ಶಿಶುಸಂರಕ್ಷಣೆ : ಡಾ॥ ವಿ. ಎಲ್. ಪಂಡಿತ್,
ಎಲ್.ಎಂ.ಪಿ., ಎಲ್.ಪಿ.ಎಚ್. (ಕ್ಯಾಲ್.) ಎಂ.ಆರ್.ಎಸ್.ಎಚ್.,
ಎಫ್.ಎ.ಪಿ.ಎಚ್.ಎ. ಮತ್ತು ಡಾ॥ ಎಸ್. ಕೆ. ಸುಶೀಲಾಬಾಯಿ,
ಎಂ.ಬಿ.ಬಿ.ಎಸ್., ಸಿ.ಎಂ.ಸಿ.ಡಬ್ಲ್ಯು. (ಕ್ಯಾಲ್)

೧೨೧ ಬೆಲೆಗಳ ನಿರ್ಧಾರ ಮತ್ತು ಯೋಜನೆಗಳ ಯಶಸ್ಸು :
ಟಿ. ಬಿ. ಚಂದ್ರಶೇಖರಯ್ಯ, ಎಂ.ಎ.

೧೨೨ ಜೀವಸತ್ವಗಳು : ಕೆ. ಎಸ್. ಲಕ್ಷ್ಮಣರಾವ್, ಎ.ಎಸ್‌ಸಿ.

೧೨೩ ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ : ದೇವಂಗಿ ಟಿ. ಚಂದ್ರಶೇಖರ

೧೨೪ ದ್ಯುತಿ ಸಂಶ್ಲೇಷಣೆ : ಡಾ॥ ಎಂ. ಆರ್. ರಾಘವೇಂದ್ರರಾವ್, ಎಂ.ಎಸ್‌ಸಿ.,
ಮತ್ತು ಶ್ರೀಮತಿ ಯಾಮುನಾಬಾಯಿ

೧೨೫ ಅನುವಂಶೀಯತೆ : ಎಚ್. ಬಿ. ದೇವರಾಜ ಸರ್ಕಾರ್, ಎಂ.ಎಸ್‌ಸಿ.

೧೨೬ ವಿಶ್ವಶಾಂತಿ : ಎಚ್. ಎಲ್. ಮಲ್ಲಯ್ಯ, ಎಂ.ಎ.

೧೨೭ ಭಗವದ್ಗೀತಾ ಸಂದೇಶ : ಸೋಮನಾಥಾನಂದ

೧೨೮ ಗೀತಾಮಾತೆ : ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.

ಬರಲಿವೆ

ಸೂರದಾಸ : ಕೃಷ್ಣಮೂರ್ತಿ

ಕೆಲವು ಸಾಂಕ್ರಾಮಿಕ ರೋಗಗಳು : ಡಾ॥ ಎ. ನಾರಾಯಣಪ್ಪ,
ಎ.ಬಿ. ಬಿ.ಎಸ್.

ಮಾನವ ಮತ್ತು ಪ್ರಕೃತಿ : ಡಾ॥ ಟಿ. ಜಿ. ಸಿದ್ದಪ್ಪಾರಾಧ್ಯ, ಎ.ಎ., ಪಿಎಚ್.ಡಿ.

ಲೀಲಾವತಿ ಮತ್ತು ಶ್ರೀನಿವಾಸ ರಾಮಾನುಜನ್ : ಬಿ. ಸೀತಾರಾಮಶಾಸ್ತ್ರಿ
ಎಂ.ಎ. (ಕ್ಯಾಲ್)

ವಿಶಿಷ್ಟಾದ್ವೈತ ಸಂಗ್ರಹ : ಎಂ. ಒ. ಎಸ್. ಐಯ್ಯಂಗಾರ್

ಸಾದಾರಣ ಪ್ರತಿ ೨೫ ನಯೆಪೈಸೆ **ಉತ್ತಮ ಪ್ರತಿ ೩೭ ನಯೆಪೈಸೆ**

ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸಮಾಲೆ ಮತ್ತು ಸರ್ ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆಯಲ್ಲಿ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೦ರಂತೆ ೫೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೧೫ರಂತೆ ೨೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೦ರಂತೆ ೫೦೦ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ
ಶೇಕಡ ೨೫ರಂತೆ ೨,೦೦೦ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ
(ಏಪ್ರಿಲ್ ೧ ರಿಂದ ಮಾರ್ಚಿ ೩೧ ರವರೆಗೆ)

ಡೈರೆಕ್ಟರ್
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ...

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆ

ಪ್ರಧಾನ ಸಂಪಾದಕರು
ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್., ೧೯೪೨ರವರೆಗೆ
ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ., ೧೯೪೨ರಿಂದ ೧೯೪೭ರವರೆಗೆ
ಡಾ|| ಕೆ. ವಿ. ಪುಟ್ಟಪ್ಪ, ಎಂ.ಎ., ಡಿ.ಲಿಟ್., ೧೯೪೭ ರಿಂದ

೧ **ಹರಿಶ್ಚಂದ್ರ ಕಾವ್ಯಸಂಗ್ರಹ** (ಏಳನೆಯ ಮುದ್ರಣ) — ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ಮತ್ತು ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ: ಸಾದಾ ರೂ. ೨.೧೦ ; ಉತ್ತಮ ರೂ. ೩.೧೦.

೨ **ಕರ್ಣಾಟಕ ಕಾದಂಬರೀ ಸಂಗ್ರಹ** (ನಾಲ್ಕನೆಯ ಮುದ್ರಣ)— ಸಂಪಾದಕರು: ಟಿ. ಎಸ್. ವೆಂಕಣ್ಣಯ್ಯ, ಎಂ.ಎ. ; ಬೆಲೆ: ಸಾದಾ ರೂ. ೧.೭೫.

೩ **ಪ್ರಭುಲಿಂಗಲೀಲೆಯ ಸಂಗ್ರಹ** (ಸಚಿತ್ರ)—ಸಂಪಾದಕರು: ಎಂ. ಎಸ್. ಬಸವಲಿಂಗಯ್ಯ, ಎಂ.ಎ., ಬಿ.ಎಲ್. ಮತ್ತು ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ. ; ಬೆಲೆ: ಸಾದಾ ರೂ. ೨.; ಉತ್ತಮ ರೂ. ೩.

೪ **ಸಾಕ್ರಟೀಸನ ಕೊನೆಯ ದಿನಗಳು** (ಸಚಿತ್ರ) — ಅನುವಾದಕರು: ಎ. ಎನ್. ಮೂರ್ತಿರಾವ್, ಎಂ.ಎ. ; ಬೆಲೆ: ಸಾದಾ ರೂ. ೨.೨೫ ; ಉತ್ತಮ ರೂ. ೩.೨೫.

೫ **ಶ್ರೀ ರಾಮಕೃಷ್ಣ ಪರಮಹಂಸ** — ಕೆ. ವಿ. ಪುಟ್ಟಪ್ಪ, ಎಂ.ಎ. ; ಬೆಲೆ: ಸಾದಾ ರೂ. ೩.೫೦ ; ಉತ್ತಮ ರೂ. ೫.

೬ ***ರವೀಂದ್ರನಾಥ ಠಾಕೂರರು** (ಸಚಿತ್ರ) — ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಂ.ಎ.

೭ **ಆರೋಗ್ಯ, ಅದರ ಜ್ಞಾನ ಮತ್ತು ಸಾಧನ** (ಸಚಿತ್ರ)— ಜೆ. ಎ. ಈಶ್ವರಮೂರ್ತಿ, ಬಿ.ಎ., ಎಲ್. ಎಂ.ಎಸ್., ಬಿ.ಎಸ್‌ಸಿ.

೮ **ಪಂಪರಾಮಾಯಣ ಸಂಗ್ರಹ** — ಸಂಪಾದಕರು: ಆಸ್ಥಾನ ಮಹಾವಿದ್ವಾನ್ ತಿರುವಳ್ಳೂರ್ ಶ್ರೀನಿವಾಸರಾಘವಾಚಾರ್ ಮತ್ತು ಡಿ. ಎಲ್. ನರಸಿಂಹಾಚಾರ್, ಎಂ.ಎ. ; ಬೆಲೆ: ಸಾದಾ ರೂ. ೧.೧೩.

೯ **ಹಣಪ್ರಪಂಚ** — ವಿ. ಸೀತಾರಾಮಯ್ಯ, ಎಂ.ಎ. ; ಬೆಲೆ: ಸಾದಾ ರೂ. ೪.೨೫ ; ಉತ್ತಮ ರೂ. ೫.೨೫.

೧೦ **ಸಂಸ್ಕೃತ ನಾಟಕ** — ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ: ಸಾದಾ ರೂ. ೨.೧೩ ; ಉತ್ತಮ ರೂ. ೨.೬೩.

೧೧ ***ಜೀವವಿಜ್ಞಾನ**—ಲೇಖಕರು: ಬಿ. ವೆಂಕಟನಾರಾಯಣಪ್ಪ, ಎಂ.ಎ.

೧೨ **ಹಿಂದೂದರ್ಶನಸಾರ**—ಮಹಾಮಹೋಪಾಧ್ಯಾಯ ಪಂಡಿತರತ್ನಂ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ; ಬೆಲೆ: ಸಾದಾ ರೂ. ೩.೫೦; ಉತ್ತಮ ರೂ. ೪.೫೦.

೧೩ **ರಾಜ್ಯಶಾಸ್ತ್ರ**—ಎಚ್. ಕೃಷ್ಣರಾವ್, ಎಂ.ಎ.; ಬೆಲೆ: ಸಾದಾ ರೂ. ೧.೫೦; ಉತ್ತಮ ರೂ. ೨.೫೦.

೧೪ **ಹದಿಬದೆಯ ಧರ್ಮ**—ಸಂಪಾದಕೀಯರು: ಡಿ. ಚಂಪಾಬಾಯಿ, ಎಂ.ಎ.; ಬೆಲೆ: ಸಾದಾ ರೂ. ೧.೫೦; ಉತ್ತಮ ರೂ. ೨.೫೦.

೧೫ **ಪುರಾಣನಾಮಚೂಡಾಮಣಿ**—ಬೆನಗಲ್ ರಾಮರಾವ್, ಎಂ.ಎ., ಎಲ್‌ಎಲ್.ಬಿ. ಮತ್ತು ಪಾನ್ಯಂ ಸುಂದರಶಾಸ್ತ್ರೀ, ಬೆಲೆ: ಸಾದಾ ರೂ. ೫.೫೦; ಉತ್ತಮ ರೂ. ೬.೫೦.

೧೬ ***ಯಶೋಧರ ಚರಿತೆಯ ಸಂಗ್ರಹ** — ಸಂಪಾದಕರು: ಕೆ. ವಿ. ರಾಘವಾಚಾರ್, ಎಂ.ಎ., ಬಿ.ಟಿ.

೧೭ **ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ**—ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಎಂ.ಎ.; ಬೆಲೆ: ಸಾದಾ ರೂ. ೩.೨೦; ಉತ್ತಮ ರೂ. ೪.೨೦.

೧೮ **ಹಿಂದೂದೇಶದ ಭೂಚರಿತ್ರೆ** — ವೈ. ನಾಗಪ್ಪ, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೦.೭೫; ಉತ್ತಮ ರೂ. ೧.೨೫.

೧೯ **ವಚನಧರ್ಮಸಾರ** — ಎಂ. ಆರ್. ಶ್ರೀನಿವಾಸಮೂರ್ತಿ, ಬಿ.ಎ.; ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೨೦ **ಪ್ರಾಣಿಶಾಸ್ತ್ರ** — ಡಾ|| ಎ. ಸುಬ್ಬರಾವ್, ಬಿ.ಎ., ಡಿ.ಎಸ್‌ಸಿ. ಮತ್ತು ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೧.೫೦; ಉತ್ತಮ ರೂ. ೧.೭೫.

೨೧ **ಆಧುನಿಕ ತತ್ವಶಾಸ್ತ್ರ ಸಮಸ್ಯೆಗಳು** — ಜಿ. ಹನುಮಂತರಾವ್, ಎಂ.ಎ. ಬೆಲೆ: ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೨೨ **ಕನ್ನಡ ಕೈಪಿಡಿ** (ಭಾಗ ೫, ಸಾಹಿತ್ಯಚರಿತ್ರೆ)— ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ: ಸಾದಾ ರೂ. ೩.೫೦; ಉತ್ತಮ ರೂ.೪.೫೦.

೨೩ **ಇಸ್ಲಾಂ ಸಂಸ್ಕೃತಿ**—ಮೂಲಲೇಖಕರು: ಪ್ರೊ|| ಮಹಮದ್ ಅಬ್ಬಾಸ್ ಷೂಸ್ತ್ರಿ; ಅನುವಾದಕರು: ರಾಜಸೇವಾಸಕ್ತ ಬಿ. ಎಂ. ಶ್ರೀಕಂಠಯ್ಯ, ಎಂ.ಎ., ಬಿ.ಎಲ್.; ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೨೪ **ತಮಿಳು ಪಾಠಗಳು**—ಲೇಖಕರು: ಎಸ್. ರುದ್ರಪತಿ, ಎಂ.ಎ.; ಬೆಲೆ: ರೂ. ೩.೨೫.

೨೫ **ಅಶೋಕ**—ಎನ್. ಕಸ್ತೂರಿ, ಎಂ.ಎ., ಬಿ.ಎಲ್.; ಬೆಲೆ: ಸಾದಾ ರೂ. ೧.೧೩; ಉತ್ತಮ ರೂ. ೨.

೨೬ **ಭಾರತೀಯ ಕಾವ್ಯಮೀಮಾಂಸೆ**—ಪ್ರೊ|| ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ: ಸಾದಾ ರೂ. ೪.೭೫; ಉತ್ತಮ ೫.೭೫.

೨೭ **ಭಾರತೀಯ ಸಂಸ್ಕೃತಿ**—ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ. ಲಿಟ್.; ಬೆಲೆ: ಸಾದಾ ರೂ. ೩.; ಉತ್ತಮ ರೂ. ೪.

೨೮ **ಸಾರ್ವಜನಿಕ ಹಣಕಾಸು**—ವಿ. ಎಲ್. ಡಿ'ಸೋಜ, ಬಿ.ಎ., ಬಿ.ಕಾಂ. (ಲಂಡನ್) ಮತ್ತು ಬಿ. ಆರ್. ಸುಬ್ಬರಾವ್, ಎಂ.ಎ., ಡಿಪ್-ಇನ್-ಕಾಂ.; ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.೫೦.

೨೯ **ಆದಿಪುರಾಣ ಸಂಗ್ರಹ**—ಸಂಪಾದಕರು: ಎಲ್. ಗುಂಡಪ್ಪ, ಎಂ.ಎ.; ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೩೦ **ಪಂಪ ಭಾರತ**—(೯-೧೪ ಆಶ್ವಾಸಗಳು) ಬೆಲೆ: ಸಾದಾ ರೂ. ೩.೫೦; ಉತ್ತಮ ರೂ. ೪.೫೦.

೩೧ **ಕಾಳಿದಾಸ**—ಎಂ. ಲಕ್ಷ್ಮೀನರಸಿಂಹಯ್ಯ. ಎಂ.ಎ.; ಬೆಲೆ: ಸಾದಾ ರೂ. ೨; ಉತ್ತಮ ರೂ. ೨-೫೦.

೩೨ **ಭರತೇಶವೈಭವ ಸಂಗ್ರಹ**— ಸಂಪಾದಕರು: ತ. ಸು. ಶಾಮರಾವ್, ಎಂ.ಎ.; ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.

೩೩ **ಶ್ರೀ ಕೃಷ್ಣ ಚರಿತ್ರೆ**—ಸಂಪಾದಕರು: ಕೆ. ವೆಂಕಟರಾಮಪ್ಪ, ಎಂ.ಎ.; ಬೆಲೆ: ಸಾದಾ ರೂ. ೧.೨೫; ಉತ್ತಮ ರೂ. ೧.೭೫.

೩೪ **ಕನ್ನಡ ಕೈಪಿಡಿ**—(ಭಾಗಗಳು ೧, ೨, ೩, ೪) ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.

೩೫ **ಪ್ರಜಾಸರ್ಕಾರ**—ಡಾ|| ಎಂ. ವಿ. ಕೃಷ್ಣರಾವ್, ಎಂ.ಎ., ಬಿ.ಟಿ., ಡಿ.ಲಿಟ್.; ಬೆಲೆ: ಸಾದಾ ರೂ. ೧.೭೫; ಉತ್ತಮ ರೂ. ೨.೨೫.

೩೬ **ಭಾರತೀಯ ತತ್ತ್ವಶಾಸ್ತ್ರ ಸಂಗ್ರಹ** — ವಿದ್ವಾನ್ ಎಚ್. ಎನ್. ರಾಘವೇಂದ್ರಾಚಾರ್ಯ, ಎಂ.ಎ.

೩೭ **ಭೌತ ವಿಜ್ಞಾನ**—ಡಾ|| ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.; ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.೫೦.

೩೮ **ಕಮ್ಯುನಿಸಂ**—ಎಲ್. ಶ್ರೀಕಂಠಯ್ಯ, ಎಂ.ಎ., ಎಂ.ಎಸ್‌ಸಿ. (ಲಂಡನ್) ಬಾರ್-ಅಟ್-ಲಾ; ಬೆಲೆ: ಸಾದಾ ರೂ. ೨; ಉತ್ತಮ ರೂ. ೩.

೩೯ **ವಿಜ್ಞಾನ ಸಂಶೋಧನೆ** — ಎಸ್. ವರದರಾಜನ್, ಬೆಲೆ: ಸಾದಾ ರೂ. ೩.೧೩; ಉತ್ತಮ ರೂ. ೪.೧೩.

೪೦ **ಗಣಿತಶಾಸ್ತ್ರದ ಚರಿತ್ರೆ**— ಸಿ. ಎನ್. ಶ್ರೀನಿವಾಸ ಅಯ್ಯಂಗಾರ್; ಬೆಲೆ: ಸಾದಾ ರೂ. ೨.೮೦; ಉತ್ತಮ ರೂ. ೩.೮೦.

೪೧ **ರಸಾಯನಶಾಸ್ತ್ರ** (ಒಂದನೆಯ ಭಾಗ)—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೫.೨೫; ಉತ್ತಮ ರೂ. ೬.೨೫.

೪೨ **ತರ್ಕಶಾಸ್ತ್ರ** (ಭಾಗ ೧)—ಜಿ. ಹನುಮಂತರಾವ್, ಎಂ.ಎ. ;
ಬೆಲೆ : ಸಾದಾ ರೂ. ೨.೧೩ ; ಉತ್ತಮ ರೂ. ೩.೧೩.

೪೨ (*a*) **ತರ್ಕಶಾಸ್ತ್ರ** (ಭಾಗ ೨)—ಜಿ. ಹನುಮಂತರಾವ್, ಎಂ.ಎ. ;
ಬೆಲೆ: ಸಾದಾ ರೂ. ೨ ; ಉತ್ತಮ ರೂ. ೩.

೪೩ **ಸಂಸ್ಕೃತಕಾವ್ಯ** — ಡಾ॥ ಕೆ. ಕೃಷ್ಣಮೂರ್ತಿ, ಎಂ. ಎ., ಪಿಎಚ್.ಡಿ. ;
ಬೆಲೆ: ಸಾದಾ ರೂ. ೩.೫೦ ; ಉತ್ತಮ ರೂ. ೪.೫೦.

೪೪ **ನಾಟುನುಡಿ**—ಎಸ್. ವಿ. ರಂಗಣ್ಣ, ಎಂ.ಎ. ; ಬೆಲೆ : ಸಾದಾ ರೂ. ೨.೧೦ ;
ಉತ್ತಮ ರೂ. ೩. ೧೦.

೪೫ **ತೆಲಗು ಸಾತಗಳು**—ಕೆ. ಸುಬ್ಬರಾಮಪ್ಪ, ಎಂ.ಎ., ಬಿ.ಇಡ್. ;
ಬೆಲೆ : ಸಾದಾ ರೂ. ೩.೭೫ ; ಉತ್ತಮ ರೂ. ೪.೭೫.

೪೬ **ಬಂಕಿಮಚಂದ್ರ** — ಎ. ಆರ್. ಕೃಷ್ಣಶಾಸ್ತ್ರೀ, ಎಂ.ಎ. ; ಬೆಲೆ : ಸಾದಾ
ರೂ. ೭ ; ಉತ್ತಮ ರೂ. ೮.

೪೭ **ಕುಟುಂಬ ಜೀವನ**—ಜಿ. ಹನುಮಂತರಾವ್, ಎಂ.ಎ. ; ಬೆಲೆ : ಸಾದಾ
ರೂ ೩.೨೫ ; ಉತ್ತಮ ರೂ. ೪.೨೫.

೪೮ **ರಸಾಯನಶಾಸ್ತ್ರ** (ಎರಡನೆಯ ಭಾಗ) — ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ. ;
ಬೆಲೆ : ಸಾದಾ ರೂ. ೩.೪೦ ; ಉತ್ತಮ ರೂ. ೪.೪೦.

೪೯ **ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿ**— ಪ್ರೊ॥ ಎನ್. ಎ. ನಿಕಂ, ಎಂ.ಎ.
(ಕ್ಯಾಂಟಬ್.) ಮತ್ತು ಎನ್. ಎಸ್. ಅನಂತರಂಗಾಚಾರ್,
ಬಿ.ಎ. (ಆನರ್ಸ್)
ಬೆಲೆ ಸಾದಾ ರೂ. ೩.೧೦ ; ಉತ್ತಮ ರೂ. ೪.೧೦.

೫೦ **ಷೇಕ್ಸ್‌ಪಿಯರ್**—ಎ. ಎನ್. ಮೂರ್ತಿರಾವ್, ಎಂ.ಎ. ;
ಬೆಲೆ : ಸಾದಾ ರೂ. ೬.೭೫ ; ಉತ್ತಮ ರೂ. ೭.೭೫.

ಬರಲಿದೆ

ಪ್ರವಾಸಿ ಕಂಡ ಇಂಡಿಯಾ—ಎಚ್. ಎಲ್. ನಾಗೇಗೌಡ, ಬಿ. ಎಸ್‌ಸಿ.

ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ವೆಚ್ಚ, ಮಾರಾಟ ತೆರಿಗೆ ಮತ್ತು ಪುಸ್ತಕವನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ ಯಂತೆ ೨೫ ರೂಪಾಯಿಗಳ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳುವವರಿಗೆ.

ಶೇಕಡ ೧೮¾ ರಂತೆ ೧,೦೦೦ ರೂಪಾಯಿಗಳ ಬೆಲೆ ಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ ಕೊಳ್ಳುವವರಿಗೆ.

ಶೇಕಡ ೨೫ರಂತೆ ೨,೦೦೦ ರೂಪಾಯಿಗಳ ಬೆಲೆ ಬಾಳುವ ಪುಸ್ತಕಗಳನ್ನು ಒಂದು ವರ್ಷದಲ್ಲಿ (ಏಪ್ರಿಲ್ ೧ರಿಂದ ಮಾರ್ಚಿ ೩೧ರವರೆಗೆ) ಕೊಳ್ಳುವವರಿಗೆ.

---

* ಈ ಪುಸ್ತಕಗಳು ಮುಗಿದುಹೋಗಿವೆ.

ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಮಾಲೆ

೧ **ಇಂಟರ್‌ಮೀಡಿಯಟ್ ಭೌತಶಾಸ್ತ್ರ**— ಬಿ. ವಿ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೨ **ಬೀಜರೇಖಾಗಣಿತ**— ಕೆ. ಮಂಜುನಾಥಯ್ಯ, ಎಂ.ಎಸ್‌ಸಿ., ಬಿ.ಎಲ್.; ಬೆಲೆ: ರೂ. ೨.೫೫.

೩ **ಕಲನಶಾಸ್ತ್ರ**—ಎಂ. ಎಸ್. ಸೂರ್ಯನಾರಾಯಣಶಾಸ್ತ್ರೀ, ಎಂ.ಎಸ್.ಸಿ.; ಬೆಲೆ: ರೂ. ೩.೫೫.

೪ **ಗ್ರೇಟ್ ಬ್ರಿಟನ್ನಿನ ಚರಿತ್ರೆ**—ಡಾ|| ಎಂ. ಶೇಷಾದ್ರಿ; ಬೆಲೆ: ಸಾದಾ ರೂ. ೨.೭೫; ಉತ್ತಮ ರೂ. ೩.೭೫.

೫ **ಆರ್ಥಿಕರಚನೆ**— ಡಾ|| ಜಿ. ಟಿ. ಹುಚ್ಚಪ್ಪ, ಎಂ.ಎ., ಪಿಎಚ್.ಡಿ., ಬೆಲೆ: ಸಾದಾ ರೂ. ೨.೭೫; ಉತ್ತಮ ರೂ. ೩.೭೫.

೬ **ಇಂಟರ್‌ಮೀಡಿಯಟ್ ಪ್ರಾಣಿಶಾಸ್ತ್ರ** — ಎ. ನಾರಾಯಣರಾವ್, ಎಂ.ಎಸ್‌ಸಿ.; ಬೆಲೆ: ರೂ. ೩.

೭ **ಸರಳ ರಸಾಯನಶಾಸ್ತ್ರ**— ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೨.೫೫; ಉತ್ತಮ ರೂ. ೩.೫೫.

೮ **ಇಂಟರ್‌ಮೀಡಿಯಟ್ ಜಾಮಿಟ್ರಿ** — ಎಂ.ವಿ. ಜಂಬುನಾಥನ್, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೩; ಉತ್ತಮ ರೂ. ೪.

೯ **ಭೌತಿಕ ಭೂಗೋಳ** — ಕುಮಾರಸ್ವಾಮಿ, ಎಂ.ಎ.; ಬೆಲೆ: ಸಾದಾ ರೂ. ೩.೫೫.

೧೦ **ಆಧುನಿಕ ತರ್ಕಶಾಸ್ತ್ರ ಸಂಗ್ರಹ**—ಎಂ. ಯಾಮುನಾಚಾರ್ಯ, ಎಂ.ಎ.; ಬೆಲೆ: ಸಾದಾ ರೂ. ೧.೭೫; ಉತ್ತಮ ರೂ. ೨.೭೫.

೧೧ **ಪ್ರಪಂಚ ಚರಿತ್ರೆಯ ರೂಪರೇಖೆಗಳು**— ಡಾ|| ಎಸ್. ಶ್ರೀಕಂಠಶಾಸ್ತ್ರೀ, ಎಂ.ಎ., ಡಿ.ಲಿಟ್.; ಬೆಲೆ: ಸಾದಾ ರೂ. ೨.೩೦; ಉತ್ತಮ ರೂ. ೩.೩೦.

೧೨ **ಪ್ರೀ-ಯೂನಿವರ್ಸಿಟಿ ಜ್ಯಾಮಿತಿ**—ಎಂ.ವಿ. ಜಂಬುನಾಥನ್, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೩; ಉತ್ತಮ ರೂ. ೪.

೧೩ **ವಾಣಿಜ್ಯಶಾಸ್ತ್ರ** — ಡಾ|| ಜಿ. ರಾಮಕೃಷ್ಣ ರೆಡ್ಡಿ, ಎಂ.ಎ., ಪಿಎಚ್.ಡಿ.; ಬೆಲೆ: ಸಾದಾ ರೂ. ೨.೬೫; ಉತ್ತಮ ರೂ. ೩.೬೫.

೧೪ **ರೋಮ್ ದೇಶದ ಚರಿತ್ರೆ**— ಡಾ|| ಬಿ.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ., ಡಿ.ಲಿಟ್.; ಬೆಲೆ: ಸಾದಾ ರೂ. ೨.೪೦; ಉತ್ತಮರೂ. ೩.೪೦.

೧೫ **ಪ್ರೀ-ಯೂನಿವರ್ಸಿಟಿ ಭೌತ ವಿಜ್ಞಾನ** — ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ. ; ಬೆಲೆ: ಸಾದಾ ರೂ. ೫.೪೦; ಉತ್ತಮ ರೂ. ೬.೪೦.

೧೬ **ತ್ರಿಕೋನಮಿತಿ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ., ಬೆಲೆ: ಸಾದಾ ರೂ. ೩.೭೫; ಉತ್ತಮ ರೂ. ೪.೭೫.

೧೭ **ಸಾಮಾನ್ಯ ವಿಜ್ಞಾನ**—ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ. ; ಬೆಲೆ: ಸಾದಾ ರೂ. ೨.೫೦; ಉತ್ತಮ ರೂ. ೩.೫೦.

೧೮ **ಪ್ರೀ-ಯೂನಿವರ್ಸಿಟಿ ಬೀಜಗಣಿತ** —ಶ್ರೀ ವಿ. ಕೆ. ದೊರೆಸ್ವಾಮಿ, ಎಂ.ಎಸ್‌ಸಿ., ಬಿ.ಎಲ್. ; ಬೆಲೆ: ಸಾದಾ ರೂ. ೩; ಉತ್ತಮ ರೂ. ೪.

೧೯ **ಸಮಾಜ ವಿಜ್ಞಾನ**—ವಿ. ಮುದ್ದಲಿಂಗಣ್ಣ, ಎಂ.ಎ. ; ಬೆಲೆ: ಸಾದಾ ರೂ. ೨.೯೦; ಉತ್ತಮ ರೂ. ೩.೯೦.

೨೦ **ಭೂವಿಜ್ಞಾನ**—ಎಸ್. ವರದರಾಜನ್, ಎಂ.ಎಸ್‌ಸಿ. ಮತ್ತು ಡಿ. ರಂಗಯ್ಯ, ಎಂ.ಎಸ್‌ಸಿ. ; ಬೆಲೆ: ಸಾದಾ ರೂ. ೪.೫೬ ; ಉತ್ತಮ ರೂ. ೫.೫೬.

೨೧ **ಕನ್ನಡ ಕಾವ್ಯಾಂಜಲಿ** (ಭಾಗ ೧)—ಸಂಪಾದಕರು: ತೀ. ನಂ. ಶ್ರೀಕಂಠಯ್ಯ, ಎಂ.ಎ. ; ಬೆಲೆ: ಸಾದಾ ೬೨ ನ.ಪೈ. ; ಉತ್ತಮ ರೂ. ೧.೫೦.

೨೨ **ಬೀಜಗಣಿತ**—ಪಿ. ಆರ್. ಪ್ರಾಣೇಶರಾವ್, ಎಂ.ಎಸ್‌ಸಿ. ; ಬೆಲೆ: ಸಾದಾ ರೂ. ೨.೫೦ ; ಉತ್ತಮ ರೂ. ೩.೫೦.

೨೩ **ಪ್ರೀ-ಯೂನಿವರ್ಸಿಟಿ ಪ್ರಾಣಿಶಾಸ್ತ್ರ**—ಎ. ನಾರಾಯಣರಾವ್, ಎಂ.ಎಸ್‌ಸಿ. ; ಬೆಲೆ: ಸಾದಾ ರೂ. ೩ ; ಉತ್ತಮ ರೂ. ೪.

೨೪ **ಪರಿಮಿತ ವಿಕಲನಗಳು**—ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎ. ; ಬೆಲೆ: ಸಾದಾ ರೂ. ೫.೭೫; ಉತ್ತಮ ಪ್ರತಿ ರೂ. ೬.೭೫.

೨೫ **ಪ್ರೀ-ಯೂನಿವರ್ಸಿಟಿ ಸಸ್ಯಶಾಸ್ತ್ರ** — ಎಚ್. ಎನ್. ಚಾಮಯ್ಯ, ಎಂ.ಎಸ್‌ಸಿ.; ಬೆಲೆ: ಸಾದಾ ರೂ. ೮.೬೦; ಉತ್ತಮ ಪ್ರತಿ ರೂ. ೯.೬೦.

೨೬ **ಪ್ರೀ-ಯೂನಿವರ್ಸಿಟಿ ಭೂವಿವರಣೆ**–ಡಾ॥ ಘೋರಿ, ಎಂ.ಎ., ಪಿಎಚ್.ಡಿ.; ಬೆಲೆ: ಸಾದಾ ರೂ. ೪.೧೫ ; ಉತ್ತಮ ಪ್ರತಿ ರೂ. ೫.೧೫.

೨೭ **ಪುರಾತತ್ವಶೋಧನೆ**—ಡಾ॥ ಎಸ್. ಶ್ರೀಕಂಠಶಾಸ್ತ್ರಿ, ಎಂ.ಎ., ಡಿ.ಲಿಟ್. ; ಬೆಲೆ: ಸಾದಾ ರೂ. ೬.೮೨; ಉತ್ತಮ ರೂ. ೭.೮೨.

೨೮ **ಗೃಹವಿಜ್ಞಾನ**—ಡಾ|| ಸುಶೀಲಲಿಂಗಯ್ಯ; ಬೆಲೆ: ಸಾದಾ ರೂ. ೩.೫೫ ; ಉತ್ತಮ ರೂ. ೪.೫೫.

೨೯ **ಮಹಾಶ್ವೇತೆ** — ಟಿ. ಎಸ್. ವೆಂಕಣ್ಣಯ್ಯ ಎಂ.ಎ. ಮತ್ತು ತ. ಸು. ಶಾಮರಾವ್, ಎಂ.ಎ.; ಬೆಲೆ : ಸಾದಾ ರೂ. ೧; ಉತ್ತಮ ರೂ. ೨.

೩೦ **ಕನ್ನಡ ಕಾವ್ಯವಲ್ಲರಿ**—ಸಂಪಾದಕರು : ತೀ. ನಂ. ಶ್ರೀಕಂಠಯ್ಯ, ಎಂ.ಎ.; ಬೆಲೆ: ಸಾದಾ ರೂ. ೧.೭೫ ; ಉತ್ತಮ ರೂ. ೨.೭೫.

೩೧ **English Text for Under-graduate Classes** : Price ord. Rs. 2 ; Calico. Rs. 3.

೩೨ **ಕನ್ನಡ ಕಾವ್ಯಾಂಜಲಿ (ಭಾಗ ೨)**—ಸಂಪಾದಕರು : ಪ್ರೊ|| ಡಿ. ಎಲ್. ನರಸಿಂಹಾಚಾರ್, ಎಂ.ಎ.; ಬೆಲೆ: ಸಾದಾ ರೂ. ೧; ಉತ್ತಮ ರೂ. ೨.

೩೩ **ಗ್ರೀಸ್ ದೇಶದ ಚರಿತ್ರೆ**—ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಎಂ.ಎಸ್‌ಸಿ.; ಬೆಲೆ : ಸಾದಾ ರೂ. ೨.೨೦ ; ಉತ್ತಮ ರೂ. ೩.೨೦.

೩೪ **ಅರ್ಥಶಾಸ್ತ್ರ**—ಡಾ|| ಜಿ. ರಾಮಕೃಷ್ಣರೆಡ್ಡಿ, ಎಂ.ಎ., ಪಿಎಚ್.ಡಿ.; ಬೆಲೆ : ಸಾದಾ ರೂ. ೩ ; ಉತ್ತಮ ರೂ. ೪.

೩೫ **ಲೆಕ್ಕ ಪರಿಶೋಧನೆ ಮತ್ತು ಸಮರ್ಥನೆ**—ಡಿ. ವಿ. ರಾಮಚಂದ್ರ, ಎಂ.ಎ., ಬಿ.ಕಾಂ.; ಬೆಲೆ: ಸಾದಾ ರೂ. ೩.೫೦; ಉತ್ತಮ ರೂ. ೪.೫೦.

೩೬ **ಭಾರತದಲ್ಲಿ ಬ್ಯಾಂಕುಗಳ ಕಾನೂನು ಮತ್ತು ಆಚರಣೆ**—ಡಿ. ವಿ. ರಾಮಚಂದ್ರ, ಎಂ.ಎ.; ಬಿ.ಕಾಂ. ; ಬೆಲೆ: ಸಾದಾ ರೂ. ೩.೬೦ ; ಉತ್ತಮ ರೂ. ೪.೬೦.

೩೭ **ಸಾರ್ವಜನಿಕ ಆಡಳಿತ**—ಎಚ್. ಕೃಷ್ಣರಾವ್, ಎಂ.ಎ. ; ಬೆಲೆ: ಸಾದಾ ರೂ. ೭-೭೦ ; ಉತ್ತಮ ರೂ. ೮.೭೦.

೩೮ **ಪಾಶ್ಚಾತ್ಯ ರಾಜಕೀಯ ತತ್ವಶಾಸ್ತ್ರ**—ಎಚ್. ಕೃಷ್ಣರಾವ್, ಎಂ.ಎ.; ಬೆಲೆ: ಸಾದಾ ರೂ. ೧೦.೭೦ ; ಉತ್ತಮ ರೂ. ೧೧.೭೦.

೩೯ **ಅಂತರಾಂಶ ಕಲನ ವಿನ್ಯಾಸ**—ಬಿ. ಸೀತಾರಾಮಶಾಸ್ತ್ರೀ, ಎಂ.ಎ. ಬೆಲೆ ಸಾದಾ ರೂ. ೭.೫೦ ; ಉತ್ತಮ ರೂ. ೮.೫೦.

೪೦ **ರಾಜ್ಯತತ್ತ್ವ**—ಎನ್. ಶಂಕರಲಿಂಗಯ್ಯ, ಎಂ.ಎ. ಮತ್ತು ಎಚ್. ಕೃಷ್ಣರಾವ್, ಎಂ.ಎ.

೪೧ **ವಾಣಿಜ್ಯ ನ್ಯಾಯ**—ಎಚ್. ಎಚ್. ಬಸವರಾಜ್, ಬಿ.ಎ., ಎಲ್‌ಎಲ್.ಬಿ.

೪೨ **ನೀರಾವರಿ**—ಎಚ್. ಸಿ. ಕಪಿನಿಪತಿಭಟ್ಟ, ಬಿ.ಎ., ಬಿ.ಇ., ಎಂ.ಐ.ಇ.

<u>ಬರಲಿವೆ</u>

೪೩ **ಭಾರತದ ಭೂವಿಜ್ಞಾನ**—ಎಸ್. ವರದರಾಜನ್, ಎಂ.ಎಸ್‌ಸಿ. ಮತ್ತು ಡಿ. ರಂಗಯ್ಯ, ಎಂ.ಎಸ್‌ಸಿ.

೪೪ **ಬೀಜಗಣಿತ**—ಡಾ॥ ಎಸ್. ವಿ. ಕೇಶವ ಹೆಗ್ಡೆ, ಎಂ.ಎಸ್‌ಸಿ., ಪಿಎಚ್.ಡಿ.;
೪೫ **ದ್ಯುತಿ ಶಾಸ್ತ್ರ**—ಡಾ॥ ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.
೪೬ **ಗಣಿತಾತ್ಮಕ ಭೌತಶಾಸ್ತ್ರ**—ಡಾ॥ ಟಿ. ಎಸ್. ಸುಬ್ಬರಾಯ, ಡಿ.ಎಸ್‌ಸಿ.
೪೭ **ಶಾಖಪ್ರಕರಣ**—ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೪೮ **ಬೀಜರೇಖಾಗಣಿತ**—ಡಾ॥ ಸಿ. ಎನ್. ಶ್ರೀನಿವಾಸ ಅಯ್ಯಂಗಾರ್, ಡಿ. ಎಸ್‌ಸಿ.
೪೯ **ಭೌತರಾಸಾಯನಶಾಸ್ತ್ರ**—ಕೆ. ಸುಬ್ಬಾಭಟ್ಟ, ಎಂ.ಎಸ್‌ಸಿ.
೫೦ **ಸಸ್ಯಶಾಸ್ತ್ರ**—ಬಿ. ಎಚ್. ಅನ್ನಪೂರ್ಣಾಬಾಯಿ, ಎಂ.ಎಸ್‌ಸಿ.

ಅಚ್ಚಿನಲ್ಲಿ

ಹೊಯ್ಸಳ ವಾಸ್ತುಶಿಲ್ಪ—ಡಾ॥ ಶ್ರೀಕಂಠಶಾಸ್ತ್ರಿ.
ರಸಾಯನಶಾಸ್ತ್ರ ಮತ್ತು ಜನಜೀವನ—ಕೆ. ಸುಬ್ಬಾಭಟ್ಟ.

Other Publications

೧ **ಹರಿಹರನ ರಗಳೆಯಲ್ಲಿ ಜೀವನ ದರ್ಶನ**—ಸ. ಸ. ಮಾಳವಾಡ, ಎಂ.ಎ.; ಬೆಲೆ: ಸಾದಾ ರೂ. ೧—೨೫; ಉತ್ತಮ ರೂ. ೨—೨೫.
೨ **ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ದರ್ಶನ**—ಡಾ॥ ರಂ. ಶ್ರೀ. ಮುಗಳಿ, ಎಂ.ಎ., ಡಿ.ಲಿಟ್.; ಬೆಲೆ: ಸಾದಾ ರೂ. ೧. ಉತ್ತಮ ರೂ. ೨.
೩ **ರಸೋಲ್ಲಾಸ**—ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ; ಬೆಲೆ: ಸಾದಾ ರೂ. ೧.೫೦. ನ.ಪೈ.; ಉತ್ತಮ ರೂ. ೨.೫೦
೪ **ಮರಾಠಿ ಸಾಹಿತ್ಯ**—ಶ್ರೀ ದ. ರಾ. ಬೇಂದ್ರೆ, ಎಂ.ಎ. ಸಾದಾ ರೂ. ೧.೧೫ ; ಉತ್ತಮ ರೂ. ೨.೧೫.
೫ **ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ**—ವಿ. ಸೀತಾರಾಮಯ್ಯ, ಎಂ.ಎ.; ಬೆಲೆ: ಸಾದಾ ರೂ. ೨.೬೦. ; ಉತ್ತಮ ರೂ. ೩.೬೦.
೬ **ವಂಗ ಸಾಹಿತ್ಯ ಪರಿಚಯ**–ಸ್ವಾಮಿ ಶಂಕರಾನಂದ ಸರಸ್ವತಿ, ಬೆಲೆ: ಸಾದಾ ರೂ. ೩.೧೦. ; ಉತ್ತಮ ರೂ. ೪.೧೦.
೭ **Minimum Wages in India:** by V. R. Pillai, M.A., M.SC.; Price: Rs. 1.87.
೮ **Aspects of Bhakti:** by K. C. Varadachari. Price: ord: Re. 1 ; Calico Rs. 1.50.
೯ **Man in the making:** by J. B. Freeman ; Price: Rs. 4.
೧೦ **The Philosophy of Mahatma Gandhi and other Essays:** by Prof. A. R. Wadia. Price: Rs. **20.**

೧೧ **History and Pre-History of Sanskrit :** by Dr. Sukumarsen, Price : Ord. Rs. 1.25 ; Calico : Rs. 2.25.

೧೨ **European man :** by Prof. Joachim von Rentleen. Price : Ordinary 40 np. ; Library 50. np.

೧೩ **Gokhale and Sastri :** by P. Kodanda Rao, Price : 52 N.P.

Navinam Ramanujacharya Sanskrit Prize Essay

೧೪ **ಅಲಂಕಾರಶಾಸ್ತ್ರೇ ಕಾವ್ಯವೈವಿಧ್ಯವಾದ ವಿಮರ್ಶೆ :—**
ಡಾ॥ ಕೆ. ಕೃಷ್ಣಮೂರ್ತಿ, ಎಂ.ಎ., ಬಿ.ಟಿ., ಪಿಎಚ್.ಡಿ. ;
ಬೆಲೆ: ರೂ. ೦.೫೦.

೧೫ **ವೇದಾರ್ಥ ಮೀಮಾಂಸೆ**—ಡಾ॥ ಎ. ವೆಂಕಟಸುಬ್ಬಯ್ಯ,
ಬೆಲೆ : ಸಾದಾ : ರೂ. ೩. ಕ್ಯಾಲಿಕೊ : ರೂ. ೪.

ಬರಲಿವೆ

ಉರ್ದು ಮತ್ತು ಪಾರಸಿ ಸಾಹಿತ್ಯ—ರಾಘವೇಂದ್ರರಾವ್.
ಪಾಶ್ಚಾತ್ಯ ಗಂಭೀರನಾಟಕ—ಎಸ್. ವಿ. ರಂಗಣ್ಣ, ಎಂ.ಎ.
ಪಾಲಿ ಮತ್ತು ಪ್ರಾಕೃತ—ಡಾ॥ ಎ. ಎನ್. ಉಪಾಧ್ಯೆ.

Buddha And Basava by Sri Kumaraswamiji

Contributions to the Interpretation of the Regveda by Dr. Venkatasubbaiah

MYSORE UNIVERSITY PUBLICATIONS

(ENGLISH)

1 The Mysore Tribes and Castes : by the late Mr. H. V, Nanjundayya, M.A., M.L., C.I.E. and Rao Bahadur L. K. Anantakrishna Iyer ; Four Volumes : Vol. II, 1928 ; Vol. III, 1930 ; Vol. IV, 1931 ; Vol. I, 1935; Appendix ; Each Volume is profusely illustrated : Vol. I, Rs. 15. ; Other Volumes each Rs. 12.50.

(*a*) *Studies in Economics and Politics*

1 Labour and Housing in Bangalore City : C Narasimha Moorthy, M.A. and R. K. Srinivasan, M. A. ; Price Re. 0.50.

2 The Munro System of British Statesmanship in India : Dr. K. N. Venkatasubba Sastri, M.A., Ph.D. ; Price Rs. 3.

3 Theory of Interest : Sri S. Laxminarasimhan, M.A. ; Price : Rs. 2.50.

4 An Inquiry into Economic Theory : Sri A. N. Subramanyam, M.A. ; Price : Rs. 1.25.

(*b*) *Mysore University Historical Series*

1 Sources of Karnataka History, Vol. I : S. Srikanta Sastry, M.A. ; Price : Stiff Rs. 3.; Calico Rs. 3.50.

(c) Mysore University Studies in Philosophy

1 ***Dvaita Philosophy and Its Place in the Vedanta:** H. N. Raghavendrachar, M.A.

2 **Metaphysics of Value,** Vol. I: K. R. Srinivasa Iyengar, M.A.; Price: Rs. 5.

(d) Mysore University Studies in Dravidian Philology

1 ***A Grammar of the Oldest Kannada Inscriptions:** Dr. A. N. Narasimhiah, M.A., L.T., Ph.D.; Price: Rs. 2.77.

2 *** History of Kannada Literature:** Rao Bahadur R. Narasimhacharya; Price: Re. 1.

3 *** History of Kannada Language:** Rao Bahadur R. Narasimhacharya.

(e) Dr. Abhayambal Memorial Lectures

1 **Role of Foreign exchange and Finance in India's development plan** by Dr. P. S. Lokanathan; Price: 45 N.P.

OTHER PUBLICATIONS

(ENGLISH)

1 **The Karma Theory:** N. N. Bhide; Price: Rs. 1.31.

2 **Social Sciences and Human Affairs:** Dr. Noel. P. Gist, B.S., A.M., Ph.D; Price: 25 N.P.

3 **Individual Freedom and the Welfare State:** M. C. Chagla, B.A. (Oxan.), Bar-at-Law.

4 **Restoration of Economic Stability:** Dr. Balakrishna, M.A., Ph.D. (Lond.); Price: Re. 1.

5 **Post War Reconstruction:** Rao Sahib B. V. Narayana Swamy, M.A., Ph.D., B.Com., Bar-at-Law; Price: Re. 1.

6 **Special Public Lectures on Research 1939–40:** Price: Rs. 1.37.

7 **Special Public Lectures on Research 1940–41:** Price: Rs. 1.37.

8 ಆಂಗ್ಲೇಯರ ರಾಜ್ಯಭಾರ ಚರಿತ್ರೆ: ಸಿ. ಕೆ. ವೆಂಕಟರಾಮಯ್ಯ, ಬಿ.ಎ.

9 **Kannada Lectures on Indian Aesthetics**

10 **Vitamins and Preservation of Health:** Dr. Robert Helling, M.D., M.C.P. (Austria); Price: 25 N.P.

11 **The Munro System of British Statesmanship in India**

12. **Ancient Knowledge and Modern Research**: Sri P. V. Rajamannar, B.A., B.L.; Price: 25 N.P.

ವಿಶ್ವವಿದ್ಯಾನಿಲಯದ ಪಠ್ಯಪುಸ್ತಕಮಾಲೆ ವಿಶೇಷೋಪನ್ಯಾಸಮಾಲೆ ಮತ್ತು ಇತರ ಪ್ರಕಟನಮಾಲೆಯ ಪುಸ್ತಕಗಳನ್ನು ಕೊಳ್ಳುವ ಮಾರಾಟಗಾರರಿಗೆ ಈ ಕೆಳಗೆ ಕಂಡಂತೆ ಕಮಿಷನ್ ಕೊಡಲಾಗುವುದು. ಅಂಚೆ ವೆಚ್ಚ ಮತ್ತು ಪುಸ್ತಕಗಳನ್ನು ಕಳುಹಿಸುವ ಖರ್ಚು ಪ್ರತ್ಯೇಕ.

ಶೇಕಡ ೧೨½ಯಂತೆ ೨೫ ರೂಪಾಯಿ ಬೆಲೆಬಾಳುವ ಪುಸ್ತಕಗಳನ್ನು ಏಕಕಾಲದಲ್ಲಿ ಕೊಳ್ಳುವವರಿಗೆ.

ಈ ಗ್ರಂಥಮಾಲೆಯ ಪುಸ್ತಕಗಳನ್ನು ತರಿಸಿಕೊಳ್ಳಲಿಚ್ಛಿಸುವವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಡೈರೆಕ್ಟರ್
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ವಾಣಿವಿಲಾಸ ಮೊಹಲ್ಲ, ಮೈಸೂರು-೨.

ಸರ್. ಕೆ. ಪಿ. ಪುಟ್ಟಣ್ಣಚೆಟ್ಟರ ಪುದುವಟ್ಟಿನ ಪ್ರಕಟನಮಾಲೆ

೧ ಟಪಾಲ್ ಸಂಸ್ಥೆಯ ವಿವರ—ಕೆ. ಲಕ್ಷ್ಮೀನರಸಿಂಹಯ್ಯ, ಬಿ.ಎ., ಎಲ್‌ಎಲ್.ಬಿ.

೨ ವಿಶ್ವವಿಸರಣ—ಜಿ. ಎಸ್. ಪರಮಶಿವಯ್ಯ, ಎಂ.ಎಸ್‌ಸಿ.

೩ ಸರ್ಕಾರದ ಪದ್ಧತಿ ಮತ್ತು ರಚನಾಕ್ರಮ—ಎಚ್. ಕೃಷ್ಣರಾವ್, ಎಂ.ಎ.

೪ ವ್ಯವಸಾಯದ ಮಣ್ಣುಗಳು—ಕೂರಪಾಡು ಗುಂಡಪ್ಪ, ಬಿ.ಎ.

೫*ಆಕಾಶಯಾನ—ಬಿ. ಕೆ. ಎಶ್. ರಾವ್

೬*ವಿಶ್ವವಿದ್ಯಾನಿಲಯಗಳು—ಡಾ|| ಎಂ. ಸಿದ್ದಲಿಂಗಯ್ಯ, ಎಂ.ಎ., ಬಿ.ಟಿ., ಪಿಎಚ್.ಡಿ., ಡಿಪ್.ಎಡ್. ಮತ್ತು ಸಿ. ರಂಗಾಚಾರ್, ಬಿ.ಎಸ್‌ಸಿ., ಎಂ.ಎಡ್.

೭ ಹೆರಿಗೆ ಮತ್ತು ಶಿಶುಪೋಷಣೆ– ಡಾ|| ರತ್ನಮ್ಮ ಐಸಾಕ್, ಎಲ್.ಎಂ.ಎಸ್., ಎಂ.ಆರ್.ಸಿ.ಎಸ್., ಎಲ್.ಆರ್.ಸಿ.ಪಿ.

೮ ಮಲೇರಿಯಾ ನಿರೋಧ—ಬಿ. ಅನಂತಸ್ವಾಮಿರಾವ್, ಬಿ.ಎಸ್‌ಸಿ., ಎಂ.ಬಿ.,ಬಿ.ಎಸ್., ಎಂ.ಪಿ.ಎಚ್.

೯ ಗ್ರಾಮ ನೈರ್ಮಲ್ಯ—ಎಸ್. ಡಿ. ನಾರಾಯಣಗೌಡ, ಎಂ.ಬಿ.,ಬಿ.ಎಸ್., ಡಿ.ಪಿ.ಎಚ್.

೧೦ ಪಶುಪಾಲನೆ—ಎಂ. ಕೃಷ್ಣಶಾಸ್ತ್ರೀ, ಬಿ.ಎ., ಐ.ಡಿ.ಡಿ., ಅಸೋಸಿಯೇಟ್ ಐ.ಡಿ.ಆರ್.ಐ. ಸಾದಾ ೮೦ ನಯೆ ಪೈಸೆ; ಉತ್ತಮ ರೂ. ೧.

೧೧ ಯೋಗಾಸನಗಳು—ವಿದ್ವಾನ್ ಟಿ. ಕೃಷ್ಣಮಾಚಾರ್ಯ
ಬೆಲೆ: ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೨ ಮೈಸೂರು ದೇಶದ ರಸಾಯನಿಕ ಕೈಗಾರಿಕೆಗಳು—ಕೆ. ಅಶ್ವತ್ಥನಾರಾಯಣರಾವ್, ಡಿ.ಎಸ್‌ಸಿ.

೧೩ ವಿದ್ಯುಚ್ಛಕ್ತಿಯ ಉಪಯೋಗ—ಎ. ಬಿ. ತಿರುನಾರಾಯಣ, ಬಿ.ಎ., ಬಿ.ಎಸ್‌ಸಿ. (ಆನರ್ಸ್, ಇ.ಇ.) ಸಿ.ಪಿ., ಇ.ಟಿ. (ಐ.ಐ.ಎಸ್.),

೧೪ ಮಕ್ಕಳ ಬೆಳವಣಿಗೆ—ಡಾ|| ಬಿ. ಕುಪ್ಪುಸ್ವಾಮಿನಾಯಿಡು, ಎಂ.ಎ., ಡಿ.ಲಿಟ್.

೧೫ ರೇಡಾರ್–ಆರ್. ಎಲ್. ನರಸಿಂಹಯ್ಯ, ಎಂ.ಎಸ್‌ಸಿ.;
ಸಾದಾ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೬ ಗಣಿ ಕೆಲಸದ ಕೈಪಿಡಿ—ಜೆ. ಪಿ. ಡೇವಿಡ್, ಬಿ.ಎಸ್‌ಸಿ.;
ಸಾದಾ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.

೧೭ ಲೋಹವಿದ್ಯೆ—ಡಾ|| ಬಿ. ಪಿ. ರಾಧಾಕೃಷ್ಣ, ಬಿ.ಎಸ್‌ಸಿ.(ಆನರ್ಸ್), ಪಿಎಚ್.ಡಿ.

೧೮ ಪರಮಾಣುಶಕ್ತಿ—ಡಾ॥ ಎಲ್. ಸೀಬಯ್ಯ, ಡಿ.ಎಸ್‌ಸಿ.
೧೯ ಭಾರತ ಸಂವಿಧಾನ—ಗ. ಸ. ಹಾಲಪ್ಪ, ಎಂ.ಎ. (ಕೊಲಂಬಿಯ)
೨೦ ಅಂತರ ರಾಷ್ಟ್ರೀಯ ಸಂಬಂಧಗಳು—ಟಿ. ಎಸ್. ನಾರಾಯಣರಾವ್, ಎಂ.ಎ.
೨೧ ವಿಕಿರಣಕ್ರಿಯಾಶಕ್ತಿ — ಕೆ. ಶೇಷಾದ್ರಿ ಅಯ್ಯಂಗಾರ್, ಎಂ.ಎಸ್‌ಸಿ., ಎಲ್‌ಎಲ್.ಬಿ.
೨೨–೨೩ ಸಂಸಾರಯೋಜನೆ—ಡಾ॥ ಎಂ. ದಯಾಕರ, ಎಂ.ಬಿ.,ಬಿ.ಎಸ್.;
ಬೆಲೆ: ಸಾದಾ ೮೦ ನಯೆ ಪೈಸೆ; ಉತ್ತಮ ಪ್ರತಿ ರೂ. ೧.
೨೪ ಜಲಶಕ್ತಿ—ಎಚ್. ಸಿ. ಕಪನೀಪತಿಭಟ್ಟ, ಬಿ.ಎ., ಬಿ.ಇ., ಎಂ.ಐ.ಇ.
೨೫ ಪತ್ರಿಕೋದ್ಯಮಶಾಸ್ತ್ರ—ನಾಡಿಗ ಕೃಷ್ಣಮೂರ್ತಿ, ಎಂ.ಎ.(ಮಿಸ್ಸೋರಿ)
೨೬ ಮುದ್ರಣ ಕಲೆ—ಡಿ. ಎಸ್. ಗುರುಬಸಪ್ಪ, ಬಿ.ಎಸ್‌ಸಿ. ಮತ್ತು ಬಿ. ಪಿ. ಮಲ್ಲರಾಜೆ ಅರಸು, ಬಿ.ಎ., ಎಲ್‌ಎಲ್.ಬಿ.
೨೭ ಬುದ್ಧಿಶಕ್ತಿಯ ಅಳತೆ ಮತ್ತು ಅದರ ಪ್ರಯೋಜನಗಳು—ಬಿ. ಕೃಷ್ಣ, ಎಂ.ಎ.
೨೮ ಭಾರತದ ಸಾರಿಗೆ—ಬಿ. ಎಸ್. ಬಸವಲಿಂಗಪ್ಪ, ಬಿ.ಎ., ಎಂ.ಕಾಂ.
೨೯ ಪುಸ್ತಕಗಳಿಗೆ ರಟ್ಟು ಕಟ್ಟುವ ಕಲೆ—ಡಿ. ಎಸ್. ಗುರುಬಸಪ್ಪ, ಬಿ.ಎಸ್‌ಸಿ., ಮತ್ತು ಬಿ. ಪಿ. ಮಲ್ಲರಾಜೆ ಅರಸು, ಬಿ.ಎ., ಎಲ್‌ಎಲ್.ಬಿ.
೩೦ ಮೈಸೂರಿನ ವ್ಯವಸಾಯ—ಪ. ಲ. ನರಸಿಂಹ ಅಯ್ಯಂಗಾರ್, ಬಿ.ಎ.,ಬಿ.ಟಿ., ಎಲ್.ಎಜಿ.
೩೧–೩೨ ರೇಷ್ಮೆ—ಎಲ್. ನರಸಿಂಹಮೂರ್ತಿ, ಬಿ.ಎಸ್‌ಸಿ.

ಸಾಧಾರಣ ಪ್ರತಿ ೮೦ ನಯೆ ಪೈಸೆ; ಉತ್ತಮ ಪ್ರತಿ ೧ ರೂಪಾಯಿ

* ಈ ಪುಸ್ತಕಗಳು ಮುಗಿದುಹೋಗಿವೆ.

ಡೈರೆಕ್ಟರ್
ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ
ವಾಣೀವಿಲಾಸ ಮೊಹಲ್ಲ, ಮೈಸೂರು–೨.

WO 2135—MUPM—1000+25—18-12-63

ಮೈಸೂರು ಮಹಾರಾಜರವರ ಕಾಲೇಜಿನ
ಕರ್ಣಾಟಕ ಸಂಘದ ಪ್ರಕಟಣೆಗಳು

೧. **ನಾಗಾನಂದ ನಾಟಕ**—ಅನಂತನಾರಾಯಣ ಶಾಸ್ತ್ರಿ ; ಬೆಲೆ : ರೂ. ೧

೨. **ಕರ್ಣಾಟಕ ಮೃಚ್ಛಕಟಿಕ ಪ್ರಕರಣಂ**—ಆಸ್ಥಾನಕವಿ ನಂಜನಗೂಡು ಸುಬ್ಬಾಶಾಸ್ತ್ರಿಗಳವರಿಂದ ; ರೂ. ೧-೭೫ ನ.ಪೈ.

ಸೆಂಟ್ರಲ್ ಕಾಲೇಜಿನ ಕರ್ಣಾಟಕ ಸಂಘದ ಕೆಲವು ಪ್ರಕಟಣೆಗಳು

೧. **ಲಿಯೊನಾರ್ಡ್ಡಾ**—ಎಸ್. ಜಿ. ಶಾಸ್ತ್ರೀ .... ರೂ. ೧-೫೦
(ಬ್‌ಯೋರನ್‌ಸನ್ ಬರೆದ ನಾಲ್ಕಂಕದ ನಾಟಕ)

೨. **ಸಂಸಕವಿ**—ಹಲವು ಲೇಖಕರು .... ರೂ. ३-೭೫
(' ವಿಗಡವಿಕ್ರಮರಾಯ ' ಬರೆದ ಕವಿಯ ಕಾವ್ಯಜೀವನ)

೩. **ಧರ್ಮಪದ ಪ್ರವೇಶಿಕಾ**—ಜಿ. ಪಿ. ರಾಜರತ್ನಂ .... ರೂ. ೧-೦೦
(ಬುದ್ಧವಚನ, ಬಸವವಚನಗಳ ಹೋಲಿಕೆಗಳು)

೪. **ನಮ್ಮ ಬೇಂದ್ರೆಯವರು**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬೇಂದ್ರೆಯವರ ಕವನಗಳ ವಿಮರ್ಶೆ)

೫. **ಹೂವಿನ ಪೂಜೆ**—ವಿದ್ಯಾರ್ಥಿಗಳಿಂದ .... ರೂ. ೧-೨೫
(ಬುದ್ಧನಿಗೆ ಅರ್ಪಿಸಿದ ಬರಹಗಳು)

೬. **ಶ್ರೀ ರಾಮಚಂದ್ರಪ್ರಭು**—(ಜ್ಞಾಪಕರೂಪ) .... ರೂ. ೧-೫೦
(ಡಿ.ವಿ.ಜಿ. ಅವರ ' ಶ್ರೀರಾಮಪರೀಕ್ಷಣ 'ದ ಸುಲಭರೂಪ)

೭. **ಬಿದನೂರಿನ ರಾಣಿ ವೀರಮ್ಮಾಜಿ**—(ಜ್ಞಾಪಕರೂಪ) .... ರೂ. ೧-೨೫

೮. **ಹೆಜ್ಜೆಪಾಡು** (ಕವನಗಳು)—ವಿ. ಸೀ. .... ರೂ. ೧-೭೫

೯. **ದೀಪಗಳು** (ಕವನಗಳು)—ವಿ. ಸೀ. .... ರೂ. ೧-೨೫

೧೦. **ಅಭಿಜ್ಞಾನ ಶಾಕುಂತಲ ನಾಟಕ**—ವಿ. ಸೀ. .... ರೂ. ೨-೫೦
(ವಿಮರ್ಶಾತ್ಮಕ ಪರಿಚಯ)

೧೧. **ಗಿಳಿವಿಂಡು** (ಕವನಗಳು)—ಎಂ. ಗೋವಿಂದ ಪೈ .... ರೂ. ೨-೫೦

ಅಚ್ಚಿನಲ್ಲಿ

೧೨. **ಸೊಹ್ರಾಬ್-ರುಸ್ತುಂ (ನಾಟಕ)**—ವಿ. ಸೀ.

೧೩. **ಪಂಚಕಲಶ ಗೋಪುರ** (ಚಿತ್ರಗಳು)—ಬಿ. ಜಿ. ಎಲ್. ಸ್ವಾಮಿ

ಸಂಪಾದಕರು : ಎಸ್. ನಾರಾಯಣಶೆಟ್ಟಿ, ಎಂ.ಎ. ; ಡಾ॥ ಜಿ. ವರದರಾಜರಾವ್, ಎಂ.ಎ., ಪಿಎಚ್.ಡಿ.

ಪ್ರಕಾಶಕರು : ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ.
ಡೈರೆಕ್ಟರ್, ' ಪ್ರಸಾರಾಂಗ ', ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.